
ಪುಸ್ತಕ ಪ್ರಪಂಚ

ಜುಲೈ ೧೯೪೯



ಗೆಲಿಲಿಯೋ

ಪುಸ್ತಕ ಪ್ರಪಂಚ
ಮಾಸಿಕ

ಸಂಪುಟ ೪೩ ಸಂಚಿಕೆ ೧೨

ಪರಿವಿಡಿ

ಪುಸ್ತಕ ವಿಮರ್ಶೆ

ಪುಸ್ತಕ ವಿಭಾಗ

PUSTAKA PRAPANCHA : Monthly

Published and printed by Karnataka State Adult Education Council, Mysore-4. Price : Rupees five

ಬಿಡಿಪ್ರತಿ : ರೂ. 5

ವಾರ್ಷಿಕ ಚಂದಾ : ರೂ. 30

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. 300

ಸಂಸ್ಥೆಗೆ : ರೂ. 500

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು–570 004

ಗೆಲಿಲಿಯೊ ಗೆಲಿಲೀ

ಡಾ॥ ಎಚ್. ಸಂಜೀವಯ್ಯ

ಯೂರೋಪಿನ ವಿಶ್ವವಿದ್ಯಾಲಯಗಳಲ್ಲಿ ವಿಜ್ಞಾನದ ಹೊಸಗಾಳಿ ಬೀಸುತ್ತಿತ್ತು. ಅರಿಸ್ಟಾಟಲ್ ಪ್ರಚುರಪಡಿಸಿದ್ದ ಖಗೋಳ ಶಾಸ್ತ್ರದ ವಿಚಾರಗಳು ಬೆಲೆ ಕಳೆದುಕೊಂಡಿದ್ದವು. ವಿಶ್ವದ ಕೇಂದ್ರ ಸ್ಥಾನದಿಂದ ಸ್ಥಳಾಂತರಗೊಂಡು ಭೂಮಿ ಒಂದು ಸಾಮಾನ್ಯ ಗ್ರಹದ ಸ್ಥಾನಕ್ಕೆ ಬಂದಿತ್ತು ; ಪರಿಪೂರ್ಣ ಆಕೃತಿಯಾದ ವೃತ್ತದ ಸ್ಥಾನದಲ್ಲಿ ದೀರ್ಘವೃತ್ತ ಬಂದು ನೆಲೆಸಿತ್ತು. ಈ ವಿಚಾರಗಳಲ್ಲಿ ಮತ್ತೆ ಯಾರೂ ಹಿಂದಕ್ಕೆ ನೋಡಲಿಲ್ಲ. ಆದರೆ ಚಲನ ವಿಜ್ಞಾನದ ವಿಚಾರಗಳು ಮಾತ್ರ ಅಲುಗದೆ ನಿಂತಿದ್ದವು. ಗೆಲಿಲಿಯೊ ಅವುಗಳನ್ನು ಅಲುಗಿಸಿದ್ದು ಮಾತ್ರವಲ್ಲದೆ ಬುಡಸಹಿತ ಕಿತ್ತು ಹಾಕಿದ.

ಸಾಧ್ಯ ಅಪವಾದ ನ್ಯೂಟನ್ನನನ್ನು ಬಿಟ್ಟರೆ ಆಧುನಿಕ ವಿಜ್ಞಾನ ಪ್ರವರ್ತಕರಲ್ಲಿ ಗೆಲಿಲಿಯೊ ಗಲಿಲಿಯೇ ಸರ್ವಶ್ರೇಷ್ಠ. ಅವನು ೧೫೬೪ರ ಫೆಬ್ರುವರಿ ೧೫ರಂದು ಪೀಸ ನಗರದಲ್ಲಿ ಜನಿಸಿದ. ಅದೇ ದಿವಸ ಮೈಕೇಲೇಂಜಲೊ ಮೃತನಾಗಿದ್ದ. ಗೆಲಿಲಿಯೊ ಮೃತನಾದ ವರ್ಷ ನ್ಯೂಟನ್ ಜನಿಸಿದ. ದೇಹಾಂತರ ಪ್ರವೇಶದಲ್ಲಿ ನಂಬಿಕೆ ಇರುವವರಿಗೆ ಇದೊಂದು ಸಮಾಧಾನ ತರುವ ಸಂಗತಿಯಾಗ ಬಹುದು. ಗೆಲಿಲಿಯೊ ತಂದೆ ವಿನ್ಸೆನ್ಸೋ ಗಣಿತಶಾಸ್ತ್ರ ಪಂಡಿತ ನಾಗಿದ್ದ. ಸಂಗೀತದಲ್ಲೂ ಅವನಿಗೆ ಆಸಕ್ತಿ ಇದ್ದಿತು. ಗೆಲಿಲಿಯೋನ ಆರಂಭದ ವಿದ್ಯಾಭ್ಯಾಸ ಫ್ಲಾರೆನ್ಸ್ ನಗರದ ಹತ್ತಿರದಲ್ಲಿದ್ದ ವಾಲಂಬ್ರೋಸ್ ಸನ್ಯಾಸಿಗಳ ಮಠದಲ್ಲಿ ನಡೆಯಿತು. ಅಲ್ಲಿ ಅವನು ಗ್ರೀಕ್, ಲ್ಯಾಟಿನ್ ಮತ್ತು ತರ್ಕದಲ್ಲಿ ಪರಿಣತಿ ಪಡೆದ. ಅಲ್ಲಿ ಬೋಧಿಸುತ್ತಿದ್ದ ವಿಜ್ಞಾನ ಅವನ ಆಸಕ್ತಿಯನ್ನು ಆಕರ್ಷಿಸ ಲಿಲ್ಲ. ಅವನು ಬೌದ್ಧಿಕ ಸಾಮರ್ಥ್ಯಕ್ಕೂ, ತಾಂತ್ರಿಕ ಕೌಶಲ್ಯಕ್ಕೂ ಹೆಸರುವಾಸಿಯಾದ. ೧೫೮೧ರಲ್ಲಿ ಔಷಧ ವಿಜ್ಞಾನದ ಅಧ್ಯಯನ ಕ್ಕಾಗಿ ಅವನು ಪೀಸ ವಿಶ್ವವಿದ್ಯಾಲಯಕ್ಕೆ ಪ್ರವೇಶ ಪಡೆದ.

ಔಷಧ ವಿಜ್ಞಾನದಲ್ಲಿ ಗೆಲಿಲಿಯೋನ ಆಸಕ್ತಿ ನೆಲೆಗೊಳ್ಳಲಿಲ್ಲ; ಅದು ಭೌತ ವಿಜ್ಞಾನ ಮತ್ತು ಖಗೋಳಶಾಸ್ತ್ರದ ಕಡೆಗೆ ತಿರುಗಿತು. ಒಂದು ದಿನ ಅವನು ಪೀಸ ನಗರದ ಪ್ರಾರ್ಥನಾಮಂದಿರವನ್ನು ಪ್ರವೇಶಿಸುತ್ತಿದ್ದಾಗ ತೂಗುದೀಪ ಓಲಾಡುತ್ತಿದ್ದುದ್ದನ್ನು ನೋಡಿದ. ಅದರ ಆಂದೋಲನ ಅವನ ಕುತೂಹಲವನ್ನು ಕೆರಳಿಸಿತು. ಹಾಗೇ ನೋಡುತ್ತ ಅವನು ತೂಗುದೀಪ ಒಂದು ಸಾರಿ ಆಂದೋಲಿಸಲು ತೆಗೆದುಕೊಳ್ಳುವ ಕಾಲವನ್ನು ನಾಡಿ ಮಿಡಿತದ ನೆರವಿಂದ ಕಂಡುಹಿಡಿದ. ಆಂದೋಲನದ ವಿಸ್ತಾರ ಕಡಿಮೆಯಾಗುತ್ತಿತ್ತು. ಗೆಲಿಲಿಯೊ ಆಂದೋಲನದ ಅವಧಿಯನ್ನು ಮತ್ತೆ ಮತ್ತೆ ಕಂಡುಹಿಡಿದ. ಆಂದೋಲನದ ವಿಸ್ತಾರ ವ್ಯತ್ಯಾಸವಾಗುತ್ತಿದ್ದರೂ ಅದರ ಅವಧಿ ಮಾತ್ರ ಒಂದೇ ಆಗಿತ್ತು. ಇದನ್ನು ಕಂಡು ಅವನು ಆಶ್ಚರ್ಯಚಕಿತನಾದ. ಲೋಲಕದಿಂದ ನಡೆಯುವ ಗಡಿಯಾರದ ರಚನೆ ಅವನಿಗೆ ಹೊಳೆಯಿತು. ಆದರೆ ಲೋಲಕ ಗಡಿಯಾರವನ್ನು ಮೊದಲು ತಯಾರಿಸಿದವನು ಹಾಲೆಂಡಿನ ವಿಜ್ಞಾನಿ ಹೈಗನ್ಸ್ ಎಂಬುದನ್ನು ನಾವು ಮರೆಯಬಾರದು. ಗೆಲಿಲಿಯೊ ಅವನ ಪ್ರಯೋಗಗಳಲ್ಲಿ ಉಪಯೋಗಿಸಿದ್ದು ನೀರುಗಡಿಯಾರ.

ಮನಸ್ಸಿಲ್ಲದ ಮನಸ್ಸಿನಿಂದ ವಿನ್ಸೆನ್ಸೊ ಮಗನಿಗೆ ಔಷಧ ವಿಜ್ಞಾನವನ್ನು ಬಿಟ್ಟು ಭೌತವಿಜ್ಞಾನ ಮತ್ತು ಗಣಿತದ ಅಧ್ಯಯನಕ್ಕೆ ಅನುಮತಿ ಕೊಟ್ಟ. ಆದರೆ ವಿದ್ಯಾಭ್ಯಾಸದ ಕರ್ಚನ್ನು ನಿರ್ವಹಿಸಲಾರದೆ ಅವನನ್ನು ಹಿಂದಕ್ಕೆ ಕರೆಸಿಕೊಂಡ. ಗೆಲಿಲಿಯೊ ಪದವಿಯನ್ನು ಪಡೆಯದೆ ಹಿಂತಿರುಗಿದ್ದ. ಆದರು ಅವನಿಗೆ ಫ್ಲಾರೆನ್ಸ್ ಅಕಡೆಮಿಯಲ್ಲಿ ಉಪನ್ಯಾಸಗಳನ್ನು ಕೊಡಲು ಆಮಂತ್ರಣ ಸಿಕ್ಕಿತು. ೧೫೮೬ ರಲ್ಲಿ ಅವನು ದ್ರವ್ಯಸ್ಥಾಯಿ ತ್ರಾಸಿನ ಬಗ್ಗೆ ಬರೆದ ಲೇಖನ ಅವನನ್ನು ಇಟಲಿ ದೇಶದಲ್ಲೆಲ್ಲಾ ಪ್ರಸಿದ್ಧನನ್ನಾಗಿ ಮಾಡಿತು. ೧೫೮೮ ರಲ್ಲಿ ಅವನು ಘನವಸ್ತುಗಳ ಗುರುತ್ವ ಕೇಂದ್ರವನ್ನು ಕುರಿತಾದ ಒಂದು ಗ್ರಂಥವನ್ನು ಬರೆದ. ಇದರ ಫಲವಾಗಿ ಅವನಿಗೆ ಪೀಸ ವಿಶ್ವವಿದ್ಯಾಲಯದಲ್ಲಿ ಗಣಿತದ ಅಧ್ಯಾಪಕನ ಕೆಲಸ ಸಿಕ್ಕಿತು. ೧೫೮೮–೯೧ ರ ಅವಧಿಯಲ್ಲಿ ಅವನು ನಡೆಸಿದ ಪ್ರಯೋಗಗಳು ಗತಿ ವಿಜ್ಞಾನದ ಪ್ರಥಮ ನಿಯಮಗಳ ಸ್ಥಾಪನೆಗೆ ಕಾರಣವಾದವು.

ಹೊರಗಿನ ಪ್ರಯತ್ನವಿಲ್ಲದೆ ನಿಶ್ಚಲವಾಗಿರುವ ಯಾವ ಕಾಯವೂ ಅದಾಗಿ ಚಲಿಸುವುದಿಲ್ಲ. ಈ ವಿಚಾರ ಎಲ್ಲರ ಅನುಭವದಲ್ಲೂ ಇರುವಂಥದು. ಹೀಗೆ ಒಂದು ಕಾಯ ಅದಾಗಿಯೆ ಚಲಿಸದೆ ಇರುವುದೇ ಅದರ ಜಡತ್ವ ಎಂದು ಹಿಂದಿನವರು ನಂಬಿದ್ದರು. ಈ ನಂಬಿಕೆ ಅರಿಸ್ಟಾಟಲನ ನಿಯಮ: "ಚಲಿಸುವುದು ಮತ್ತು ಚಾಲನೆ ಮಾಡುವುದು ಯಾವಾಗಲೂ ಜೊತೆಯಲ್ಲಿರುತ್ತವೆ" ಎಂಬುದರಲ್ಲಿ ಅಡಕವಾಗಿದೆ. ಚಲಿಸುವ ಕಾಯಕ್ಕೂ ಜಡತ್ವ ವುಂಟು ಎಂದು ಗೆಲಿಲಿಯೊ ವಾದಿಸಿದ. ಚಲಿಸುತ್ತಿರುವ ಕಾಯ ಅದು ಚಲಿಸುತ್ತಿರುವ ದಿಕ್ಕಿನಲ್ಲಿ ಒಂದೇ ವೇಗದಿಂದ ಚಲಿಸುತ್ತಲೇ ಇರುತ್ತದೆ ಎಂಬುದು ಇದರ ಅರ್ಥ. ನಿಶ್ಚಲತೆ ಚಲನೆಯ ಒಂದು ಸಂದರ್ಭ ಮಾತ್ರ. ಚಲನೆಯ ದಿಕ್ಕಿನಲ್ಲಾಗಲಿ, ಅಥವಾ ವೇಗದ ಮೌಲ್ಯದಲ್ಲಾಗಲಿ ಬದಲಾವಣೆ ಆಗಬೇಕಾದರೆ ಹೊರಗಿನ ಪ್ರಯತ್ನ (ಬಲ) ಕಾಯದಮೇಲೆ ಆರೋಪವಾಗಬೇಕು. ಬಲ ಆರೋಪವಾಗದೆ ಇದ್ದರೆ ನಿಶ್ಚಲವಾಗಿರುವ ಕಾಯ ನಿಶ್ಚಲವಾಗಿಯೇ ಇರುತ್ತದೆ ಮತ್ತು ಚಲಿಸು

ತ್ತಿರುವ ಕಾಯ ನೇರ ಪಥದಲ್ಲಿ ಬದಲಾಗದ ವೇಗದಲ್ಲಿ ಚಲಿಸುತ್ತಲೇ ಇರುತ್ತದೆ. ಈ ನಿಯಮವನ್ನು ಮಂಡಿಸಲು ಗೆಲಿಲಿಯೊ ನಡೆಸಿದ ಪ್ರಯೋಗ ಈ ರೀತಿ ಇದೆ : ಒಂದು ಗೋಲಿಯನ್ನು ಉರುಳಬಿಟ್ಟರೆ ಅದು ಸ್ವಲ್ಪ ದೂರ ಚಲಿಸಿ ನಿಲುಗಡೆಗೆ ಬರುತ್ತದೆ. ನೆಲವೂ ಗೋಲಿಯೂ ತುಂಬಾ ನುಣುಪಾಗಿದ್ದರೆ ಗೋಲಿ ಹೆಚ್ಚು ದೂರವನ್ನು ಕ್ರಮಿಸುತ್ತದೆ. ಗೋಲಿ ಮತ್ತು ನೆಲದ ನಡುವೆ ಘರ್ಷಣೆಯೇ ಇಲ್ಲದಿದ್ದರೆ ಚಲಿಸುವ ಗೋಲಿ ನಿಲ್ಲುವುದೇ ಇಲ್ಲ. ಹೊರಗಿನ ಪ್ರಯತ್ನ ಆರೋಪವಾಗಲಿ ಬಿಡಲಿ ಚಲಿಸುವ ಕಾಯ ಕೊನೆಗೊಮ್ಮೆ ನಿಲುಗಡೆಗೆ ಬರುತ್ತದೆ ಎಂಬ ಹಿಂದಿನವರ ವಾದಕ್ಕೆ ಆಧಾರವಿಲ್ಲ ಎಂಬುದು ಇದರಿಂದ ವ್ಯಕ್ತವಾಗುತ್ತದೆ.

ಬೇರೆ ಬೇರೆ ತೂಕದ ಗುಂಡುಗಳನ್ನು ಕೆಳಗೆ ಬೀಳಲು ಬಿಟ್ಟು ಗೆಲಿಲಿಯೊ ಆಗಾಗ ನೋಡುತ್ತಿದ್ದ. ಗುಂಡುಗಳ ತೂಕ ಏನೇ ಆಗಿರಲಿ ಒಂದೇ ಎತ್ತರದಿಂದ ಕೆಳಗೆ ಬೀಳಲು ಬಿಟ್ಟರೆ ಅವು ಏಕ ಕಾಲದಲ್ಲಿ ಭೂಮಿಗೆ ತಾಗುತ್ತಿದ್ದವು. ಇದನ್ನು ಅವನು ತನ್ನ ಸಹೋದ್ಯೋಗಿಗಳಿಗೆ ತೋರಿಸಿದ. ಇದು ಅರಿಸ್ಟಾಟಲನ ಅಭಿಪ್ರಾಯಕ್ಕೆ ವಿರುದ್ಧವಾದ ಘಟನೆಯಾಗಿತ್ತು. ಅಂಥದನ್ನು ನಂಬಲು ಅವನ ಸಹೋದ್ಯೋಗಿಗಳು ಸಿದ್ಧರಿರಲಿಲ್ಲ. ಗುಂಡುಗಳು ಕೆಳಗೆ ಬೀಳುವ ದೂರ ಕಡಿಮೆ ಇದ್ದುದರಿಂದ ಅವು ತೆಗೆದುಕೊಳ್ಳುವ ಕಾಲಗಳಲ್ಲಿರುವ ವ್ಯತ್ಯಾಸವನ್ನು ಗಮನಿಸುವುದು ಕಷ್ಟ ಎಂದು ಅವರು ವಾದಿಸುತ್ತಿದ್ದರು. ಈ ಆಕ್ಷೇಪಣೆಯನ್ನು ನಿವಾರಿಸಲು ಗೆಲಿಲಿಯೊ ತನ್ನ ಸಹಪಾಠಿಗಳ ಎದುರು ಪೀಸ ನಗರದ ಓಲುಗೋಪುರದ ತುದಿಯಿಂದ ೧೦೦ ಪೌಂಡು ಮತ್ತು ೧ ಪೌಂಡು ತೂಕವುಳ್ಳ ಎರಡು ಗುಂಡುಗಳನ್ನು ಬೀಳಲು ಕೆಳಗೆ ಬಿಟ್ಟ. ಅವು ಒಂದೇ ಕಾಲದಲ್ಲಿ ಭೂಮಿಯ ಮೇಲೆ ಬಿದ್ದವು. ಈ **'ಕೆಡೆ'** ಹಳೆಯ ಭೌತವಿಜ್ಞಾನದ ಪತನವನ್ನು ಪೂರ್ಣಗೊಳಿಸಿತು. ಗೆಲಿಲಿಯೊ ಕ್ಷೇಪ ನಿರ್ಮಿಸುವ ಜಾಡು ಪರವಲಯವೆಂದು ತೋರಿಸಿದ. 'ಕ್ಷೇಪ ನೇರವಾಗಿ ಚಲಿಸಿ, ನಿಲುಗಡೆಗೆ ಬಂದು ನಂತರ ಲಂಬವಾಗಿ ಕೆಳಗೆ ಬೀಳುತ್ತದೆ' ಎಂಬ ಅರಿಸ್ಟಾಟಲನ ಅಭಿಪ್ರಾಯಕ್ಕೆ ಇದು ವಿರುದ್ಧವಾಗಿದೆ. ಇದನ್ನೂ ನಾವು ಗಮನಿಸಬೇಕು.

ಬೀಳುವ ಕಾಯದ ವೇಗದಲ್ಲಿ ಉಂಟಾಗುವ ಹೆಚ್ಚಳವನ್ನು ಕಂಡು ಹಿಡಿಯುವುದು ಗೆಲಿಲಿಯೋನ ಮುಂದಿನ ಕೆಲಸವಾಗಿತ್ತು. ಮೊದಲು ಅವನು ಕಾಯ ಕ್ರಮಿಸಿದ ದೂರಕ್ಕೆ ವೇಗ ಅನುಪಾತವಾಗಿರುತ್ತದೆಂದು ಊಹಿಸಿಕೊಂಡ. ಇದನ್ನು ಪರೀಕ್ಷಿಸಲು ನುಣುಪಾದ ಇಳುಜಾರು ಮಣೆಯ ಮೇಲೆ ಕತ್ತರಿಸಿದ್ದ ತೋಡಿನಲ್ಲಿ ಗೋಲಿಯನ್ನು ಉರುಳುಬಿಟ್ಟು ನೋಡಿದ. ಕಾಯ ಕ್ರಮಿಸಿದ ದೂರವನ್ನು ಎರಡರಷ್ಟು ಮಾಡಿದ. ಕಾಯದ ವೇಗ ಎರಡರಷ್ಟಾಗಲಿಲ್ಲ. ಈ ಊಹೆಯನ್ನು ಬಿಟ್ಟು ಅವನು ವೇಗದಲ್ಲಿ ಉಂಟಾಗುವ ಹೆಚ್ಚಳ ಕಾಲಕ್ಕೆ ಅನುಪಾತವಾಗಿರುತ್ತದೆ ಎಂದುಕೊಂಡ. ಕಾಯದ ಆರಂಭವೇಗ ಸೊನ್ನೆ. ಆದುದರಿಂದ ಅಂತಿಮ ವೇಗಕ್ಕೂ ಕಾಯ ತೆಗೆದುಕೊಂಡ ಕಾಲಕ್ಕೂ ಇರುವ ಸಂಬಂಧವನ್ನು ಪಡೆಯಬಹುದು. ಅಂತಿಮ ವೇಗ V ಆಗಿದ್ದು, ಕಾಯ ತೆಗೆದುಕೊಂಡ ಕಾಲ t ಆಗಿದ್ದರೆ,

$$V=at \qquad (1)$$

ಎಂಬ ಸಂಬಂಧವನ್ನು ಪಡೆಯಬಹುದು ಎಂದು ಗೆಲಿಲಿಯೊ ತೋರಿಸದ. ಸಮೀಕರಣ (1) ರ ಅರ್ಥ ಇದು : t ಒಂದು ಸೆಕೆಂಡ್ ಆದರೆ, ಒಂದು ಸೆಕೆಂಡಿನ ಕೊನೆಯಲ್ಲಿ ವೇಗ a ಆಗುತ್ತುದೆ. t ಎರಡು ಸೆಕೆಂಡ್ ಆದರೆ ವೇಗ $2a$ ಆಗುತ್ತದೆ. ಹೀಗೆ ಪ್ರತಿ ಸೆಕೆಂಡಿನಲ್ಲಿ ವೇಗ a ಅಷ್ಟು ಹೆಚ್ಚುತ್ತದೆ. ಅಂದರೆ a ವೇಗದ ದರ ಎಂದಾಯಿತು. ವೇಗದ ದರವನ್ನು ಗೆಲಿಲಿಯೊ ವೇಗೋತ್ಕರ್ಷ ಎಂದು ಕರೆದ. ಕಾಯ ತೆಗೆದುಕೊಂಡ ಕಾಲಕ್ಕು (t), ಅದು ಕ್ರಮಿಸಿದ ದೂರಕ್ಕು (S) ಇರುವ ಸಂಬಂಧವನ್ನು

$$S=\tfrac{1}{2}at^2 \qquad (2)$$

ಎಂದು ತೋರಿಸಬಹುದು. ಇದು ಕಾಯದ ಸರಾಸರಿ ವೇಗ $[(o+at)/2]$ ಮತ್ತು ಅದು ತೆಗೆದುಕೊಂಡ ಕಾಲ (t) ಗಳ ಗುಣಲಬ್ಧ. ಸಮೀಕರಣ (1) ಮತ್ತು (2) ಗತಿ ವಿಜ್ಞಾನದ ಮೂಲ ಮಂತ್ರಗಳು. ಗತಿ ವಿಜ್ಞಾನದಲ್ಲಿ ಆ ವೇಗಕ್ಕಿರುವ (ದ್ರವ್ಯಾಂಶ$\times$ವೇಗ) ಮಹತ್ವವನ್ನು ಗೆಲಿಲಿಯೊ ತಿಳಿಸಿದ.

ಕಣ್ಣಿಗೆ ಕಂಡದ್ದನ್ನು ನಂಬಲೂ ಕೆಲವರು ಹಿಂಜರಿಯುತ್ತಿದ್ದರು; ಹಿಂದಿನವರ ಮಾತಿನಲ್ಲಿ ಅವರಿಗೆ ಅಂಥ ನಂಬಿಕೆ. ಗೆಲಿಲಿಯೊ ಅಂಥವರನ್ನು ವ್ಯಂಗ್ಯ ಮತ್ತು ಅಣಕಗಳಿಂದ ಚುಚ್ಚುತ್ತಿದ್ದ; ಅವರ ಮಂದಮತಿಯನ್ನು ತಾಳಿಕೊಳ್ಳುವ ಸಹನೆ ಅವನಿಗಿರಲಿಲ್ಲ. ಅವನ ಎದುರಾಳಿಗಳ ಸಂಖ್ಯೆ ಬೆಳೆಯಿತು. ಅವನು ಪೀಸ ನಗರದಲ್ಲಿ ಹೆಚ್ಚು ಕಾಲ ಉಳಿಯಲಾಗಲಿಲ್ಲ. ಪ್ರಾಧ್ಯಾಪಗಿರಿಗೆ ರಾಜೀನಾಮೆಕೊಟ್ಟು ಅವನು ೧೫೯೧ರಲ್ಲಿ ಫ್ಲಾರೆನ್ಸ್ ನಗರಕ್ಕೆ ಹಿಂತಿರುಗಿದ. ಸ್ವಲ್ಪ ಕಾಲ ಕಳೆದ ಮೇಲೆ ಅವನು ಪಾದೊ ನಗರದಲ್ಲಿ ಪ್ರಾಧ್ಯಾಪಕ ಹುದ್ದೆಯನ್ನು ಪಡೆದ. ವೆನಿಸ್ ಪ್ರಾಂತ್ಯದ ಅಧೀನದಲ್ಲಿದ್ದ ಪಾದೊ ನಗರದಲ್ಲಿ ಅವನಿಗೆ ಯಾವ ಆತಂಕವೂ ಇರಲಿಲ್ಲ. ಆ ಪ್ರಾಂತ್ಯ ಮಠಗಳ ಹಿಡಿತದಿಂದ ದೂರವಾಗಿತ್ತು. ಗೆಲಿಲಿಯೊ ಪಾದೊ ನಗರದಲ್ಲಿ ಇಪ್ಪತ್ತು ವರ್ಷಗಳ ಕಾಲ ನೆಲೆಸಿದ್ದ.

೧೬೦೮ರಲ್ಲಿ ಡಚ್ ವಿಜ್ಞಾನಿ ಲಿಪ್ಪರ್ಸೆ ದೂರದರ್ಶಕವೊಂದನ್ನು ತಯಾರಿಸಿ ಜರ್ಮನ್ ರಾಜಕುಮಾರನಿಗೆ ಬಹುಮಾನವಾಗಿ ಕೊಟ್ಟ ಸುದ್ದಿ ಗೆಲಿಲಿಯೋಗೆ ತಿಳಿಯಿತು ಪ್ಯಾರಿಸ್ಸಿನಿಂದ ಬಂದ ಸಮಾಚಾರವೂ ಇದನ್ನು ದೃಢಪಡಿಸಿತು, ಗೆಲಿಲಿಯೊ ದೂರದರ್ಶಕದ ನಿರ್ಮಾಣಕ್ಕೆ ಸಿದ್ಧನಾದ. ಮಸೂರಗಳನ್ನು ಜೋಡಿಸಿ ವಸ್ತುಗಳ ಪ್ರತಿಬಿಂಬಗಳನ್ನು ಮೂಡಿಸಬಹುದೆಂದು ಅವನು ತರ್ಕಿಸಿದ. ಒಂದು ಪೀನ ಮಸೂರವನ್ನು ಒಂದು ಕೊಳವೆಯ ಒಂದು ತುದಿಗೂ ಒಂದು ನಿಮ್ನ ಮಸೂರವನ್ನು ಕೊಳವೆಯ ಇನ್ನೊಂದು ತುದಿಗೂ ಜೋಡಿಸಿ ಪೀನ ಮಸೂರವಿರುವ ತುದಿಯನ್ನು ದೂರದ ವಸ್ತುವಿನ ಕಡೆಗೆ ತಿರುಗಿಸಿ ಅವನು ನಿಮ್ನ ಮಸೂರದ ಮೂಲಕ ನೋಡಿದ. ಮೊದಲು ಏನೂ ಕಾಣಿಸಲಿಲ್ಲ. ಆಗ ಅವನು ಮಸೂರಗಳ ನಡುವಿನ ದೂರವನ್ನು ಹೆಚ್ಚು ಕಡಿಮೆ ಮಾಡುತ್ತ ವೀಕ್ಷಣೆಯನ್ನು ಮುಂದುವರಿಸಿದ, ಮಸೂರಗಳ ಒಂದು ಜೋಡಣೆಯಲ್ಲಿ ದೂರದ ವಸ್ತುಗಳು ಕಾಣಿಸಿದವು. ಈ ದೂರದರ್ಶಕ ಹೊಂದಿದ್ದ ವೃದ್ಧಿ ಸಾಮರ್ಥ್ಯ ೩. ಗೆಲಿಲಿಯೊ ಅದನ್ನು ಸುಧಾರಿಸಿ ವೃದ್ಧಿ ಸಾಮರ್ಥ್ಯ ೩೨ರಷ್ಟಾಗುವಂತೆ ಮಾಡಿದ. ಅದನ್ನು ವೆನಿಸ್ಸಿಗೆ

ತೆಗೆದುಕೊಂಡು ಹೋಗಿ ಅವನು ದೂರದಲ್ಲಿ ಬಂದರಿಗೆ ಬರುತ್ತಿದ್ದ ಹಡಗುಗಳನ್ನು ಸಾರ್ವಜನಿಕರಿಗೆ ತೋರಿಸಿದ. ಬಂದರನ್ನು ಪ್ರವೇಶಿಸುವುದಕ್ಕೆ ಎರಡು ಗಂಟೆ ಮುಂಚಿತವಾಗಿ ಅವು ದೂರದರ್ಶಕದಲ್ಲಿ ಕಾಣುತ್ತಿದ್ದವು. ಈ ಸುದ್ದಿ ಎಲ್ಲಕಡೆ ಹರಡಿತು. ದೂರದರ್ಶಕಗಳಿಗಾಗಿ ಅನೇಕ ಬೇಡಿಕೆಗಳು ಬಂದವು. ಗೆಲಿಲಿಯೊ ಈ ಬೇಡಿಕೆಗಳನ್ನು ಪೂರೈಸಲು ತುಂಬ ಶ್ರಮಪಡಬೇಕಾಗಿ ಬಂದಿತು.

ನೆಲದ ಮೇಲಿರುವ ದೂರದ ವಸ್ತುಗಳು ಹತ್ತಿರ ಇರುವಂತೆ ತೋರಿಸುವ ದೂರದರ್ಶಕವನ್ನು ಕುತೂಹಲಕ್ಕಾಗಿ ಗೆಲಿಲಿಯೊ ಚಂದ್ರನ ಕಡೆಗೆ ತಿರುಗಿಸಿದ. ನಯವಾಗಿ ಕಾಣುವ ಚಂದ್ರನ ಮೈಮೇಲೆ ದೊಡ್ಡ ದೊಡ್ಡ ಕುಳಿಗಳೂ, ಎತ್ತರವಾದ ಬೆಟ್ಟಗಳೂ ಇರುವುದು ಕಾಣಿಸಿತು. ಸಮಯ ಕಳೆದಂತೆ ಬೆಟ್ಟಗಳ ನೆರಳು ಹೆಚ್ಚುವುದೂ, ಕಡಿಮೆ ಆಗುವುದೂ ಕಾಣಿಸಿತು.ಗೆಲಿಲಿಯೊ ಚಂದ್ರಕೂಡ ಭೂಮಿಯಂಥ ಒಂದು ಕಾಯ ಎಂದುಕೊಂಡ. ನಂತರ ಅವನು ಆಕಾಶಗಂಗೆಯನ್ನು ನೋಡಿದ. ಹಾಲು ಚೆಲ್ಲಿದಂತೆ ಕಾಣುವ ಈ ಆಕಾಶಪಟ್ಟೆ ಅನೇಕಾನೇಕ ನಕ್ಷತ್ರಗಳ ಸಮೂಹದಂತೆ ಕಂಡಿತು. ಶುಕ್ರ ಮತ್ತು ಮಂಗಳ ಗ್ರಹಗಳನ್ನು ನೋಡಿದಾಗ ಅವೂ ಕೂಡ ಚಂದ್ರನಂತೆ ವೃದ್ಧಿ ಕ್ಷಯಗಳನ್ನು ಹೊಂದುವುದು ಗೋಚರಿಸಿತು. ೭–೧–೧೬೧೦ರ ರಾತ್ರಿ ಗೆಲಿಲಿಯೊ ದೂರದರ್ಶಕವನ್ನು ಗುರು ಗ್ರಹದಕಡೆ ತಿರುಗಿಸಿದ. ಆಶ್ಚರ್ಯ! ಆ ಗ್ರಹದ ಸಮೀಪ ನಾಲ್ಕು ಸಣ್ಣ ಸಣ್ಣ ಕಾಯಗಳು ಕಾಣಿಸಿದವು. ಇವು ಗುರು ಗ್ರಹವನ್ನು ಸುತ್ತುತ್ತಿರುವುದೂ ಗೊತ್ತಾಯಿತು. ಈ ವಿದ್ಯಮಾನವನ್ನು ಕಂಡ ಗೆಲಿಲಿಯೊ ಈ ಸಣ್ಣಸಣ್ಣ ಕಾಯಗಳು ಭೂಮಿಯನ್ನು ಸುತ್ತುತ್ತಿರುವ ಚಂದ್ರನಂಥ ಉಪಗ್ರಹಗಳು ಎಂದು ತಿಳಿಸಿದ. ಇದೆಲ್ಲ ಕೋಪರ್ನಿಕಸನ ಸೂರ್ಯ ಕೇಂದ್ರ ಸಿದ್ಧಾಂತಕ್ಕೆ ದೊರೆತ ಸಮರ್ಥನೆ ಎಂದು ಅವನು ಸಾರಿದ.

ದೂರದರ್ಶಕವನ್ನು ಶನಿಗ್ರಹದ ಕಡೆ ತಿರುಗಿಸಿದಾಗ ಅದಕ್ಕೆ ಎರಡು ಹಿಡಿಗಳಿರುವಂತೆ ಕಂಡಿತು. ಅದರ ಸುತ್ತ ಇರುವ ಉಂಗುರಗಳನ್ನು ಬಿಡಿಸಿ ತೋರಿಸುವಷ್ಟು ಆ ದೂರದರ್ಶಕ ಸಮರ್ಥವಾಗಿರಲಿಲ್ಲ, ಹುಟ್ಟುತ್ತಿರುವ ಅಥವಾ ಮುಳುಗುತ್ತಿರುವ ಸೂರ್ಯನ ಮುಖದ ಮೇಲೆ ಕಪ್ಪು ಕಲೆಗಳು ಕಾಣಿಸಿದವು. ಪ್ರಜ್ವಲಿಸುವ ಸೌರಮುಖದಲ್ಲಿ ಕಪ್ಪು ಕಲೆಗಳು ಇರಬಹುದೆಂದು ಯಾರೂ ಊಹಿಸಿರಲಿಲ್ಲ. ಈ ಕಲೆಗಳು ಒಂದು ಅಂಚಿನಲ್ಲಿ ಕಾಣಿಸಿಕೊಂಡು, ಚಲಿಸಿ, ಇನ್ನೊಂದು ಅಂಚಿನಲ್ಲಿ ಅದೃಶ್ಯವಾಗುವುದೂ ಕಂಡಿತು. ಸೂರ್ಯ ಅದರ ಅಕ್ಷದ ಮೇಲೆ ತಿರುಗುವುದನ್ನು ಈ ಕಲೆಗಳ ಚಲನೆ ತಿಳಿಸುತ್ತದೆಂದು ಗೆಲಿಲಿಯೊ ಹೇಳಿದ. ಸೂರ್ಯ ಕಲೆಗಳು ಕಡಿಮೆ ತಾಪದ ಪ್ರದೇಶಗಳು ಎಂಬ ವಿಚಾರ ತಿಳಿದದ್ದು ಆಮೇಲೆ.

ಅನೇಕ ಶತಮಾನಗಳಿಂದ ಏಳು ಆಕಾಶಕಾಯಗಳ (ಐದು ಗ್ರಹಗಳು ಮತ್ತು ಸೂರ್ಯ ಚಂದ್ರ) ಬಗ್ಗೆ ಜನರ ಗೌರವ ಬೆಳೆದು ಬಂದಿತ್ತು. ವಾರದಲ್ಲಿ ಏಳು ದಿನಗಳಿರುವುದು ಈ ಕಾರಣದಿಂದಾಗಿ. ಗುರು ಗ್ರಹದ ನಾಲ್ಕು ಉಪಗ್ರಹಗಳು ಸೇರಿದರೆ ಆಕಾಶಕಾಯಗಳ ಸಂಖ್ಯೆ ಹನ್ನೊಂದಾಗುತ್ತದೆ. ಈ ಸಂಖ್ಯೆಯಲ್ಲಿ ರಹಸ್ಯ ಗರ್ಭಿತವಾದುದೇನೂ ಇಲ್ಲ. ತತ್ವಜ್ಞಾನಿಗಳಿಗೆ. ವಿದ್ಯಾವಂತರಿಗೆ ಗೆಲಿಲಿಯೊ ನಿರ್ಮಿಸಿದ್ದ ದೂರದರ್ಶಕದಲ್ಲಿ ಏನೋ ದೋಷವಿರಬೇಕೆಂಬ ಅನುಮಾನ ಬಂದಿತು. ಭೂಮಿಯ ಮೇಲಿರುವ

ವಸ್ತುಗಳನ್ನು ತೋರಿಸುವಲ್ಲಿ ಅದು ಸರಿಯಾಗಿ ಕೆಲಸ ಮಾಡುತ್ತಿದ್ದರೂ ಆಕಾಶಕಾಯಗಳ ಬಗ್ಗೆ ಅದು ಸರಿಯಾಗಿ ಕೆಲಸಮಾಡಲಾರದು ಎಂದು ಅವರು ಶಂಕಿಸತೊಡಗಿದರು. ಗೆಲಿಲಿಯೊ ರೋಮ್ ನಗರದಲ್ಲಿ ದೂರದರ್ಶಕವನ್ನು ಪ್ರದರ್ಶಿಸಿದಾಗ ಈ ಜನ ಅದರ ಮೂಲಕ ಆಕಾಶಕಾಯಗಳನ್ನು ನೋಡಲು ಮುಂದೆ ಬರಲಿಲ್ಲ. ಪದೊ ಮತ್ತು ಪೀಸ ನಗರಗಳಲ್ಲೂ ಅಷ್ಟೆ, ತತ್ವಜ್ಞಾನಿಗಳು ದೂರದರ್ಶಕದ ಮೂಲಕ ಆಕಾಶಕಾಯಗಳನ್ನು ನೋಡಲು ಹಿಂಜರಿದಿದ್ದರು. ಈ ವಿಚಾರಗಳನ್ನೆಲ್ಲಾ ಕುರಿತು ಗೆಲಿಲಿಯೊ ಕೆಪ್ಲರನಿಗೆ, "ಓ ಪ್ರಿಯ ಸ್ನೇಹಿತ ಕೆಪ್ಲರ್, ನಾವಿಬ್ಬರೂ ಒಟ್ಟಿಗೆ ಹೊಟ್ಟೆ ಹುಣ್ಣಾಗುವಷ್ಟು ನಗಬಹುದಾಗಿತ್ತಲ್ಲ. ಇಲ್ಲಿ, ಪದೊ ನಗರದಲ್ಲಿ, ತತ್ವಜ್ಞಾನದ ಮುಖ್ಯ ಪ್ರಾಧ್ಯಾಪಕನನ್ನು ದೂರದರ್ಶಕದ ಮೂಲಕ ಚಂದ್ರನನ್ನು ನೋಡೆಂದು ಎಡೆಬಿಡದೆ ಕಾಡುತ್ತಿದ್ದೇನೆ. ಅವನು ಮೊಂಡುತನದಿಂದ ತಿರಸ್ಕರಿಸುತ್ತಲೇ ಇದ್ದಾನೆ. ಈ ದಿವ್ಯ ಮೌಢ್ಯವನ್ನು ಕಂಡು ನಾವು ಬಿದ್ದುಬಿದ್ದು ನಗುತ್ತಿದ್ದೆವು. ಪೀಸ ನಗರದಲ್ಲಿ ತತ್ವಶಾಸ್ತ್ರದ ಪ್ರಾಧ್ಯಾಪಕನೊಬ್ಬ ಪ್ರಧಾನ ಡ್ಯೂಕರ ಮುಂದೆ ಮಂತ್ರ ಹೇಳಿ ಹೊಸಗ್ರಹಗಳನ್ನು ಆಕಾಶದಿಂದ ಓಡಿಸುವಂತೆ ವಾದಮಾಡಿದ," ಎಂದು ಬರೆದು ತಿಳಿಸಿದ.

ಡ್ಯೂಕ್ ಎರಡನೆ ಕ್ಯಾಸಿಮೊ ಅವರ ಆಹ್ವಾನವನ್ನು ಸ್ವೀಕರಿಸಿ ಗೆಲಿಲಿಯೊ ಟಸ್ಕನಿಗೆ ಬಂದು ನೆಲೆಸಿದ. ಅಲ್ಲಿ ಎರಡು ಪ್ರಮುಖ ವ್ಯವಸ್ಥೆಗಳ ಮೇಲಿನ ಸಂವಾದವನ್ನು ಪ್ರಕಟಿಸಿದ. ಇದು ಕೋಪರ್ನಿಕಸನ ಸಿದ್ಧಾಂತದ ಮರು ಪ್ರತಿಪಾದನೆಯಾಗಿತ್ತು. ಪೀಸ ಮತ್ತು ಫ್ಲಾರೆನ್ಸ್ ನಗರಗಳಲ್ಲಿದ್ದ ಅವನ ಶತ್ರುಗಳು ಧರ್ಮವಿರೋಧಿ ಚಟುವಟಿಕೆಯ ದೂರು ಹೊರಿಸಿ ಅವನನ್ನು ಮಠೀಯ ನ್ಯಾಯಾಸ್ಥಾನದ ಮುಂದೆ ನಿಲ್ಲಿಸಿದರು. ೧೬೧೬ ರಲ್ಲಿ ಪೋಪ್ ಐದನೆ ಪಾಲನು "ದೂಷಿತ ತತ್ವವನ್ನು ಬೋಧಿಸಕೂಡದು, ಪ್ರಚಾರ ಮಾಡಕೂಡದು, ಸಮರ್ಥಿಸಕೂಡದು," ಎಂದು ಗೆಲಿಲಿಯೊಗೆ ವಾಗ್ದಂಡನೆ ವಿಧಿಸಿದ್ದ. ಗೆಲಿಲಿಯೊ ಆ ರೀತಿ ನಡೆದುಕೊಳ್ಳುವುದಾಗಿ ಒಪ್ಪಿಕೊಂಡೂ ಇದ್ದ. ಬಹಳ ಕಾಲ ಸತ್ಯವನ್ನು ಮುಚ್ಚಿಡುವುದು ಅವನಿಂದ ಆಗಲಿಲ್ಲ. ೧೬೩೨ ರಲ್ಲಿ ಅವನು ತನ್ನ ಪ್ರಸಿದ್ಧ 'ಸಂವಾದ' ವನ್ನು ಪ್ರಕಟಿಸಿದ. ಯೂರೋಪಿನಲ್ಲಿ ಎಲ್ಲ ಕಡೆ ಅದಕ್ಕೆ ತುಮುಲ ಸ್ವಾಗತ ಸಿಕ್ಕಿತು. ಇದರಿಂದ ಮತಧರ್ಮಶಾಸ್ತ್ರಜ್ಞರು ಕೆರಳಿದರು. ಅವರು ಪೋಪನ ಕಡೆ ದೂರು ಕೊಂಡೊಯ್ದರು. ಸಂವಾದದ ಮಾರಾಟದಮೇಲೆ ಆಗಸ್ಟ್ ತಿಂಗಳ ಕೊನೆಯ ವೇಳೆಗೆ ನಿಷೇಧ ವಿಧಿಸಲಾಯಿತು. ಮಠೀಯ ನ್ಯಾಯಾಸ್ಥಾನದ ಎದುರು ಹಾಜರಾಗುವಂತೆ ಗೆಲಿಲಿಯೋಗೆ ಕರೆ ಹೋಯಿತು. ಅವನು ಎಷ್ಟು ಬೇಡಿಕೊಂಡರೂ ಉಪಯೋಗಕ್ಕೆ ಬರಲಿಲ್ಲ. ಅವನು ೧೬೩೩ ರ ಫೆಬ್ರುವರಿ ೧೩ ರಂದು ರೋಮಿಗೆ ಬಂದ; ಜೂನ್ ೨೧ ರಂದು ವಿಚಾರಣೆ ನಡೆಯಿತು; ಮರುದಿವಸ ಅವನು ತಪ್ಪೊಪ್ಪಿಗೆ ನೀಡಿ ಹಿಂದಿನ ತನ್ನ ಅಭಿಪ್ರಾಯಗಳನ್ನು ತ್ಯಜಿಸುವುದಾಗಿ ಹೇಳಿದ. ಏಳು ಮಂದಿ ಪೋಪನ ರಾಯಭಾರಿಗಳು ತೀರ್ಪಿನ ಪ್ರತಿಗೆ ಸಹಿ ಹಾಕಿದರು. ಆದರೆ ಇದಕ್ಕೆ ಪೋಪನ ಅಧಿಕೃತ ಸಮರ್ಥನೆ ದೊರೆಯಲಿಲ್ಲ. ಗೆಲಿಲಿಯೊ ತಪ್ಪೊಪ್ಪಿಗೆ ನೀಡಿ ಮೊಳಕಾಲಮೇಲೆ ಏಳುತ್ತ, "ಆದರು ಅದು ಚಲಿಸುತ್ತದೆ (Eppur si muove)" ಎಂದು ಉದ್ಗರಿಸಿದ.

ಬೆಳಕಿನ ವೇಗವನ್ನು ಅಳೆಯಲು ಗೆಲಿಲಿಯೊ ಪ್ರಯತ್ನಪಟ್ಟ. ಈ ನಿಟ್ಟಿನಲ್ಲಿ ಕೆಲಸ ಮಾಡಿದವರಲ್ಲಿ ಅವನೆ ಮೊದಲಿಗ. ಅವನು ಅನುಸರಿಸಿದ ವಿಧಾನ ಹೀಗಿತ್ತು: a ಮತ್ತು b ಎಂಬ ಇಬ್ಬರು ವೀಕ್ಷಕರ ನಡುವಿನ ದೂರ S ಆಗಿರಲಿ. ಇಬ್ಬರ ಬಳಿಯೂ ಒಂದೊಂದು ಲಾಟೀನಿದೆ ಎಂದುಕೊಳ್ಳೋಣ. ಲಾಟೀನಿನ ಬೆಳಕು ಒಂದು ಕಡೆ ಹೊರಗೆ ಬರುವಂತೆ ವ್ಯವಸ್ಥೆಯಿದೆ. a ಲಾಟೀನಿನ ಕವಾಟವನ್ನು ತೆರೆಯುತ್ತಾನೆ ಅದೇ ಸಮಯಕ್ಕೆ ಒಂದು ಗಡಿಯಾರವನ್ನೂ ಆರಂಭಿಸುತ್ತಾನೆ. ಬೆಳಕು ಕಂಡ ತಕ್ಷಣ b ತನ್ನ ಲಾಟೀನಿನ ಕವಾಟವನ್ನು ತೆರೆಯುತ್ತಾನೆ. ಈ ಲಾಟೀನಿನ ಬೆಳಕು ಕಂಡತಕ್ಷಣ a ಗಡಿಯಾರವನ್ನು ನೋಡುತ್ತಾನೆ. ಅದು ತೋರಿಸುವ ಸಮಯ t ಆಗಿರಲಿ,ಬೆಳಕು $2S$ ದೂರವನ್ನು ಕ್ರಮಿಸಲು ತೆಗೆದುಕೊಳ್ಳುವ ಕಾಲ ಇದು. $2S$ ಅನ್ನು t ಯಿಂದ ಭಾಗಿಸಿದರೆ ಬೆಳಕಿನ ವೇಗ C ತಿಳಿಯುತ್ತದೆ($C=2S/t$). t ಅನ್ನು ಕರಾರುವಾಕ್ಕಾಗಿ ಅಳೆಯುವುದು ಆಗ ಸಾಧ್ಯವಿರಲಿಲ್ಲ. ಆ ಕಾರಣ ಗೆಲಿಲಿಯೊ ಅಳೆದ ಬೆಳಕಿನ ವೇಗ ಸರಿಯಾಗಿರಲಿಲ್ಲ. ಎಲೆಕ್ಟ್ರಾನಿಕ್ ವಿಧಾನದಿಂದ t ಅನ್ನು ಅಳೆಯುವುದು ಸಾಧ್ಯವಾದಾಗ ಬೆಳಕಿನ ವೇಗವನ್ನು ಇಂಥದೆ ಪ್ರಯೋಗದಿಂದ ಅಳೆಯಲಾಯಿತು. ಆಗ ಬೆಳಕಿನ ವೇಗ $C=10^8$ ಮೀ. ಸೆ.$^{-1}$ ಎಂದು ತಿಳಿಯಿತು.

ಗೆಲಿಲಿಯೊ ಒಂದು ತಾಪಮಾಪಕವನ್ನು ನಿರ್ಮಿಸಿದ್ದ. ಭೌತ ಪ್ರಾಚಲಗಳನ್ನು ಕರಾರುವಾಕ್ಕಾಗಿ ಅಳೆಯಬೇಕೆಂದು ತಿಳಿಸಿದವರಲ್ಲಿ ಇವನು ಎರಡನೆಯವನು. ವಸ್ತುಗಳ ಸಾಪೇಕ್ಷ ಸಾಂದ್ರತೆಯನ್ನು ಅಳತೆ ಮಾಡುವುದರ ಮೂಲಕ ಆರ್ಕಿಮಿಡೀಸ್ ಭೌತ ವಿಜ್ಞಾನದಲ್ಲಿ ಅಳತೆಗಿರುವ ಪ್ರಾಮುಖ್ಯತೆಯನ್ನು ಸ್ಥಾಪಿಸಿದ್ದ. ಈ ಕಾರಣಕ್ಕಾಗಿ ಗೆಲಿಲಿಯೊ ಅವನನ್ನು ತನ್ನ ಗುರುವೆಂದು ಸ್ವೀಕರಿಸಿದ್ದ.

ಡಿಸೆಂಬರ್ ತಿಂಗಳಲ್ಲಿ ಗೆಲಿಲಿಯೊ ಫ್ಲಾರೆನ್ಸ್ ನಗರಕ್ಕೆ ಹಿಂದಿರುಗಿದ. ಉಳಿದ ೮ ವರ್ಷಗಳನ್ನು ಅವನು ತನ್ನ ಹಳ್ಳಿ ಆರ್ಸೆಟ್ರಿಯಲ್ಲಿ ಕಳೆದ. ಅಲ್ಲಿ ಅವನು ೧೬೪೨ರ ಜನವರಿ ೮ ರಂದು ಕೊನೆಯುಸಿರೆಳೆದ. ಕೊನೆಯ ಘಳಿಗೆಯ ವರೆಗೂ ಅವನು ಸಂಘಟ್ಟಣೆಯ ಸಿದ್ಧಾಂತದ ವಿವರವನ್ನು ತರುಣ ಶಿಷ್ಯರಾದ ವಿವಿಯಾನಿ ಮತ್ತು ಟಾರೆಸಿಲಿ ಅವರಿಗೆ ಹೇಳಿ ಬರೆಸುತ್ತಿದ್ದ. ಕೊನೆಯ ದಿನಗಳಲ್ಲಿ ಅವನ ಬದುಕಿಗೆ ಮುದವಿತ್ತ ಸಂಗತಿಯೆಂದರೆ ಈ ಶಿಷ್ಯರೊಂದಿಗೆ ನಡೆಸುತ್ತಿದ್ದ ಸಂಭಾಷಣೆ.

ಇದೀ ಜೀವನ ತುದಿಗಾಣದ ಒಂದು ಪ್ರಯೋಗಶಾಲೆ.

ಗಾಂಧೀಜಿ

ಭೂಜಲ ಸಮಸ್ಯೆಗಳು—ಭಾಗ ೪

ಡಾ|| ಹೆಚ್. ಎಸ್. ನಾಗಭೂಷಣಯ್ಯ

೧. ಪ್ರಕೃತಿಯ ಕಾರಂಜಿಗಳು (ಆರ್ಟೀಸಿಯನ್ ಚಿಲುಮೆಗಳು)

ನಾವು ಉದ್ಯಾನವನಗಳಲ್ಲೂ ಮತ್ತು ಮನೋರಂಜನೆಯ ವಿಹಾರ ಕೇಂದ್ರಗಳಲ್ಲೂ ಕೃತಕ ಕಾರಂಜಿಗಳನ್ನು ನೋಡುತ್ತಿರುತ್ತೇವೆ. ಕೊಳವೆಗಳಲ್ಲಿ ನೀರು ಗಾಳಿ ಸಂಮರ್ಧಕ್ಕಿಂತ ಅಂದರೆ ಸುತ್ತಣ ವಾಯುಮಂಡಲದ ಒತ್ತಡಕ್ಕಿಂತ ಅಧಿಕ ಒತ್ತಡದಿಂದ ಹರಿಯುತ್ತಿರುವಾಗ ಮಾರ್ಗದಲ್ಲಿ ಈ ಕೊಳವೆಗಳಲ್ಲಿ ರಂಧ್ರಗಳು ಏರ್ಪಟ್ಟಿದ್ದಲ್ಲಿ ನೀರು ಬುಗ್ಗೆ ರೂಪದಲ್ಲಿ ಹೊರಚಿಮ್ಮುವುದು. ಹೀಗೆ ಚಿಮ್ಮುವ ಚಿಲುಮೆಯನ್ನು ನಾವು ಕಾರಂಜಿಯೆನ್ನುತ್ತೇವೆ. ಇಂತಹ ಕಾರಂಜಿಗಳ ಎತ್ತರವನ್ನು ನೀರಿನ ಒತ್ತಡದ ಬದಲಾವಣೆಯಿಂದ ಅಳವಡಿಸಬಹುದು. ಪಂಪಿನ ಸಹಾಯದಿಂದ ನೀರಿನ ಒತ್ತಡವನ್ನು ಏರ್ಪಡಿಸಿ ಕೃತಕವಾಗಿ ಪಡೆಯುವ ಚಿಲುಮೆಗಳೇ 'ಕೃತಕ ಕಾರಂಜಿಗಳು'.

ಪ್ರಕೃತಿಯಲ್ಲಿ ಕೆಲವು ಸಂದರ್ಭಗಳಲ್ಲಿ ಭೂಜಲ ಅಧಿಕ ಒತ್ತಡದಿಂದ ಹರಿಯುವ ಸನ್ನಿವೇಶಗಳು ಕಂಡುಬರುತ್ತದೆ. ಎಲ್ಲಿಯೋ ಎತ್ತರ ಪ್ರದೇಶದಲ್ಲಿ ಧರೆಗಿಳಿದ ಮಳೆ ನೀರು ಭೂಮಿಯಲ್ಲಿ ತಂಗಿ ಬಂಡೆಗಳ ಮಧ್ಯೆ ಸುರಂಗ ಅಥವಾ ಕಂಧಕಗಳಲ್ಲಿ ಪ್ರವೇಶಿಸಿ ಹರಿಯುವ ಮಾರ್ಗದಲ್ಲಿ ಆ ಬಂಡೆಗಳಲ್ಲಿ ಬಿರುಕು ಏರ್ಪಟ್ಟಿದ್ದಲ್ಲಿ ಒತ್ತಡದಿಂದ ಕೂಡಿದ ಭೂಜಲ ಒಡಕಿನಿಂದ ಹೊರಕ್ಕೆ ಬರಬಲ್ಲದು. ಈ ಒತ್ತಡವು ಸಾಕಷ್ಟಿದ್ದಲ್ಲಿ ಈ ಭೂಜಲ ಭೂಮಿಯ ಮೇಲಕ್ಕೆ ಬಂದು ಉಕ್ಕಿ ಹರಿಯಲು ಸಾಧ್ಯ. ಇನ್ನೂ ಹೆಚ್ಚಿನ ಒತ್ತಡದಿಂದ ಕೂಡಿದ್ದರೆ ಭೂಮಿಯ ಮೇಲೆ ಚಿಲುಮೆಗಳಾಗಿಯೂ ಮತ್ತು ಎತ್ತರದ ಕಾರಂಜಿಗಳಾಗಿಯೂ ಕಾಣಿಸಿಕೊಳ್ಳುವುವು. ಮಳೆಗಾಲದಲ್ಲಿ ನೀರಿನ ಆಮದನ್ನು ಪಡೆದು ಸತತ ಕಾರಂಜಿಗಳಾಗಿರ

ಬಹುದು. ಬಂಡೆ ಅಥವಾ ಜೇಡಿ ಪದರಗಳ ಅವ್ಯಾಪ್ತರಚನೆಯ ನಡುವೆ ಕಂದಕಗಳಲ್ಲಿ ಅಡಕವಾದ ಗ್ರಾವಲ್, ಮರಳು ಮುಂತಾದ ವ್ಯಾಪ್ತ ಜಲಧಾಯಕಗಳು ಹೆಚ್ಚಿನ ಒತ್ತಡದ ಅಂತರ್ಜಲವನ್ನು ಪಡೆದಿರಲು ಸಾಧ್ಯ; ಹಾಗೂ ಬಾವಿಗಳನ್ನು ಇಂತಹ ಸುರಂಗ ಜಲಧಾಯಕಗಳಲ್ಲಿ ರಚಿಸಿದಾಗ ಭೂಜಲ ಹೊರ ಹೊಮ್ಮಿ ಆರ್ಟೆಸಿಯನ್ ಕಾರಂಜಿಗಳಾಗಿ ಕಾಣಿಸಿಕೊಳ್ಳುವುವು. ಬಂಡೆಯಿಂದ ಉದ್ಭವವಾಗುವ ಭೂಜಲ ಸಾಮಾನ್ಯವಾಗಿ ಶುದ್ಧವಾದ ಸಿಹಿ ನೀರಿನಿಂದ ಕೂಡಿರುವುದು. ಆದರೆ ವ್ಯಾಪ್ತ ಮಣ್ಣಿನ ರಚನೆಯ ಮೂಲಕ ಚಲಿಸುವ ಭೂಜಲ ಲವಣ ಮಿಶ್ರಿತವಾಗಿದ್ದು ಉಪ್ಪು ನೀರಿನಿಂದ ಕೂಡಿರುವುದು. ಆರ್ಟೀಸಿಯನ್ ಚಿಲುಮೆಗಳನ್ನು ಬಿರುಕಿನಿಂದ ಕೂಡಿದ ಗಟ್ಟಿ ಬಂಡೆಗಳ ಸಾಲಿನಲ್ಲೂ ಮತ್ತು ಪೊಟರುಗಳಿಂದ ಕೂಡಿದ ಸುಣ್ಣಕಲ್ಲಿನ ಸರಣಿಯಲ್ಲೂ ಕಾಣಬಹುದು.

ಪ್ರಕೃತಿಯ ಚಿಲುಮೆ ಹಾಗೂ ಒತ್ತಡದ ಕಾರಂಜಿಗಳ ನಿದರ್ಶನಗಳು :—

i) ಸತತವಾಗಿ ಚಿಮ್ಮುತ್ತಿರುವ ಒಂದು ಕಾರಂಜಿ ಫ್ರಾನ್ಸ್ ದೇಶದ ಪ್ಯಾರಿಸ್ ಪಟ್ಟಣಕ್ಕೆ ಸಂಬಂಧಿಸಿದ ಪ್ಲಾಸಿಯಲ್ಲಿ ಏರ್ಪಟ್ಟಿರುತ್ತದೆ. ಸುಮಾರು ೧೯೨೩ ಅಡಿ (೫೭೭ ಮೀಟರು) ಆಳದಲ್ಲಿ ೨೮ ಅಂಗುಲ (೭೦ ಸೆಂ. ಮೀ.) ವ್ಯಾಸದಿಂದ ನಿರ್ಮಿತವಾಗಿರುವ ಬಾವಿಯಿಂದ ನಿಮಿಷಕ್ಕೆ ೩೯೦೦ ಗ್ಯಾಲನ್ನುಗಳಷ್ಟು ನೀರು ಭೂಮಿಯ ಮೇಲೆ ೫೪ ಅಡಿ (೧೬ ಮೀಟರು) ಗಳಷ್ಟು ಎತ್ತರಕ್ಕೆ ಚಿಮ್ಮಲ್ಪಡುತ್ತಿದೆ.

ii) ಕರ್ನಾಟಕದಲ್ಲಿ ಅನೇಕ ಚಿಲುಮೆಗಳಿವೆ. ಈ ಆರ್ಟೆಸಿಯನ್ ಚಿಲುಮೆಗಳು ಎತ್ತರದ ಕಾರಂಜಿಗಳಾಗದಿದ್ದರೂ ಜೀವ ಚಿಲುಮೆಗಳಾಗಿರುತ್ತವೆ.

ತುಮಕೂರಿಗೆ ಹದಿನಾಲ್ಕು ಕಿಲೋಮೀಟರ್ ಈಶಾನ್ಯಕ್ಕೆ ದೇವರಾಯನ ದುರ್ಗದ ಬೆಟ್ಟವಿದೆ. ಬೆಟ್ಟದ ಮಾರ್ಗದಲ್ಲಿ ನಾಮಚಿಲುಮೆಯೆನ್ನುವ ಸ್ಥಳದಲ್ಲಿ ನೀರು ಉಕ್ಕುತ್ತಿರುತ್ತದೆ. ಈ ಚಿಲುಮೆ ಮೂಡಿರುವುದು ಒಂದು ಗಡುಸಾದ ಗ್ರಾನೈಟ್ ಶಿಲೆಯಲ್ಲಿ. ಗಾತ್ರದಲ್ಲಿ ಕಡಿಮೆಯಾದರೂ ಜೀವಿತ ಚಿಲುಮೆ. ವಾಸ್ತವವಾಗಿ ಅತಿ ಸೂಕ್ಷ್ಮವಾದ ಮತ್ತು ಆಳವಾದ ಬಿರುಕುಗಳು ಗ್ರಾನೈಟ್ ಶಿಲೆಯ ಬಹುಭಾಗದಲ್ಲಿ ಮೂಡಿರುವುದರಿಂದ ಮಳೆ ನೀರೆಲ್ಲಾ ಸಂಗ್ರಹವಾಗಿ ಬಿರುಕುಗಳ ಮೂಲಕ ಹರಿದು ಇಲ್ಲಿ ಉಕ್ಕುತ್ತದೆ.

ಕೋಲಾರಕ್ಕೆ ಒಂದೂವರೆ ಮೈಲಿ ದೂರದಲ್ಲಿ ಹಳೇ ಮದರಾಸು ರಸ್ತೆಯಲ್ಲಿ ಬೆಟ್ಟದ ಸಾಲೊಂದು ಇದೆ. ಇದು ಸುಮಾರು ಸಮುದ್ರ ಮಟ್ಟಕ್ಕಿಂತ ೪,೩೦೦ ಅಡಿ (೧೨೯೦ ಮೀಟರು)ಗಳಿಗೂ ಮಿಗಿಲಾದ ಎತ್ತರದ ಪ್ರದೇಶ. ಅಲ್ಲಿ ಒಂದು ಬೆಟ್ಟದ ಮೇಲೆ ಶಿವದೇವಾಲಯವಿದೆ. ಅದರ ಬಲಭಾಗದಲ್ಲಿರುವ ಬಸವಣ್ಣನ ವಿಗ್ರಹದ ಬಾಯಿಯಿಂದ ನೀರು ಸುರಿಯುತ್ತಲೇ ಇರುತ್ತದೆ. ಈ ಪ್ರದೇಶದ ಬೆಟ್ಟದ ತುಂಬಾ ಬಿರುಕಿನಿಂದ ಕೂಡಿದ ಗ್ರಾನೈಟ್ ಶಿಲೆ ಇರುತ್ತದೆ. ಇದರ ತಳಭಾಗದಲ್ಲಿ ಅಡ್ಡಗಟ್ಟಿದಂತೆ ಗಟ್ಟಿಕಲ್ಲು ಹಾದಿರುತ್ತದೆ. ಹೀಗಾಗಿ ಮಳೆನೀರು ಕೆಳಗೆ ಹರಿಯಲು ತಡೆಯುಂಟಾಗಿದೆ. ನೀರು

ಉಕ್ಕುವ ಕಡೆ ಶಿಲ್ಪಿ ಬಸವಣ್ಣನ ವಿಗ್ರಹವನ್ನು ಕಡೆದು ಅದರ ಬಾಯಿಯನ್ನು ರಂಧ್ರಕ್ಕೆ ಅಳವಡಿಸಿದ್ದಾನೆ.

ಇದೇ ರೀತಿ ಶಿವಗಂಗೆ ಮತ್ತು ಸಿದ್ಧಗಂಗಾ ಕ್ಷೇತ್ರಗಳಲ್ಲೂ ಅನೇಕ ಜೀವಂತ ಚಿಲುಮೆಗಳು ಉಕ್ಕಿ ಹರಿಯುತ್ತಿರುತ್ತದೆ.

ನಮ್ಮ ಪೂರ್ವಿಕರು ಪ್ರಕೃತಿಯ ಚಿಲುಮೆ, ಕಾರಂಜಿಗಳ ಪ್ರದೇಶಗಳನ್ನು ವೀಕ್ಷಿಸಿ, ಮನೋರಂಜನೆ ಮತ್ತು ಆರೋಗ್ಯಗಳ ದೃಷ್ಟಿಯಿಂದ ಈ ಸ್ಥಳಗಳಲ್ಲಿ ದೇವಾಲಯ, ಆಶ್ರಮ ಇಲ್ಲವೇ ಮಠಗಳನ್ನು ಸ್ಥಾಪಿಸಿ ಜನರ ಮನಸ್ಸನ್ನು ಆಕರ್ಷಿಸಿ ಪ್ರಕೃತಿಯ ವೈವಿಧ್ಯತೆಯನ್ನು ಗ್ರಹಿಸಲು ಎಡೆಮಾಡಿಕೊಟ್ಟಿರುತ್ತಾರೆ.

೨. ಬಿಸಿನೀರಿನ ಬುಗ್ಗೆಗಳು (ಗೇಸರ್ಸ್)

ಬಿಸಿನೀರಿನ ಬುಗ್ಗೆಗಳು ಪ್ರಕೃತಿಯ ನಿಗೂಢ ಶಕ್ತಿಯನ್ನು ಪ್ರದರ್ಶಿಸುತ್ತವೆ. ಪ್ರಕೃತಿಯ ಕಾರಂಜಿಗಳು ಭೂಮಿಯ ಗುರುತ್ವ ಕೇಂದ್ರದ ಬಲದಿಂದ ಹೆಚ್ಚಿನ ಒತ್ತಡವನ್ನು ಪಡೆದು ಚಿಲುಮೆಗಳಾಗಿ ವಿರಾಜಿಸಿದರೆ, ಭೂಗರ್ಭದ ಕಾವಿನ ಶಕ್ತಿಯಿಂದ, ಭೂಜಲ ಕುದಿದು ಭೂಮಿಯ ಮೇಲಕ್ಕೆ ಚಿಮ್ಮಿ ಬಿಸಿನೀರಿನ ಬುಗ್ಗೆಗಳಾಗಿ ಮಾರ್ಪಟ್ಟಿರುತ್ತವೆ. ಕೆಲವು ಅದ್ಭುತ ಬಿಸಿನೀರಿನ ಬುಗ್ಗೆಗಳ ವೈಶಿಷ್ಟ್ಯತೆಯೆಂದರೆ ಪ್ರನಾಳಿಕೆಯಂತಹ ಒಂದು ಬಾಯ್ತೆರೆದ ಬಿಲ, ಇದರಿಂದ ನಿರ್ದಿಷ್ಟ ಕಾಲಾಂತರದಲ್ಲಿ ಹೊರಹೊಮ್ಮಿ ಗಗನಕ್ಕೇರುವ ಜಲಶ್ರೇಣಿ. ಹೊರಹೊಮ್ಮುವ ನೀರಿನ ಶಾಖದಿಂದ ಒಂದು ಕೋಳಿ ಮೊಟ್ಟೆ ಇಲ್ಲವೇ ಒಂದು ಆಲೂಗಡ್ಡೆಯನ್ನು ಬೇಯಿಸಬಹುದು.

ಉತ್ತರ ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿರುವ ವಯೋಮಿಂಗ್ ಪ್ರಾಂತ್ಯದಲ್ಲಿ 'ಪುರಾತನ ನಿಷ್ಠೆಯ ಬುಗ್ಗೆ' ('Old faithful' in Yellow Stone National Park, Wyoming) ಕ್ರಮ ತಪ್ಪದೆ ಪ್ರತಿ ಗಂಟೆಯಲ್ಲಿ ಆರು ನಿಮಿಷಗಳ ಕಾಲ ೯೦ರಿಂದ ೧೨೦ ಮೀಟರ್‌ಗಳ ಎತ್ತರ ಗಗನಕ್ಕೆ ಹಾರಿ ಉಳಿದ ಕಾಲದಲ್ಲಿ ಅದೃಶ್ಯವಾಗುವುದು. ಈ ಅವಧಿಯಲ್ಲಿ ಸುಮಾರು ೬೦,೦೦೦ ಗ್ಯಾಲನ್‌ಗಳಷ್ಟು ನೀರು ಹೊರಬರುತ್ತದೆ. ಈ ನಿಷ್ಠಾವರ್ತನೆಯಿಂದಾಗಿ ಈ ಬಿಸಿನೀರಿನ ಬುಗ್ಗೆಗೆ 'ನಿಷ್ಠೆಯ ಬುಗ್ಗೆ' ಎಂಬ ಹೆಸರು ಬಂದಿದೆ.

ಬಿಸಿನೀರಿನ ಬುಗ್ಗೆಗಳು ಉದ್ಭವಿಸುವ ರೀತಿ

ಸಾಮಾನ್ಯವಾಗಿ ಸಮುದ್ರ ಮಟ್ಟದಲ್ಲಿ ವಾಯು ಮಂಡಲದ ಒತ್ತಡಕ್ಕನುಗುಣವಾಗಿ ನೀರು ೧೦೦° ಸೆ. ಖರತ್ವದಲ್ಲಿ ಆವಿಯಾಗುವುದು. ಆದರೆ ಗಾಳಿ ಒತ್ತಡ ಹೆಚ್ಚಿದಂತೆಲ್ಲಾ ನೀರು ಹೆಚ್ಚಿನ ಖರತ್ವದಲ್ಲಿ ಆವಿಯಾಗಲು ಸಾಧ್ಯ. ಸಮುದ್ರ ಮಟ್ಟದಿಂದ ಸುಮಾರು ೧೦ ಮೀಟರ್ ಆಳದಲ್ಲಿ ಪರೀಕ್ಷಿಸಿದ್ದೇ ಆದರೆ ಅಲ್ಲಿ ನೀರು ಕುದಿದು ಆವಿಯಾಗಲು ಬೇಕಾದ ಖರತ್ವ ೧೨೦° ಸೆ. ಏಕೆಂದರೆ ಅಲ್ಲಿ ಗಾಳಿ ಒತ್ತಡ ಎರಡರಷ್ಟು ಹೆಚ್ಚಾಗಿರುವುದು. ಕಡಿಮೆ ಒತ್ತಡವಿರುವ ಪರ್ವತಗಳಲ್ಲಿ ೧೦೦° ಸೆ.ಗಳಿಗಿಂತ ಕಡಿಮೆ ಖರತ್ವದಲ್ಲೇ ನೀರು ಆವಿಯಾಗಬಲ್ಲದ್ದು. ಸಮುದ್ರ ಮಟ್ಟದಿಂದ ೨೯,೦೦೦ ಅಡಿ


ಎತ್ತರದಲ್ಲಿರುವ ಹಿಮಾಲಯ ಪರ್ವತ ಶಿಖರದಲ್ಲಿ ೭೭° ಸೆ. ಖರತ್ವದಲ್ಲಿ ನೀರು ಕುದಿದು ಆವಿಯಾಗಬಲ್ಲದು. ಈ ತತ್ವಕ್ಕನುಗುಣವಾಗಿ ಬಿಸಿನೀರಿನ ಬುಗ್ಗೆಗಳು ಏರ್ಪಟ್ಟಿರುತ್ತವೆ.

ಭೂತಳದ ಅತಿ ಆಳವಾದ ಬಿರುಕುಗಳಲ್ಲಿ ಶೇಖರವಾಗಿರುವ ಅಂತರ್ಜಲ ಕೆಲವು ಸಂದರ್ಭಗಳಲ್ಲಿ ಅತಿ ಶಾಖವಾದ ಬಂಡೆಗಳ ಇಲ್ಲವೇ ಜೀವಿತವಾಗಿ ಉಳಿದಿರುವ ಜ್ವಾಲಾ ಮುಖಿಗಳ ಸಂಪರ್ಕವನ್ನು ಪಡೆದಿರಬಹುದು. ಅಲ್ಲಿ ಗಾಳಿ ಒತ್ತಡ ಅಧಿಕವಾಗಿದ್ದು ನೀರು ಆವಿಯಾಗಲು ಹೆಚ್ಚಿನ ಉಷ್ಣಾಂಶದ ಅವಶ್ಯಕತೆ ಇರುವುದು. ಸಾಕಷ್ಟು ಉಷ್ಣಾಂಶ ದೊರೆತಾಗ ಆವಿಯಾಗಿ ಹೆಚ್ಚಿನ ಒತ್ತಡದಿಂದ ನೀರು ಮೇಲೆ ಸರಿದು ಭೂಮಿಯ ಮೇಲೆ ಉಕ್ಕುವುದು. ಹಾಗೂ ಭೂ ಮಟ್ಟವನ್ನು ಸಮೀಪಿಸಿದಂತೆಲ್ಲಾ ವಾಯು ಮಂಡಲದ ಒತ್ತಡ ಕಡಿಮೆಯಾದಂತೆಲ್ಲಾ ನೀರು ಬೇಗ ಕುದಿದು ಹೊರಬರುವುದು. ಬಿರುಕಿನ ರಂಧ್ರಗಳಲ್ಲಿ ಶೇಖರವಾದ ನೀರು ಖಾಲಿಯಾದ ನಂತರ ಪುನಃ ಅಂತರ್ಜಲ ಸುತ್ತಮುತ್ತಲಿನ ಪೊಟರೆ ಒಡಕುಗಳಿಂದ ಹರಿದು ಕಾಯಿಸಲ್ಪಡುವುದು. ಇದು ಬುಗ್ಗೆಗಳ ಮಧ್ಯೆ ತಗಲುವ ಕಾಲಾಂತರಕ್ಕೆ ಕಾರಣ. ಸರಿಯಾದ ಪ್ರಮಾಣದಲ್ಲಿ ಖರತ್ವವನ್ನು ತಲುಪಿದಾಗ ಮಾತ್ರ ಪುನಃ ಮೇಲೆ ತಿಳಿಸಿದಂತೆ ಬಿಸಿನೀರಿನ ಬುಗ್ಗೆ ಚಿಮ್ಮುವುದು. ಈ ರೀತಿ ಒಂದು ಚಕ್ರಾವರ್ತಿಯಲ್ಲಿ ಬುಗ್ಗೆಗಳು ಕಾಣಿಸಿಕೊಳ್ಳುವುವು.



ಚಿತ್ರ 1   ಬಿಸಿನೀರಿನ ಬುಗ್ಗೆಗಳ ಚಲನೆ

ಅನೇಕ ಸಲ ಪೊಟರು, ಕಾಲುವೆ, ಇಲ್ಲವೇ ಒಡಕುಗಳು ನೇರವಾಗಿ ಏರ್ಪಟ್ಟಿರುವುದಿಲ್ಲ. (ಚಿತ್ರ ೧) ಡೊಂಕುಡೊಂಕಾಗಿರಬಹುದು. ನೀರಿನ ಆವಿ ನೇರವಾಗಿ ಹೊರ ಹೊಮ್ಮಲು ಅಡಚಣೆಯಾಗಿ ಹೊರಬರುವ ಪ್ರವಾಹದ ವೇಗದಲ್ಲಿ ಏರು ತಗ್ಗುಗಳು ಉಂಟಾಗಬಹುದು. (ಚಿತ್ರ ೨).



ಚಿತ್ರ 2 ಬಿಸಿ ನೀರಿನ ಬುಗ್ಗೆಗಳ ಉತ್ಪತ್ತಿಯ ರೀತಿ
(ಗೇನಲ್ ನಾಳಗಳ ರಚನೆ)

ಪ್ರಪಂಚದ ಮುಖ್ಯ ಬಿಸಿನೀರು ಬುಗ್ಗೆಗಳ ವಿವರ

ಸಂ.	ಪ್ರಾಂತ್ಯ	ಪ್ರದೇಶ	ವಿವರಗಳು
೧	ಸಂಯುಕ್ತ ಸಂಸ್ಥಾನ	ವಯೋಮಿಂಗ್-ಎಲ್ಲೋಸ್ಟೋನ್ ಉದ್ಯಾನವನ	ಸಮುದ್ರ ಮಟ್ಟಕ್ಕೆ ೮,೦೦೦ ಅಡಿ ಎತ್ತರದಲ್ಲಿ ಏರ್ಪಟ್ಟಿದೆ. ೧೦,೦೦೦ ಬಿಸಿನೀರಿನ ಬುಗ್ಗೆಗಳಿಂದ ಆವರಿಸಿದೆ. ೩೦ ಬುಗ್ಗೆಗಳು ಸದಾ ಚೈತನ್ಯದ ಕಾರಂಜಿಗಳಾಗಿ ಆವಿ ಮತ್ತು ಬಿಸಿನೀರನ್ನು ಚಿಮ್ಮುತ್ತವೆ. ಕೆಲವು ಬುಗ್ಗೆಗಳು ಚಿಮ್ಮುವಾಗ ನೆಲವನ್ನೆಲ್ಲಾ ನಡುಗಿಸಿಬಿಡುತ್ತದೆ.
೨	ನ್ಯೂಜಿಲೆಂಡ್	ಆಕ್‌ಲ್ಯಾಂಡ್	ಬುಗ್ಗೆಗಳ ಪ್ರಾಂತ್ಯ ಕೆಲವು ಆವಿಯನ್ನು, ಕೆಲವು ಬರೀ ಕೆಸರನ್ನೂ ಕಾರುತ್ತವೆ. ಜೀವಂತ ಜ್ವಾಲಾಮುಖಿಯ ಪ್ರದೇಶ.
೩	ಯೂರೋಪ್	ಐಸ್‌ಲ್ಯಾಂಡ್ ರೆಜಾವಿಕ್	೩೦ ಬುಗ್ಗೆಗಳು ಸದಾ ಉತ್ಸಾಹದಿಂದ ಚಿಮ್ಮುತ್ತಿವೆ. ಮುಖ್ಯವಾದ 'ಗೆಯಸಲ್'ನ ಬಿಸಿನೀರಿನ ಖರತ್ವ ೯೦ ಸೆ.

ಸಂ.	ಪ್ರಾಂತ್ಯ	ಪ್ರದೇಶ	ವಿವರಗಳು
೪	ಕರ್ನಾಟಕ	ಪುತ್ತೂರು-ಇರ್ದೆ	ಬಿಸಿನೀರಿನ ಖರತ್ವ ೩೯ ಸೆ. ಗಂಧಕಾಂಶ ಜಾಸ್ತಿ.
೫	ಒರಿಸ್ಸಾ	ಚಿರಾಂಪುರ	ತಪ್ತಪಾಣಿ, ಜೀವಂತ ಬುಗ್ಗೆ, ಖನಿಜಾಂಶವನ್ನು ಪಡೆದಿರುತ್ತದೆ.
೬	ಹಿಮಾಚಲ ಪ್ರದೇಶ	ಕಾಲು–ಮಣಿಕರಣ್, ಕಸೋಲ್	ಹನ್ನೊಂದಕ್ಕೂ ಹೆಚ್ಚು ಬಿಸಿನೀರಿನ ಬುಗ್ಗೆಗಳು ೧೩,೦೦೦ ಅಡಿ ಎತ್ತರದಲ್ಲಿವೆ. ಇವು ಖನಿಜ ಜಲ ಚಿಲುಮೆಗಳು.
೭	ಹಿಮಾಲಯ	ಕೇದಾರ, ಬದರಿ	ಗ [illegible}, ತಪ್ತಕುಂಡ } ಖನಿಜಾಂಶಗಳ ಚಿಲುಮೆಗಳು
೮	ಜಮ್ಮು ಮತ್ತು ಕಾಶ್ಮೀರ	ಲಡಕ್–ಪುಗಾ	೧೧೫ ಕ್ಕೂ ಹೆಚ್ಚಿನ ಬಿಸಿನೀರಿನ ಚಿಲುಮೆಗಳಿವೆ. ಕೆಲವು ೫೦ ರಿಂದ ೭೦ ಸೆ. ಖರತ್ವವಿದ್ದು ಪ್ರತಿ ಸೆಕೆಂಡಿಗೆ ೫ ಲೀಟರ್ ನೀರು ಹೊರಬರುತ್ತದೆ ಮತ್ತು ಕೆಲವು ಜಿನುಗುತ್ತವೆ.
೯	ಮಹಾರಾಷ್ಟ್ರ	ಠಾಣಾ	೧೦ ಕ್ಕಿಂತ ಹೆಚ್ಚಿನ ಬುಗ್ಗೆಗಳ ಸರಣಿ
೧೦	ಪಶ್ಚಿಮ ಬಂಗಾಳ	ಬೀರ್ ಭೂಮ್–ಸೂರಿ	೧೦ ಬಿಸಿನೀರಿನ ಚಿಲುಮೆ–ಷಾರ, ಅನಿಲಗಳನ್ನು ಪಡೆದಿರುತ್ತವೆ.
೧೧	ಬಿಹಾರ	ರಾಜಗಿರ್ ಬೆಟ್ಟದಸಾಲು	ಬಿಸಿನೀರು ಬುಗ್ಗೆಗಳ ಸರಣಿ

ರೋಗ ರುಜಿನಗಳನ್ನು ಗುಣಪಡಿಸಬಲ್ಲ ಖನಿಜ ಜಲ ಚಿಲುಮೆಗಳು

ಚಿಲುಮೆ ನೀರಿನಲ್ಲಿ ಅಡಕವಾಗಿರುವ ಖನಿಜ, ಲವಣ ಮಿಶ್ರಗಳಿಗೆ ಅನುಗುಣವಾಗಿ ಪ್ರಪಂಚದ ಕೆಲವು ಕಡೆಗಳಲ್ಲಿ ಆರೋಗ್ಯ ವಿಹಾರ ಕೇಂದ್ರಗಳು ಸ್ಥಾಪಿಸಲ್ಪಟ್ಟಿವೆ. ವಿದ್ಯುತ್ ವಿಕಿರಣ ಕ್ರಿಯಾಶಕ್ತಿ (Radio active) ಯನ್ನೊಳಗೊಂಡಿರುವ ಬಿಸಿ

ನೀರಿನ ಚಿಲುಮೆಗಳ ಅದ್ಭುತ ಚಿಕಿತ್ಸಾ ಗುಣಗಳನ್ನು ಪಡೆದಿದ್ದು ವಿಶ್ವಾದ್ಯಂತ ಪ್ರಸಿದ್ಧಿ ಯಾಗಿರುತ್ತದೆ.

ಚಿಲುಮೆ ನೀರಿನಲ್ಲಿರುವ

ನೀರಿನ ಅಂಶ	ಪೋಷಕ ಗುಣ
ಕ್ಯಾಲ್ಸಿಯಂ	ಮೂಳೆ, ದಂತಗಳ ಪೋಷಣೆ ಮುಂತಾಗಿ
ಫ್ಲೋರೈಡ್	ಚರ್ಮ, ಹಲ್ಲು, ಮೂಳೆಗಳ ಪೋಷಣೆ
ಗಂಧಕ	ಚರ್ಮ ರೋಗಗಳ ಗುಣ ಪಡಿಸುವುದು
ಸಿಲಿಕಾ	ಮೂಳೆ, ನರ, ಚರ್ಮ, ಉಗುರುಗಳಿಗೆ ಶಕ್ತಿ ಒದಗಿಸಲು
ಸೋಡಿಯಂ	ಕ್ಯಾನ್ಸರ್ ರೋಗ ತಡೆಗಟ್ಟಲು
ರಂಜಕ	ಶಕ್ತಿದಾಯಕ
ಪೊಟಾಸಿಯಂ	ಮಾಂಸಖಂಡಗಳ ಪುಷ್ಟಿ ಮತ್ತು ಕ್ರಿಯೆಗೆ
ಕಬ್ಬಿಣ	ಹ್ಯೂಮೋಗ್ಲೋಬಿನ್ ತಯಾರಿಕೆಯಲ್ಲಿ

ಬಿಸಿನೀರಿನ ಬುಗ್ಗೆಗಳ ಇತರ ಉಪಯೋಗಗಳು

ಭೂಮಿಯ ಆಳದಲ್ಲಿರುವ ಅಪಾರ ಶಾಖವನ್ನು ಬಳಸಿ ಅದರಲ್ಲೂ ಹಬೆಯ ನೆರವು ಪಡೆದು ವಿದ್ಯುತ್ ಉತ್ಪಾದನೆ ಮಾಡಲು ಸಾಧ್ಯ. ಬಿಸಿನೀರಿನ ಬುಗ್ಗೆಗಳ ಬಿಲ ದಲ್ಲಿ ಸೃಷ್ಟಿಯಾದ ಬೋರಿಕ್ ಆಮ್ಲ, ಇತರ ಕ್ಷಾರ ಪದಾರ್ಥಗಳು ಬಹಳ ಉಪಯೋಗ ವಾದುವು. ಐಸ್‌ಲ್ಯಾಂಡ್‌ನಲ್ಲಿ ಬಿಸಿನೀರಿನ ಬುಗ್ಗೆಗಳಿಂದ ಹೊರಹೊಮ್ಮುವ ಹಬೆ ಯನ್ನು ಚಳಿ ಪ್ರದೇಶದಲ್ಲಿ ಸಸ್ಯಗಳಿಗೆ ಅಗತ್ಯವಾಗುವ ಶಾಖ ಒದಗಿಸಲು ಬಳಸಿಕೊಳ್ಳು ತ್ತಿದ್ದಾರೆ.

೩. ಕೆಲವು ಪಟ್ಟಣಗಳು ಕುಸಿಯುವುದೇಕೆ?

ಒಂದು ಪ್ರಾಂತ್ಯದಲ್ಲಿ ಸತತವಾಗಿ ಮತ್ತು ಹೇರಳವಾಗಿ ಭೂಜಲವನ್ನು ಹೊರ ತೆಗೆಯುತ್ತಾ ಹೋದಲ್ಲಿ ಅಲ್ಲಿನ ಭೂಜಲ ಆಯವ್ಯಯ ಸಮಸ್ಥಿತಿ ಅಸ್ತವ್ಯಸ್ತವಾಗಿ ಅದರಿಂದಾಗಿ ಉಂಟಾಗುವ ದುಷ್ಪರಿಣಾಮಗಳಲ್ಲಿ ಒಂದಾದ ಭೂಮಿಯ ಕುಸಿತ ಏರ್ಪಡುತ್ತದೆ. ಈ ಪ್ರಾಂತ್ಯದ ಭೂಮಿ ಪೂರ್ತ ಸಮವಾಗಿ ಕುಸಿಯಬಹುದು. ಇಲ್ಲವೇ ಅಸಮವಾಗಿ ವಿವಿಧ ಭಾಗಗಳು ವಿವಿಧ ಮಟ್ಟದಲ್ಲಿ ಕುಸಿಯಬಹುದು.

ಭೂಮಿಯ ಮಣ್ಣಿನ ರಚನೆ ಸಚ್ಛಿದ್ರತೆಯಿಂದ ಕೂಡಿರುವುದು. ನೀರು ಜಾರಿನ ತಳಭಾಗದಲ್ಲಿ ಸಚ್ಛಿದ್ರತಾ ರಂಧ್ರಗಳಲ್ಲಿ ಭೂಜಲ ಜಲಪೂರಿತವಾಗಿ ಶೇಖರವಾಗಿರು ವುದು. ಭೂಮಿಯ ಮೇಲಿನ ಕಟ್ಟಡ ಮತ್ತು ಇದನ್ನೊಳಗೊಂಡ ಭೂತಳದಲ್ಲಿರುವ ತಳಪಾಯದ ಭಾರವನ್ನು ಮಣ್ಣಿನ ಕಣಗಳೂ ಮತ್ತು ಸಚ್ಛಿದ್ರ ರಂಧ್ರಗಳಲ್ಲಿ ಅಡಕ ವಾಗಿರುವ ಭೂಜಲವೂ ಸಹಿತ ಹೊತ್ತಿರುತ್ತವೆ.

ಅಂತರ್ಜಲವನ್ನು ಸತತವಾಗಿ ಹೊರತೆಗೆಯುವುದರಿಂದ ನೀರಿನ ಆಧಾರ ತಪ್ಪಿ ಆ ತೂಕವನ್ನು ಮಣ್ಣಿನ ಕಣಗಳೇ ಹೊರಬೇಕಾಗುತ್ತದೆ. ಅಲ್ಲದೆ ನೀರಿನ ಜಾಗ ಖಾಲಿಯಾಗಿ ಮಣ್ಣಿನ ಕಣಗಳು ಅಲ್ಲಿಗೆ ಜಾರಿ ಹೋಗಲು ಅವಕಾಶವಾಗುವುದು. ಇದರ ಪರಿಣಾಮವಾಗಿ ಭೂಮಿ ಹಾಗೂ ತಳಪಾಯಗಳು ಕುಸಿಯಲು ಅವಕಾಶವಾಗುವುದು. ಭೂತಳದಲ್ಲಿ ಅಸಮ ಮಣ್ಣಿನ ರಚನೆ ಅಥವಾ ಪಾರ್ಶ್ವತಹ ಬಂಡೆಗಳು ಏರ್ಪಟ್ಟಲ್ಲಿ ಕುಸಿತವೂ ಅಸಮವಾಗಿ ಅಪಾಯ ಸಂದರ್ಭ ಒದಗಬಹುದು. ಕಟ್ಟಡಗಳಲ್ಲಿ ಬಿರುಕು ಕಾಣಿಸಿಕೊಳ್ಳುವುದು.

ಪ್ರಪಂಚದ ವಿವಿಧ ಕಡೆಗಳಲ್ಲಿ ಸತತವಾಗಿ ಹಾಗೂ ಹೇರಳವಾಗಿ ಅಂತರ್ಜಲವನ್ನು ಬಳಸುವುದರಿಂದ ಭೂಮಿಯಲ್ಲಿ ಕುಸಿತವುಂಟಾಗಿ ಅನೇಕ ತರಹ ದುಷ್ಪರಿಣಾಮಗಳು ಕಂಡುಬಂದಿವೆ. ಭೂಮಿಯ ತಳ ಮತ್ತು ಪಾರ್ಶ್ವಗಳ ಕುಸಿತಗಳ ಪರಿಣಾಮವಾಗಿ ಕಟ್ಟಡ, ಸೇತುವೆ, ಸುರಂಗ, ರಸ್ತೆ, ರೈಲುಮಾರ್ಗ, ಭಾವಿಗಳು, ನೀರು ಮತ್ತು ಮಲಿನ ವಸ್ತುಗಳನ್ನು ಕೊಂಡೊಯ್ಯುವ ಕೊಳಾಯಿಗಳ ಸರಣಿ, ವಿದ್ಯುತ್ ಮತ್ತು ದೂರವಾಣಿಗಳ ಕೇಬಲ್‌ಗಳು ಇವುಗಳ ವ್ಯವಸ್ಥಾಪನೆಗೆ ಅಪಾಯ ಮತ್ತು ನಷ್ಟಗಳುಂಟಾಗುವುದು.

ಅಂತರ್ಜಲವನ್ನು ಹೇರಳವಾಗಿ ಉಪಯೋಗಿಸಿರುವುದರಿಂದ ದೊಡ್ಡ ದೊಡ್ಡ ಪಟ್ಟಣಗಳಲ್ಲೂ ಕೈಗಾರಿಕೋದ್ಯಮ ಪ್ರದೇಶಗಳಲ್ಲೂ ಉಂಟಾಗಿರುವ ಹಾನಿಯನ್ನು ತಜ್ಞರು ವಿಶದೀಕರಿಸುತ್ತಾರೆ.

ಇಟಲಿಯ ಪ್ರಖ್ಯಾತ ವೆನಿಸ್‌ನಗರ ಸಮುದ್ರದ ಅಂಚಿನಲ್ಲಿ ನಿರ್ಮಾಣವಾಗಿರುತ್ತದೆ. ೭ ಕಿ. ಮೀ. ದೂರದಲ್ಲಿನ ಕೈಗಾರಿಕೋದ್ಯಮ ಕೇಂದ್ರಗಳಲ್ಲಿ ಹೆಚ್ಚಿನ ಅಂತರ್ಜಲವನ್ನು ಉಪಯೋಗಿಸಿದ ಪರಿಣಾಮವಾಗಿ ೧೯೩೦–೭೩ ರ ಅವಧಿಯಲ್ಲಿ ವೆನಿಸ್ ನಗರ ೧೫ ಸೆ. ಮೀ. ನಷ್ಟು ಭೂ ಕುಸಿತವುಂಟಾಗಿದೆ. ಇದರ ಫಲವಾಗಿ ಸಮುದ್ರದ ತೆರೆಗಳು ಹೆಚ್ಚಿನ ದಾಳಿ ನಡೆಸುತ್ತಿರುವುದು. ಇದೇ ರೀತಿ ಅಂತರ್ಜಲದ ವ್ಯಯ ಮುಂದುವರಿದಲ್ಲಿ ಮುಂದಿನ ೨೫ ವರ್ಷಗಳಲ್ಲಿ ಇನ್ನೂ ೩ ಸೆಂ. ಮೀ. ಕುಸಿತ ಉಂಟಾಗುವುದೆಂದು ತಜ್ಞರು ನಿರ್ಣಯಿಸಿದ್ದಾರೆ.

ಪ್ರಪಂಚದ ಉಳಿದ ಕಡೆಗಳಲ್ಲಿ ಅಂತರ್ಜಲದ ವ್ಯಯದಿಂದ ಸಂಭವಿಸಿರುವ ಭೂ ಕುಸಿತವನ್ನು ಈ ಕೆಳಗಿನ ಪಟ್ಟಿಯಲ್ಲಿ ಸಂಕ್ಷೇಪವಾಗಿ ವಿವರಿಸಿದೆ.

(ಹರ್‌ಮೆನ್ ಚೌವರ್‌ರವರ ಗ್ರಂಥದ ಆಧಾರದ ಮೇಲೆ ೧೯೭೮)

ಸಂ.	ಪ್ರಾಂತ್ಯ	ಪಟ್ಟಣ	ಭೂ ಕುಸಿತದ ಪ್ರಮಾಣ	ಕಾಲ, ಕಾರಣ ಮತ್ತು ಪರಿಣಾಮ
೧	ಮೆಕ್ಸಿಕೊ	ಮೆಕ್ಸಿಕೊ ಸಿಟಿ	೮ ಮೀ.	೧೯೩೮ ರಲ್ಲಿ ಸತತ ಅಂತರ್ಜಲವನ್ನು ಉಪಯೋಗಿಸಿದುದರಿಂದ

ಸಂ.	ಪ್ರಾಂತ್ಯ	ಪಟ್ಟಣ	ಭೂ ಕುಸಿತದ ಪ್ರಮಾಣ	ಕಾಲ, ಕಾರಣ ಮತ್ತು ಪರಿಣಾಮ
೨	ಜಪಾನ್	ಟೋಕಿಯೋ ಮತ್ತು ಒಸಾಕಾ	೩-೪ ಮೀ.	೧೯೨೮–೪೩ ಅವಧಿಯಲ್ಲಿ
೩	ಚೀನಾ	ಟಾಯ್ಪೆ	೧ ಮೀ.	೧೯೬೯ ರಲ್ಲಿ
೪	ಸಂಯುಕ್ತ ರಾಷ್ಟ್ರ	ಲಂಡನ್	೬.೧೮ ಸೆ. ಮೀ.	೧೮೬೫–೧೯೩೧ ಅಂತರ್ಜಲದ ವ್ಯಯದಿಂದ ಭೂಗರ್ಭದ ಜೇಡಿಯಲ್ಲಿ ಕುಸಿತ
೫	ನ್ಯೂಜಿಲೆಂಡ್	ವಾರಾಕಿ	೪ ಮೀ.	೧೯೫೬ ಬಿಸಿನೀರಿನ ಅಂತರ್ಜಲವನ್ನು ವಿದ್ಯುಚ್ಛಕ್ತಿ ತಯಾರಿಸಲು ಅಪಾರವಾಗಿ ಉಪಯೋಗಿಸಿರುವುದು.
೬	ಸಂಯುಕ್ತ ಸಂಸ್ಥಾನಗಳು	ಲೂಸಿಯಾನ– ಚೀಟನ್ ರೌಟ್	೩೦ಸೆ.ಮಿ.	೧೮೯೦ ಹೆಚ್ಚಿನ ಅಂತರ್ಜಲ ಉಪಯೋಗ
೭	—,,—	ಟೆಕ್ಸಾಸ್– ಹೊಸ್ಟನ್	೧.೫ ಮೀ.	—,,—
೮	ಸಂಯುಕ್ತ ಸಂಸ್ಥಾನಗಳು	ಕ್ಯಾಲಿಫೋರ್ನಿಯಾ ಸ್ಯಾನ್ ಬೀಸಿನ್ ಕಣಿವೆ	೮.೫ ಮೀ.	ಕೃಷಿ ಬಳಕೆಗಾಗಿ ಹೆಚ್ಚಿನ ಅಂತರ್ಜಲ ಉಪಯೋಗ
೯	—,,—	ಶಾಂತಾಕ್ಲಾರಾ ಕಣಿವೆ	೪ ಮೀ.	
೧೦	—,,—	ಅರಿಜೋನಾ	೨.೩ಮೀ.	ನೀರು ಜಾರಿನಲ್ಲಿ ೪೬ಮೀ.ಕುಸಿತ
೧೧	—,,—	ಕ್ಯಾಲಿಫೋರ್ನಿಯಾ ವಿಮ್ಮಿಂಗ್ ಟೌನ್	ತಳದಲ್ಲಿ ೯ ಮೀ. ಪಾರ್ಶ್ವದಲ್ಲಿ ೩.೭ ಮೀ.	ಭೂಗರ್ಭದಿಂದ ಅಧಿಕವಾದ ತೈಲ ಮತ್ತು ಅನಿಲಗಳ ಉತ್ಪಾದನೆಯು ಸಲುವಾಗಿ

ಅಧಿಕ ಪ್ರಮಾಣದಲ್ಲಿ ಅಂತರ್ಜಲವನ್ನು ತೆಗೆಯುವುದರಿಂದ ಭೂಮಿಯ ಕುಸಿತ ಕಾಲಕ್ರಮೇಣ ಜರುಗುವುದೇ ಹೊರತು ತಕ್ಷಣದಲ್ಲಿ ಉಂಟಾಗುವುದಿಲ್ಲ. ಆದ್ದರಿಂದ ಅಂತರ್ಜಲ ಒಂದು ಸಾಲಿನಲ್ಲಿ ಅಧಿಕವಾಗಿ ವ್ಯಯವಾದಲ್ಲಿ ಇನ್ನೊಂದು ಸಾಲಿನಲ್ಲಿ ಅದನ್ನು ವೃದ್ಧಿಪಡಿಸಿ ಆ ಪ್ರದೇಶದ ಅಂತರ್ಜಲದ ಆಯುವ್ಯಯ (ಆಗಮನ ನಿರ್ಗಮನ) ವನ್ನು ಸಮತೂಗಿಸಿದಲ್ಲಿ ಭೂಮಿಯ ಕುಸಿತವನ್ನು ತಡೆಗಟ್ಟಬಹುದು.

ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಮಹಿಳಾ ಸಾಕ್ಷರತೆ

ಅನುವಾದ : ಜಿ. ಎಸ್. ವಿಜಯಲಕ್ಷ್ಮಿ

೧. ಹಿನ್ನೆಲೆ :

ವಿದ್ಯಾರ್ಜನೆಯಲ್ಲಿ ಸರ್ವರಿಗೂ ಸಮಾನವಾದ ಅವಕಾಶವಿರಬೇಕೆಂದು ಕರೆ ಕೊಟ್ಟಿರುವ ೧೯೮೬ರ ರಾಷ್ಟ್ರೀಯ ಶಿಕ್ಷಣ ಯೋಜನೆಯು ಆ ಕ್ಷೇತ್ರದಲ್ಲಿ ಪುರುಷ ಅಥವಾ ಮಹಿಳೆ ಎನ್ನುವ ತಾರತಮ್ಯವನ್ನು ಸ್ಪಷ್ಟವಾಗಿ ಖಂಡಿಸಿದೆ. ಶಿಕ್ಷಣ ಸಾಮಾಜಿಕ ಸಾಂಸ್ಕೃತಿಕ ಬದಲಾವಣೆಯಲ್ಲಿ ಪ್ರಮುಖ ಪಾತ್ರ ವಹಿಸುವುದರೊಂದಿಗೇ ಮಹಿಳೆಗೆ ತನ್ನದೇ ಆದ ಸ್ಥಾನಮಾನವನ್ನು ಗಳಿಸಿಕೊಡುತ್ತದೆ.

೧೯೫೦ರಲ್ಲಿ ಪಂ. ನೆಹರೂವರ ಅಧ್ಯಕ್ಷತೆಯಲ್ಲಿ ಜಾರಿಗೆ ಬಂದ ರಾಷ್ಟ್ರೀಯ ಯೋಜನಾಸಮಿತಿ ಅಭಿವೃದ್ಧಿ ಹೊಂದಿದ ಶಕ್ತಿಶಾಹೀ ರಾಷ್ಟ್ರದ ಪರಿಕಲ್ಪನೆಯಲ್ಲಿ ಮಹಿಳೆಯ ಸ್ಥಾನ ಹಾಗೂ ಪಾತ್ರಗಳನ್ನು ಕುರಿತಂತೆ ತನ್ನ ಕಳಕಳಿಯನ್ನು ವ್ಯಕ್ತಪಡಿಸಿದೆ. ಈ ದಿಸೆಯಲ್ಲಿ ಜಾತಿವಾದಿಗಳ ಸಾಂಪ್ರದಾಯಿಕ (ಸಂಕುಚಿತ ?) ಮನೋಭಾವವನ್ನು ಕಿತ್ತೊಗೆದು ನವನಿರ್ಮಾಣದಲ್ಲಿ ಪುರಷ ಹಾಗೂ ಸ್ತ್ರೀ ಇಬ್ಬರ ಪಾತ್ರದ ಮಹತ್ವದ ಬಗ್ಗೆ ಅರಿವನ್ನು ಮೂಡಿಸಲು ಶ್ರಮಿಸಿದೆ.

ಎಷ್ಟೇ ಪ್ರಾಮುಖ್ಯತೆ ನೀಡಿದರೂ ಮಹಿಳಾ ಸಾಕ್ಷರತೆಯ ಕ್ಷೇತ್ರದಲ್ಲಿ ಅದ್ಭುತವಾದದ್ದೇನನ್ನೂ ಸಾಧಿಸಲಾಗಿಲ್ಲ. ವಿದ್ಯೆ ಹಲವಾರು ಬಂಧನಗಳಿಂದ ಪಾರುಮಾಡಿ ತನ್ನ ಹೊಣೆಗಾರಿಕೆಯ ಬಗ್ಗೆ ತಿಳುವಳಿಕೆ ನೀಡುವುದು ವಾಸ್ತವವೇ ಆದರೂ ಶ್ರೀಮಂತಿಕೆ. ಬಡತನ, ಹಳ್ಳಿ–ನಗರ, ಗಂಡು–ಹೆಣ್ಣು ಮುಂತಾದ ಮೂಲಭೂತ ಸಮಸ್ಯೆಗಳು ಮಹಿಳೆಯ ಕಲಿಕೆಯ ಹಾದಿಯಲ್ಲಿ ತಮ್ಮ ಕರಿ

ಸಾಕ್ಷರತಾ ಸ್ಥಿರೀಕರಣ ಸಲಕರಣೆಗಳ ಆರನೆಯ ಪ್ರಾದೇಶಿಕ ಕಾರ್ಯಾಗಾರ (ಏಷ್ಯಾ-ಫೆಸಿಫಿಕ್)ದಲ್ಲಿ ಶ್ರೀ ಲಿಂಗದೇವರು ಹಳೇಮನಿ ಇವರು ಮಂಡಿಸಿದ ಪ್ರಬಂಧದ ಕನ್ನಡಾನುವಾದ.

ನೆರಳನ್ನು ಚಾಚಿ ಧೃತಿಗೆಡಿಸುತ್ತದೆ. ಈ ಗೊಂದಲದಲ್ಲಿ ರಾಷ್ಟ್ರಾಭಿವೃದ್ಧಿ ಕಾರ್ಯಕ್ರಮದಲ್ಲಿ ಆಕೆಯ ಸ್ಥಾನವೇನು? ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಆಕೆಯ ಕೊಡುಗೆ ಏನು? ಸಮಾನ ಸ್ಥಾನಮಾನ ಗಳಿಕೆಯಲ್ಲಿ ಸಾಕ್ಷರತೆ ಎಷ್ಟರಮಟ್ಟಿಗೆ ಸಹಕಾರಿಯಾಗಬಲ್ಲದು? ಇಂತಹ ಪ್ರಶ್ನೆಗಳು ಪ್ರಶ್ನೆಗಳಾಗಿಯೇ ಉಳಿದಿವೆ.

೨. ಮಹಿಳಾ ಸಾಕ್ಷರತೆ :

ಇಡೀ ಜನಾಂಗವನ್ನು ಅಕ್ಷರಸ್ಥರನ್ನಾಗಿ ಮಾಡಲು ಆರ್ಥಿಕ ತೊಂದರೆ ಉಂಟಾದಲ್ಲಿ ಒಂದು ತಲೆಮಾರಿನಲ್ಲಿ ಸ್ತ್ರೀ ಶಿಕ್ಷಣಕ್ಕೆ ಒತ್ತುಕೊಡುವುದು ಅನಿವಾರ್ಯ. Tom Mboza ಹೇಳಿರುವಂತೆ ಒಂದು ಹೆಣ್ಣು ಶಿಕ್ಷಣ ಪಡೆದರೆ ಒಂದು ಶಾಲೆಯನ್ನು ತೆರೆದಂತೆ. ಒಂದು ರಾಷ್ಟ್ರದ ಅಭಿವೃದ್ಧಿಯ ಪರಂಪರೆಯಲ್ಲಿ ಮಹಿಳಾ ಶಿಕ್ಷಣದ ಪ್ರಾಮುಖ್ಯತೆ ಈ ಒಂದು ಹೇಳಿಕೆಯಿಂದಲೇ ಅರ್ಥವಾಗುತ್ತದೆ. ಇತ್ತೀಚಿನ ಅಂಕಿ ಅಂಶಗಳ ಪ್ರಕಾರ ನಮ್ಮ ರಾಷ್ಟ್ರದ ಅಭಿವೃದ್ಧಿಯಲ್ಲಿ ಮಹಿಳಾ ಸಾಕ್ಷರತೆಯಿಂದಾಗಿ ಈ ಕೆಳಕಂಡ ಪ್ರಗತಿ ಸಾಧಿತವಾಗಿದೆ.

a. ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಸಂಖ್ಯೆಯಲ್ಲಿ ಹೆಚ್ಚಳ.

b. ಶಿಶು ಮರಣದ ಸಂಖ್ಯೆಯಲ್ಲಿ ಇಳಿತ,

c. ಶಿಶು ಪೋಷಣೆ ಹಾಗೂ ರೋಗನಿರೋಧಕ ಕಾರ್ಯಕ್ರಮಗಳಲ್ಲಿ ಯಶಸ್ಸು.

d. ಜನಸಂಖ್ಯಾ ನಿಯಂತ್ರಣ ಮತ್ತು ಸಣ್ಣ ಕುಟುಂಬಗಳ ಪರಿಕಲ್ಪನೆ.

e. ವ್ಯಕ್ತಿತ್ವ ಹಾಗೂ ಆತ್ಮವಿಶ್ವಾಸಗಳ ಪ್ರಾಬಲ್ಯ.

ಈ ಸಾಧನೆಗಳು ಗಮನಾರ್ಹವಾದುದಷ್ಟೇ ಅಲ್ಲದೆ ರಾಷ್ಟ್ರದ ಬೆಳವಣಿಗೆಯಲ್ಲಿ ಅವುಗಳ ಕೊಡುಗೆ ಗಣನೀಯವಾಗಿದೆ.

ಇತ್ತೀಚಿನ ದಿನಗಳಲ್ಲಿ ಶಿಕ್ಷಣ ತನ್ನ ಸಾಂಪ್ರದಾಯಿಕ ಅರ್ಥವನ್ನು ಕಳೆದುಕೊಂಡಿದೆ. ೧೯೬೫ರ ಶಿಕ್ಷಣ ಮಂತ್ರಿಗಳ ಸಮ್ಮೇಳನ (ಟೆಹರಾನ್) ವಿದ್ಯಾವಂತ ವ್ಯಕ್ತಿಯ ಚಾತುರ್ಯ, ತಿಳುವಳಿಕೆ, ಅಭಿರುಚಿ ಮತ್ತು ಆಸಕ್ತಿಗಳು ವಿಶಾಲ ಅರ್ಥದಲ್ಲಿ ಜೀವನದ ಗುರಿಯಾಗುವುದಕ್ಕೆ ಪೂರಕವಾಗಿ ಅರಿವು ಮತ್ತು ಕ್ರಿಯಾತ್ಮಕತೆಗಳ ಅಂಶಗಳನ್ನು ಶಿಕ್ಷಣದೊಂದಿಗೆ ಸೇರಿಸಲು ಒಪ್ಪಿಕೊಂಡಿತು. ಈ ಸೇರಿಕೆ ಮಹಿಳೆಗೆ ಬಿಡುವಿನಲ್ಲಿ ತನಗೆ ಅಥವಾ ತನ್ನ ಕುಟುಂಬಕ್ಕೆ ಪ್ರಯೋಜನವಾಗುವಂತಹ ಹಲವಾರು ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದಕ್ಕೆ ಅವಶ್ಯಕವಾದ ಆಸಕ್ತಿಯನ್ನು ಬೆಳೆಸಿಕೊಡುತ್ತದೆ. ಅಲ್ಲದೆ ಶೈಕ್ಷಣಿಕ ಕಾರ್ಯಕ್ರಮಗಳ ಬಗ್ಗೆ ಮನೋಭಾವ ಅಷ್ಟಾಗಿ ಉತ್ಸಾಹ ಪೂರ್ಣವಾಗಿಲ್ಲ. ಸರಿಯಾದ ರೀತಿಯ ಪ್ರೋತ್ಸಾಹ ದೊರಕದಿದ್ದಲ್ಲಿ ಆಕೆ ಈ ಯೋಜನೆಗಳ ವಿಷಯದಲ್ಲಿ ಸಂಪೂರ್ಣ ವಿಮುಖಳಾಗಿಬಿಡುವ ಸಾಧ್ಯತೆಗಳೂ ಇರುವುದರಿಂದ ಪ್ರೇರಣಾಕಾರ್ಯ ಕೂಡ ಒಂದು ಬೃಹತ್ಸಮಸ್ಯೆಯೇ ಆಗಿದೆ. ಈ ದಿಸೆಯಲ್ಲಿ ಮುಖ್ಯವಾಗಿ ವಿದ್ಯಾವಂತ

ಮಹಿಳೆಯರಿಂದ ಜಾಗೃತ ಕಾರ್ಯಕ್ರಮಗಳ ಜೊತೆಗೆ ಸ್ವಾಯತ್ತ ಸಂಸ್ಥೆಗಳ ಹಾಗೂ ಒಟ್ಟಾರೆ ಸಮಾಜದ ಧ್ಯೇಯಾತ್ಮಕ ಸಹಕಾರದ ಅವಶ್ಯಕತೆ ಇದೆ.

೩. ಪ್ರೇರಣೆ:

ಮಹಿಳಾ ಶಕ್ತಿಯನ್ನು ವಿವಿಧರೀತಿಯ ಶೈಕ್ಷಣಿಕ ಕಾರ್ಯಕ್ರಮಗಳ ಮೂಲಕ ಜಾಗೃತಗೊಳಿಸುವುದು ಹೇಗೆನ್ನುವುದನ್ನು ಚರ್ಚಿಸಲು ಹೊರಟಾಗ ಆ ಪ್ರೇರಣಾ ಕಾರ್ಯಕ್ರಮಕ್ಕೆ ಹಲವಾರು ಸಮಸ್ಯೆಗಳು ಎದುರಾಗುತ್ತವೆ ಅವುಗಳೆಂದರೆ:

೩.೧ **ಸಾಮಾಜಿಕ ಆರ್ಥಿಕ ಸಮಸ್ಯೆಗಳು :** ಇವುಗಳಲ್ಲಿ ದಬ್ಬಾಳಿಕೆ (ಜಾತಿ ಅಥವಾ ಪುರುಷ ಪ್ರಧಾನ ನೀತಿ?), ಬಡತನ, ಜನತೆಯ ಅಸಹಕಾರ, ಮಹಿಳೆಯ ಶೋಚನೀಯ ಸ್ಥಾನಮಾನ ಇವು ಮುಖ್ಯವಾಗಿವೆ. ಸರ್ಕಾರ ಜಾರಿಗೊಳಿಸುವ ಹಲವು ಯೋಜನೆಗಳು ಅನುಚಿತವಾಗಿದ್ದು ಹೆಚ್ಚಿನ ಸಂದರ್ಭಗಳಲ್ಲಿ ವೃತ್ತಿಗೌರವ ವನ್ನು ಕಾಪಡುವುದರಲ್ಲಿ ಹಾಗೂ ಸಾಮಾಜಿಕ ಅರಿವನ್ನು ನೀಡುವುದರಲ್ಲಿ ವಿಫಲವಾಗಿವೆ.

೩.೨ **ಶಿಕ್ಷಣ ಸೌಲಭ್ಯಗಳ ಸಮಸ್ಯೆಗಳು :** ಅವಶ್ಯವಾಗಿ ಬೇಕಾದ ಶಿಕ್ಷಣ ಸೌಲಭ್ಯ ಗಳು ಅಲಭ್ಯವಾಗಿರುವುದು ಮಹಿಳೆ ಶೈಕ್ಷಣಿಕ ಕಾರ್ಯಕ್ರಮಗಳ ಕಡೆ. ಗಮನ ಹರಿಸದಿರುವುದಕ್ಕೆ ಒಂದು ಕಾರಣವಾಗಿದೆ. ಶಿಕ್ಷಕರ ಅಭಾವ, ಬೋಧಿಸಲು ಹಾಗೂ ಕಲಿಯಲು ಪರಿಣಾಮಕಾರೀ ಶಿಕ್ಷಣ ಸಾಮಗ್ರಿಗಳ ಮತ್ತು ಕಾರ್ಯಕ್ರಮ ಇತ್ಯಾದಿಗಳ ಕೊರತೆಗಳು ಮಹಿಳೆಯರನ್ನು ಇನ್ನಷ್ಟು ಧೃತಿಗೆಡಿಸುತ್ತದೆ. ಭಾರತ ದಲ್ಲಿ ತರಬೇತಿ ಪಡೆದ ಮಹಿಳಾ ಶಿಕ್ಷಕಿಯರು ಬೇಕಾದ ಸ್ಥಳಗಳಲ್ಲಿ ಲಭ್ಯವಾಗ ದಿರುವುದು ವಾಸ್ತವವೇ ಆಗಿದೆ. ದೊರಕಿದರೂ ಸಹ ಅಂತಹ ಉದ್ಯೋಗಕ್ಕೆ ಬೇಕಾದ ಉದಾತ್ತ ಮನೋಭಾವನೆಯನ್ನಾಗಲಿ ನಿಶ್ಚಿತ ಗುರಿಯನ್ನಾಗಲಿ ಉಳ್ಳವರ ಸಂಖ್ಯೆ ಬಹಳ ಕಡಿಮೆ.

೩.೩ ಮೂಲಭೂತ ಅಗತ್ಯತೆಯ ಕಲಿಕೆ (Need based approach)ಯನ್ನು ಜಗತ್ತಿನ ಪ್ರಮುಖ ಶಿಕ್ಷಣ ತಜ್ಞರೆಲ್ಲರೂ ಶಿಫಾರಸು ಮಾಡಿದ್ದಾರೆ. ಒಂದು ಜನಾಂಗದ ಅವಶ್ಯಕತೆಗಳಿಗೆ ಗಮನ ನೀಡಿ ಶಿಕ್ಷಣದೆಡೆಗೆ ಅದರ ಆಸಕ್ತಿಯನ್ನು ಹೊರಳಿಸುವುದೇ ಇದರ ಗುರಿಯಾಗಿದೆ. ಒಂದು ಯಶಸ್ವಿ Antigonish ಚಳುವಳಿಯು ವಯಸ್ಕರ ಶಿಕ್ಷಣದಲ್ಲಿ ಆರ್ಥಿಕ ಪ್ರಭಾವವನ್ನು ಈ ರೀತಿ ಸಮರ್ಥಿಸಿಕೊಳ್ಳುತ್ತದೆ.

a. ಆರ್ಥಿಕ ಅವಶ್ಯಕತೆಗಳಿಗೆ ಬದ್ಧರಾಗಿರುವ ಸಾಮಾನ್ಯ ಜನತೆ ಇಂದು ಹೆಚ್ಚಿನ ಒತ್ತಡಕ್ಕೆ ಸಿಲುಕಿದ್ದಾರೆ.

b. ಮಾನವನ ಸರ್ವತೋಮುಖ ಅಭಿವೃದ್ಧಿಗೆ ಆರ್ಥಿಕ ಭದ್ರತೆಯೇ ಮೂಲವಾಗಿದೆ.

c. ಆರ್ಥಿಕ ಪ್ರಭಾವವು ವೈಚಾರಿಕವಾಗಿ ಹಾಗೂ ಮನೋವೈಜ್ಞಾನಿಕವಾಗಿ ವಿಶ್ವಸನೀಯವಾದದ್ದು (Boavida Countinho).

ಕ್ರಿಯಾತ್ಮಕ ಪ್ರಭಾವ : ಅನಕ್ಷರತೆಯನ್ನು ನಿವಾರಿಸುವಲ್ಲಿ ಕ್ರಿಯಾತ್ಮಕ ಪ್ರಭಾವವು:

a. ಸಂಘಟನಾತ್ಮಕ ಧ್ಯೇಯವುಳ್ಳ ಸಾಂಪ್ರದಾಯಿಕ ಸಾಕ್ಷರತೆಯಂತಿಲ್ಲದೆ ಆಯ್ಕೆ ಸ್ವರೂಪದಲ್ಲಿರಬೇಕು.

b. ಕಲಿಯುವವರ ನೈಪುಣ್ಯ, ಅರಿವು ಮತ್ತು ಮನೋಭಾವಗಳನ್ನು ಪ್ರೋತ್ಸಾಹಿಸುವಂತಿರಬೇಕು.

c. ವೈಯುಕ್ತಿಕ ಹಾಗೂ ಸಾಮುದಾಯಿಕ ಅವಶ್ಯಕತೆಗಳಿಗೆ ಹೊಂದುವಂತೆ ಸರಳವಾಗಿರಬೇಕು.

d. ಪರಿಸರ ಹಾಗೂ ಸಾಮಾಜಿಕ ಆರ್ಥಿಕ ಕ್ಷೇತ್ರಗಳಲ್ಲಿ ವೈವಿಧ್ಯತೆಯ ಕ್ರಿಯಾತ್ಮಕ ಪ್ರಭಾವಕ್ಕೇ ಸೇರಿದೆ.

ಇದರ ಜೊತೆಗೆ ಮಹಿಳಾ ಸಾಕ್ಷರತೆಯಲ್ಲಿ ಇದುವರೆಗೆ ಪ್ರಾಥಮಿಕ ಜ್ಞಾನವೂ ಇಲ್ಲದ ಆರೋಗ್ಯ, ಆಹಾರಗಳಂತಹ ಕೌಟುಂಬಿಕ ವಿಷಯಗಳಿಗಷ್ಟೇ ಅಲ್ಲದೆ ಪ್ರಜಾ ಪ್ರಭುತ್ವ, ಹಕ್ಕು, ಕರ್ತವ್ಯ ಇತ್ಯಾದಿ ರಾಜಕೀಯ ಅಂಶಗಳಿಗೂ ಕೂಡ ಪ್ರಾಮುಖ್ಯತೆ ನೀಡಬೇಕಾಗಿದೆ. ವೃತ್ತಿ ಶಿಕ್ಷಣದ ಪಠ್ಯಕ್ರಮ ಯೋಜನೆಯು ಈ ಉದ್ದೇಶಕ್ಕೆಂದೇ ವಿಶೇಷವಾಗಿ ರೂಪಿತವಾಗಬೇಕು.

ಪಟ್ಟಣಗಳಲ್ಲಿ ವಾಸಿಸುವ ಹಾಗೂ ನಾಡಿನ ಮಹಿಳೆಯರ ಸಮಸ್ಯೆಗಳನ್ನು ಪ್ರತ್ಯೇಕಿಸಿ ವಿಶ್ಲೇಷಿಸಬೇಕು. ನಗರದ ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಮಹಿಳೆ ಹಲವು ರೀತಿಯ ದೈಹಿಕ, ಆರ್ಥಿಕ ಹಾಗೂ ಸಾಮಾಜಿಕ ಸಮಸ್ಯೆಗಳನ್ನು ಎದುರಿಸ ಬೇಕಾಗಿರುತ್ತದೆ. ವೃತ್ತಿಪರ ಶಿಕ್ಷಣದಿಂದ ಕೌಶಲ್ಯಪರ ಉದ್ಯೋಗ ಇತ್ಯಾದಿಗಳು ಆಕೆಗೆ ಉತ್ತಮ ರೀತಿಯಲ್ಲಿ, ಸಹಾಯಕವಾಗುತ್ತದೆ. ಗ್ರಾಮೀಣ ಮಹಿಳೆಯ ಸಮಸ್ಯೆ ಇದಕ್ಕೆ ವಿರುದ್ಧವಾದದ್ದು. ಯಾವುದೇ ರೀತಿಯ ವಿದ್ಯಾಭ್ಯಾಸವನ್ನೂ ಹೊಂದಲಾಗದ ಆಕೆಯ ಅಸಹಾಯಕ ಪರಿಸ್ಥಿತಿ, ಅಲ್ಲದೆ ಇಂದಿಗೂ ಪ್ರಚಲಿತವಾಗಿರುವ ಸಾಂಪ್ರದಾಯಿಕ ಮೂಢನಂಬಿಕೆಗಳು, ಪುರುಷ ಪ್ರಧಾನ ನೀತಿ, ಯೋಗ್ಯವಾದ ಶಿಕ್ಷಣ ಸೌಲಭ್ಯಗಳು ಲಭ್ಯವಾಗದಿರುವಂತಹ ಅನೇಕ ಕಾರಣಗಳು ಗ್ರಾಮೀಣ ಮಹಿಳೆಯ ವಿದ್ಯಾಭ್ಯಾಸದ ಹಾದಿಯಲ್ಲಿ ಅಡ್ಡಿಯುಂಟುಮಾಡುತ್ತಿವೆ. ಶಾಲೆಗೆ ಹೋದರೂ ಸ್ಪರ್ಧೆಯಲ್ಲಿ ಮುನ್ನುಗ್ಗಲು ಆಕೆಗೆ ಸಾಕಷ್ಟು ಅವಕಾಶಗಳಿರುವುದಿಲ್ಲವಾದ್ದರಿಂದಲೇ ಆಕೆಯ ವಿದ್ಯಾಭ್ಯಾಸ ಆರಂಭದ ಹಂತದಲ್ಲೇ ಕೊನೆಗಾಣುತ್ತದೆ. ವಯಸ್ಕರ ಶಿಕ್ಷಣ, ವೃತ್ತಿಪರ ಶಿಕ್ಷಣ ತರಬೇತಿ (Vocational Ecucational Training) ಹಾಗೂ ಅನೌಪಚಾರಿಕ

(Non Formal Education) ಶಿಕ್ಷಣಗಳು ಈ ಶೂನ್ಯವನ್ನು ತುಂಬುವುದರಲ್ಲಿ ಮಹತ್ವದ ಪಾತ್ರ ವಹಿಸುತ್ತವೆ.

ಹೆಚ್ಚಿನ ಹಿಂದುಳಿದ ರಾಜ್ಯಗಳಲ್ಲಿ ಮಹಿಳೆ ಊಳಿಗಮಾನ್ಯಪದ್ಧತಿ ಹಾಗೂ ತಾಂತ್ರಿಕ ಮತ್ತು ಬಂಡವಾಳ ಪ್ರಧಾನ ಉತ್ಪಾದನೆಗಳ ನಡುವೆ ನಲುಗುತ್ತಿದ್ದಾಳೆ. ಈ ಸಂಧ್ಯಾಕಾಲವನ್ನು ದಾಟಿ ಮುನ್ನಡೆಯಲು ಸರಿಯಾದ ರೀತಿಯ ಸಾಕ್ಷರತಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಅಂತಹ ಕಾರ್ಯಕ್ರಮಗಳು ಒಂದು ಜನಾಂಗದ ಅವಶ್ಯಕತೆಗಳಿಗನುಗುಣವಾಗಿರಬೇಕು. ಸಾಕ್ಷರತಾ ಕಾರ್ಯಕ್ರಮಗಳಲ್ಲಿ ಒಂದೇ ರೀತಿಯ (ಏಕರೂಪದ) ವಸ್ತುವನ್ನುಳ್ಳ ಪಠ್ಯಕ್ರಮವು ಎಲ್ಲ ಸಂದರ್ಭಗಳಲ್ಲೂ ಹೊಂದಿಕೆಯಾಗುವುದಿಲ್ಲ. ಉದಾಹರಣೆಗೆ, ಬುಡಕಟ್ಟು ಜನಾಂಗಗಳಲ್ಲಿ ಸಣ್ಣ ಕುಟುಂಬದ ಪರಿಕಲ್ಪನೆ ಆರೋಗ್ಯ ಮೊದಲಾದ ಸಾಮಾಜಿಕ ದೃಷ್ಟಿಕೋನಗಳ ಬಗ್ಗೆ ಜಾಗೃತಿ ಮೂಡಿಸದ ಹೊರತು ಫಲಕಾರಿಯಾಗುವುದಿಲ್ಲ. ಅಲ್ಲದೆ ತೀವ್ರ ಅನಾರೋಗ್ಯದಿಂದ ಬುಡಕಟ್ಟು ಜನಾಂಗಗಳೇ ಕ್ರಮೇಣ ನಶಿಸಿಹೋಗುತ್ತಿರುವ ಈ ಸಂದರ್ಭದಲ್ಲಿ ಸಣ್ಣ ಕುಟುಂಬಗಳ ಪರಿಕಲ್ಪನೆ ಇಡೀ ಜನಾಂಗದ ಅಸ್ತಿತ್ವಕ್ಕೇ ಮಾರಕ.

ಮೇಲೆ ಹೇಳಿದ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡಲ್ಲಿ, ರಾಷ್ಟ್ರಾಭಿವೃದ್ಧಿಯಲ್ಲಿ ಮಹಿಳಾ ಸಾಕ್ಷರತೆಯನ್ನು ಬೇರೆ ರೀತಿಯಲ್ಲಿ ವಿವರಿಸಬೇಕಾಗುತ್ತದೆ. 'ಮಹಿಳೆ' ಎಂದರೆ ಒಂದೇ ವ್ಯಕ್ತಿಯಲ್ಲ. ಸಾಮಾಜಿಕ, ಆರ್ಥಿಕ ಹಿನ್ನೆಲೆಗಳಲ್ಲಿ ಆಕೆ ತನ್ನನ್ನು ತಾನೇ ಹಂಚಿಕೊಂಡಿರುತ್ತಾಳೆ. ಗ್ರಾಮೀಣ ಮಹಿಳೆ, ನಾಗರೀಕ ಮಹಿಳೆ ಮತ್ತು ಬುಡಕಟ್ಟು ಮಹಿಳೆಯರೆಲ್ಲರ ಸಮಸ್ಯೆಗಳಿಗೆ ಪ್ರತ್ಯೇಕ ಪ್ರಾಮುಖ್ಯತೆ ನೀಡಬೇಕಾದ ಅವಶ್ಯಕತೆ ಇದೆ.

ಸಾಕ್ಷರತೆಯ ಬಗ್ಗೆ ಹೇಳುವಾಗ ಮೌಖಿಕತೆ (Orality) ಯನ್ನು ಗಣನೆಗೆ ತಂದುಕೊಳ್ಳಬೇಕಾಗುತ್ತದೆ. ಸಾಕ್ಷರತೆ ಮೌಖಿಕತೆಗಿಂತ ಭಿನ್ನವಾಗಿದ್ದರೂ ಅದಕ್ಕಿಂತ ಶ್ರೇಷ್ಠಮಟ್ಟದ್ದೇನೂ ಅಲ್ಲ. ಆಧುನೀಕರಣ ಅಥವಾ ಅಭಿವೃದ್ಧಿಗೂ ಉತ್ಪಾದನೆಯ ಹೆಚ್ಚಳಕ್ಕೂ ಯಾವಾಗಲೂ ಹೊಂದಾಣಿಕೆ ಇರುತ್ತದೆ. ಸಾಕ್ಷರತಾ ನೈಪುಣ್ಯದ ಅರಿವು ಮೂಡಿಸಲು ಜನಪದ ಸಂಪ್ರದಾಯದ ಬಳಕೆ ಅವಶ್ಯಕವಾಗಿದೆ.

೫. ಸಲಹೆಗಳು :

a. ಅಂಥ ಸಂಪ್ರದಾಯದ ನಿವಾರಣೆ ಹಾಗೂ ಅಭಿವೃದ್ಧಿ ಚಟುವಟಿಕೆಗಳಲ್ಲಿ ಮಹಿಳೆ ಸಕ್ರಿಯವಾಗಿ ಪಾಲ್ಗೊಳ್ಳುವುದಕ್ಕೆ ವ್ಯಾಪಕವಾದ ಪ್ರಚಾರ,

b. ಮಹಿಳೆಯರ ಹಾಗೂ ಪುರುಷರ ಸಮಸ್ಯೆಗಳ ನಿಷ್ಪಕ್ಷಪಾತ ವಿಶ್ಲೇಷಣೆ,

c. ಸಂವಿಧಾನಾತ್ಮಕ ಹಕ್ಕು, ಕರ್ತವ್ಯಗಳ ಬಗ್ಗೆ ಮಹಿಳಾ ಜಾಗೃತಿ,

d. ಜನತಾ ಆಂದೋಳನವಾಗಿ ಮಹಿಳಾ ಸಾಕ್ಷರತಾ ಕಾರ್ಯಕ್ರಮ,

e. ಯೋಗ್ಯ ತರಬೇತಿ ಹಾಗೂ ಶಿಕ್ಷಣ ಸಾಮಗ್ರಿಗಳ ಯೋಗ್ಯ ವಿತರಣೆ,

f. ಮಹಿಳಾ ಸಾಕ್ಷರತಾ ಬೇಡಿಕೆಗಳಿಗನುಗುಣವಾದ ಅಭಿವೃದ್ಧಿ ಯೋಜನೆಗಳು.

"ನಲವತ್ತರ ಮುನ್ನ ಯಶಸ್ಸು ಗಳಿಸುವಲ್ಲಿ" ಹತ್ತು ಹಂತಗಳು

ಮೈಕೇಲ್ ಕೋರ್ಡ

[ಇಲ್ಲಿವೆ ಆ ಹತ್ತು ಹಂತಗಳೂ ಸುಮ್ಮನೆ ಆಲಸಿಗರಾಗಿ ಕಾಲ ಕಳೆಯದೆ, ಅವನ್ನು ಅರಿತು, ನಿಮ್ಮದಾಗಿಸಿಕೊಳ್ಳಿ...ಆಮೇಲೆ ಕಾದಿದೆ, ನಿಮ್ಮ ಬದುಕಿನುದ್ದಕ್ಕೂ ಬಹುಮಾನಗಳೇ...!]

ನಲವತ್ತನೆಯ ವಯಸ್ಸು ಮನುಷ್ಯನ ಬದುಕಲ್ಲಿ ಒಂದು ನಿರ್ಣಾಯಕ ಘಟ್ಟ. ಅದಕ್ಕೆ ಮೊದಲಿದ್ದ ಯೌವ್ವನ, ಮಸುಳಿ ಮಬ್ಬಾದಂತೆ, ಅದಾದನಂತರವೂ ಅದನ್ನು ಕಾಪಾಡಿಕೊಂಬುವುದು ಒಂದು, ನಲವತ್ತರನಂತರ ಯಾವುದೆ ಜಡ್ಡು, ರೋಗಸ್ಥಿತಿ ಕಾಡದಂತೆ ನೋಡಿಕೊಳ್ಳುವುದಿನ್ನೊಂದು....ಹೀಗೆ! ಒಂದು ಬಹು ದೊಡ್ಡ ಕಲ್ಪನೆಯಿದೆ....ನಲವತ್ತು ವರ್ಷ ವಯಸ್ಸಾಯಿತೊ ಯಾವ ಕೆಲಸ ಮಾಡಲು ಕಷ್ಟವೆ, ಎಂಬುದು. ಕೆಲವು ವಿಚಾರಗಳಲ್ಲಿ ಈ ಮಾತು ಒಪ್ಪುವಂಥದಾದೀತು. ಹಿಂದೆ ಇದ್ದ ಪುಟಿಯುವ ಚೆಂಡಿನಂತ ಲವಲವಿಕೆ ಕಡಮೆಯಾಗುತ್ತದೆ, ಮೈಕೈ ನೋವು, ಏನೊಭಾರ, ಎಲ್ಲೊ ಖಳಿಕ್! ಎಂದು ಹಿಡಿದಂತೆ, ಸೆಡೆತದ ಅನುಭವ!! ಆದರೆ, ಅನೇಕ ಸಂಸ್ಥೆಗಳಲ್ಲಿ ಒಂದು ಅಚ್ಚರಿ ಇದೆ. ೪೦ ವಯಸ್ಸಾದ ಅನಂತರ, ಕೆಲಸ ಆಗಬೇಕಾದ್ದು ಇನ್ನು ಸುಲಭ ಆಗುವುದೆಂಬುವುದು, ಇದು ನಂಬುವಂಥ ಸಂಗತಿಯೆ.

ನಲವತ್ತು, ನಿಮ್ಮ ಬದುಕಲ್ಲಿ ಜವಾಬ್ದಾರಿಯ ಹಂತವೆನಿಸೀತು. ಆದರೆ, ಒಂದು ಅಂಶ : ನಲವತ್ತರ ಬಳಿಕ, ನಿಮ್ಮ ವ್ಯಕ್ತಿ ಅನುಭವಕ್ಕಾಗಿ, ನಿಮಗೆ ಬೆಲೆಯಿತ್ತು ನೋಡುವಂತಿರಬೇಕು. ಯಾವುದು

೧೯೮೮ನೆಯ ಏಪ್ರಿಲ್ ತಿಂಗಳ 'ರೀಡರ್ಸ್ ಡೈಜೆಸ್ಟ್' ಸಂಚಿಕೆಯಲ್ಲಿ ಪ್ರಕಟವಾದ ಮೈಕೇಲ್‌ಕೋರ್ಡ ಅವರ "ಟೆನ್ ಸ್ಟೆಪ್ಸ್ ಟು ಸಕ್ಸಸ್ ಬಿಫೋರ್ ಫಾರ್ಟಿ" ಎಂಬ ಲೇಖನದ ಅನುವಾದ.

ಏನು, ಹೇಗೆ, ಎಂತು ನಿರ್ವಹಿಸಬಹುದು, ಯಾವುದು ಸಮರ್ಪಕ ಹಾಗೂ ಅಲ್ಲದ್ದು, ತೀರ್ಮಾನ—ನಿರ್ಧಾರ ಕೈಗೊಂಬ ರೀತಿ, ನಿರ್ಣಯ ಮಾಡಿಸುವ ಬಗೆ, ಈ ಎಲ್ಲವೂ ನಿಮ್ಮ ವೃತ್ತಿ ಅನುಭವ ಪರೀಕ್ಷಿಸುವ ಒರೆಗಲ್ಲುಗಳು ಅವು ನಿಮ್ಮ ವ್ಯಕ್ತಿತ್ವವನ್ನೂ ಪ್ರತಿಬಿಂಬಿಸಿಯಾವು. ದಿನನಿತ್ಯ ೮ ಗಂಟೆ ಕೆಲಸ ಮಾಡುವುದಕ್ಕಿಂತಲೂ, ಈ ವೃತ್ತಿ ಅನುಭವ ಹೆಚ್ಚು ಅಮೂಲ್ಯ ಎನಿಸಿಕೊಳ್ಳುವಂಥದು ಅದು, ನಿಮ್ಮ ನಲವತ್ತರ ವಯಸ್ಸಿಗೆ ಮಾನದಂಡ ಆಗುತ್ತದೆ, ನೆನಪಿರಲಿ. ಅಂತೆಯೆ, ವ್ಯಕ್ತಿ–ವೃತ್ತಿ ಈ ಎರಡರ ದೃಷ್ಟಿಯಲ್ಲೂ ನಲವತ್ತರ ವಯಸ್ಸು ಮುಖ್ಯ ಎನಿಸಿಕೊಳ್ಳುತ್ತದೆ.

ತನ್ನ ೪೦ನೇ ವಯಸ್ಸಿನ ವೇಳೆಗೆ, ದಿ॥ ಚಾರ್ಲ್ಸ್ ಬ್ಲಹ್‌ಡೋರ್ನ್ ತನ್ನ "ಕೊಲ್ಲಿ ಕೈಗಾರಿಕೆ"ಗಳನ್ನು ವಾರ್ಷಿಕವಾಗಿ ಅನೇಕ ಮಿಲಿಯನ್‌ಗಟ್ಟಲೆ ಡಾಲರ್‌ಗಳಿಸುವಂತೆ ಕುದುರಿಸಿ, ಬೆಳಸಿದ್ದ, ಮಿಲಿಯನ್‌ಗಟ್ಟಲೆ ಡಾಲರಿನ ವ್ಯವಹಾರ ನಡಸಿದ್ದ. ಇದು ಆತನ ವಿಶಿಷ್ಟ ಸಾಧನೆ. ಇದೇ ರೀತಿ, ೪೦ರ ವಯಸ್ಸು ಮುಗಿವ ವೇಳೆಗಾಗಲೆ, ಲಿಯೊನಾರ್ಡ್ ಬೆರ್ನ್‌ಸ್ಟೀನ್ "ವಸ್ಟ್‌ಸೈಡ್ ಸ್ಟೋರಿ"ಯನ್ನು ಬರೆದುದಷ್ಟೆ ಅಲ್ಲ, ಅಮೆರಿಕೆಯ ಒಬ್ಬ ಧೀಮಂತ ರಚನಕಾರ ಹಾಗೂ ಸಂಗೀತಗೋಷ್ಠಿ (ಆರ್ಕೆಸ್ಟ್ರಾ)ಗಳ ಉತ್ತಮ ನಿರ್ವಾಹಕನೆಂದು ಖ್ಯಾತಿಗಳಿಸಿದ್ದ. ಹೀಗೆ, ಎಷ್ಟೆಷ್ಟು ಜನರ ಯಾವ ಯಾವ ಸಾಧನೆ ಇರುವವೊ, ಅದೆಲ್ಲ, ಬದುಕಿನ ಯೌವ್ವನದ ಕೊನೆಯ ಹಂತಕ್ಕೆ ಮುನ್ನವೆ ಸಾಧಿತ ಆದವು ಎಂಬುದು ಗಣನಾರ್ಹ ಅಂಶ.

ಇಪ್ಪತ್ತರ ಹರೆಯದಲ್ಲಿ ರಾತ್ರಿ ಹನ್ನೆರಡರ ಸಮಯದಲ್ಲೂ ದೀಪಪುರಿಸುವುದು ಸರಿಯೆ ಅಥವಾ ೩೦ರ ವಯಸ್ಸಿನಲ್ಲೂ ಆದಾತು, ಆದರೆ, ನಲವತ್ತು ಸಂದ ಮೇಲೊಂದು ವಯಸ್ಸಿನ ದಿನಗಳ ಆರಂಭ ಆಗುತ್ತಿದ್ದಂತೆಯೆ ರಾತ್ರಿಯೆಲ್ಲ ನಿದ್ದೆಗೆಟ್ಟು, ಕಣ್ಣುರಿಸಿ ಕೊಂಡು, ಯಾವುದೊ ಹೊಸತನ್ನು ಕಲಿಯುವ ಸಾಹಸಕ್ಕೆ ತೊಡಗುವುದು ಬದುಕಿನ ಸ್ವಾಸ್ಥ್ಯಕ್ಕೆ ಹಿತಎನಿಸುವುದಿಲ್ಲ. ನಿದ್ದೆಗೆಡಕೂಡದು, ನೆನಪಿರಲಿ.

ಎರಡನೆಯ ಅಂಶವೆಂದರೆ, ನಿಮ್ಮದೆ ಸ್ವಂತ ರೀತಿ, ಶೈಲಿಯನ್ನು ರೂಪಿಸಿ, ಬೆಳಸಿ ಕೊಳ್ಳಿ, ನಿಮಗೆ ನಲವತ್ತಾಗುವ ಮೊದಲು. ಯಾವುದರಲ್ಲಿ, ಯಾವ ಪ್ರಕಾರದಲ್ಲಿ ನೀವು ನೆಮ್ಮದಿಯಿಂದಿದೀರೊ ಇರಬಲ್ಲಿರೊ ಅದನ್ನು ಕಲಿತು, ಚೆನ್ನಾಗಿ ರೂಢಿಸಿಕೊಳ್ಳಿರಿ. ನೆನಪಿರಲಿ, ಅದು ಮೌಲ್ಯವುಳದ್ದಾದರೆ ಮಾತ್ರ ನಿಮಗೂ ಬೆಲೆ!! ಒಂದು ಸಣ್ಣ ಅಂಶ. ನೀವು ಷೋಕಾಗಿ ಉಡುಪುಧರಿಸುವುದರಲ್ಲಿ ಸೊಗಸುಗಾರರಾಗಿರಬಹುದು, 'ಶಿಸ್ತುಗಾರ ಪುಟ್ಟಸಾಮಿ' ಯೆನಿಸಿರಬಹುದು ಅಥವಾ ನೀವು ನಿಮ್ಮ ಉಡುಪಲ್ಲಿ ನೀಡುವ ಒಂದು ನಾಯಗಾರಿಕೆ, ಕಲೆ, ನಿಮ್ಮನ್ನು ಅಂದ ಆಗಿ ಕಾಣುವಂತೆ ಮಾಡಿ ನೀವು 'ನಯಗಾರ ನಾಜೂಕಯ್ಯ'ನೇ ಆಗಿರಬಹುದು. ಕೆಲವೊಮ್ಮೆ ಅವರಿವರ–'ಸ್ಟೈಲ್'–ರೀತಿಯನ್ನು—ನೀವು ಅನುಕರಿಸಬಹುದು. ಏನೆ ಆಗಲಿ, ೨೦–ಅಥವಾ–೩೦ನೆಯ ವಯಸ್ಸಲ್ಲಿಯೂ ನೀವು, ಇವೆಲ್ಲವನ್ನೂ ನಿಮ್ಮ ಮೇಲೆಯೆ ಪ್ರಯೋಗಕ್ಕೆ ಒಳಪಡಿಸಕೊಳ್ಳಲವಕಾಶವಿದೆ. ಆದರೆ, ನಿಮಗೆ ೪೦ನೆ ವಯಸ್ಸಾಗುವ ವೇಳೆಗೆ ನಿಮ್ಮದೆ ಆದ ಸ್ವಂತ ರೀತಿರಿವಾಜು, ವಿಶಿಷ್ಟನೀತಿ—ಶಿಸ್ತು ಬದುಕಿನ ಎಲ್ಲ ನಡಿಗೆಯಲ್ಲೂ ನೀವು ದೃಢವಾಗಿ ರೂಪಿಸಿಕೊಳ್ಳ ಬೇಕು. ಹಾಗೆ ರೂಢಿಸಿಕೊಳ್ಳಿರಿ. ಮೊದಲೆಲ್ಲ ಸುಮ್ಮನಿದ್ದು, ಹೇಗೊ ಅಡ್ಡಾದಿಡ್ಡಿ ಬದುಕು

ನಡಸಿ, ನಡುಹರೆಯದಲ್ಲಿ ಅವನಾಗಲಿ, ಅವಳಾಗಲಿ, ತಾನು ತುಂಬ ಅಂದವಾಗಿ ಕಾಣಿಸಬೇಕೆಂದು ಅಂದುಕೊಂಡು, ತಮ್ಮನ್ನು ಮತ್ತೆ ರೂಪಿಸಿಕೊಳ್ಳಲು ಹೆಣಗಿದ್ದಾದರೆ ಅವರಿಗಿಂತ ಚಿತ್ತ ಸ್ವಾಸ್ಥ್ಯವಿಲ್ಲದವರು ಇನ್ನು ಯಾರಿದ್ದಾರು? ಮನಸ್ಸಿನ, ಬುದ್ಧಿಯ ಸ್ವಾಸ್ಥ್ಯ, ಧೈರ್ಯ—ದೃಢತೆ, ಈ ಎಲ್ಲವೆಲ್ಲವೂ ನಿಮ್ಮನ್ನು ನೀವು ರೂಪಿಸಿಕೊಳ್ಳುವುದರಲ್ಲೆ ಅಡಗಿದೆಯಷ್ಟೆ. ನಲವತ್ತರ ವೇಳೆಗೆ ನೀವು, ನಿಮ್ಮದೆ ಆದ ಸ್ವಂತ ಶೈಲಿ, ರೀತಿ, ಹೊಂದಿರಬೇಕು.

ಮೂರನೆಯ ಅಂಶ. ಸಾಧ್ಯವಿದ್ದಲ್ಲಿ, ನಿಮ್ಮ ಭಾವನಾತ್ಮಕ ಬದುಕನ್ನು ಒಂದು ಹತೋಟಿಯಲ್ಲಿರಿಸಿಕೊಳ್ಳಿರಿ. ಅನೇಕ ವೈಯಕ್ತಿಕ ಸಮಸ್ಯೆ, ಮಾನಸಿಕ ಏರಿಳಿತ, ಭಾವ ತುಮುಲ, ನಿಮ್ಮ ಚೈತನ್ಯವನ್ನೆ ಹೀರಿ, ನಿಮ್ಮ ಗಮನ ಬೇರೆಡೆಗೆಳೆಯುತ್ತದೆ! ಅದನ್ನೆಲ್ಲ ಪರಿಗಣಿಸದೆ, ಸೊಪ್ಪುಹಾಕಿ ಸೊಪ್ಪಾಗದೆ, ಬದುಕಲ್ಲಿ ಯಶಸ್ಸುಗಳಿಸುವುದು ಕಷ್ಟವೆ. ಆದರೆ, ಕಷ್ಟ ಆದರೂ ಸಾಧ್ಯವೆಂಬುದು ನೆನಪಿರಲಿ. ಅಲ್ಲದೆ, ಅಶಾಂತಿ, ಅಸುಖ ಇವು ರೋಗವಿದ್ದಂತೆ. ಇವು ನಿಧಾನವಾಗಿ, ಹಾಗೆಯೆ ಬೇರೂರಿ, ಇತರ ವಸ್ತು–ವಿಚಾರಗಳೆಲ್ಲದರಲ್ಲಿಯೂ ಇರುವ ಆಸಕ್ತಿ–ಉತ್ಸುಕತೆಗೆ ಗ್ರಹಣ ಹಿಡಿಸುತ್ತವೆ, ನಿಮ್ಮನ್ನು ಮಂಕು ಆವರಿಸುತ್ತದೆ. ಏನೂಬೇಡ, ಅಯ್ಯೊ ಯಾತಕ್ಕೆಬೇಕು, ಎಂಬುವುದೊ, ನಿರಾಸಕ್ತಿಯೊ, ಜಡತ್ವವೊ ನಿಮ್ಮಲ್ಲಿ ತಾನೆತಾನಾಗಿ ಪಾರ್ಥೇನಿಯಮ್ ರೀತಿ ಬೆಳೆದು ಬೇರೂರುತ್ತದೆ, ಜೋಕೆ!

ಬದುಕಿನಲ್ಲಿ ಮೂಡಿಬರುವ ಎಲ್ಲ ಅಡಚಣೆಗಳನ್ನು ನಿವಾರಿಸಿಕೊಂಬುವುದು ಅಸಾಧ್ಯವೆ; ಹಾಗೂ ಒಬ್ಬಾತ ತನ್ನ ಅಡ್ಡಿ–ಕಷ್ಟಗಳನ್ನೆದುರಿಸಿ, ಅವುಗಳಿಗೆ ಮಿಗಿಲಾಗಿ ಮೇಲೇಳಬೇಕು ಎಂಬುದೂ ಅಪೇಕ್ಷಣೀಯವೆ; ಆದರೆ, ಈ ವಿಚಾರದಲ್ಲಿ ಯಾರು ತಮ್ಮ ವೈಯಕ್ತಿಕ ಬದುಕನ್ನು, ತಮ್ಮ ಳಂ ನೆಯ ವಯಸ್ಸಿನ ವೇಳೆಗೆ ಒಂದು ಹದದಲ್ಲಿರಿಸಲು, ಹದಕ್ಕೆ ತರಲು ವ್ಯವಸ್ಥೆ ಮಾಡಿಕೊಂಡಿರುತ್ತಾರೆಯೊ, ಅಂಥವರು ಸಾಮಾನ್ಯವಾಗಿ ಬದುಕಲ್ಲಿ ಯಶಸ್ಸುಗಳಿಸಲು ಒಂದು ಉತ್ತಮ ಸ್ಥಿತಿಯಲ್ಲಿರುತ್ತಾರೆ. ಯಾವುದೆ ವ್ಯವಸ್ಥಿತ ಬದುಕಿರದೆ, ದಿಕ್ಕಾಪಾಲಾಗಿ ತೊಳಲುವರಿಗಿಂತ. ನಿಮ್ಮ ಬದುಕಲ್ಲಿ ಯಾವುದೇರೀತಿಯ ಇಕ್ಕಟ್ಟಿನಲ್ಲಿ ಸಿಕ್ಕಿಹಾಕಿಕೊಳ್ಳುವುದೊ ಅಥವಾ ಮದುವೆಯಾಗುವುದೊ ಅಂಥದೇನೆ ಇದ್ದರೆ, ಮುನ್ನಡೆಯಿರಿ—ಸಮಸ್ಯೆಗಳು ನಿಮ್ಮ ೫ಂರ ವಯಸ್ಸಿನ ಇಳಿಹಗಲಿನ ಗಳಿಗೆಗಳಿಗೆ ಕಾಲುಚಾಚುವ ಮುನ್ನ, ನಲವತ್ತುಕಳೆದು, ಐವತ್ತರ ಅಂಚಿನಲ್ಲಿ ಕಾಲಿರಿಸುವ ನಿಮಗೆ ಬದುಕಲ್ಲಿ ಚಡಪಡಿಕೆ, ಉದ್ವೇಗ, ಕಾತರ, ಏನೋ ಹೊಂದಲಾಗದೆ ಬರುವ ದಣಿವು ಇರಕೂಡದು. ಏಕೆಂದರೆ ದಣಿಯುತ್ತಿರುವ ಶರೀರಕ್ಕೆ ಒದಗಿಬರುವ ಮಾನಸಿಕ ಚಡಪಡಿಕೆ, ಏರಿಳಿತ, ಬದುಕಿಗೇ ಮಾರಕ ಆಗಿಯಾವು.

ನಾಲ್ಕನೆಯದಾಗಿ ನಿಮ್ಮ ದೌರ್ಬಲ್ಯ, ನಿಮ್ಮಲ್ಲಿರುವ ನ್ಯೂನತೆಗಳನ್ನು ನೀವೇ ತಿಳಿಯಿರಿ. ಯಾವ ಯಾವುದನ್ನು ನೀವು ಚೆನ್ನಾಗಿ ಮಾಡುವುದಿಲ್ಲವೊ, ಮಾಡಲು ಬರುವುದಿಲ್ಲವೊ ಆ ಕಾರ್ಯದಲ್ಲಿ ಅಚಲ ಆಗಿ ನಿಲ್ಲಲಾಗುವುದಿಲ್ಲವೊ, ಅದೆಲ್ಲ ವಿಕಾರಗಳನ್ನು ನೀವೇ ಒಪ್ಪಿಕೊಂಡು ಬಿಡಿ. "ಇದು ನನ್ನಲ್ಲಿಯ ಕೊರತೆ. ನಾನು ಈ ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸಲಾರೆ." ಆ ಒಪ್ಪಿಗೆಯೂ ಒಳ್ಳೆಯದೆ. ಅದರಿಂದ ನಿಮ್ಮ

ಬೆಳವಿಗೆಯೂ ಸಾಧ್ಯ. ಆದರೆ, ಈ ದಿಸೆಯಲ್ಲಿ ನೀವೇ ಕಾರ್ಯತತ್ಪರರಾಗಬೇಕಾದ್ದು, ಅಲ್ಲವೆ? ನಿಮಗೆ ಒಂದು, ಎರಡು, ಮೂರ ಲೆಕ್ಕಾಚಾರದಲ್ಲಿ ನೆಮ್ಮದಿಯಿಂದಿರಲು ಸಾಧ್ಯವಿಲ್ಲ ಎಂದುಕೊಳ್ಳಿ. ಹಾಗೆಯೆ ಯಾವುದೆ ಸೃಜನಾತ್ಮಕ ಕಾರ್ಯವನ್ನು ನೀವು ಮನಸಾರ ಅನುಭವಿಸಿ ನಿರ್ವಹಿಸಬಹುದು, ಎಂದಿಟ್ಟುಕೊಳ್ಳೋಣ. ಇದರಿಂದ ಒಂದು, ಸ್ಪಷ್ಟ. ಸಂಬಳ ಹೆಚ್ಚು ಬರುತ್ತದೆಂದೊ ಅಥವಾ ಹಾಗೆಂದು ಎಲ್ಲರೂ ನಿರೀಕ್ಷಿಸುವರೆಂದೊ ನೀವು ನಿಮ್ಮ ಸ್ವಂತಿಕೆಯನ್ನು ಬಲಿಗೊಟ್ಟು, ಕೇವಲ ದುಡ್ಡಿಗಾಗಿ ನಿಮ್ಮನ್ನು ಬಲವಂತವಾಗಿ ಒಂದು ಎರಡು ಎಣಿಸುವ ಕೆಲಸಕ್ಕೆ ಹೋಗುವುದು ಬೇಕಿಲ್ಲ. ಏಕೆಂದರೆ, ಮನಸ್ಸು ಒಲ್ಲದ ಕಾರ್ಯ, ಹೆಚ್ಚುದಣಿವುಂಟು ಮಾಡುತ್ತದೆ, ಶರೀರದ ಆರೋಗ್ಯದ ಮೇಲೆ ಕೂಡ ಗಂಭೀರರೀತಿಯ ಪರಿಣಾಮ ಬೀರುತ್ತದೆ. ನಲವತ್ತಕ್ಕೆ ಮೊದಲೇ ನೀವು, "ಇಂಥ ಕೆಲಸ ನನಗೆ ಸರಿ ಹೋಗುತ್ತದೆ, ನಾನು ಇದರಲ್ಲಿ ಇರುತ್ತೇನೆ"ಂಬ ನಿರ್ಧಾರ ತಳೆಯಬೇಕು. ಹಾಗಿರದಿದ್ದರೆ, ಹತ್ತಾರುವರ್ಷ ಕಳೆದ ನಂತರ, ನಿಮಗೆ ನೆಮ್ಮದಿ ಕೆಡುವುದು ಖಂಡಿತ. ಅದೇ ನಿಮ್ಮ ನಿಜವಾದ ಯಶಸ್ಸಿನ ಅವಕಾಶವನ್ನು ಹಾಳುಮಾಡಿಯಾತು. ಯಾವುದು ಒಗ್ಗುವುದೊ, ಮನಸ್ಸಿಗೆ ಖುಷಿಕೊಡುವುದೊ ಆ ಕೆಲಸ ನಿರ್ವಹಿಸಿ. ಆದರಿಂದ ಒಂದು ವಿಶಿಷ್ಟತೃಪ್ತಿಯೂ ನಿಮಗೆ ಬರುತ್ತದೆ. ಐದನೆಯದಾಗಿ, ನಿಮ್ಮ ಶಕ್ತ್ಯಾಶಕ್ತತೆಯನ್ನು ತಿಳಿಯಿರಿ. ಯಾವುದರಲ್ಲಿ ನೀವು ಉತ್ತಮರೊ, ಯಾವಕಾರ್ಯ ನಿಮಗೆ ತೃಪ್ತಿ, ಸಮಾಧಾನ ತರುತ್ತದೆಯೊ ಅದನ್ನು ನಿರ್ಧರಿಸುವುದೇ ಉತ್ತಮ. ಅದೇ ಒಳ್ಳಿತು.

ನಾನಿಲ್ಲಿ ಒಂದು ವಿಚಾರ ತಿಳಿಸಲಿಚ್ಛಿಸುತ್ತೇನೆ. ನಾನು ಚಿಕ್ಕವನಿದ್ದಾಗ, ನನ್ನ ಬಗ್ಗೆ ಒಂದು ಟೀಕೆಯಿತ್ತು. ಯಾವುದೆ ಒಂದು ಪ್ರಶ್ನೆಯಾದರೂ ಅದರ ಎರಡು ಮುಖಗಳನ್ನು ಮನಗಾಣುವೆನೆಂದು. ಕೆಲವರಿಗಂತೂ ನನ್ನನ್ನು ಕಂಡರೆ ಸಾಕು ಮೇಲೆ ಮೇಲೆ—ಹೊರತೋರಿಕೆಗೆ—ಶುಭ ಹೇಳಿ, ವಿದಾಯ ಹೇಳುವ, ತೊಳೆದು ಬಿಡುವ ಮನಸ್ಸು. ಇದೂ ನನಗೆ ತಿಳಿಯಬಂದಿತ್ತು. ನನಗೀಗ ಇಳ ವಯಸ್ಸು ಕಳೆಯುತ್ತಿದೆ. ಆದಾಗ್ಯೂ ಬಹುವರ್ಷದ ಹಿಂದೆಯೆ ನಾನು ಅರಿತುಕೊಂಡೆ, ನನ್ನ ಪರಿಶೀಲನೆ ತುಂಬ ಬೆಲೆಯುಳ್ಳದ್ದು, ಸತ್ವಯುತ ಆದದ್ದೆಂದು. ಯಾವುದೆ ವಿಚಾರ ಆಗಲಿ, ಯಾವುದೆ ಪ್ರಶ್ನೆ ಇರಲಿ, ಅದರ ಸಾಧ್ಯಾಸಾಧ್ಯತೆ, ಸಾಧಕ—ಬಾಧಕ, ಎರಡನ್ನೂ ವಿಶ್ಲೇಷಿಸುವುದು. ನನ್ನನ್ನು ಕಾರ್ಯನಿರ್ವಾಹಕನೆಂಬುದಕ್ಕಿಂತ, ಉತ್ತಮ ಸಲಹೆಗಾರ ಎನ್ನಿಸಿದೆಯೆಂದು ನಾನು ಒಪ್ಪಬೇಕು—ಸರಿ, ಅದೇ ಆಗಲಿ, ಅದೇ ಆದೀತು. ಏಕೆಂದರೆ, ಒಂದು ಸಂಸ್ಥೆ, ಹಾಗೂ ಅದರ ಕಾರ್ಯಾಂಗಕ್ಕೆ ಸಾಧ್ಯಾಸಾಧ್ಯತೆಯ ಎರಡು ಮಾದರಿಯೂ ಅಗತ್ಯವೆ. ಎರಡೂ ಮುಖ ಕುರಿತ ಆಲೋಚನೆ, ಆಲೋಧನೆ ಅಗತ್ಯವೆ. ಇದರಲ್ಲಿ ನಿಮ್ಮ ಪಾತ್ರವೇನೆ ಇರಲಿ, ನೀವೇನು, ನೀವು ಯಾರು, ನೀವು ಯಾವುದರಲ್ಲಿ ಹೇಗೆ ಉತ್ತಮರು ಎಂಬುದನ್ನು ತಿಳಿದುಕೊಂಡಿರುವುದರಲ್ಲಿಯೆ ಯಶಸ್ಸಿನ ಗುಟ್ಟಡಗಿರುವುದು. ನಿಮ್ಮ ವ್ಯಕ್ತಿತ್ವದ ಔನ್ನತ್ಯ ತಿಳಿಯಪಡಿಸುವಂಥದು.

ಆರನೆಯ ಹಂತವೊಂದಿದೆ. "ನನಗೆ ದುಡ್ಡು ಬೇಡ" ಎಂಬುದನ್ನ ದೂರ ನಿರಿಸುವಿಕೆ. ಹಾಗೆಂದರೆ? ನಾನು ಬಲು ಚಿಕ್ಕವನಿರುವಾಗ, ಸಾಹಿತ್ಯ ಪ್ರತಿನಿಧಿ—

ಬರಹಗಾರ ಇರ್ವಿಂಗ್‌ಲೇಸರ್ ತಂದೆಯೋಪಾದಿಯಲ್ಲಿ ನನಗೊಂದು ಬುದ್ಧಿಮಾತನ್ನು ಹೇಳಿದ್ದರು: "ನೀನು ಗಳಿಸುವ ಮೊದಲ ಮಿಲಿಯನ್ ಡಾಲರ್‌ಗಳನ್ನು ದೂರವಿರಿಸು". ಅಂದರೆ, ಉಳಿತಾಯ ಮಾಡು ಎಂದು ಅರ್ಥ! ಗಳಿಸಿದ ದುಡ್ಡನ್ನು ಉಳಿಸುವೆನೆಂಬ ಸೂತ್ರ. ಮಿಲಿಯನ್ ಡಾಲರ್ ಎಂದರೆ, ನನ್ನ ಗಳಿಕೆಯ ಶಕ್ತಿಗೆ ಮಿರಿದ್ದು. ಆದರೆ, ವಿಚಾರ ಮಾತ್ರ ತುಂಬ ದೃಢ ಆದದ್ದು ಹಾಗೂ ಬೆಲೆಯುಳ್ಳದ್ದು ತಾನೆ?? ಪ್ರತಿಯೊಂದಕ್ಕೂ ಇತರರನ್ನು ಅವಲಂಬಿಸುವುದೆಂದರೆ? ಅದಕ್ಕಿಂತ ನಿರಾಶೆಯ, ಶೋಚನೀಯ ವಿಚಾರ ಇನ್ನೊಂದಿಲ್ಲ. ಕೆಲಸ ಬಿಡಲು ಸಾಧ್ಯವಿಲ್ಲ, ಅಥವಾ ಈ ಇಳಿವಯಸ್ಸಿನಲ್ಲಿ ನನ್ನ ಕೆಲಸ ಬದಲಿಸಲು ಆಗುವದೂ ಇಲ್ಲ. ನೀವು ಕೆಲಸಕ್ಕೆ ಸೇರಿದ ಕೆಲವು ದಿನಗಳಲ್ಲಿ ಏನನ್ನೂ ಉಳಿಸಲು ನಿಮಗಾಗದು. ಹಾಗೇ ನೀವು ಈ ಕೆಲಸ ಬಿಡಲಾರಿರಿ ಕೂಡ, ಅಥವಾ ಒಂದು ಕೆಲಸದಿಂದ ಇನ್ನೊಂದು ವೃತ್ತಿಗೆ, ಕಸಬಿಗೆ, ಬದಲಾಯಿಸುವ ತೊಂದರೆಯನ್ನು ನೀವು ಕೈಗೊಳ್ಳಲಾರಿರಿ....ಅಂದರೆ, ಇರುವುದರಲ್ಲಿ ಹಾಗೂ ಇರುವೆಡೆಯೆ ನೀವು ಸಿಕ್ಕಿಹಾಕಿಕೊಂಡಿರಂದಾಯಿತು. ಎಷ್ಟು ಅಗತ್ಯವೆನಿಸುವುದೊ ಅಷ್ಟು ಹಣವನ್ನು ನೀವು, ನಿಮಗೆ ಉಳಿಸಲು ಸಾಧ್ಯವಿರುವಾಗಲೇ ಉಳಿಸಿ ಇರಿಸಿಬಿಡಿ. ಅದರಿಂದ ನೀವು ಒಂದು ಭದ್ರತೆಯ ಕವಚ ಪಡೆದಂತಾದೀತು. ನೀವು ಆ ಹಣವನ್ನು ಬಳಸದಿರಬಹುದು. ಆದರೆ, ಯವುದೊಂದು ಸನ್ನಿವೇಶದಲ್ಲೂ ನೀವು ನೀಡುವ ಯುಕ್ತ ಉತ್ತರವೆಂದರೆ, "ನಾನು ಈ ಕೆಲಸವನ್ನು ಬಿಡುತ್ತೇನ್ರಿ". ಈ ರೀತಿ ಖಡಾಖಂಡಿತ ಆಗಿ ಹೇಳಲು ನಿಮಗೆ ಸಾಧ್ಯ ಆಗದ ದೌರ್ಬಲ್ಯ ಇತ್ತೊ, ಆಗಲಂತೂ ನಿಮ್ಮನ್ನು ನೀವೇ ದ್ವೇಷಿಸುತ್ತೀರಿ, ಕೈಕೈ ಹಿಸುಕಿಕೊಂಡು, ಹಲ್ಲುಕಡಿದು, ಅಸಹಾಯಕತೆ ನಿರಾಸೆಗಳಿಂದ ತೆಪ್ಪಗಾಗುತ್ತೀರಿ. ಅಂದರೆ, ಇಷ್ಟು: ಯೌವ್ವನದಲ್ಲಿ ದುಡಿಮೆಯ ಆರಂಭದಿಂದಲೂ ಹಣವನ್ನು ಒಂದೆಡೆ ಉಳಿಸಿ, ಇರಿಸುವುದು ಒಂದು ಉತ್ತಮ ಮಾರ್ಗ, ಅದೇ ಉತ್ತಮ ವಿಚಾರ.

ಇನ್ನು ಏಳನೆಯ ಅಂಶ. ನಿಮ್ಮದೆ ಒಂದು ವಲಯ, ಸ್ನೇಹದ ಸಮೂಹ, ವೃತ್ತ ಕಟ್ಟುವುದು. ಗೆಳೆಯರ ಗುಂಪನ್ನು ಒಕ್ಕೂಡಿಸುವಂಥದು. ವಯಸ್ಸು ನಲವತ್ತಾಗುವ ವೇಳೆಗೆ, ನೀವು ನಿಮ್ಮ ಆಪ್ತರ, ಮಿತ್ರರ ವಲಯ ಸಂಪಾದಿಸದಿದ್ದರೆ, ಅಥವಾ ನಿಮ್ಮನ್ನು ನೆಚ್ಚುವ ನಂಬುವಂಥ ಜನರನ್ನು ನೀವು ಹೊಂದಿರದಿದ್ದರೆ, ಹಾಗೂ ನೀವು ಮಾತಾಡಬಹುದಾದ, ಒಟ್ಟಿಗೆ ಇರಬಹುದಾದ, ಜನಸ್ನೇಹ—ಜನಬಳಕೆ ಇರದಿದ್ದರೆ, ಖಂಡಿತಾ ನೀವು ಅಪಾಯದಲ್ಲಿದ್ದೀರಿ ಎಂದೇ!! ಆಪತ್ತಿಗಾರೂ ಆಗರು, ಮಿತ್ರರು—ಆಪ್ತೇಷ್ಟರ ಹೊರತು! ಕೆಲವರು ನಿಮ್ಮ ಸಹೋದ್ಯೋಗಿಗಳು. ಅವರಿಗೆ ನೀವು ಸಮಯದಲ್ಲಿ ಉಪಕಾರ ಮಾಡಿದಿರಿ. ಅವರ ಕಾರ್ಯಯೋಜನೆಗಳನ್ನು ಬೆಂಬಲಿಸಿದಿರಿ, ಅವರ ಸಮಸ್ಯೆಗಳನ್ನು ಆಲಿಸಿ ಯುಕ್ತ ಸಮಾಧಾನ ನೀಡಿದೀರಿ....ಹಾಗೆಯೆ ಅವರು ನಿಮಗೂ ಒದಗಿಬರುತ್ತಾರೆ, ಎಲ್ಲ ರೀತಿಯಲ್ಲೂ ಆಪತ್ತಿಗಾಗುತ್ತಾರೆ.

ಈ ರೀತಿ ಸ್ನೇಹಜಾಲ, ಜೇಡರಹುಳು ಒಂದೇ ರಾತ್ರಿ ನೇಯುವ ಬಲೆಯಂತಲ್ಲ. ಅನೇಕ ದಶಕಗಳೆ ಬೇಕು, ನೀವು ಉತ್ತಮ ಸ್ನೇಹವಲಯ ಗಳಿಸಿ, ಬೆಳಸಲು ನೀವು ಯಾವ ರೀತಿ ಸ್ನೇಹ—ಸ್ನೇಹಿತರನ್ನು ಪೋಷಿಸುವಿರೊ ಅವರೂ ಅದೇ ರೀತಿ ನಿಮ್ಮನ್ನು

ಪ್ರೀತಿಯಿಂದ ಕಂಡಾರು. "ಪರಸ್ಪರಂ ಭಾವಯಂತಃ" ಅಲ್ಲವೆ? ಅದರಿಂದ, ಶ್ರೇಯಸ್ಸು ಒದಗುತ್ತದೆ. ರಾಜಕೀಯದಲ್ಲಿ ಹೇಗೆ ಜನಬಲ ಬೇಕೊ ವ್ಯವಹಾರ, ಉದ್ಯಮದಲ್ಲೂ ಹಾಗೆಯೆ. ರಾಶಿ ಜನ ಬೇಕು. ಯಾರನ್ನು ನೀವು ಅವಲಂಬಿಸುವಿರೊ ಅವರನ್ನು ಯುಕ್ತ ಸ್ಥಳದಲ್ಲಿ ಇರಿಸಬೇಕು. ಏಕೆಂದರೆ, ಅವರೂ ನಿಮ್ಮಂತೆಯೆ, ಅಂದರೆ, ನಿಮ್ಮನ್ನೂ ಅವಲಂಬಿಸಿರುತ್ತಾರೆ.

ಯಾವುದೆ ಕಾರ್ಯನಿರ್ವಹಣೆ, ಆ ವ್ಯಕ್ತಿಗೆ ಗೆಲುವನ್ನು ತಂದಿತೆಂದೆ ಅರ್ಥ. ಯಾವ ವ್ಯಕ್ತಿಯು ತನ್ನ ಕಾರ್ಯವನ್ನು ಸುವ್ಯವಸ್ಥಿತ ರೀತಿಯಲ್ಲಿ ನಿರ್ವಹಿಸುವುದಿಲ್ಲವೊ, ಅವನು ಕೊನೆಯುವರೆವಿಗೂ ಅಂಗಹೀನನೆ ಆಗುತ್ತಾನೆ. ಅಲ್ಲಿ ಅವನಿಗೆ ಗೆಲುವಿನ ಪೂರ್ಣತೆ ದೊರೆಯುವುದಿಲ್ಲ.

ನಲವತ್ತರ ವಯಸ್ಸನ್ನು ತಲುವುವ ವೇಳೆಗೆ, ನೀವು ಪಳಗಿರಬೇಕು—ಕಾರ್ಯ ನಿರ್ವಹಣೆ ಹಾಗೂ ಜನ ಪ್ರೀತಿಯ ಗಳಿಕೆಗಳಲ್ಲಿ, ಅಂದರೆ, ನೀವು ಸರಿಯಾದವರನ್ನ ಆರಿಸಬೇಕು, ಹಾಗೂ ಅವರನ್ನು ನಂಬಬೇಕು ಎಂದರ್ಥ. ಅದರಿಂದ ನಿಶ್ಚಿತ ಗುರಿ ತಲುಪಬಹುದು.

ಒಂಭತ್ತನೆಯದು, ಪ್ರಮುಖವೆನಿಸುವ ವಿಚಾರ. ಯಾವ ಸಂದರ್ಭ—ಪರಿಸರ ದಲ್ಲಿ ನಿಮ್ಮ ಬಾಯಿ ಮುಚ್ಚಿ ತೆಪ್ಪಗಿರಬೇಕೊ ಅದನ್ನು ಕಲಿಯಿರಿ. ಮೌನ ಬಂಗಾರ, ಮಾತು ಬೆಳ್ಳಿ ಎಂಬುದು ಸದಾ ನೆನಪಿರಲಿ. ಅನೇಕ ಹುದ್ದೆ ಬಡ್ತಿ, ಮೇಲ್ತರಗತಿಯ ಹುದ್ದೆ ದೊರೆಯುವ ಅವಕಾಶ, ಇವು ಥೊಪ್ಪನೆ ಬಿದ್ದುಹೋಗುವುದೇಕೆ ಬಲ್ಲಿರೇನು? ಇನ್ನಾವ ಕಾರಣದಿಂದಲೂ ಅಲ್ಲ, ಬಾಯಿಗೆ ಬಂದಂತೆ ಮಾತಾಡುವುದರಿಂದ. ಎಚ್ಚರ ವಾದ ಬೇಜವಾಬ್ದಾರಿ ಮಾತಿನಿಂದಲೆ! ಆದಷ್ಟೂ ಸುಮ್ಮನಿರುವುದನ್ನು ಕಲಿಯಿರಿ. ಮಿತಭಾಷಿಯಾಗಿ. ಹಾಗೂ ನೋಡಲು ಜಾಣನಾಗಿ ಕಾಣಿಸುವಂತೆ ಇರಿ. ಜನರಿಗೆ, ಖಂಡಿತಾ ನೀವು ಎಷ್ಟರಮಟ್ಟಿಗೆ ಕೆಲಸ ಮಾಡಬಲ್ಲಿರೊ ಅದಕ್ಕಿಂತ ಮಿಗಿಲಾಗಿ ತಿಳಿದಿದೀರಿ ಎಂಬ ಭಾವನೆ ಮೂಡಿಬರುತ್ತದೆ. ಅದನ್ನೆ ಕಂಡುಕೊಳ್ಳಿ, ಪೋಷಿಸಿ, ಬೆಳೆಸಿ, ಜಾಣತನದಿಂದ! ಗುಟ್ಟನ್ನು ಗುಟ್ಟಾಗಿ ಇರಿಸಿಕೊಂಬುವುದೂ ಜಾಣತನವೆ. ಹರಟೆಮಲ್ಲನಾಗದೆ, ರಹಸ್ಯವಾಗಿದ್ದರೆ ಅದೇ ಸಾಕು, ಹಾಗೂ ಜನಪ್ರಿಯತೆಗೊಳಿಸಲು ಮಿಗಿಲಾದೀತು. ಇದರಿಂದ ನಿಮ್ಮ ಅರಿವೂ ಹೆಚ್ಚಿಸಿಕೊಳ್ಳಲು ಅನುಕೂಲ, ಹಾಗೂ ನಿಮ್ಮನ್ನು ಪ್ರಸಿದ್ಧರಾಗಿಯೂ ಮಾಡೀತು! ನೀವು, ನಿಮ್ಮ ವೃತ್ತಿ, ಕಸಬು, ಉದ್ಯೋಗ—ಉದ್ಯಮದಲ್ಲಿ ಪ್ರಗತಿಪಥದಲ್ಲಿ ಮುನ್ನಡೆದಂತೆ, ಈ ತೆರನಾದ ಗುಟ್ಟಾಗಿರುವುದು ಗುಟ್ಟು ಕಾಪಾಡುವುದು ಎಷ್ಟು ಬೆಲೆಯುಳ್ಳದ್ದು, ಮಾತಿಗಿಂತ ಅನೇಕ ವೇಳೆ ಮೌನಕ್ಕೇ ಮೌಲ್ಯ, ಹಾಗೂ ಇದೇ ಯಶಸ್ಸಿಗೆ ಸೋಪಾನ, ಎಂಬುದೆಲ್ಲ ನಿಮಗೆ ತಾನೆ ತಾನಾಗಿ ತಿಳಿಯುತ್ತದೆ. ಉನ್ನತ ಆಡಳಿತವರ್ಗದಲ್ಲಿ, ರಹಸ್ಯವೆ ಹೊನ್ನಿಗೂ ಮಿಗಿಲು.

ಹತ್ತನೆಯ ಅಂಶವೂ ಗಣನೀಯ ಆದದ್ದೆ. ಯಾವು ಕಾರ್ಯವನ್ನು ಅವಲಂಬಿಸಿ, ನಿಮ್ಮಲ್ಲಿ ಕಾರ್ಯನಿಷ್ಠೆ ಇರಲಿ. ಪ್ರಾಮಾಣಿಕತೆ ಇರಲಿ. ಯೌವ್ವನದ ಹಸಿರು ದಾಟಿ ಳಂರ ವಯಸ್ಸು ಸರಿದು ಬರುವ ವೇಳೆಗೆ ನೀವು ಶೇ. ೧೦೦ಕ್ಕೆ ನೂರು ನಿಷ್ಠರಾಗಿಲ್ಲ,

ಹಾಗೂ ಪ್ರಾಮಾಣಿಕತೆಗೆ ಹೆಸರಾಗಿರದಿದ್ದರೆ, ನಿಮ್ಮ ಉಳಿದ ವೃತ್ತಿಬದುಕೆಲ್ಲ ಅದೇ ನ್ಯೂನತೆ ಕಾಡುತ್ತದೆ. ನಿಮ್ಮನ್ನು ಚುಚ್ಚಿ ಬೆರಳುಮಾಡಿ ತೋರುತ್ತದೆ. ಅದರಿಂದಾಗಿ, ವೃತ್ತಿನಿಷ್ಠೆ, ಕರ್ತೃತ್ವ ಗುಣ ನಿಮಗಿರಲಿ, ಅದೇ ಬೆಳೆದಿರಲಿ. ಅಪ್ರಮಾಣಿಕತೆ, ನಿಷ್ಠೆಯಿರದೆ ಇರುವಿಕೆ, ನಿಮ್ಮನ್ನು ನಿಮ್ಮ ವ್ಯವಹಾರದಲ್ಲಿ ಎಲ್ಲಾದರೂ ಒಂದೆಡೆ ಸಿಲುಕಿಸುತ್ತದೆ, ಬೇಕಿಲ್ಲದವರಾಗಿಸಿಬಿಡುತ್ತದೆ! ನಿಮ್ಮ ಉನ್ನತಿಯ ಸೋಪಾನಕ್ಕೆ ಹಾದಿ ಮಾಡಿಕೊಂಬುವುದು ಬೆನ್ನಲ್ಲಿ ಇರಿವುದರಿಂದಲ್ಲ, ಠಕ್ಕಿನ ಥಳಕಿನಿಂದಲ್ಲ. ನಿಮ್ಮ ವೃತ್ತಿಯ ನಿಡಿದಾದ ಬದುಕಿನಲ್ಲಿ ಮೊದಲಿಂದಲೂ ನೀವು ಒಬ್ಬ ನಿಷ್ಠ, ಪ್ರಾಮಾಣಿಕ, ಕಪಟವಿಲ್ಲದವರೆಂದು ಹೆಸರು ಗಳಿಸಿದುದರಿಂದ! ಆ ಋಜು ಗುಣವನ್ನು ಯಾರೂ ತಳ್ಳಿಹಾಕಲು ಸಾಧ್ಯವಿಲ್ಲ. ನಲವತ್ತಕ್ಕೆ ಮೊದಲು ಇರುವ ಬದುಕು, ನಿಷ್ಠೆಗೆ ತನ್ನದೆ ಆದ ಬಹುಮಾನ, ಫಲ ಗಳಿಸುತ್ತದೆ. ನಲವತ್ತಾದ ನಂತರ, ಆ ಫಲ ತಾನೆ ತಾನಾಗಿ ನಿಮಗೆ ದೊರಕಿ ಬರುತ್ತದೆ, ಉಡುಗೊರೆಯೆಂಬಂತೆ. ಅದಕ್ಕೆ ಮುನ್ನ?? ಹಾದಿ ಮಾಡಿಕೊಳ್ಳುವವರು ನೀವೆ!" ಸಾಯೋ ಕಾಲದಲ್ಲಿ ಓದಲು ಕೂತರು" ಅನ್ನೊ ಹಾಗಾಗಕೂಡದು.

ಇದೆಲ್ಲ ನೆನಪಿನಲ್ಲಿಡಿ. ಸದಾ ನಿಷ್ಠರಾಗಿರುವುದರ ಜತೆಗೆ ನವಿರಾದ ಹಾಸ್ಯ ಪ್ರವೃತ್ತಿ ಬೆಳಸಿಕೊಳ್ಳಿ. ಹಾಸ್ಯ—ಉಲ್ಲಾಸ—ವಿನೋದ ಪ್ರವೃತ್ತಿ ರೂಢಿಕೊಳ್ಳುವುದು, ನಿಮ್ಮ ಬದುಕನ್ನು ಇನ್ನೂ ಯೌವ್ವನದಲ್ಲಿರಿಸುವ ಅಮೃತ ಆಗುತ್ತದೆ ಅದೇ ಸ್ವರ್ಗ. ಯಾವುದೂ ಸದಾ ಇರುವಂಥದಲ್ಲ. ಉಳಿವು, ಅಳಿವು ಇದ್ದೆ ಇದೆ. ಆದರೆ, ಅಳಿವೆ ಪ್ರಧಾನ ಆಗಕೂಡದು. ಹಾಗೆಯೆ ಬದುಕಲ್ಲಿ ಗೆಲುವು, ಯಶಸ್ಸು. ಅದರಿಂದ ನೀವು ವಿಚಲಿತರಾಗದೆ, ದೃಢ ಮನಸ್ಸಿನಿಂದ ಇರುವುದೆ ಉತ್ತಮ. ನಲವತ್ತರ ವಯಸ್ಸಲ್ಲೂ ನಿಮ್ಮ ದೇಹದ ಪ್ರಕೃತಿ ಹದಗೆಡುವುದಿಲ್ಲ. ಮನದ ಉಲ್ಲಾಸ, ತಿಳಿಹಾಸ್ಯಪ್ರವೃತ್ತಿ ನಿಮಗೆ ಒಂದು ಚೈತನ್ಯ. ಒಟ್ಟಾರೆ, ಮತ್ತೆ ಮತ್ತೆ ಯೋಚಿಸಿ. ಈ ಹತ್ತೂ ಅಂಶ, ನಿಮ್ಮ ಯೌವ್ವನದ ದಿನಗಳಲ್ಲೆ ರೂಢಿಸಿಕೊಳ್ಳಿ. ಹಾಗೆ ರೂಢಿಸಿಕೊಂಡಂತೆ ನಲವತ್ತರ ಮುನ್ನವೆ ಯಶಸ್ಸು ನಿಮಗೆ ಖಂಡಿತ! ಅಲ್ಲಿ ಅನುಮಾನಕ್ಕೆಡೆಯೆ ಇಲ್ಲ. ಮುಪ್ಪಿನ ಹಾದಿಯೆಡೆ ತಿರುಗುವ ಮೊದಲೆ ನಲವತ್ತು ನಿಮಗೆ ಗೆಲುವು ತರುತ್ತದೆ. ಆದರೆ, ಒಂದು, ಯಾವುದಕ್ಕೂ ಆಚರಣೆ ಮುಖ್ಯ ತಾನೆ?

ನಿನಗೆ ನೀನೇ, ಗೆಳೆಯ, ನಿನಗೆ ನೀನೇ!
ಅವರಿವರ ನಂಬುಗೆಯ ಮಳಲ ರಾಶಿಯ ಮೇಲೆ
ಬಾಳಮನೆಯನು ಮುಗಿಲಿಗೆತ್ತರಿಸಲಿಹೆಯಾ!
ನಿನಗೆ ನೀನೇ, ಗೆಳೆಯ, ನಿನಗೆ ನೀನೇ!

ಅನು : ಡಾ॥ ಎನ್. ಕೆ. ರಾಮಶೇಷನ್.

ಕಾಡಿನಲ್ಲಿ ಬೆಂಕಿ

ಡಾ|| ಕೋ. ಅ. ಕುಶಾಲಪ್ಪ

ಯಾವ ನಿಯಮಕ್ಕೂ ಒಳಪಡದೆ ಬೇಕಾಬಿಟ್ಟಿ ಬೆಳೆದು ದಟ್ಟೈಸಿರುವ ಸಸ್ಯಸಮುದ್ರವೇ ಕಾಡು ಎಂಬ ಭಾವನೆ ಬಹುಮಂದಿಗಿದೆ. Law of the jungle (ಕಾಡಿನ ನಿಯಮ) ಎಂಬ ಪದ ಸೂಚಿಸುವುದು ಗೊಂದಲವನ್ನು, ನಿಯಮರಾಹಿತ್ಯವನ್ನು. "ಕಾಡು ಕಡಿದು ನಾಡು ಕಟ್ಟು" ಎಂಬುದು ಚಿರಪರಿಚಿತ ನಾಣ್ಣುಡಿ. ಒಂದು ಕಾಲದಲ್ಲಿ ಭೂಮೇಲ್ಮೈಯನ್ನು ಗೊಂಡಾರಣ್ಯದ ಕವಚ ಆವರಿಸಿದ್ದಾಗ, ವನ್ಯಮೃಗಗಳು ವಿಪುಲ ಸಂಖ್ಯೆಯಲ್ಲಿ ವಿಹರಿಸುತ್ತಿದ್ದಾಗ ಮತ್ತು ಮಾನವಕುಲ ಅಲ್ಪಸಂಖ್ಯಾತವಾಗಿದ್ದು ಬದುಕಿನ ಹೋರಾಟ ಇತರ ಪ್ರಾಣಿಗಳಂತೆ ತೀವ್ರವಾಗಿದ್ದಾಗ ಇವೆಲ್ಲ ಅನುಭವೋಕ್ತಿಗಳೂ ಸಂಗತವಾಗಿದ್ದುವೋ ಏನೋ! ಆದರೆ ಇಂದು ಪರಿಸ್ಥಿತಿ ತೀರ ವಿರುದ್ಧವಾಗಿದೆ. "ಕಾಡು ಉಳಿದರೆ ನಾಡು, ನಾಡು ಉಳಿದರೆ ನಾನು!" ಆದ್ದರಿಂದ ಅಳಿದುಳಿದಿರುವ ಕಾಡನ್ನು ಕಾಪಾಡುವುದು ಮಾತ್ರವಲ್ಲ ಬೆಳೆಸಿ ವಿಸ್ತರಿಸುವುದು ಕೂಡ ಇಂದಿನ ಮಾನವನ ಗುರಿ ಆಗಲೇಬೇಕು. ಇಲ್ಲವಾದರೆ ಅವನ ಅಂತಿಮ ಗೋರಿ ಅತಿ ಶೀಘ್ರದಲ್ಲೇ ಎದುರಾಗುವುದು ಖಾತ್ರಿ. ಇಂದಿನ ಪ್ರಜ್ಞಾವಂತ ವ್ಯಕ್ತಿ ಕಾಡು ಉಳಿಸಲು ಕೈಗೊಳ್ಳಲೇಬೇಕಾದ ಒಂದು ಮುಖ್ಯ ಕಾರ್ಯಕ್ರಮದತ್ತ ನಮ್ಮ ಲಕ್ಷ್ಯ ಸೆಳೆಯುವ ಲೇಖನವಿದು.

ಸಾಧಾರಣ ಜನವರಿ ತಿಂಗಳಿಂದ ಸುಮಾರು ಮೇ ತಿಂಗಳ ಅಂತ್ಯದ ತನಕ ಕಾಡಿನಲ್ಲಿ ಎಲ್ಲಿನೋಡಿದರೂ ಬೆಂಕಿ ಬಿದ್ದ ಕುರುಹುಗಳು ಕಾಣುವುದೇ ಜಾಸ್ತಿ. ಅಲ್ಲಿಯೂ ಈ ವರ್ಷ ಬೆಂಕಿ ಹಾವಳಿ ಜಾಸ್ತಿಯಾದದ್ದು ಕಂಡುಬಂದಿದೆ. ಉಷ್ಣವಲಯದ ಕಾಡುಗಳಲ್ಲಿ, ಅಲ್ಲೂ ಎಲೆ ಉದುರುವ ಕಾಡುಗಳಲ್ಲಿ, ಈ ರೀತಿ ಬೆಂಕಿ ಕಾಣಿಸಿಕೊಳ್ಳುವುದು ಸಹಜ. ಇದು ಬರೀ ಕರ್ನಾಟಕದಲ್ಲೇ ಅಲ್ಲ, ಇಡೀ ರಾಷ್ಟ್ರದಲ್ಲಿಯೂ ಕಂಡುಬರುವ ಒಂದು ದೃಶ್ಯ. ಆಫ್ರಿಕಾ ಖಂಡ,

ಮೈಸೂರು ಆಕಾಶವಾಣಿಯಲ್ಲಿ ತಾ|| ೨೬-೪-೮೯ರಂದು ಪ್ರಸಾರವಾಗಿರುತ್ತದೆ.

ಥೈಲ್ಯಾಂಡ್, ಬರ್ಮಾ ಮೊದಲಾದ ದೇಶಗಳಲ್ಲೂ ಇದೇ ಸಮಸ್ಯೆ. ಅರಣ್ಯ ಇಲಾಖೆಯವರೇ ಈ ರೀತಿ ಕಾಡಿಗೆ ಬೆಂಕಿ ಹಚ್ಚುತ್ತಾರೆಂಬ ಮೂಢಕಲ್ಪನೆ ಹಿಂದಿನಿಂದಲೂ ಬಂದಿದೆ. ಹಲವಾರು ವರ್ಷಗಳ ಹಿಂದೆ, ಸಾಗುವಾನಿ ತೋಪುಗಳಲ್ಲೂ ಹಾಗೂ ಇತರ ಸ್ವಾಭಾವಿಕ ಅರಣ್ಯಗಳಲ್ಲೂ, ಜನವರಿ ತಿಂಗಳಲ್ಲಿ ಅರಣ್ಯ ಇಲಾಖೆಯವರೇ ಬೆಂಕಿ ಇಡುತ್ತಿದ್ದರು. ಒಣಗಿದ ಹುಲ್ಲು, ತರಗೆಲೆಗಳು ಆಗ ಸುಟ್ಟು, ಕಾಡಿನ ಮರಗಳಿಗೆ ಮುಂದೆ ಬೆಂಕಿ ಬಂದರೆ ಅಷ್ಟು ಅಪಾಯವಾಗುತ್ತಿರಲಿಲ್ಲ. ಅದನ್ನು ಈಗ ಸಂಪೂರ್ಣ ನಿಲ್ಲಿಸಲಾಗಿದೆ.

ನಮ್ಮ ರಾಜ್ಯದಲ್ಲಿ ಸಾಧಾರಣ ೩೮ ಲಕ್ಷ ಹೆಕ್ಟೇರು ಅರಣ್ಯ ಪ್ರದೇಶವಿದೆ. ಇದರಲ್ಲಿ ಶೇ. ೧೫ರಷ್ಟು ನಿತ್ಯ ಹಸುರೆಲೆ ಹಾಗೂ ಅರೆನಿತ್ಯಹಸುರೆಲೆ ಕಾಡುಗಳಿಂದ ಕೂಡಿದ್ದು, ಅಲ್ಲಿ ಬೆಂಕಿ ಬೀಳುವುದು ಅಸಾಧ್ಯ. ಆದರೂ ಬೆಟ್ಟಗಳಲ್ಲಿ ಆವರಿಸಿರುವ ಹುಲ್ಲುಗಾವಲುಗಳಿಗೆ ಹೊಂದಿಕೊಂಡು ಶೋಲಾ (Shola) ಕಾಡುಗಳು ಕಾಣಸಿಗುತ್ತವೆ. ಅವುಗಳಲ್ಲಿ ಗಿಡ ಮರಗಳು ಸಣ್ಣವಾಗಿದ್ದರೂ ವೈಜ್ಞಾನಿಕವಾಗಿ ಅವು ಅತಿ ವಿಶೇಷವಾದ ಕಾಡುಗಳು. ಹುಲ್ಲುಗಾವಲುಗಳಿಗೆ ಪ್ರತಿ ವರ್ಷ ಬೆಂಕಿ ಬೀಳುವಾಗ ಇಂಥ ಶೋಲಾ ಕಾಡುಗಳು ಕೆಲವೊಮ್ಮೆ ಸುತ್ತಲೂ ಬೆಂದು, ಅವುಗಳ ವಿಸ್ತೀರ್ಣ ಕಡಿಮೆಯಾಗುತ್ತ ಬರುತ್ತಿರುವುದು ಕಂಡುಬಂದಿದೆ. ಸುಮಾರು ೨೦ ಲಕ್ಷ ಹೆಕ್ಟೇರು ಉದುರೆಲೆ ಕಾಡು ಮತ್ತು ಮುಳ್ಳು ಕಾಡುಗಳಿಗೆ ಬೆಂಕಿ ಬೀಳುವುದು ಸಾಮಾನ್ಯ.

ಉದುರೆಲೆ ಕಾಡುಗಳಲ್ಲಿ ಜನವರಿ ತಿಂಗಳಿಂದ ಎಲ್ಲ ಜಾತಿಯ ಮರಗಳ ಎಲೆಗಳು ಒಣಗಿ ನೆಲಕ್ಕೆ ಉದುರುತ್ತವೆ. ಬೇಸಿಗೆ ವೇಳೆ ಭೂಮಿಯಲ್ಲಿ ತೇವದ ಅಭಾವ ಉಂಟಾಗುವುದರಿಂದ ಮರಗಳು ಪುನಃ ಮಳೆ ಬರುವತನಕ ಬದುಕಿರಲು ನಿಸರ್ಗವೇ ಶೋಧಿಸಿರುವ ಮಾರ್ಗವಿದು. ಇದರಿಂದ ಎಲೆಗಳ ಮೂಲಕ ನೀರು ವಾತಾವರಣಕ್ಕೆ ಬಿಡುವುದು ಕಡಿಮೆಯಾಗುವುದು. ಈ ರೀತಿ ತರಗೆಲೆ, ಒಣಗಿದ ಹುಲ್ಲು ಮೊದಲಾದವು ಕಾಡಿನ ಭೂಮಿಯ ಮೇಲೆ ಹರಡಿರುವುದರಿಂದ, ಒಂದು ಬೆಂಕಿ ಕಡ್ಡಿ ಗೀರಿದರೆ ಸಾಕು ಒಡನೆ ಬೆಂಕಿ ಹತ್ತಿಕೊಂಡು ಕಾಡೆಲ್ಲ ಹರಡಿ ಎಲ್ಲೂ ಒಣಗಿದ ಕಸಕಡ್ಡಿಗಳು ಸುಟ್ಟು ಬೂದಿಯಾಗುತ್ತವೆ. ಇಂಥ ಕಾಡಿನಲ್ಲಿರುವ ಮರಗಳಾದ ಸಾಗುವಾನಿ, ಮತ್ತಿ, ದಿಂಡುಗ, ಹೊನ್ನೆ ಮೊದಲಾದವುಗಳ ತೊಗಟೆ ದಪ್ಪವಾಗಿರುವುದರಿಂದ ಈ ರೀತಿ ನೆಲದ ಮೇಲೆ ಹರಡುವ ಬೆಂಕಿಯಿಂದ ಮರಗಳಿಗೆ ಯಾವ ಹಾನಿಯೂ ಉಂಟಾಗುವುದಿಲ್ಲ. ಮಳೆ ಬಂದೊಡನೆ ಪುನಃ ಮರಗಳು ಚಿಗುರಿ ಕಾಡೆಲ್ಲ ಹಚ್ಚಹಸಿರಾಗುತ್ತದೆ.

ಆದರೂ ಕಾಡಿನಲ್ಲಿ ಬೆಂಕಿ ಬೀಳುವುದರಿಂದ ಬೇರೆ ಹಲವಾರು ಅನಾಹುತಗಳಾಗುತ್ತವೆ. ಒಣಹುಲ್ಲು ಹಾಗೂ ಹಸಿರಾಗಿರುವ ಸಣ್ಣ ಸಣ್ಣ ಪೊದೆಗಳು ನಾಶವಾಗುವುದರಿಂದ ವನ್ಯ ಪ್ರಾಣಿಗಳಿಗೆ ಆಹಾರ ಸಿಗದಂತಾಗುತ್ತವೆ. ಬಿದಿರುಮೆಳೆಗಳು ಬೆಂದು ಕಾಡಾನೆಗಳಿಗೆ ಮೇವಿಲ್ಲದಂತಾಗುತ್ತದೆ. ಬೇಸಿಗೆ ಕಾಲದಲ್ಲಿ ಕಾಡಾನೆಗಳು ಬರೇ ಬೆಂಡೆ ಮರಗಳ ತೊಗಟೆಗಳನ್ನು ಸುಲಿದು ತಿಂದು ಮರಗಳನ್ನು ನಾಶ ಮಾಡಿರುವ ದೃಶ್ಯವನ್ನು ಕಾಡಿನಲ್ಲಿ ಎಲ್ಲೆಲ್ಲೂ ಕಾಣಬಹುದು. ದೊಡ್ಡ ಪ್ರಾಣಿಗಳಾದ ಆನೆ, ಹುಲಿ, ಕಾಡೆಮ್ಮೆ, ಚಿಗರೆಗಳು ಬೆಂಕಿಯ ಬೇಗೆಯನ್ನು ತಪ್ಪಿಸಿ ಓಡಿಹೋಗಬಹುದು. ಆದರೆ ಸಣ್ಣ ಪ್ರಾಣಿಗಳಾದ ಹಾವು, ಇಲಿ, ಪಕ್ಷಿ ಮರಿಗಳು, ಆಮೆ ಮೊದಲಾದವು ಅಲ್ಲೇ ಬೆಂದು ಹೋಗುವ ಪರಿಸ್ಥಿತಿಯೂ ಇದೆ. ಸ್ವಾಭಾವಿಕವಾಗಿ ಹುಟ್ಟಿ ಬೆಳೆದುಬರುವ

ಬೆಳೆ ಬಾಳುವ ಮರ ಗಿಡಗಳ ಸಂತತಿಯೂ ಬೆಂಕಿಯಲ್ಲಿ ಬೆಂದು ನಾಶವಾಗಿ ಕಾಡಿನಲ್ಲಿ ಯಾವುದೊಂದು ಸಣ್ಣ ಗಿಡವೂ ಇಲ್ಲದೆ ಅದು ಬರಡಾಗಿ ಕಾಣುತ್ತದೆ. ಅಲ್ಲದೆ ಬೆಂದ ಕಾಡಿನಲ್ಲಿ ಮೊದಲನೆಯ ಮಳೆ ಬರುವಾಗ ನೀರು ತಡೆ ಇಲ್ಲದೆ ಹರಿದು ಹುರಿದಿದ್ದ ಮಣ್ಣನ್ನು ಕೊಚ್ಚಿಕೊಂಡು ಬಂದು ಕೆರೆ, ನಾಲೆ, ನದಿಗಳಲ್ಲಿ ನೆರೆ ಬರುವಂತೆ ಮಾಡುತ್ತದೆ. ಮಣ್ಣಿನ ಸವಕಳಿಯೂ ಜಾಸ್ತಿಯಾಗಿ ಕೆರೆ, ಕಟ್ಟೆಗಳಲ್ಲಿ ಹೂಳು ತುಂಬಿ, ನೀರು ನಿಲ್ಲುವ ಪ್ರದೇಶ ಕಡಿಮೆಯಾಗುತ್ತದೆ. ಇದರಿಂದ ಬೇಸಿಗೆಯಲ್ಲಿ ಕಾಡಿನ ಕೆರೆ ಕಟ್ಟೆಗಳಲ್ಲಿ ನೀರಿಲ್ಲದಂತಾಗುವುದಲ್ಲದೆ, ಮೇವನ್ನೂ, ನೀರನ್ನೂ ಹುಡುಕಿಕೊಂಡು ಕಾಡು ಪ್ರಾಣಿಗಳು ಪಕ್ಕದ ನೀರಾವರಿ ಖಾಸಗಿ ಜಮೀನಿಗೆ ನುಗ್ಗಿ ಹಳ್ಳಿ ಹಳ್ಳಿಗಳಲ್ಲಿಯೂ ಕಾಣಿಸಿಕೊಳ್ಳುತ್ತವೆ. ಕಾಡಾನೆಗಳಿಗೆ ಒಮ್ಮೆ ಕಬ್ಬು, ರಾಗಿ, ಜೋಳ ಅಥವಾ ತೆಂಗಿನ ಮರಗಳ ರುಚಿಸಿಕ್ಕಿದರೆ ಪುನಃ ಪುನಃ ಅವು ಊರೊಳಗೆ ಬಂದು ಜಮೀನಿನಲ್ಲಿರುವ ಬೆಳೆಗಳನ್ನು ನಾಶಪಡಿಸುತ್ತವೆ. ಇದರಿಂದ ಬಡ ವ್ಯವಸಾಯಗಾರರಿಗೆ ವರ್ಷಂಪ್ರತಿ ನಷ್ಟವಾಗುವುದರಲ್ಲಿ ಸಂಶಯವಿಲ್ಲ. ಇಂಥ ಪರಿಸ್ಥಿತಿಯಲ್ಲಿ ಕಾಡು ಪ್ರಾಣಿಗಳು ಕಾಡಿನಲ್ಲಿ ನೀರಿರುವ ಕಡೆ ಎಂದರೆ ನದಿ ಅಥವಾ ಕೆರೆಗಳ ಸಮೀಪದಲ್ಲಿ ನೆಲಸುವುದರಿಂದ ಕಳ್ಳ ಬೇಟೆಗಾರರಿಗೆ ಅನುಕೂಲವಾದಂತಾಗುವುದು.

ಕಾಡಿನಲ್ಲಿ ಬೆಂಕಿ ಕಾಣಿಸಿಕೊಳ್ಳಲು ಕಾರಣಗಳು ಹಲವು—ಎಲ್ಲವೂ ನೈಸರ್ಗಿಕವಲ್ಲ. ಸುರಕ್ಷಿತ ಕಾಡುಗಳಲ್ಲಿ ಜನರು ತಿರುಗಾಡುವುದು, ಬೆಂಕಿ ಇಡುವುದು, ಜಾನುವಾರುಗಳನ್ನು ಮೇಯಿಸುವುದು ಮೊದಲಾದ ಕಾರ್ಯಗಳು ಕರ್ನಾಟಕ ಅರಣ್ಯ ಕಾಯಿದೆ ೨೪ರ ಪ್ರಕಾರ ನಿಷಿದ್ಧವಾಗಿವೆ, ಆದರೂ ಈಗಿನ ಜನಸಂಖ್ಯೆ ಹಾಗೂ ಜಾನುವಾರುಗಳ ಸಂಖ್ಯೆ ಅತಿಯಾಗಿ ಬೆಳೆದಿರುವುದರಿಂದ ಕಟ್ಟುನಿಟ್ಟಾಗಿ ನಿಷಿದ್ಧಗೊಳಿಸುವುದು ಅಸಾಧ್ಯವಾಗಿದೆ. ದನ ಮೇಯಿಸುವವರು ಕಾಡಿಗೆ ಬೆಂಕಿ ಇಡುವುದು ಎಲ್ಲೆಲ್ಲೂ ಕಂಡುಬಂದಿದೆ. ಇದರಿಂದ ಮಳೆ ಬಂದೊಡನೆ ಹಸಿ ಹುಲ್ಲು ಉತ್ತಮವಾಗಿ ಬೆಳೆದುಬರುತ್ತದೆಂಬ ಕಲ್ಪನೆಯೇನೋ ನಿಜ. ಹಲವು ಬಾರಿ ಕಾಡಿನಲ್ಲಿ ಬೆಂಕಿಯನ್ನು ನೋಡುವ ಚಟಕ್ಕೆ ಬೆಂಕಿ ಕೊಡುವವರೂ ಇದ್ದಾರೆ. ಸುರಕ್ಷಿತ ಕಾಡಿನಿಂದಲೂ ಒಣ ಕಟ್ಟಿಗೆಯನ್ನು ತಲೆ ಹೊರೆಯಲ್ಲಿ ಮುಫತ್ತಾಗಿ ತರಬಹುದೆಂದು ಸರ್ಕಾರದ ಆದೇಶವಿದೆ. ಇಂಥ ಬಡಜನರು ಕೂಡ ಕಾಡಿನೊಳಗೆ ಸರಾಗವಾಗಿ ನುಗ್ಗಲು ಬೆಂಕಿ ಇಡುತ್ತಾರೆ. ಅಲ್ಲದೆ ಕಾಡೊಳಗೆ ವಾಸಿಸುವ ಗಿರಿಜನರು ವನ್ಯ ಪ್ರಾಣಿಗಳ ಹಾವಳಿ ತಪ್ಪಿಸಿಕೊಳ್ಳಲೂ ಅಥವಾ ನೆಲ್ಲಿ, ಅಳಲೆ, ತಾರೆಕಾಯಿ, ಜೇನು, ಪೊರಕೆ ಹುಲ್ಲು, ಸಾಗುವಾನಿ ಬೀಜ, ಜಿಂಕೆ ಕೊಂಬು ಮೊದಲಾದವನ್ನು ಸಲೀಸಾಗಿ ನೆಲದಿಂದ ಆರಿಸಿ ತೆಗೆಯುವ ಸಲುವಾಗಿ ಕಾಡಿನ ನೆಲದಲ್ಲಿ ಬಿದ್ದಿರುವ ತರಗೆಲೆ ಅಥವಾ ಮುಳ್ಳು ಪೊದೆಗಳನ್ನು ನಾಶಪಡಿಸಲು ಬೆಂಕಿ ಇಡುತ್ತಾರೆ. ಗಿರಿಜನರು ತಮ್ಮ ಮನೆ ಮಠಗಳ ಸುತ್ತಲೂ ಕಾಡು ಪ್ರಾಣಿಗಳು ಬರದಂತೆ ತಡೆಯಲು ಸಹ ಬೆಂಕಿ ಹಾಕುತ್ತಾರೆ. ಸ್ವಾಭಾವಿಕವಾಗಿ ಬೆಂಕಿ ಬೀಳಬಹುದಾದರೂ, ಆ ರೀತಿಯ ಬೆಂಕಿ ಕಾಡಿನಲ್ಲಿ ಕಾಣಿಸಿಕೊಳ್ಳುವುದು ತೀರ ವಿರಳ.

ಕಾಡಿನಲ್ಲಿ ಬೆಂಕಿ ಬರದಂತೆ ತಡೆಯಲು ಅರಣ್ಯ ಇಲಾಖೆಯವರು ಹಲವಾರು ಕಾರ್ಯಕ್ರಮಗಳನ್ನು ಬೇಸಿಗೆಕಾಲದಲ್ಲಿ ಕೈಗೊಳ್ಳುತ್ತಾರೆ. ಜನವರಿ ತಿಂಗಳಿಂದ ಮೇ ತಿಂಗಳತನಕ ಅಂದರೆ ಮೊದಲನೆಯ ಮುಂಗಾರು ಮಳೆ ಬರುವತನಕ, ಬೆಂಕಿಯನ್ನು

ನಂದಿಸಿ, ಕಾಡನ್ನು ರಕ್ಷಿಸಲು ಹಲವಾರು ಬೆಂಕಿ ಕಾವಲುಗಾರರನ್ನು ದಿನಗೂಲಿ ಮೇರೆಗೆ ಕೆಲಸದಲ್ಲಿ ನಿಯಮಿಸುತ್ತಾರೆ. ಎಲ್ಲೆಲ್ಲಿ ಬೆಂಕಿ ಬೀಳಬಹುದೆಂಬ ಅನುಮಾನ ಬರುತ್ತೋ ಅಲ್ಲಿ ಅವರನ್ನು ಇರಿಸಿ, ಬೆಂಕಿ ಕಂಡೊಡನೆ ಆ ಸ್ಥಳಕ್ಕೆ ಧಾವಿಸಿ ನಂದಿಸಲು ಆದೇಶ ನೀಡುತ್ತಾರೆ. ರಸ್ತೆಯ ಇಕ್ಕಡೆಗಳಲ್ಲಿ, ಕಾಡಿನ ಮಧ್ಯೆ ಹಾದುಹೋಗುವ ಬೆಂಕಿ ಲೈನುಗಳಲ್ಲಿ, ನೆಡು ತೋಪುಗಳ ಸುತ್ತಲೂ, ಗಿಡಪೊದೆ, ಹುಲ್ಲನ್ನು ಕತ್ತರಿಸಿ ಜನವರಿ ತಿಂಗಳಲ್ಲಿ ಬೆಂಕಿ ಕೊಟ್ಟು ಸುಟ್ಟು ಸ್ವಚ್ಛ ಮಾಡಿ ಇಡುತ್ತಾರೆ. ಇದರಿಂದ ಬೆಂಕಿ ಒಂದು ಕಾಡಿನಿಂದ ಇನ್ನೊಂದು ಕಾಡಿಗೆ ಹಬ್ಬದಂತೆ ತಡೆಯಬಹುದು. ನೆಡುತೋಪುಗಳ ಸುತ್ತಲೂ ದನ ತಡೆಯುವ ಕಂದಕಗಳ ಮಣ್ಣು ಗುಡ್ಡೆಯ ಮೇಲೂ ಕತ್ತಾಳೆ ಗಿಡ ಗಳನ್ನು ಪಕ್ಕ ಪಕ್ಕದಲ್ಲಿ ಬೆಳೆಸಿ, ಬೆಂಕಿ ದಾಟದಂತೆ ಮಾಡುತ್ತಾರೆ.

ಇಂಥ ಪರಿಸ್ಥಿತಿಯ ಕಾಲದಲ್ಲಿ ಕಾಡುಪ್ರಾಣಿಗಳು ಖಾಸಗಿ ಜಮೀನುಗಳಿಗೆ ಬಂದು ಬೆಳೆಯನ್ನು ಹಾನಿ ಮಾಡಿದರೆ, ಅದಕ್ಕೆ ತಕ್ಕ ಪರಿಹಾರವನ್ನು ಅರಣ್ಯ ಇಲಾಖೆಯವರು ನೀಡುತ್ತಾರೆ. ಹುಲಿ, ಚಿರತೆ ಮೊದಲಾದ ಕಾಡುಪ್ರಾಣಿಗಳು ಊರಿಗೆ ಬಂದು ದನ, ಆಡು ಮೊದಲಾದವನ್ನು ಹೊಡೆದುಕೊಂಡು ತಿಂದರೆ, ಅದಕ್ಕೂ ಪರಿಹಾರಧನ ಉಂಟು. ಈ ಮೂಲಕ ಜನರ ಸಹಾಯವನ್ನು ಸಹಾನುಭೂತಿಯನ್ನೂ ಅರಣ್ಯ ಇಲಾಖೆ ಪಡೆಯುವುದರಲ್ಲಿ ಯಶಸ್ವಿಯಾಗಿದೆ. ಕಾಡಿನ ಸುತ್ತಮುತ್ತ ವಾಸವಿರುವವರಿಗೆ ಕಾಡಿನಿಂದ ಹಲವಾರು ಸೌಲಭ್ಯಗಳನ್ನು ಒದಗಿಸುವಂತೆ ಸರ್ಕಾರದ ಆದೇಶವಿದೆ. ಅಂಥವರು ಕಾಡಿಗೆ ಬೆಂಕಿ ಬಿದ್ದ ಸಮಯದಲ್ಲಿ ಅರಣ್ಯ ಇಲಾಖೆಯವರೊಡನೆ ಸಹಕರಿಸಿ, ಬೆಂಕಿ ನಂದಿಸಲು ಸಹಾಯ ಮಾಡಬೇಕು. ಇಲ್ಲವಾದರೆ ಕೊಟ್ಟಿರುವ ಸೌಲಭ್ಯಗಳನ್ನು ಮೊಟಕುಗೊಳಿಸಬಹುದು, ಅಥವಾ ಕರ್ನಾಟಕ ಅರಣ್ಯ ಕಾಯಿದೆ ಪ್ರಕಾರ ಅವರಿಗೆ ಶಿಕ್ಷೆಗಳನ್ನು ವಿಧಿಸಬಹುದು. ಜನರ ಸಹಕಾರವಿಲ್ಲದೆ ಅರಣ್ಯವನ್ನು ಯಾವ ರೀತಿಯಲ್ಲೂ ಕಾಪಾಡುವುದು ಕಷ್ಟ. ಇಂದು ಕಾಡು ಪ್ರದೇಶಗಳಲ್ಲಿ ಬೆಂಕಿ ಬೀಳುವುದಕ್ಕೆ ಜನರಿಗೆ ಕಾಡಿನ ಬಗ್ಗೆ ಇರುವ ಅಜ್ಞಾನವೇ ಕಾರಣ. ಜನರಿಗೆ ಕಾಡಿನ ಬಗ್ಗೆ ಅದರ ಪ್ರತ್ಯಕ್ಷ ಹಾಗೂ ಪರೋಕ್ಷ ಉಪಯೋಗಗಳ ಬಗ್ಗೆ ಹೆಚ್ಚಿನ ತಿಳುವಳಿಕೆ ಮೂಡಿಸಬೇಕು. ಅವರಿಗೆ ಜ್ಞಾನೋದಯವಾದಲ್ಲಿ ಅರಣ್ಯ ಇಲಾಖೆಯವರ ಕೆಲಸ ಸುಗಮವಾಗುವುದು. ಈ ದಿಶೆಯಲ್ಲಿ ರೇಡಿಯೋ ಮತ್ತು ದೂರದರ್ಶನ ಮೂಲಕ ಕಾಡನ್ನು ಕಾಪಾಡುವ ಬಗ್ಗೆ ಪ್ರಚಾರ ನಡೆಯುತ್ತಲೇ ಇವೆ. ಕೈ ಚೀಟಿಗಳನ್ನು ಬಿಡುಗಡೆ ಮಾಡಿ, ಕಾಡಿಗೆ ಬೆಂಕಿಯಿಂದ ಆಗುವ ಆಪತ್ತನ್ನು ಜನರಿಗೆ ತಿಳಿಸಲಾಗುತ್ತಿದೆ. ಕಾಡಿನ ರಕ್ಷಣೆಯ ಬಗ್ಗೆ ಉತ್ತಮ ಕೆಲಸ ಮಾಡಿದವರಿಗೆ ಬಹುಮಾನಗಳನ್ನು ಕೊಡುವ ಪದ್ಧತಿ ಕೂಡ ಇದೆ.

ಅಭಿವೃದ್ಧಿಹೊಂದಿದ ರಾಷ್ಟ್ರಗಳಲ್ಲಿ ಕಾಡನ್ನು ಬೆಂಕಿಯಿಂದ ರಕ್ಷಿಸಲು ಅತ್ಯಾಧುನಿಕ ವ್ಯವಸ್ಥೆಗಳಿವೆ. ಸೂಜಿಮೊನೆ ಎಲೆ ಕಾಡುಗಳಲ್ಲಿ ಂಕಿ ಬಂದರೆ ಇಡೀ ಮರಗಳ ಸಮೂಹವೇ ಬೆಂದುಹೋಗುತ್ತವೆ. ಇದರಿಂದ ಭಾರಿ ನಷ್ಟವುಂಟಾಗುತ್ತದೆ. ಈ ರೀತಿಯ ಕಾಡುಗಳು ನಮ್ಮ ರಾಷ್ಟ್ರದಲ್ಲಿ ಹಿಮಾಲಯದ ತಪ್ಪಲಲ್ಲಿ ಸಾಧಾರಣ ೩೦೦೦ ಮೀಟರ್ ಎತ್ತರದವರೆಗೆ ಕಾಣಬಹುದು. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಅಲ್ಲಲ್ಲಿ ಎತ್ತರವಾದ ವೀಕ್ಷಣಾ ಗೋಪುರಗಳನ್ನು ಕಟ್ಟಿ ಅಲ್ಲಿ ನಿಸ್ತಂತು ಯಂತ್ರಗಳನ್ನು ಅಳವಡಿಸಿ, ಹಗಲು ರಾತ್ರಿ ಜನ ಕಾವಲು ಕಾಯುತ್ತಾರೆ. ಎಲ್ಲಾದರೂ ಹೊಗೆ

ಕಂಡರೆ ಕೂಡಲೇ ಕಾವಲುಗಾರರು ನಿಸ್ತಂತುಗಳ ಮೂಲಕ ಅಧಿಕಾರಿಗಳ ಕಛೇರಿಗೂ ಅಥವಾ ನಿವಾಸಕ್ಕೂ ಸಂದೇಶ ಕೊಡುತ್ತಾರೆ. ರಸ್ತೆಪಕ್ಕದಲ್ಲಾಗಿದ್ದರೆ ಜೀಪು, ಲಾರಿಗಳಲ್ಲೂ, ದೂರ ಬೆಟ್ಟದ ಮೇಲೆ ಬೆಂಕಿ ಕಂಡುಬಂದಿದ್ದರೆ ಹೆಲಿಕಾಪ್ಟರ್‌ನಲ್ಲೂ ಸ್ಥಳಕ್ಕೆ ಧಾವಿಸಿ, ಬೆಂಕಿಯನ್ನು ಆರಿಸಲು ನೀರೆರೆಯುವುದು, ಇತರ ರಾಸಾಯನಿಕಗಳನ್ನು ಸಿಂಪಡಿಸುವುದು ಮೊದಲಾದ ಕಾರ್ಯ ಕೈಗೊಳ್ಳುತ್ತಾರೆ. ಪ್ರತಿ ವರ್ಷ ಎಲ್ಲೆಲ್ಲಿ ಬೆಂಕಿ ಬಿದ್ದಿವೆಯೆಂದು ಅವರು ಭೂಪಟಗಳಲ್ಲಿ ನಮೂದಿಸಿ ಇನ್ನುಮುಂದೆ ಅಂಥ ಸ್ಥಳಗಳಲ್ಲಿ ಹೆಚ್ಚಾಗಿ ಕಾವಲು ಪಡೆಯನ್ನು ಇಡುತ್ತಾರೆ.

ನಮ್ಮ ರಾಷ್ಟ್ರದಲ್ಲಿ ಅಂಥ ಸೌಕರ್ಯಗಳು ಇನ್ನೂ ಬಂದಿಲ್ಲ. ಅವುಗಳಿಗೆ ಬಹುಶಃ ಬಹಳ ಹಣ ಖರ್ಚಾಗಬಹುದು. ಈಗಾಗಲೇ ಉತ್ತರಪ್ರದೇಶ ಮತ್ತು ಮಹಾರಾಷ್ಟ್ರಗಳಲ್ಲಿ ಪ್ರಾಯೋಗಿಕವಾಗಿ ಈ ರೀತಿಯ ಬೆಂಕಿ ಆರಿಸುವ ಮತ್ತು ತಡೆಯುವ ವಿಧಾನವನ್ನು ಪರರಾಷ್ಟ್ರಗಳ ಸಹಕಾರಗಳೊಂದಿಗೆ ಅನುಸರಿಸುತ್ತಿದ್ದಾರೆ. ನಮ್ಮಲ್ಲಿ ಬೆಂಕಿ ಕಾವಲುಗಾರರು ಉದ್ದವಾದ ಹಸಿರು ರೆಂಬೆಗಳನ್ನೋ, ಕೋಲುಗಳನ್ನೋ ಮುರಿದುಕೊಂಡು ಬೆಂಕಿ ಆರಿಸುತ್ತಾರೆ. ಬೆಂಕಿ ಜಳ ಹೆಚ್ಚಾಗಿದ್ದರೆ ಅವುಗಳ ಹತ್ತಿರ ಹೋಗಿ ನಂದಿಸುವುದು ಅಸಾಧ್ಯ. ಕಾಡುಗಳಲ್ಲಿ ಬೆಂಕಿ ಕಾಣಿಸಿದ ಹತ್ತಿರದಲ್ಲಿ ನೀರು ಸಿಗುವುದು ಅಪರೂಪ. ಸಿಕ್ಕಿದರೂ ಅದನ್ನು ತಂದು ಎರೆಚಲು ಯಂತ್ರ ಸಾಮಗ್ರಿಗಳಿರುವುದಿಲ್ಲ. ಇದ್ದರೂ ಅವುಗಳನ್ನು ಲಾರಿ, ಜೀಪುಗಳಿಗೆ ಅಳವಡಿಸಿ ಒಯ್ಯಬೇಕಾಗುತ್ತದೆ. ಬೆಂಕಿ ಕಂಡ ಕಡೆ ರಸ್ತೆಗಳಿರುವುದಿಲ್ಲ. ಕಾವಲುಗಾರರು ಕಾಲ್ನಡಿಗೆಯಲ್ಲೇ ಹೋಗಿ ಬೆಂಕಿ ಆರಿಸಬೇಕಾಗುತ್ತದೆ. ಒಮ್ಮೊಮ್ಮೆ ಬೆಂಕಿ ಜಳ ಜಾಸ್ತಿಯಾಗಿ ಹರಡಿಬರುತ್ತಿದ್ದರೆ, ಅದನ್ನು ಎದುರಿಸಿ ನಿಲ್ಲಿಸಲು ಕಾವಲುಗಾರರೇ ಬೆಂಕಿಕೊಟ್ಟು ಮುಂದು ಬರುತ್ತಿರುವ ಬೆಂಕಿ ನಂದುವಂತೆ ಮಾಡಬೇಕಾಗುತ್ತದೆ. ಇಂಥ ಕಾರ್ಯ ನಡೆಯುತ್ತಿರುವಾಗ ವಿಪರೀತ ಬಾಯಾರಿಕೆಯಾಗುವುದರಿಂದಲೂ ಸಾಕಷ್ಟು ವೇಳೆ ಹಿಡಿಯುವುದರಿಂದಲೂ ನೀರು ಆಹಾರ ಎಲ್ಲವನ್ನೂ ಸ್ಥಳಕ್ಕೆ ತಲಪಿಸುವ ವ್ಯವಸ್ಥೆ ಮಾಡಬೇಕಾಗುತ್ತದೆ. ಒಂದು ವೇಳೆ ರಾತ್ರಿ ಬೆಂಕಿ ಬಿದ್ದರೆ, ಅಲ್ಲಿಗೆ ಕಣ್ಣು ಕಾಣದ ಸ್ಥಿತಿಯಲ್ಲಿ ತಲಪಿ, ಬೆಂಕಿ ಆರಿಸುವಷ್ಟರಲ್ಲಿ ಹಲವಾರು ಗಂಟೆ ಕಳೆದಿರುತ್ತವೆ. ಹಾಗೂ ಹಲವಾರು ಹೆಕ್ಟೇರು ಪ್ರದೇಶವನ್ನು ಬೆಂಕಿ ನಾಶಮಾಡಿರುತ್ತದೆ. ಆದರೂ ಅರಣ್ಯ ಇಲಾಖೆಯವರ ಪರಿಶ್ರಮದಿಂದ ಕಾಡಿಗೆ ಬೀಳುತ್ತಿರುವ ಬೆಂಕಿ ಬಹಳ ಕಡಿಮೆಯಾಗುತ್ತಿದೆ. ಜನರಿಗೆ ಅದರ ಬಗ್ಗೆ ತಿಳುವಳಿಕೆ ಬರುತ್ತಿದೆ. ಕಳೆದ ವರ್ಷ ಹೆಚ್ಚಾಗಿ ಮಳೆಯಾಗಿರುವುದರಿಂದ ಹುಲ್ಲು, ಸಸಿಗಳು ಹುಲಸಾಗಿ ಬೆಳೆದುಬಂದಿತ್ತು. ಆದರೆ ಕಳೆದ ಸೆಪ್ಟೆಂಬರಿನಿಂದ ಎಲ್ಲ ಕಡೆ ಮಳೆ ಬೀಳದೆ ಇರುವುದರಿಂದ ಬೆಂಕಿಯ ಜಳ ಜಾಸ್ತಿಯಾಗಿ ಸಾಧಾರಣಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಬೆಂಕಿ ಈ ವರ್ಷ ಕಾಣಿಸಿಕೊಂಡಿದೆ. ಶೇಕಡ ಸುಮಾರು ೧೦ರಷ್ಟು ಕಾಡು ಪ್ರದೇಶ ಈಗಾಗಲೇ ಬೆಂದುಹೋಗಿದೆ ಎಂದು ಅಂದಾಜು ಮಾಡಲಾಗಿದೆ. ಇದನ್ನೆಲ್ಲ ತಡೆಗಟ್ಟಲು ಜನರ ಸಹಾಯ ಅಗತ್ಯ. ಅವರ ಸ್ವಪ್ರೇರಣೆಯಿಂದಲೇ ಈ ಕಾರ್ಯ ಯಶಸ್ವಿಯಾಗಬೇಕು. ಬೆಂಕಿ ಕಾಡಿಗೆ ಅಪಾಯ. ಬೆಂಕಿ ನಂದಿಸಿ, ಕಾಡನ್ನು ಕಾಪಾಡಿ. ಕಾಡಿದ್ದರೆ ನಾಡು, ನಾಡಿದ್ದರೆ ನಾವು.

ಶಿಕ್ಷಣ ಚಿಂತಕರು

[ರೂಸೋ, ಡಾ|| ಮರಿಯಾ ಮಾಂಟಿಸರಿ, ಫ್ರೋಬೆಲ್]

ಕೆ. ಎನ್. ರಾಜಶೇಖರಯ್ಯ

ಶಿಶು ಕೇಂದ್ರೀಕೃತ ಶಿಕ್ಷಣ ಪದ್ಧತಿಯ ಜನಕ ಜೀನ್ ಜ್ಯಾಕ್ಸ್ ರೂಸೋ

೧೮ನೇ ಶತಮಾನವು ಯುರೋಪಿನ ಇತಿಹಾಸದಲ್ಲಿ ಚಿರಸ್ಮರಣೀಯ ವಾದುದು. ಈ ಅವಧಿಯಲ್ಲಿ ಫ್ರಾನ್ಸ್‌ದೇಶದ ಆರ್ಥಿಕ, ಸಾಮಾಜಿಕ ರಾಜಕೀಯ ಕ್ಷೇತ್ರಗಳು ಹದಗೆಟ್ಟು, ರಾಜನ ನಿರಂಕುಶ ದಬ್ಬಾಳಿಕೆ ಯಿಂದ ಜನಸಾಮಾನ್ಯರ ಸ್ಥಿತಿ ಚಿಂತಾಜನಕವಾಗಿತ್ತು. ಅವರ ಸಂಕಷ್ಟಗಳನ್ನು ಕೇಳುವವರಿಲ್ಲದೆ ದುಃಖ, ಅತೃಪ್ತಿ, ಬಡತನ ಹೆಚ್ಚಿ ಮುಗಿಲು ಮುಟ್ಟಿತ್ತು. ಇಂಥ ಸನ್ನಿವೇಶದಲ್ಲಿ ರೂಸೋನ ದಿವ್ಯ ಮಂತ್ರಗಳಾದ ಸ್ವಾತಂತ್ರ್ಯ–ಸಮಾನತೆ–ಭ್ರಾತೃತ್ವ ತತ್ವಗಳು ಅಮರ ಸಂದೇಶಗಳಾಗಿ ಜನರು ದಂಗೆ ಏಳುವಂತೆ ಪ್ರಭಾವ ಬೀರಿ ದುವು. ಫ್ರಾನ್ಸಿನ ಕ್ರಾಂತಿಗೆ ಈ ತತ್ವಗಳು ನಾಂದಿ ಆದುವು. ಮತ್ತೆ ಈ ತತ್ವಗಳೇ ಅಮೇರಿಕಾ ಕ್ರಾಂತಿಗೂ ಕಾರಣವಾದುವು.

ರೂಸೋ ೧೭೧೨ರಲ್ಲಿ ಜಿನಿವಾದಲ್ಲಿ ಜನಿಸಿದನು. ಚಿಕ್ಕ ವಯಸ್ಸಿನಲ್ಲಿ ತಾಯಿಯನ್ನು ಕಳೆದುಕೊಂಡನು. ತಂದೆ ಸೋಮಾರಿ ಆಗಿದ್ದನು. ಹೀಗಾಗಿ ಬೇರೆಯವರ ಆಶ್ರಯದಲ್ಲಿ ಬೆಳೆಯಬೇಕಾಯಿತು. ರೂಸೋಗೆ ಬಾಲ್ಯದಲ್ಲಿ ಉತ್ತಮ ಶಿಕ್ಷಣ ದೊರೆಯಲಿಲ್ಲವಾದ್ದರಿಂದ ಸೋಮಾರಿ ಆಗಿ ಗೊತ್ತುಗುರಿ ಇಲ್ಲದೆ ಅಲೆದನು. ರೂಸೋ ಆ ವಯಸ್ಸಿನಲ್ಲಿ ಯಾವ ಕೆಲಸಕ್ಕೂ ಬಾರದವನಾದ್ದರಿಂದ ಅವನಿಗೆ ಯಾವ ವೃತ್ತಿಯೂ ಸರಿಬೀಳುತ್ತಿರಲಿಲ್ಲ. ಇದೇ ಸಂದರ್ಭದಲ್ಲಿ ರೂಸೋನ ಜೀವನಕ್ಕೆ ಹೊಸ ತಿರುವನ್ನು ನೀಡಬಲ್ಲಂಥ ಕ್ರೈಸ್ತ ಪಾದ್ರಿಯೊಬ್ಬನು ಆಕಸ್ಮಿಕವಾಗಿ ಪರಿಚಯವಾದನು. ತನ್ನನ್ನು ಸಂಕಷ್ಟದಿಂದ ಪಾರುಮಾಡಿದ ಆ ಪಾದ್ರಿಯ ಉದಾರತೆ ರೂಸೋನ ಮನಸ್ಸನ್ನು ಕರಗಿಸಿತು. ಅವನ ಬಗ್ಗೆ ಗೌರವ ಭಾವನೆ

ಉಂಟಾಯಿತು. ಪಾದ್ರಿಯ ಮೂಲಕ ವಾರೆನ್ಸ್ ಎಂಬುವಳ ಪರಿಚಯವಾಯಿತು. ಈ ಪರಿಚಯ ತರವಾಯ ಪ್ರೇಮವಾಗಿ ಪರಿಣಮಿಸಿತು. ಪರಿಣಾಮ ರೂಸೋನ ಭವಿಷ್ಯ ವನ್ನು ರೂಪಿಸುವಲ್ಲಿ ಅವಳು ಪ್ರಮುಖ ಪಾತ್ರವಹಿಸಿದಳು. ಹೀಗಾಗಿ, ಅವಳ ವ ಕ್ತಿತ್ವಕ್ಕೆ ಮಾರುಹೋದನು. ಅವಳ ಇಚ್ಛೆಯಂತೆ ನಡೆಯತೊಡಗಿದನು. ಧರ್ಮ–ಸಾಹಿತ್ಯ–ಸಂಗೀತಗಳ ಬಗ್ಗೆ ಪರಸ್ಪರ ಚರ್ಚಿಸುತ್ತಿದ್ದರು.

ಬಾಲ್ಯದಿಂದಲೂ ಸೋಮಾರಿತನ ಮತ್ತು ಚಂಚಲ ಪ್ರವೃತ್ತಿಯನ್ನು ಬೆಳೆಸಿ ಕೊಂಡಿದ್ದ ರೂಸೋ ಮತ್ತೆ ಅಲೆಯಲಾರಂಭಿಸಿದನು. ಹೀಗೆ ಅಲೆಯುವುದನ್ನು ಸಹಿಸಿ ಕೊಳ್ಳದ ವಾರೆನ್ಸ್ ಇವನ ಸಂಬಂಧವನ್ನು ಪೂರ್ಣ ಕಡಿದುಕೊಂಡಳು. ಅಂದಿನಿಂದ ಅವನಿಗೆ ಪುಸ್ತಕಗಳೇ ಸಂಗಾತಿ ಆದವು. ಮತ್ತೆ ಅಲೆಯುತ್ತ ಪ್ಯಾರಿಸ್ಸನ್ನು ಸೇರಿದ ರೂಸೋ ಬಿಕ್ಷಾಟನೆ ಮಾಡುತ್ತಲೇ ಹಾಡುಗಳನ್ನು ಲೇಖನಗಳನ್ನು ಬರೆದು ಮಾರ ತೊಡಗಿದನು. ಇದರಿಂದ ಬಂದ ಹಣದಿಂದ ತನ್ನ ಹಸಿವನ್ನು ನೀಗಿಸಿಕೊಳ್ಳುತ್ತಿದ್ದನು. ಏನೇ ಆಗಲಿ ರೂಸೋವಿನ ಜೀವನ ಅತೀ ಕಷ್ಟವಾಗಿತ್ತು. ಅವನು ತನ್ನ ಬದುಕಿನ ಅಂತ್ಯದವರೆವಿಗೂ ಅನುಸರಿಸಿಕೊಂಡು ಬಂದ ಅವನ ಬದುಕಿನ ಪುಟಗಳು ವೈವಿಧ್ಯಮಯ ವಾಗಿದ್ದು ವು ಕೊನೆಗೆ ೧೭೭೮ರಲ್ಲಿ ತನ್ನ ಕೊನೆ ಉಸಿರೆಳೆದನು.

೧೭೪೯ರಲ್ಲಿ ಫ್ರಾನ್ಸಿನ ದಿ ಜೇನ್ ಅಕಾಡಮಿಯು "ವಿಜ್ಞಾನ ಮತ್ತು ಕಲೆಯ ಬೆಳವಣಿಗೆಯಿಂದ ಜನರ ನೀತಿ ಕೆಟ್ಟಿತೆ ಅಥವಾ ಮಾರ್ಪಾಟಾಯಿತೆ"—ಎಂಬ ವಿಷಯದ ಬಗ್ಗೆ ಪ್ರಬಂಧ ಸ್ಪರ್ಧೆಯನ್ನೇರ್ಪಡಿಸಿತು. ಈ ಸ್ಪರ್ಧೆಯಲ್ಲಿ ಗೆದ್ದ ರೂಸೋ ಒಮ್ಮೆಗೆ ವಿಶ್ವವಿಖ್ಯಾತನಾದನು. ರೂಸೋ ತನ್ನ ಪ್ರಬಂಧದಲ್ಲಿ ಕಲೆ ಮತ್ತು ವಿಜ್ಞಾನಗಳು ಅಭಿವೃಕ್ತ ಹೊಂದಿದಂತೆಲ್ಲಾ ನಮ್ಮ ಬುದ್ಧಿ ತಪ್ಪು ಹಾದಿ ಹಿಡಿಯುತ್ತ ಸಭ್ಯತೆ ಮತ್ತು ಸೋಗಿನ ಹಿಂದೆ ದ್ವೇಷ, ಅಸೂಯೆ, ಮೋಸ, ದಗ, ವಂಚನೆ, ಮುಂತಾದ ಕೆಟ್ಟ ಭಾವನೆ ಗಳು ಮನುಷ್ಯನಲ್ಲಿ ಮನೆಮಾಡಿಕೊಂಡಿವೆ ಎಂದು ಪ್ರತಿಪಾದಿಸಿದ್ದಾನೆ.

ರೂಸೋ ಇಂದು ನಮ್ಮೆದುರಿಗೆ ಇಲ್ಲವಾದರೂ ಅವನ ಬರವಣಿಗೆಗಳು ಜೀವಂತ ವಾಗಿವೆ ಎನ್ನುವುದಕ್ಕೆ ಅವನ ಕೃತಿಗಳೇ ಸಾಕ್ಷಿ. ರೂಸೋನ ಮುಖ್ಯ ಕೃತಿಗಳೆಂದರೆ ಸೋಷಿಯಲ್ ಕಾಂಟ್ರಾಕ್ಟ್, ಎಮಿಲಿ, ಕನ್‌ಫೆಶನ್ ಇತ್ಯಾದಿ.

'ಸಾಮಾಜಿಕ ಒಪ್ಪಂದ' ಕೃತಿಯ ಆರಂಭದಲ್ಲಿ ರೂಸೋ ಮನುಷ್ಯ ಸ್ವತಂತ್ರನಾಗಿ ಹುಟ್ಟುತ್ತಾನೆ. ಆದರೆ ಅನಂತರ ಸಮಾಜದ ಸಂಕೋಲೆಗಳಿಂದ ಬಂಧಿತನಾಗುತ್ತಾನೆ ಎಂದು ವಿವರಿಸಿದ್ದಾನೆ. ಹೀಗಾಗಿ ಇಂದಿಗೂ ಈ ಕೃತಿ ರೂಸೋನ ಹೆಸರನ್ನು ಅಮರ ವಾಗಿಸಿದೆ. ಈ ಕೃತಿ ಪ್ರಕಟವಾದ ತಕ್ಷಣ ಫ್ರಾನ್ಸ್ ಸರಕಾರ ರೂಸೋನ ಬಂಧನಕ್ಕೆ ಆಜ್ಞೆ ಹೊರಡಿಸಿತು. ಆಗ ರೂಸೋ ಇಂಗ್ಲೆಂಡಿಗೆ ಪಲಾಯನ ಮಾಡಿದನು. ಇಂಗ್ಲೆಂಡಿ ನಲ್ಲಿದ್ದ ಆ ಸಮಯದಲ್ಲಿ 'ಎಮಿಲಿ' ಎಂಬ ಶಿಕ್ಷಣ ಕೃತಿಯನ್ನು ಬರೆದನು.

'ಎಮಿಲಿ' ಕಾಲ್ಪನಿಕ ಕಥಾನಕವಾಗಿದೆ. ಎಮಿಲಿ ಎಂಬ ಹೆಸರಿನ ವ್ಯಕ್ತಿ ರೂಸೋನ ಕಲ್ಪನೆಯ ಕೂಸು. ಎಮಿಲಿ ತಂದೆ–ತಾಯಿಗಳಿಲ್ಲದ ಅನಾಥಮಗು. ಈ ಮಗುವಿನ ಶಿಕ್ಷಣದ ಹೊಣೆಯನ್ನು ಆದರ್ಶ ಶಿಕ್ಷಕನು ವಹಿಸಿಕೊಳ್ಳುತ್ತಾನೆ. ಪೂರ್ವ ಬಾಲ್ಯಾವಸ್ಥೆ ಯಿಂದ ಪ್ರೌಢಾವಸ್ಥೆಯವರೆಗೆ ಎಮಿಲಿ ಹೇಗೆ ಬೆಳೆಯುತ್ತಾನೆ. ಅವನ ಶಿಕ್ಷಣ ಕ್ರಮ ಹೇಗೆ ಸಾಗುತ್ತದೆ ಎಂಬುದೇ ಈ ಕೃತಿಯ ಮುಖ್ಯ ವಿಷಯವಾಗಿದೆ.

ಇದೇ ಎಮಿಲಿ ಕಾದಂಬರಿಯ ಕೊನೇ ಭಾಗದಲ್ಲಿ ಸ್ತ್ರೀ ಶಿಕ್ಷಣಕ್ಕೆ ಸಂಬಂಧಪಟ್ಟ ವಿಚಾರಗಳ ಅಧ್ಯಾಯವನ್ನು ಸೇರಿಸಿದ್ದಾನೆ. ಸೋಫಿಯಾ ಎಂಬ ಕಲ್ಪನಾತ್ಮಕ ಸ್ತ್ರೀಯನ್ನು ಸೃಷ್ಟಿಸಿದ್ದಾನೆ. ಸ್ತ್ರೀ ಶಿಕ್ಷಣದ ಬಗ್ಗೆ ಅವನ ಅಭಿಪ್ರಾಯಗಳು ಹೀಗಿವೆ. ಸ್ತ್ರೀ ಪುರುಷನಿಗೆ ಪ್ರೀತಿ–ಸುಖ ಕೊಡಬೇಕು. ಅವನನ್ನು ಗೌರವದಿಂದ ಕಾಣಬೇಕು. ಅವನ ಸೇವೆ ಮಾಡಬೇಕು. ಸಲಹೆ ಕೊಡಬೇಕು. ಸಹಾನುಭೂತಿಯಿಂದ ನಡೆದು ಕೊಳ್ಳಬೇಕು. ಮಗು ಚಿಕ್ಕವನಿರುವಾಗ ಅವನಿಗೆ ಆ ವಯಸ್ಸಿಗೆ ತಕ್ಕ ಶಿಕ್ಷಣ ನೀಡ ಬೇಕು...ಈ ದೃಷ್ಟಿಯಿಂದ ಅವಳ ಶಿಕ್ಷಣ ಸಾಗಬೇಕು ಎನ್ನುತ್ತಾನೆ.

ಮಕ್ಕಳ ಮನಸ್ಸನ್ನು ಮೊದಲು ಅರಿತವನೆಂದರೆ ರೂಸೋ. ಶಿಕ್ಷಣವು ಶಿಶು ಕೇಂದ್ರೀಕೃತ ಶಿಕ್ಷಣ ಆಗಬೇಕು. ಶಿಕ್ಷಣದಲ್ಲಿ ಮಗುವಿಗೆ ಪ್ರಥಮ ಸ್ಥಾನ ದೊರೆಯ ಬೇಕು. ಹೆಜ್ಜೆ ಹೆಜ್ಜೆಗೂ ಮಕ್ಕಳ ಪ್ರವೃತ್ತಿಗಳನ್ನು ಗಮನಿಸಬೇಕು. ಶಿಕ್ಷಣ ಸ್ವಾಭಾವಿಕ ವಾಗಿರಬೇಕು. ಪುಸ್ತಕೀಯ ಶಿಕ್ಷಣ ಶಿಕ್ಷಣವಲ್ಲ. ಅದು ಗಿಳಿಪಾಠ ಇದ್ದಂತೆ. ಅನುಭವ ದಿಂದ ಜ್ಞಾನ ಸಂಪನ್ನನಾಗಬೇಕು. ವ್ಯಕ್ತಿತ್ವ ವಿಕಾಸಕ್ಕೆ ವ್ಯಕ್ತಿ ಸ್ವಾತಂತ್ರ್ಯ ನೀಡ ಬೇಕು. ಶಾಲೆಗಳು ಸೆರೆಮನೆಗಳಾಗಬಾರದು. ಬಲವಂತವಾಗಿ ಯಾವ ವಿಷಯವನ್ನೂ ಮಕ್ಕಳಿಗೆ ಕಲಿಸಬಾರದು. ಕೃತಕ ಶಿಕ್ಷಣ ಕ್ರಮವನ್ನು ಅನುಸರಿಸಬಾರದು. ಪಂಚೇಂದ್ರಿಯಗಳ ಮೂಲಕ ತರಬೇತಿ ನೀಡಬೇಕು. ರೂಢಿಸಂಪ್ರದಾಯಗಳನ್ನು ಕಲಿಸಬಾರದು. ಮಕ್ಕಳನ್ನು ನೈಸರ್ಗಿಕ ವಾತಾವರಣದಲ್ಲಿ ಬೆಳೆಸಬೇಕು. ಮಕ್ಕಳನ್ನು ಮಕ್ಕಳಂತೆ ಬೆಳೆಸಬೇಕು ಮತ್ತು ಕಲಿಸಬೇಕು... ಇವೇ ಮೊದಲಾದ ವಿಚಾರಗಳೇ ರೂಸೋವಿನ ಶೈಕ್ಷಣಿಕ ಅಣಿಮುತ್ತುಗಳಾಗಿವೆ.

ಒಟ್ಟಿನಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ರೂಸೋ ಕ್ರಾಂತಿಯ ಅಲೆಯನ್ನೇ ಎಬ್ಬಿಸಿದನು. ರೂಸೋ ಹೇಳಿರುವ ಒಂದೊಂದು ಮಾತನ್ನು ಕಾರ್ಯರೂಪಕ್ಕೆ ತರಲು ಒಬ್ಬೊಬ್ಬರು ಶಿಕ್ಷಣ ತಜ್ಞರು ತಮ್ಮ ಪೂರ್ಣ ಆಯುಷ್ಯವನ್ನೇ ಮುಡುಪಿಡಬೇಕಾದೀತು. ಕೆಲವರು ರೂಸೋವಿನಿಂದ ಪ್ರಭಾವಿತರಾಗಿ ಅವನ ಹಾದಿಯಲ್ಲಿ ನಡೆದರು. ಅವರಲ್ಲಿ ಡಾ. ಮರಿಯಾ ಮಾಂಟಿಸರಿ, ಪೆಸ್ಟಾಲಜಿ, ಫ್ರೋಬೆಲ್ ಮುಖ್ಯರಾದವರು.

'ಮಕ್ಕಳ ಮನೆ'ಯ ಸ್ಥಾಪಕಿ—ಡಾ. ಮರಿಯಾ ಮಾಂಟಿಸರಿ

ಮಕ್ಕಳ ಪೂರ್ವ ಪ್ರಾಥಮಿಕ ಶಿಕ್ಷಣಕ್ಕೆ ಭದ್ರಬುನಾದಿಯನ್ನು ಹಾಕಿ, ಅದಕ್ಕೆ ಹೊಸರೂಪವನ್ನು ಕೊಟ್ಟು ತಮ್ಮ ಇಡೀ ಜೀವನವನ್ನೇ ಸಮರ್ಪಿಸಿಕೊಂಡ ಕೀರ್ತಿ ಮಾರಿಯಾ ಮಾಂಟಿಸರಿ ಅವರಿಗೆ ಸಲ್ಲುತ್ತದೆ. ವಿಶ್ವದ ಶ್ರೇಷ್ಠ ಶಿಕ್ಷಣ ತಜ್ಞರ ಸಾಲಿನಲ್ಲಿ ಅಗ್ರಗಣ್ಯಳೆನಿಸಿದ ಮಾಂಟಿಸರಿ ತಾವು ಪ್ರತಿಪಾದಿಸಿದ ಶಿಕ್ಷಣ ತತ್ವಗಳಿಂದ ವಿಶ್ವಮಾನ್ಯತೆ ಯನ್ನು, ಗೌರವ ಪ್ರೀತಿಯನ್ನು ಗಳಿಸಿದ್ದಾರೆ.

೧೮೭೦ ರಲ್ಲಿ ಇಟಲಿ ದೇಶದಲ್ಲಿ ಜನಿಸಿದ ಮಾಂಟಿಸರಿ ತನ್ನ ವಿದ್ಯಾರ್ಥಿ ದೆಸೆಯಲ್ಲಿ ಉತ್ತಮ ಶಿಕ್ಷಣವನ್ನು ಪಡೆದರು. ಮೊಟ್ಟ ಮೊದಲಿಗರಾಗಿ ರೋಂ ವಿಶ್ವವಿದ್ಯಾನಿಲಯದ ವೈದ್ಯಕೀಯ ಪದವಿಯನ್ನು ಗಳಿಸಿದರು. ಆಮೇಲೆ ವೈದ್ಯಾಧಿಕಾರಿಣಿಯೂ ಆದರು.

ಇಟಲಿ ಸರಕಾರದ ನಿರ್ದೇಶನದಂತೆ ಮಾನಸಿಕ ದೌರ್ಬಲ್ಯಕ್ಕೊಳಗಾದ ಬುದ್ಧಿ ಮಾಂದ್ಯ ಮಕ್ಕಳಿಗೆ ನೀಡಬೇಕಾದ ಚಿಕಿತ್ಸೆ, ನೆರವು, ಶಿಕ್ಷಣ ನೀಡುವ ಕ್ರಮದ ಬಗ್ಗೆ

ಅಧ್ಯಯನ ಮತ್ತು ಚಿಂತನೆಯನ್ನು ಆಳವಾಗಿ ಮಾಡಿದರು. ಅದಕ್ಕಾಗಿ ಕೊನೆಗೆ ವೈದ್ಯ ವೃತ್ತಿಗೆ ರಾಜಿನಾಮೆ ನೀಡಿ ಮನಃಶಾಸ್ತ್ರವನ್ನು ದೀರ್ಘವಾ ಗಿಅಧ್ಯಯನ ಮಾಡಿದರು. ಲಂಡನ್, ಪ್ಯಾರಿಸ್‌ಗಳಿಗೆ ಭೇಟಿ ನೀಡಿದರು. ಮನೋವೈಜ್ಞಾನಿಕ ಹಿನ್ನನೆಯಲ್ಲಿ ಅನೇಕ ಪ್ರಯೋಗಗಳನ್ನು ನಡೆಸಿದರು.

ಬುದ್ಧಿ ಭ್ರಮಣೆಗೊಂಡ, ಬೌದ್ಧಿಕವಾಗಿ ಹಿಂದುಳಿದ ಮಕ್ಕಳನ್ನು ನೋಡಿಕೊಳ್ಳು ತ್ತಿದ್ದ ರೀತಿಯನ್ನು ಕಂಡು ಅವರು ದುಃಖಿತರಾದರು. ಅಂತಹವರಿಗಾಗಿ ಮೊದಲು ಶಿಕ್ಷಣವನ್ನು ನೀಡಲು ಪ್ರಯತ್ನಿಸುವುದಾಗಿ ಪಣತೊಟ್ಟರು. ಕೊನೆಗೊಂದು ಶಾಲೆ ಯನ್ನು ಸ್ಥಾಪಿಸಿದರು. ಆ ಶಾಲೆಯೇ ತರುವಾಯ 'ಮಕ್ಕಳ ಮನೆ' ಆಯಿತು. ಕ್ರಮೇಣ ಮಕ್ಕಳ ಮನೆ ದೇಶ ವಿದೇಶಗಳಲ್ಲೂ ಜನಪ್ರಿಯವಾಯಿತಲ್ಲದೆ ಪೂರ್ವ ಪ್ರಾಥಮಿಕ ಶಿಕ್ಷಣ ಹಂತದಲ್ಲಿ ಅವರ ಶಿಕ್ಷಣ ತತ್ವಗಳನ್ನು ಎಲ್ಲೆಡೆಯೂ ಅನುಸರಿಸ ಲಾಗುತ್ತಿದೆ.

ಮಕ್ಕಳೇ ಶಿಕ್ಷಣದ ಕೇಂದ್ರ ಬಿಂದು. ಅವರ ಪ್ರಕಾರ ಶಿಕ್ಷಣ ಎಂದರೆ ಮಗು ಒಂದು ಸಜೀವ ವ್ಯಕ್ತಿ. ಅದೊಂದು ಬೆಳೆಯುತ್ತಿರುವ ಜೀವ. ಅದೊಂದು ವಿಕಾಸವಾಗು ತ್ತಿರುವ ಆತ್ಮವೂ ಹೌದು. ಹೀಗೆ ವಿಕಾಸಗೊಳ್ಳುತ್ತಿರುವ ಮಗುವಿನಲ್ಲಿ ಅಡಗಿರುವ ಶಕ್ತಿಯನ್ನು ಹೊರತರುವುದೇ ಶಿಕ್ಷಣ. ಶಿಕ್ಷಣವು ಮಗುವಿನ 'ಸ್ವಾಭಾವಿಕ ಬೆಳವಣಿಗೆಗೆ ಸಹಾಯಮಾಡಬೇಕು. ವ್ಯಕ್ತಿಸ್ವಾತಂತ್ರ್ಯ ನೀಡಬೇಕು. ಅವರ ವ್ಯಕ್ತಿತ್ವ ವಿಕಾಸಕ್ಕೆ ಶಿಕ್ಷಣ ನೆರವಾಗಬೇಕು. ಮಕ್ಕಳ ಮೇಲೆ ದರ್ಪತೋರಿಸದೆ ಮಕ್ಕಳೊಡನೆ ಮಕ್ಕಳಾಗಿ ಬೆರೆತು ಬುದ್ಧಿಮಾಂದ್ಯ ಮಕ್ಕಳಿಗೆ ಸ್ತ್ರೀಯಲ್ಲಿರುವ ಸಹಜ ಗುಣಗಳಾದ ಪ್ರೀತಿ-ವಾತ್ಸಲ್ಯ-ರಕ್ಷಣೆ-ಅನುಕಂಪ ತೋರಿಸುವ ಮನೋಭಾವ ಸ್ತ್ರೀಯರಲ್ಲಿರುವುದರಿಂದ ಅವರೇ ತಮ್ಮ ಶಾಲೆಯ ಶಿಕ್ಷಕಿಯರಾಗಲು ಕಾರಣ ಎನ್ನುತ್ತಾರೆ. ಶಿಕ್ಷಕಿ ಇಲ್ಲಿ ವೈದ್ಯೆ ಇದ್ದಂತೆ. ಅವಳು ಸದಾ ಮಹಾ ಚೈತನ್ಯದಾಯಿನಿ ಆಗಿರುವುದರಿಂದ ಆಕೆ ಕೇವಲ ಕಲಿಕೆಯಲ್ಲಿ ಮಾರ್ಗದರ್ಶನ ನೀಡಬೇಕೇ ವಿನಃ ಮಕ್ಕಳನ್ನು ಕಲಿಯುವಂತೆ ಒತ್ತಾಯ ಮಾಡಬಾರದು. ಮಕ್ಕಳಲ್ಲಿ ಕುತೂಹಲ, ಆಸಕ್ತಿ ಇರುವುದರಿಂದ ಸ್ವತಃ ಅನೇಕ ವಿಷಯ ಗಳನ್ನು ಕಲಿಯುತ್ತಾರೆ. ಇದಕ್ಕೆ ಶಿಕ್ಷಕಿ ವೈಯಕ್ತಿಕ ಗಮನ ನೀಡಬೇಕು. ಶಾಲಾ ವಾತಾವರಣ ಸ್ವಾಭಾವಿಕವಾಗಿರಬೇಕು. ಈ ಮೂಲಕ ಮಕ್ಕಳು ಆತ್ಮಸಂಯಮವನ್ನು ಬೆಳೆಸಿಕೊಳ್ಳುತ್ತಾರೆ ಮತ್ತು ಶಿಸ್ತಿನಿಂದ ವರ್ತಿಸಿರುತ್ತಾರೆ ಎಂದು ಮಾಂಟೆಸರಿ ಹೇಳಿ ದ್ದಾರೆ.

ಕಲಿಕೆಯಲ್ಲಿ ಮಕ್ಕಳು ಒಬ್ಬರಿಂದ ಮತ್ತೊಬ್ಬರಿಗೆ ಭಿನ್ನರಾಗಿರುವರು. ಈ ದಿಶೆ ಯಲ್ಲಿ ಅವರ ಕಲಿಕೆ ವೈಯಕ್ತಿಕವಾಗಿರಬೇಕು. ಪುಸ್ತಕೀಯ ಶಿಕ್ಷಣವನ್ನು ವಿರೋಧಿಸಿ ಪಂಚೇಂದ್ರಿಯ ತರಬೇತಿಗೆ ಮಹತ್ವ ನೀಡಿದರು. ೩-೭ ವರ್ಷದ ಮಕ್ಕಳ ಪಂಚೇಂದ್ರಿಯ ಗಳಿಗೆ ಸೂಕ್ತ ತರಬೇತಿ ನೀಡದಿದ್ದರೆ ಮಕ್ಕಳು ಬುದ್ಧಿಮಾಂದ್ಯರಾಗುತ್ತಾರೆ ಎಂದು ಪ್ರತಿಪಾದಿಸಿದ ಡಾ. ಮಾಂಟೆಸರಿ ಇಂದ್ರಿಯ ತರಬೇತಿಗಾಗಿಯೇ ಡೈಡಾಕ್ಟಿಕ್ ಉಪಕರಣ ಗಳನ್ನು ತಯಾರಿಸಿದರು.

ಮಕ್ಕಳ ಪ್ರಾರಂಭದ ವರ್ಷಗಳಲ್ಲಿ ಸ್ಪರ್ಶೇಂದ್ರಿಯ ಜ್ಞಾನವೇ ಮುಖ್ಯವಾಗಿರು ವುದರಿಂದ ಅದನ್ನು ನಾವು ಗಮನಿಸದಿದ್ದರೆ ಅದು ಮುಂದೆ ಶಿಕ್ಷಣಕ್ಕೆ ಬೇಕಾಗುವ

ಸೂಕ್ಷ್ಮ ಗ್ರಾಹಕ ಶಕ್ತಿಯನ್ನೇ ಕಳೆದುಕೊಂಡುಬಿಡುತ್ತದೆಂದು ಡಾ. ಮಾಂಟೆಸರಿ ಹೇಳಿದ್ದಾರೆ. ಶರೀರ–ಆತ್ಮ–ಮನಸ್ಸಿನ ಸಂಸ್ಕರಣವೇ ಅತಿ ಮುಖ್ಯವಾದ ಶಿಕ್ಷಣಾಂಶ. ಇವುಗಳ ಸಮತೋಲನ ಬೆಳವಣಿಗೆ ಮಗುವಿನ ಪರಿಪೂರ್ಣ ವಿಕಾಸಕ್ಕೆ ಅಗತ್ಯವಾದ ಅಂಶಗಳಾಗಿದ್ದು ಮಕ್ಕಳ ಮನೆಯ ಕಾರ್ಯಕ್ರಮದಲ್ಲಿ ಈ ಮೂರು ಅಂಶಗಳಿರುವುದು ಕಂಡು ಬರುತ್ತದೆ. ೧. ನಿತ್ಯ ಜೀವನಕ್ಕೆ ಸಂಬಂಧಿಸಿದ ಕಾರ್ಯ ಚಟುವಟಿಕೆಗಳು. ೨. ಜ್ಞಾನೇಂದ್ರಿಯಗಳನ್ನು ಚುರುಕುಗೊಳಿಸುವುದು. ೩. ಭಾಷೆ ಮತ್ತು ಗಣಿತ ಶಿಕ್ಷಣಕ್ಕಾಗಿ ಡೈಡಾಕ್ಟಿಕ್ ಉಪಕರಣಗಳ ಮೂಲಕ ಸ್ವಯಂ ಶಿಕ್ಷಣ. ಈ ಕ್ರಮಗಳು ಡಾ. ಮಾಂಟೆಸರಿ ಶಿಕ್ಷಣದಲ್ಲಿ ಅಡಕವಾಗಿವೆ. ಸ್ವತಂತ್ರ ವಾತಾವರಣದಲ್ಲಿ ಮಕ್ಕಳೇ ಸ್ವತಃ ಸ್ವಯಂ ಪ್ರೇರಿತರಾಗಿ ಕಲಿಕೆಯಲ್ಲಿ ಭಾಗವಹಿಸುವಂತೆ ಪ್ರೋತ್ಸಾಹ ನೀಡ ಲಾಗುತ್ತಿತ್ತು.

ಡಾ. ಮಾಂಟೆಸರಿ ಅವರ ಮಕ್ಕಳ ಮನೆಯಲ್ಲಿನ ಪ್ರತಿಯೊಂದು ಮಗುವನ್ನು ಒಂದೊಂದು ತರಗತಿಯಂತೆ ಭಾವಿಸಿ ಶಿಕ್ಷಣ ನೀಡಲಾಗುತ್ತಿತ್ತು. ತಮ್ಮ ಶಕ್ತಿ ಸಾಮರ್ಥ್ಯ, ಆಸಕ್ತಿ, ಅಭಿರುಚಿಗನುಗುಣವಾಗಿ ವಿವಿಧ ರೀತಿಯ ಡೈಡಾಕ್ಟಿಕ್ ಉಪಕರಣಗಳ ಮೂಲಕ ಚಟುವಟಿಕೆಗಳಲ್ಲಿ ತೊಡಗುವುದು ಹುಟ್ಟು ಸಹಜ ಗುಣ. ಆದರೆ ಅವರು ವಯಸ್ಕರಂತೆ ನಿರ್ದಿಷ್ಟ ಗುರಿ ಇಟ್ಟುಕೊಂಡು ಕಲಿಕೆಯಲ್ಲಿ ತೊಡಗುವುದಿಲ್ಲ ಎಂಬುದನ್ನು ಆಳವಾಗಿ ಸಂಶೋಧನೆ ನಡೆಸಿ ಅದರ ಅರಿವಿನಿಂದ ಶಿಕ್ಷಣ ಕ್ರಮದ ರೀತಿಯನ್ನೇ ಹೆಚ್ಚು ಪ್ರತಿಫಲ ನೀಡುವ ಮಾರ್ಗಕ್ಕೆ ಹೇಗೆ ಕೊಂಡೊಯ್ಯಬಹುದು ಎಂಬುದನ್ನು ಇಡೀ ಜಗತ್ತಿಗೆ ತೋರಿಸಿಕೊಟ್ಟವರೇ ಡಾ. ಮರಿಯಾ ಮಾಂಟೆಸರಿ.

ಈ. ಎಂ. ಸ್ಟಾಡಿಂಗ್ ಅವರ ಮಾತಿನಲ್ಲಿ ಹೇಳುವುದಾದರೆ 'ಕೊಲಂಬಸನು ಕಡಲ ಪ್ರಯಾಣಮಾಡಿ ಹೊಸ ಜಗತ್ತನ್ನೇ ಕಂಡು ಹಿಡಿದನು. ಆದರೆ ಮಾಂಟೆಸರಿಯು ಮಕ್ಕಳ ಮನಸ್ಸಿನಲ್ಲಿ ಪ್ರವಾಸಮಾಡಿ ಹೊಸ ಜಗತ್ತನ್ನೇ ಕಂಡು ಹಿಡಿದಳು. ಒಮ್ಮೆ ಮಕ್ಕಳ ಮನೆಗೆ ಭೇಟಿ ನೀಡಿ ಅಲ್ಲಿನ ವಾತಾವರಣ, ಮಕ್ಕಳ ಶಿಸ್ತು, ಸ್ವಚ್ಛತೆ, ಡೈಡಾಕ್ಟಿಕ್ ಉಪಕರಣಗಳನ್ನು ವೀಕ್ಷಿಸಿದ ಡಾ. ಸಿ. ವಿ. ರಾಮನ್ ಅವರು "ಇದು ವಿಜ್ಞಾನ ಪ್ರಯೋಗಾಲಯಕ್ಕಿಂತ ಕಡಮೆ ಇಲ್ಲ" ಎಂದು ಉದ್ಗಾರ ತೆಗೆದಿದ್ದಾರೆ.

ಒಟ್ಟಿನಲ್ಲಿ ಮಕ್ಕಳ ಮನಸ್ಸನ್ನು ಗ್ರಹಿಸಿ, ಅವರ ಬೌದ್ಧಿಕ ಬೆಳವಣಿಗೆಗೆ ನೆರವಾಗು ವಂತಹ ಶಿಕ್ಷಣ ಪದ್ಧತಿಯನ್ನು ರೂಪಿಸಿದವರೇ ಡಾ. ಮರಿಯಾ ಮಾಂಟೆಸರಿ. ರೂಸೋವಿ ನಿಂದ ಪ್ರಭಾವಿತರಾಗಿ ಮಕ್ಕಳ ಮನೆಯ ಮೂಲಕ ಶಿಕ್ಷಣ ಕ್ಷೇತ್ರಕ್ಕೆ ತಮ್ಮದೇ ಆದ ವಿಶಿಷ್ಟವಾದ ಕೊಡುಗೆಯನ್ನೀಡಿದ ಮಾಂಟೆಸರಿ ಅವರ ಚಿಂತನೆಗಳು ಆಧುನಿಕ ಶಿಕ್ಷಣ ಪದ್ಧತಿಗೆ ಭದ್ರಬುನಾದಿ ಆಗಿವೆ. ಇಂಥ ವಿಶ್ವವಿಖ್ಯಾತ ಶಿಕ್ಷಣ ಚಿಂತಕಿಯಾದ ಡಾ. ಮರಿಯಾ ಮಾಂಟೆಸರಿ ೧೯೫೨ರಲ್ಲಿ ಮರಣ ಹೊಂದಿದರು.

ಕಿಂಡರ್‌ಗಾರ್ಟನ್ ಶಿಕ್ಷಣ ಪದ್ಧತಿಯ ಜನಕ—ಫ್ರೋಬೆಲ್

ರೂಸೋವಿನಿಂದ ಪ್ರಭಾವಿತನಾಗಿ ಪೆಸ್ಟಾಲಜಿಯವರ ಶೈಕ್ಷಣಿಕ ತತ್ವಗಳಿಗೆ ಮಹತ್ವ ನೀಡಿ ಅವುಗಳನ್ನು ಆಚರಣೆಗೆ ತಂದ ಕೀರ್ತಿ ಫ್ರೋಬೆಲ್ಲನಿಗೆ ಸಲ್ಲುತ್ತದೆ. ಫ್ರೋಬೆಲ್ಲನು

ತನ್ನ ಶಿಕ್ಷಣ ಪದ್ಧತಿಯ ಮೂಲಕ ಶಿಶು ಶಿಕ್ಷಣಕ್ಕೆ ಬುನಾದಿ ಹಾಕಿ ಪೂರ್ವ ಪ್ರಾಥಮಿಕ ಶಿಕ್ಷಣದ ಮಹತ್ವವನ್ನು ಜನತೆಗೆ ತಿಳಿಸಿಕೊಟ್ಟನು. ಅಲ್ಲಿಯವರೆಗೂ ೩–೭ರ ವರೆಗಿನ ಶಿಕ್ಷಣವು ಪೂರ್ಣವಾಗಿ ನಿರ್ಲಕ್ಷಿಸಲ್ಪಟ್ಟಿತ್ತು. ಮಗುವಿನ ಜೀವನದಲ್ಲಿ ಈ ಕಾಲವು ಅತ್ಯಂತ ಮಹತ್ವವಾದುದು ಎಂದು ಹೇಳಿದ್ದಾನೆ.

ಫ್ರೋಬೆಲ್ಲನು ೧೭೮೨ರಲ್ಲಿ ಜರ್ಮನಿಯಲ್ಲಿ ಜನಿಸಿದನು. ಇನ್ನೂ ಚಿಕ್ಕವನಿರುವಾಗಲೇ ತಾಯಿಯನ್ನು ಕಳೆದುಕೊಂಡು ಮಾತೃವಾತ್ಸಲ್ಯದಿಂದ ವಂಚಿತನಾದನು. ತಂದೆಯ ನಿರ್ಲಕ್ಷ್ಯ ಹಾಗೂ ಮಲತಾಯಿಯ ಅಲಕ್ಷ್ಯದಿಂದಾಗಿ ಪ್ರಕೃತಿಯ ಸಾನಿಧ್ಯದಲ್ಲಿಯೇ ತನ್ನ ಬಾಲ್ಯವನ್ನು ಕಳೆದನು. ಬಾಲ್ಯದಲ್ಲಿ ಓದಿನಲ್ಲಿ ನಿರಾಸಕ್ತಿ ಇದ್ದುದರಿಂದ ಸೋದರಮಾವನ ಆಶ್ರಯ ಪಡೆದನು. ಅವರು ಅರಣ್ಯಾಧಿಕಾರಿಯೊಬ್ಬರ ಕೈಕೆಳಗೆ ಕೆಲಸಮಾಡಲು ಕಳುಹಿಸಿದರು. ಆ ಸಮಯದಲ್ಲಿಯೇ ಫ್ರೋಬೆಲ್ಲನು ಪ್ರಕೃತಿಯ ಆರಾಧಕನಾದನು. ನಿಸರ್ಗ ಪ್ರೇಮಿಯೂ ಆದನು. ತರುವಾಯ ಓದಿನ ಗೀಳನ್ನು ಬೆಳೆಸಿಕೊಂಡು ಜೀನಾ ವಿಶ್ವವಿದ್ಯಾನಿಲಯವನ್ನು ಸೇರಿದನು. ಅಲ್ಲಿ ಗಯಟೆ, ಷೆಲ್ಲಿ ಅವರ ವಿಚಾರಗಳ ಪ್ರಭಾವದಿಂದಾಗಿ ಪ್ರಾಣಿಶಾಸ್ತ್ರ ಮತ್ತು ಸಸ್ಯಶಾಸ್ತ್ರವನ್ನು ಅಧ್ಯಯನ ಮಾಡಿದನು. ೧೮೦೫ರಲ್ಲಿ ಫ್ರಾಂಕ್‌ಫರ್ಟ್ ಎಂಬಲ್ಲಿ ಶಾಲೆಯನ್ನು ತೆರೆದು ಶಿಕ್ಷಕ ವೃತ್ತಿಯನ್ನಾರಂಬಿಸಿದನು. ನಂತರ ಎವರ್‌ಡನ್ ನಗರಕ್ಕೆ ತೆರಳಿ ಪೆಸ್ಟಾಲಜಿಯ ಶಿಷ್ಯನಾಗಿ ಮಕ್ಕಳಿಗೆ ನೀಡುವ ಶಿಕ್ಷಣಕ್ರಮದ ಬಗ್ಗೆ ತಿಳಿಯಲು ಮನಃಶಾಸ್ತ್ರವನ್ನು ಕುರಿತು ಅಧ್ಯಯನ ಮಾಡಿದನು. ೧೮೧೬ರಲ್ಲಿ ಕೇಲ್ಹಾ ಎಂಬಲ್ಲಿ ಮತ್ತೊಂದು ಶಾಲೆಯನ್ನು ಆರಂಭಿಸಿ ತಾನುಗಳಿಸಿದ ಜ್ಞಾನವನ್ನು ಕುರಿತು ಪ್ರಯೋಗ ನಡೆಸಿದನು. ಇದರಿಂದ ಹೊರಬಂದ ಅಂಶಗಳನ್ನು, ತತ್ವಗಳನ್ನು ಕುರಿತು 'Education of Man' ಎಂಬ ಪುಸ್ತಕದಲ್ಲಿ ವಿವರಿಸಿದ್ದಾನೆ. ಈ ಹಿಂದೆ ಆರಂಬಿಸಿರುವ ಶಾಲೆಗಳಲ್ಲಿ ಮಕ್ಕಳ ಪ್ರಾರಂಭಿಕ ಶಿಕ್ಷಣವು ಸೂಕ್ತವಾಗಿಲ್ಲ ಎಂಬುದನ್ನು ಮನಗಂಡನು. ಶೈಶವಾವಸ್ಥೆಯಲ್ಲಿಯೇ ಮಕ್ಕಳಿಗೆ ಉತ್ತಮ ಶಿಕ್ಷಣ ದೊರೆಯುವಂತಾಗಬೇಕು. ಮುಂದಿನ ಶಿಕ್ಷಣಕ್ಕೆ ತಳಹದಿಯಾದ ಪೂರ್ವ ಪಾಥಮಿಕ ಶಿಕ್ಷಣವನ್ನು ಪಡೆಯದೆ ಮಕ್ಕಳು ಶಾಲೆಗೆ ಬರುವುದರಿಂದ ಅವರ ಶೈಕ್ಷಣಿಕ ಪ್ರಗತಿ ಸರಿಯಾಗಿ ನಡೆಯುವುದಿಲ್ಲ ಎಂಬ ಅಂಶವನ್ನು ಗಮನದಲ್ಲಿಟ್ಟುಕೊಂಡು ಬ್ಲ್ಯಾಂಕನ್‌ಬರ್ಗ್ ಎಂಬಲ್ಲಿ ೩–೭ ವರ್ಷದ ಮಕ್ಕಳಿಗಾಗಿ ೧೮೩೭ರಲ್ಲಿ "ಕಿಂಡರ್‌ಗಾರ್ಟನ್" ಎಂಬ ಶಾಲೆಯನ್ನು ಆರಂಭಿಸುವುದರ ಮೂಲಕ Come Let us live for our children ಎಂದು ಕರೆ ನೀಡಿದನು.

ಕಿಂಡರ್‌ಗಾರ್ಟನ್ ಎಂದರೆ ಜರ್ಮನ್ ಭಾಷೆಯಲ್ಲಿ ಮಕ್ಕಳ ತೋಟ ಎಂದಾಗುವುದು. ಇದನ್ನು ಬಾಲೋಧ್ಯಾನ, ಬಾಲವಾಡಿ, ಹೂವಿನತೋಟ ಇತ್ಯಾದಿ ಹೆಸರುಗಳಿಂದ ಕರೆಯಲಾಗುತ್ತದೆ.

ಫ್ರೋಬೆಲ್ಲನ ಶೈಕ್ಷಣಿಕ ವಿಚಾರಗಳು ಇಂದಿಗೂ ಶಿಕ್ಷಣ ಜಗತ್ತಿನಲ್ಲಿ ವಿಶ್ವವ್ಯಾಪಿ ಆಗಿವೆ. ಹೂವಿನ ತೋಟದಲ್ಲಿ ಮಕ್ಕಳು ಸ್ವಯಂ ಸ್ಫೂರ್ತಿಯಿಂದಲೇ ಕಲಿಯುವರು. ಅವರ ಈ ಬೆಳವಣಿಗೆಗೆ ಮುಖ್ಯವಾದ ಪ್ರಚೋದನೆ ಎಂದರೆ ಆಟ. ಆಟದಿಂದ ಮಕ್ಕಳು ತೃಪ್ತಿ, ಆನಂದ, ಸಂತೋಷ, ಆತ್ಮವಿಶ್ವಾಸ ಪಡೆಯುವರು.

ಫ್ರೋಬೆಲ್ಲನ ಪ್ರಕಾರ—ಇಡೀ ಜಗತ್ತಿನಲ್ಲಿರುವ ಎಲ್ಲಾ ವಸ್ತುಗಳು ಬೇರೆ ಬೇರೆಯಾಗಿ ತೋರಿದರೂ ಸಹ ಅವುಗಳಲ್ಲಿ ಏಕತೆ ಇದೆ. ಈ ಏಕತೆಯು ಪ್ರಕೃತಿ ಮತ್ತು ಆತ್ಮಗಳ ಸಂಗಮವಾಗಿದೆ. ಎಲ್ಲಾ ವಸ್ತುಗಳು ಪರಮಾತ್ಮ (ದೇವರು)ನಿಂದ ಸೃಷ್ಟಿ ಆಗಿವೆ ಪರಮಾತ್ಮನಿಲ್ಲದೆ ಯಾವ ವಸ್ತುವೂ ಅಸ್ತಿತ್ವದಲ್ಲಿರಲಾರದು. ಆದ್ದರಿಂದ ಆತ್ಮ ಸಾಕ್ಷಾತ್ಕಾರವೇ ವಿಶ್ವದ ಎಲ್ಲ ವಸ್ತುಗಳ ಅಸ್ತಿತ್ವಕ್ಕೆ ಆಧಾರ ಎಂದಿದ್ದಾನೆ ವಿಕಾಸವಾದದಲ್ಲಿ ಅಚಲ ವಿಶ್ವಾಸ ಇಟ್ಟುಕೊಂಡಿರುವ ಫ್ರೋಬೆಲ್ಲನು ಮಗುವಿಗೆ ವಿಕಾಸವಾಗಲು ಸ್ವತಂತ್ರ ಅವಕಾಶ ನೀಡಬೇಕು. ಆದ್ದರಿಂದ ಮಗು ಪರಿಪೂರ್ಣನಾಗುವನು. ಈ ಪರಿಪೂರ್ಣತೆಯನ್ನು ತಲುಪಲು ಶಿಕ್ಷಣ ನೆರವಾಗಬೇಕು. ಹೀಗಿರುವುದರಿಂದಲೇ ಫ್ರೋಬೆಲ್ಲನು ತನ್ನ ಶಾಲೆಯನ್ನು ಹೂವಿನ ತೋಟಕ್ಕೆ ಹೋಲಿಸಿದ್ದಾನೆ. ಅಲ್ಲಿ ಬೆಳೆಯುವ ಗಿಡಗಳಿಗೆ ಮಕ್ಕಳನ್ನು ಹೋಲಿಸಿದ್ದಾನೆ. ಗಿಡಗಳಿಗೆ ಸಕಾಲಕ್ಕೆ ಮಾಡಬೇಕಾದ ಲಾಲನೆ–ಪಾಲನೆ–ಪೋಷಣೆ–ರಕ್ಷಣೆಯನ್ನು ತೋಟದ ಮಾಲಿಯು ಹೇಗೆ ಮಾಡುವನೋ ಅದೇ ರೀತಿ ಶಿಕ್ಷಕನೂ ಸಹ ಮಕ್ಕಳಿಗೆ ಭಯ, ಹೆದರಿಕೆ ತೋರಿಸದೆ ಪೂರ್ಣ ಸ್ವಾತಂತ್ರ್ಯ, ಸೂಕ್ತಮಾರ್ಗದರ್ಶನ, ಸಹಕಾರ ಸನ್ನಿವೇಶವನ್ನು ನೀಡಬೇಕು. ಇದರಿಂದ ಮಕ್ಕಳು ಸ್ವತಃ ತಾವಾಗಿಯೇ ವಿಕಾಸವಾಗಬೇಕೆಂಬುದೇ ಫ್ರೋಬೆಲ್ಲನ ಅಭಿಪ್ರಾಯವಾಗಿದೆ.

ಸಮಾಜ ಮತ್ತು ವ್ಯಕ್ತಿ ಪರಸ್ಪರಾವಲಂಭಿಸಿವೆ. ಯೋಗ್ಯ ಸಮಾಜಿಕ ಪರಿಸರದಲ್ಲಿ ಶಿಕ್ಷಣ ನೀಡಿ ಮಗುವನ್ನು ಉತ್ತಮ ಸದಸ್ಯನನ್ನಾಗಿ ಮಾಡಬೇಕು. ಉತ್ಪಾದಕ ಚಟುವಟಿಕೆಯ ಮೂಲಕ ಮಕ್ಕಳು ಶಾರೀರಿಕ ಮತ್ತು ಮಾನಸಿಕ ಶಿಕ್ಷಣ ಬೆಳವಣಿಗೆ ಆಗುವುದು. ಈ ಬೆಳವಣಿಗೆಯು ಏಕಮುಖವಾಗಿರದೆ ಶರೀರ ಮತ್ತು ಮನಸ್ಸುಗಳೆರಡಕ್ಕೂ ಶಿಕ್ಷಣ ದೊರೆಯುವಂತಾಗಬೇಕು.

ಶಿಕ್ಷಣ ಎಂದರೆ ಜೀವನದ ಸಿದ್ಧತೆಯಲ್ಲ. ತನ್ನ ಸುತ್ತಮುತ್ತಲಿನ ಪರಿಸರಕ್ಕೆ ಹೊಂದಿಕೊಳ್ಳುವುದು. ಈ ದಿಶೆಯಲ್ಲಿ ಶಾಲೆಯು ಒಂದು ಪುಟ್ಟ ಸಮಾಜ ಇದ್ದಂತೆ ಶಾಲೆಯಲ್ಲಿ ಮಗು ಸ್ವ–ಇಚ್ಛೆಯಿಂದ ಕಾಣಿಕೆ ಮತ್ತು ಉದ್ಯೋಗಗಳ ಮೂಲಕ ಕಲಿಯುವುದು. ಕಾಣಿಕೆಗಳು ಜ್ಞಾನದ ಮತ್ತು ಪಂಚೇಂದ್ರಿಯಗಳ ಬೆಳವಣಿಗೆಗೆ ಸಹಾಯ ಮಾಡುವುದರಿಂದ ಶಿಕ್ಷಣವು ಮಗುವಿನ ಆಸಕ್ತಿಯನ್ನನುಸರಿಸಿ ಸಾಗಬೇಕು.

ಶಿಕ್ಷಣ ಎಂದರೆ ಸರ್ವತೋಮುಖ ಬೆಳವಣಿಗೆ ಎಂದು ಪ್ರತಿಪಾದಿಸುವ ಫ್ರೋಬೆಲ್ಲನು ಶೈಶವಾವಸ್ಥೆಯಲ್ಲಿ ಪಂಚೇಂದ್ರಿಯಗಳ ಬೆಳವಣಿಗೆ, ಬಾಲ್ಯದಲ್ಲಿ ಆಟದ ಮೂಲಕ ಕಲಿಕೆ ಮತ್ತು ತಾರುಣ್ಯದಲ್ಲಿ ಧರ್ಮ, ನಿಸರ್ಗ, ಜ್ಞಾನ ಮತ್ತು ಭಾಷೆಗಳ ಮೂಲಕವೇ ಶಿಕ್ಷಣ ನೀಡಬೇಕೆಂದು ಹೇಳಿದ್ದಾನೆ. ಕಿಂಡರ್‌ಗಾರ್ಟನ್ ಪದ್ಧತಿಯಲ್ಲಿ ಪಠ್ಯ ಪುಸ್ತಕಗಳಿಲ್ಲ, ವೇಳಾಪಟ್ಟಿ ಇಲ್ಲ. ಬದಲಿಗೆ ಆಟ, ಸ್ವಯಂ ಚಟುವಟಿಕೆ, ಸೃಜನಾತ್ಮಕ ಕೆಲಸ, ಸಾಮಾಜಿಕ ಚಟುವಟಿಕೆಗಳ ಮೂಲಕ ವಸ್ತುಗಳನ್ನು ನಿರ್ಮಿಸುವುದರ ಬಗ್ಗೆ ಶಿಕ್ಷಣ ನೀಡಲಾಗುತ್ತಿತ್ತು. ಒಂದು ಕತೆಯನ್ನು ಹೇಳಿ ನಂತರ ಅದನ್ನು ಹಾಡು–ಅಭಿನಯ–ನೃತ್ಯಗಳ ರೂಪದಲ್ಲಿ ತೋರಿಸಲಾಗುವುದು. ಕಟ್ಟಿಗೆ, ಮಣ್ಣು, ಕಾಗದದಿಂದ ವಿವಿಧ ಆಕಾರದ ಆಕೃತಿಗಳನ್ನು ತಯಾರಿಸುವರು. ಇಲ್ಲಿ ಕಣ್ಣು–ಕೈ–ಮನಸ್ಸು ಎಲ್ಲವೂ ಕಾರ್ಯನಿರತವಾಗಬೇಕು. ಆದ್ದರಿಂದ ಈ ಮೂರನ್ನು ಬೇರ್ಪಡಿಸಲು ಸಾಧ್ಯವಿಲ್ಲ.

ಅವು ಪರಸ್ಪರ ಒಂದು ಮತ್ತೊಂದನ್ನು ಅವಲಂಬಿಸಿವೆ ಎಂದಿದ್ದಾನೆ. ಫ್ರೋಬೆಲ್ಲನ ಪ್ರಕಾರ ಕೇವಲ ವಿಷಯಗಳನ್ನು ತಿಳಿಸುವುದು ಇದರ ಉದ್ದೇಶವಲ್ಲ. ಮಕ್ಕಳ ದೈಹಿಕ, ಮಾನಸಿಕ ಬೆಳವಣಿಗೆಗೆ ಸಹಾಯ ಮಾಡುವುದೇ ಇದರ ಉದ್ದೇಶವಾಗಿದೆ. ಮಕ್ಕಳ ಆಸಕ್ತಿಯನ್ನನುಸರಿಸಿ ಚಟುವಟಿಕೆಗಳನ್ನು ನೀಡಲಾಗುವುದು. ವಿಷಯ ಜ್ಞಾನವು ಕೇವಲ ಸಾಧನವೇ ಹೊರತು ಅದೇ ಗುರಿಯಲ್ಲ.

ಒಟ್ಟಿನಲ್ಲಿ ಮಗುವಿನಲ್ಲಿ ಸ್ವಾಭಾವಿಕವಾಗಿರುವ ಗುಣಗಳ ಬೆಳವಣಿಗೆ ಆಂತರಿಕವಾದುದು ಎಂಬ ವಿಚಾರ ಆಧುನಿಕ ಶಿಕ್ಷಣ ತಜ್ಞರ ಮೇಲೆ ಹೆಚ್ಚು ಪ್ರಭಾವ ಬೀರಿರುವುದರಿಂದಲೇ ಫ್ರೋಬೆಲ್ಲನ ಶೈಕ್ಷಣಿಕ ವಿಚಾರಧಾರೆಗಳು ಆಧುನಿಕ ಶಿಕ್ಷಣ ತಜ್ಞರ ಮನ್ನಣೆಗೆ ಪಾತ್ರವಾಗಿವೆ. ಹೀಗಾಗಿ ವಿಶ್ವದ ಎಲ್ಲೆಡೆ ಇಂದಿಗೂ ಕಿಂಡರ್ ಗಾರ್ಟನ್ ಶಿಕ್ಷಣ ಪದ್ಧತಿ ಆಚರಣೆಯಲ್ಲಿದೆ.

ತನಗೆ ಅವಶ್ಯವಿದ್ದಷ್ಟೇ ಪಡೆಯುವುದು ಧರ್ಮ. ಅವಶ್ಯಕತೆಯಿಲ್ಲದಿದ್ದುದನ್ನು ಪಡೆದರೂ ಕಳ್ಳತನ ಮಾಡಿದಂತೆಯೇ.

ಗುರಿಯಿಲ್ಲದ ಸಾಧನೆಗಳಿಂದ ಏನೂ ಉಪಯೋಗವಿಲ್ಲ. ಗುರಿಯಷ್ಟೇ ಸಾಧನೆಗಳೂ ನಿರ್ಮಲವಾಗಿರಬೇಕು.

ಗಾಂಧೀಜಿ

ಮೈಸೂರು ಸಾಕ್ಷರತಾ ಪ್ರಯೋಗ-೮೯

ಚನ್ನಬಸಪ್ಪ

ಇದು ಜ್ಞಾನಸ್ಫೋಟನೆಯ ಯುಗ. ವಿಜ್ಞಾನ, ಕೃಷಿ, ಕೈಗಾರಿಕೆ, ಇತ್ಯಾದಿ ರಂಗಗಳಲ್ಲಿ, ಸಾಮಾಜಿಕ ಕ್ಷೇತ್ರಗಳಲ್ಲಿ ನಿರಂತರವಾಗಿ, ಕ್ಷಿಪ್ರಗತಿಯಲ್ಲಿ ಬದಲಾವಣೆಗಳು ಸಂಭವಿಸುತ್ತಿದ್ದು, ಇವುಗಳ ಪೂರ್ಣ ಪ್ರಯೋಜನ ಮಾನವ ಸಮಾಜಕ್ಕೆ ಲಭ್ಯವಾಗಬೇಕಾದರೆ, ಅವರುಗಳು ಅವುಗಳನ್ನು ಗ್ರಹಿಸಿ, ಅನುಷ್ಠಾನಕಿಳಿಸುವಷ್ಟಾದರೂ ಶಿಕ್ಷಿತರಾಗಿರಬೇಕಾದುದು ಅವಶ್ಯಕ. ಇಲ್ಲವಾದಲ್ಲಿ ನೂತನ ಆವಿಷ್ಕಾರ—ಪರಿಷ್ಕಾರಗಳ ಲಾಭವು ಎಲ್ಲಾ ವರ್ಗದ ಜನತೆಗೆ ಲಭ್ಯವೆನಿಸದೆ ಕೆಲವು ವರ್ಗಕ್ಕೆ ಸೀಮಿತಗೊಳ್ಳುವ ಸಂಭವ ಉಂಟು. ಜನರಿಗೆ ಈ ಶಿಕ್ಷಣ ತಿಳುವಳಿಕೆ ನೀಡುವ ಮಾಧ್ಯಮುಗಳಲ್ಲಿಯೂ ಬೇಕಾದಷ್ಟು ಬೆಳವಣಿಗೆ ಆಗಿದ್ದು ಅನೇಕ ಜನಪ್ರಿಯ, ನೂತನವೆನಿಸುವ ಮಾಧ್ಯಮಗಳು ಪ್ರಚಲಿತಗೊಂಡಿದ್ದರೂ, ಅಕ್ಷರ ಮಾಧ್ಯಮ ಇಂದಿಗೂ ತನ್ನ ಅಗ್ರಸ್ಥಾನವನ್ನು ಬಿಟ್ಟುಕೊಟ್ಟಿಲ್ಲ. ಸಂಶೋಧನೆಯೊಂದರ ಪ್ರಕಾರ ಇಂದಿಗೂ ಶೇ. ೭೦ರಷ್ಟು ಜ್ಞಾನಪ್ರಸಾರ ಆಗುತ್ತಿರುವುದು ಮುದ್ರಿತ(ಅಕ್ಷರ) ಮಾಧ್ಯಮದ ಮೂಲಕವೇ. 'ಅಕ್ಷರ' ಎಂಬುದರ ಶಬ್ದಾರ್ಥವೇ ತಿಳಿಸುವಂತೆ (ಕ್ಷರ=ನಾಶವುಳ್ಳದ್ದು, ಅಕ್ಷರ=ನಾಶವಿಲ್ಲದ್ದು) ಇದೊಂದು ಸ್ಥಿರವಾಗುಳಿಯುವ ಕೌಶಲ್ಯವಾಗಿರುತ್ತದೆ.

ತಮ್ಮ ಜನತೆಗೆ ಈ ಸಾಕ್ಷರತಾ ಕೌಶಲ್ಯಗಳನ್ನು ಮೂಡಿಸಿ ಅವರನ್ನು ಶಿಕ್ಷಿತರಾಗಿಸಬೇಕೆಂಬ ಮಹದಾಸೆಯಿಂದ ಇಂದು ಎಲ್ಲಾ ನಾಗರೀಕ ಸರಕಾರಗಳು ತಮ್ಮ ಆಯವ್ಯಯದ ಹೆಚ್ಚಿನ ಪಾಲನ್ನು ಶಿಕ್ಷಣ ಕಾರ್ಯಕ್ಕಾಗಿ ವಿನಿಯೋಗಿಸುತ್ತಿವೆ. ಕೆಲವು ಪ್ರದೇಶಗಳಂತೂ ಒಂದು ನಿರ್ದಿಷ್ಟ ಅವಧಿಯ ಶಿಕ್ಷಣವನ್ನು ಎಲ್ಲರಿಗೂ ಕಡ್ಡಾಯಗೊಳಿಸಿವೆ(ಕಡ್ಡಾಯವೆಂದು ಘೋಷಿಸಿವೆ.) ಭಾರತವೂ ಈ ದಿಸೆಯಲ್ಲಿ ಅಪವಾದವಾಗುಳಿಯದೆ ಅಹರ್ನಿಶಿ ಶ್ರಮಿಸುತ್ತಿದೆ.

ರಾಜ್ಯಾಂಗ ರಚನೆಯ ಕಾಲದಲ್ಲಿ (೧೯೫೦) 'ಇನ್ನು ಹತ್ತು ವರ್ಷಗಳಲ್ಲಿ ಶಾಲಾ ವಯಸ್ಸಿನ ಎಲ್ಲಾ ಮಕ್ಕಳೂ ಶಾಲಾವಧಿ ಪೂರ್ತ ಶಾಲೆಯಲ್ಲಿರುವಂತೆ ಮಾಡಲಾಗುತ್ತದೆ' ಎಂಬ ನಿರ್ಣಯ ಕೈಗೊಳ್ಳಲಾಯಿತು. ಆದರೆ ಇದು ಸಾಧ್ಯವಾಗದೆ ಹೋದ ಕಾರಣ 'ಶಾಲಾ ವಯಸ್ಸಿನ ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸದಿದ್ದರೆ ಅದೊಂದು ಶಿಕ್ಷಾರ್ಹ ಅಪರಾಧ' ಎಂಬ ವಿಧಿಯೊಡನೆ ಉಚಿತ ಕಡ್ಡಾಯ ಪ್ರಾಥಮಿಕ ಶಿಕ್ಷಣ ಕಾನೂನನ್ನು ಜಾರಿಗೆ ತಂದಿತು. ಆದರೆ ಇದೂ ನಿರೀಕ್ಷಿತ ಫಲಿತಾಂಶ ನೀಡದ ಹಿನ್ನೆಲೆಯಲ್ಲಿ ಶಿಕ್ಷಣದೆಡೆಗೆ ಜನರನ್ನಾಕರ್ಷಿಸಲು ಅನೇಕ ಪ್ರಯೋಗಗಳನ್ನು ನಡೆಸಿದೆ. ಆದರೂ ಶಾಲಾ ದಾಖಲಾತಿ ಪ್ರಮಾಣ ಉತ್ತಮಗೊಂಡಿರುವುದಿಲ್ಲ. ಸೇರಿದವರಲ್ಲಿಯೂ ಮಧ್ಯದಲ್ಲಿಯೇ ಶಾಲೆ ತೊರೆಯುವವರ ಪ್ರಮಾಣ ಹೆಚ್ಚಿದ್ದು, ಅವರು ಶಾಲೆ ಬಿಟ್ಟ ಅನತಿ ಕಾಲದಲ್ಲಿಯೇ ಕಲಿತದ್ದನ್ನು ಮರೆಯುವ ಸ್ಥಿತಿ ಇದೆ.

ಸಾಕ್ಷರತಾ ಮಟ್ಟ :

ಇಂದು ನಮ್ಮ ದೇಶವು ಬಹುಸಂಖ್ಯಾತ ಅನಕ್ಷರಸ್ಥರ ದೇಶವಾಗಿದೆ. ಒಂದು ಅಂದಾಜಿನಂತೆ ೧೯೮೫ರಲ್ಲಿ ಒಟ್ಟು ವಿಶ್ವದಲ್ಲಿ ೧೫ ವರ್ಷಕ್ಕೆ ಮೇಲ್ಪಟ್ಟ ಅನಕ್ಷರಸ್ಥರ ಸಂಖ್ಯೆ ೮೮.೯ ಕೋಟಿ ಇದ್ದಿತು. ಈ ಪೈಕಿ ಶೇಕಡ ೯೮ರಷ್ಟು ಮಂದಿ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಕಂಡುಬರುತ್ತಾರೆ. ಏಷ್ಯಾ ಖಂಡವು ಈ ನಿರಕ್ಷರತಾ ಸಮಸ್ಯೆಯ ಒಂದು ಕೇಂದ್ರಸ್ಥಾನವಾಗಿದ್ದು ೬೬.೬ ಕೋಟಿ ಅನಕ್ಷರಸ್ಥರನ್ನು ಹೊಂದಿದೆ. ಆಫ್ರಿಕಾ ೧೬.೨ ಕೋಟಿ ಅನಕ್ಷರಸ್ಥರನ್ನು ಹೊಂದಿದ್ದರೆ, ಲ್ಯಾಟಿನ್ ಅಮೇರಿಕಾ ಮತ್ತು ಕ್ಯಾರಿಬಿಯನ್ ಪ್ರದೇಶವು ೪.೪ ಕೋಟಿ ಅನಕ್ಷರಸ್ಥರಿಂದ ಕೂಡಿದೆ. ಭಾರತೀಯರಾದ ನಮಗೆಲ್ಲಾ ಒಂದು ಲಜ್ಜೆಯ ವಿಷಯವೆಂದರೆ ಜಗತ್ತಿನ ಒಟ್ಟು ಅನಕ್ಷರಸ್ಥರ ಪೈಕಿ ಅರ್ಧದಷ್ಟು ಮಂದಿ, ಸುಮಾರು ೪೪ ಕೋಟಿ ಇರುವುದು ಭಾರತದಲ್ಲೇ. ಸ್ವಾತಂತ್ರ್ಯ ಪಡೆದ ೪೦ ವರ್ಷಗಳ ನಂತರವೂ ದೇಶದ ಶೇಕಡ ೬೪ರಷ್ಟು ಮಂದಿ ನಿರಕ್ಷರಿಗಳಾಗಿ ಉಳಿದಿರುವುದು ಶೋಚನೀಯ. ಒಂದು ಲೆಕ್ಕಾಚಾರದಂತೆ ವಿಶ್ವದ ಅನಕ್ಷರಸ್ಥರ ಸಂಖ್ಯೆಗೆ ಶೇಕಡಾ ೧೬ರಷ್ಟು ಕೊಡುಗೆ ಬಿಹಾರ ಮತ್ತು ಉತ್ತರಪ್ರದೇಶದಿಂದಲೇ ಆಗಿದೆ.

ಭಾರತದ ಸಾಕ್ಷರತಾ ಪ್ರಮಾಣದಲ್ಲಿಯೂ ಪ್ರದೇಶವಾರು, ಲಿಂಗಾನುಸಾರ ವಿಭಿನ್ನ ಪರಿಸ್ಥಿತಿ ಕಂಡುಬರುತ್ತದೆ. ಕೇರಳ ರಾಜ್ಯ ಶೇಕಡ ೭೦ರಷ್ಟು ಸಾಕ್ಷರತೆ ಹೊಂದಿದ್ದು ಮೊದಲಸ್ಥಾನದಲ್ಲಿದ್ದರೆ, ಅರುಣಾಚಲ ಪ್ರದೇಶವು ಕೇವಲ ಶೇ. ೨೧ ಸಾಕ್ಷರತೆ ಹೊಂದಿದ್ದು ಕಡೆಯ ಸ್ಥಾನದಲ್ಲಿದೆ. ಹಾಗೆಯೇ ನಗರ ಪ್ರದೇಶಗಳಿಗೆ ಹೋಲಿಸಿದಾಗ ಗ್ರಾಮೀಣ ಪ್ರದೇಶ, ವಿವಿಧ ಜನಾಂಗಗಳಿಗೆ ಹೋಲಿಸಿದಾಗ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ, ಪುರುಷರಿಗೆ ಹೋಲಿಸಿದಾಗ ಮಹಿಳೆಯರು ಸಾಕ್ಷರತೆಯಲ್ಲಿ ಹಿಂದಿರುವುದು ಕಂಡುಬಂದಿದೆ. ರಾಷ್ಟ್ರದ ಒಟ್ಟು ೪೦೨ ಜಿಲ್ಲೆಗಳ ಪೈಕಿ ೨೪೩ ಜಿಲ್ಲೆಗಳು ರಾಷ್ಟ್ರೀಯ ಸರಾಸರಿಗಿಂತ (ಶೇ. ೩೬.೨೩) ಕಡಿಮೆ ಸಾಕ್ಷರತೆ ಹೊಂದಿವೆ. ಉತ್ಪಾದಕ ವಯೋಮಾನವಾದ ೧೫-೩೫ರ ವಯಸ್ಸಿನಲ್ಲಿರುವವರಲ್ಲಿ ಒಟ್ಟು ೧೧ ಕೋಟಿಯಷ್ಟು ಮಂದಿ ನಿರಕ್ಷರಿಗಳಾಗಿರುವುದು ರಾಷ್ಟ್ರದ ಉತ್ಪಾದಕತೆಯ ಮೇಲೂ ದುಷ್ಪರಿಣಾಮ ಬೀರುತ್ತಲಿದೆ.

ಸಾಕ್ಷರತೆ ಮತ್ತು ಜನಜೀವನಮಟ್ಟ :

ಅಲ್ಲದೆ ಸಾಮಾಜಿಕ ಅಧ್ಯಯನಗಳು, ಅಂಕಿಅಂಶಗಳು ಸ್ಪಷ್ಟಪಡಿಸುವುದೇನೆಂದರೆ ಎಲ್ಲಿ ಸಾಕ್ಷರತಾ ಮಟ್ಟ ಹೆಚ್ಚಾಗಿರುವುದೋ ಅಲ್ಲಿನ ಜನಜೀವನ ಮಟ್ಟವು ಉತ್ತಮವಾಗಿದೆ ಎಂಬುದು. ಈ ಕೆಳಕಂಡ ವಿಷಯಗಳಲ್ಲಿ ಸಾಕ್ಷರತಾ ಮಟ್ಟವು ನೇರ ಪರಿಣಾಮ ಬೀರುವುದಾಗಿರುತ್ತದೆ;

(ಅ) ಅಕ್ಷರಸ್ಥ ತಂದೆತಾಯಿಯರು ತಮ್ಮ ಮಕ್ಕಳನ್ನು ಎಂದಿಗೂ ಅನಕ್ಷರಸ್ಥರಾಗಿರಲು ಬಿಡುವವರಲ್ಲ. ಹೀಗಾಗಿ ಸಾಕ್ಷರತೆ ಹೆಚ್ಚಿರುವ ರಾಜ್ಯಗಳಲ್ಲಿ ಶಾಲಾಮಕ್ಕಳ ದಾಖಲಾತಿಪ್ರಮಾಣ ಹೆಚ್ಚಿರುವುದು ಕಂಡುಬರುತ್ತದೆ. ಹಾಗೆಯೇ ಶಾಲೆಯನ್ನು ಮಧ್ಯದಲ್ಲಿಯೇ ತೊರೆಯುವವರ ಪ್ರಮಾಣ ಈ ರಾಜ್ಯಗಳಲ್ಲಿ ಬಹಳ ಕಡಿಮೆ ಇರುತ್ತದೆ. ಇದಕ್ಕೆ ತದ್ವಿರುದ್ಧವಾಗಿ ಅನಕ್ಷರತಾ ಪ್ರಮಾಣ ಹೆಚ್ಚಿರುವ ಪ್ರದೇಶಗಳಲ್ಲಿ ಶಾಲಾ ದಾಖಲಾತಿ ಕಡಿಮೆ ಇರುವುದಲ್ಲದೆ, ಶಾಲೆ ತೊರೆಯುವವರ ಪ್ರಮಾಣವೂ ಜಾಸ್ತಿ, ಇಷ್ಟಲ್ಲದೆ ಕಲಿಕೆಯಲ್ಲಿ ವಿದ್ಯಾವಂತ ಅಕ್ಷರಸ್ಥ ಕುಟುಂಬಗಳಿಂದ ಬಂದ ಮಕ್ಕಳು ಅವಿದ್ಯಾವಂತ ಅಥವಾ ಅನಕ್ಷರಸ್ಥ ಕುಟುಂಬಗಳಿಂದ ಬಂದ ಮಕ್ಕಳಿಗಿಂತ ಮುಂದಿರುವುದು ಕಂಡುಬರುತ್ತದೆ.

(ಆ) ಅನಕ್ಷರಸ್ಥ ತಾಯಿಯರ ಶಿಶು ಮತ್ತು ಮಗುವಿನ ಮರಣಪ್ರಮಾಣವು ಅಧಿಕವಾಗಿರುವುದು ಕಂಡುಬರುತ್ತದೆ. ಈ ಶಿಶು ಮರಣ ಪ್ರಮಾಣ ಪಾಲಕರ ವಿದ್ಯಾಮಟ್ಟ ಹೆಚ್ಚಾದಂತೆ ಕಡಿಮೆ ಆಗಿರುವುದು ಅಂಕಿ ಅಂಶಗಳ ಆಧಾರದಿಂದ ವ್ಯಕ್ತಪಟ್ಟಿದೆ.

(ಇ) ಅಕ್ಷರಸ್ಥ/ವಿದ್ಯಾವಂತ ತಂದೆತಾಯಿಗಳು ಮಕ್ಕಳ ಪಾಲನೆ ಪೋಷಣೆಯಲ್ಲಿ ಹೆಚ್ಚು ಮುತುವರ್ಜಿ ವಹಿಸುವರಾಗಿದ್ದು, ಅಗತ್ಯ ಕ್ರಮಗಳನ್ನು ಅನುಸರಿಸಲು ಮುಂದೆ ಬರುತ್ತಾರೆ. ಉದಾಹರಣೆಗೆ ರೋಗ ನಿರೋಧಕಗಳನ್ನು ಕೊಡಿಸುವುದು, ತುರ್ತುಕಾಲದಲ್ಲಿ ಸೂಕ್ತ ಮುಂಜಾಗ್ರತಾ ಕ್ರಮಗಳ ಅನುಸರಣೆ, ಇವುಗಳಲ್ಲಿ ಅಕ್ಷರಸ್ಥ ತಾಯಿಯರು ಹೆಚ್ಚು ಯಶಸ್ವಿಯಾಗಿ ಕಂಡುಬರುತ್ತಾರೆ.

(ಈ) ಅಕ್ಷರಸ್ಥರ ಪ್ರಮಾಣ ಹೆಚ್ಚಿರುವ ರಾಜ್ಯಗಳಲ್ಲಿ ಜನನಪ್ರಮಾಣವೂ ಕಡಿಮೆ ಇರುವುದು ವ್ಯಕ್ತಪಟ್ಟಿದೆ. ಅಂದರೆ ಮಿತಕುಟುಂಬ ನೀತಿಯನ್ನು ಅವರು ಸ್ವೀಕರಿಸಿ, ಅಳವಡಿಸಿಕೊಂಡಿರುತ್ತಾರೆ.

(ಉ) ಸಾಕ್ಷರತೆಯು ಮಹಿಳೆಯರಲ್ಲಿ ಆತ್ಮವಿಶ್ವಾಸ ಹೆಚ್ಚಾಗಿ ತಮ್ಮ ಸಾಮಾಜಿಕ ನೈತಿಕ ಹಕ್ಕುಗಳ ಬಗ್ಗೆ ಜಾಗೃತಗೊಳ್ಳಲು ಸಹಾಯ ಮಾಡುತ್ತದೆ. ಹಾಗೂ ಆರ್ಥಿಕ ಸ್ಥಿತಿ ಉತ್ತಮಪಡಿಸಿಕೊಳ್ಳಲು ಅಗತ್ಯ ಕೌಶಲ್ಯಗಳನ್ನು ಕಲಿಯಲು ಪೂರಕವಾಗುತ್ತದೆ.*

* ನ್ಯಾಷನಲ್ ಲಿಟರೆಸಿ ಮಿಷನ್—ದಾಖಲೆ ಕೇಂದ್ರ ಸರಕಾರದಿಂದ ಪ್ರಕಟಿತ)

ಬಹುಸಂಖ್ಯಾತ ನಿರಕ್ಷರತೆಯು ಒಂದು ಸಾಮಾಜಿಕ ಪಿಡುಗಾಗಿದ್ದು, ಇದು ಅನೇಕ ಸಮಸ್ಯೆಗಳನ್ನು ಹುಟ್ಟುಹಾಕುತ್ತಿದೆ. ಈ ನಿರಕ್ಷರತೆಯು ಜನಸಂಖ್ಯಾ ಹೆಚ್ಚಳ, ಕಂದಾಚಾರಗಳ ಆಚರಣೆ, ಅನಾರೋಗ್ಯ ಹಾಗೂ ಬಡತನದ ಸಮಸ್ಯೆಗಳನ್ನು ಹುಟ್ಟು ಹಾಕುತ್ತದೆ.

ನ್ಯಾಷನಲ್ ಲಿಟರೆಸಿ ಮಿಷನ್ :

ಸಮಾಜದ ಅಭಿವೃದ್ಧಿಯಲ್ಲಿ, ಮಾನವ ಸಂಪನ್ಮೂಲದ ವೃದ್ಧಿಯಲ್ಲಿ ಅಪಾರ ಪರಿಣಾಮ ಬೀರುವ ಈ ಸಾಕ್ಷರತಾ ಕೌಶಲ್ಯವನ್ನು ಎಲ್ಲರಲ್ಲಿಯೂ, ಅದರಲ್ಲೂ ವಯಸ್ಕ ಜನತೆಯಲ್ಲಿ ಮೂಡಿಸುವ ಸಲುವಾಗಿ ಭಾರತದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಹಾಗೂ ಸ್ವಾತಂತ್ರ್ಯ ನಂತರದಲ್ಲಿಯೂ ಅನೇಕ ಪ್ರಯತ್ನಗಳು ನಡೆದಿವೆ; ನಡೆಯುತ್ತಿವೆ. ಹಿಂದೆ ಖಾಸಗಿ ಮಹನೀಯರುಗಳಿಂದ ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಆರಂಭವಾದ ಈ ಸಾಕ್ಷರತಾ ಚಳುವಳಿಯಲ್ಲಿ ಸ್ವಾತಂತ್ರ್ಯ ನಂತರವಲ್ಲಿ ಸರಕಾರವು ಆಸಕ್ತಿ ತೋರಿಸಿ ಯೋಜನೆಗಳನ್ನು ಜಾರಿಗೆ ತಂದಿತು. ಸಮಾಜ ಶಿಕ್ಷಣ ಕಾರ್ಯಕ್ರಮ, ಸಮುದಾಯಾಭಿವೃದ್ಧಿ ಯೋಜನೆ, ರೈತರ ಕ್ರಿಯಾತ್ಮಕ ಸಾಕ್ಷರತಾ ಕಾರ್ಯಕ್ರಮ, ಅನೌಪಚಾರಿಕ ಶಿಕ್ಷಣ ಕಾರ್ಯಕ್ರಮ, ರಾಷ್ಟ್ರೀಯ ವಯಸ್ಕರ ಶಿಕ್ಷಣ ಕಾರ್ಯ ಕ್ರಮ ಇವುಗಳನ್ನಿಲ್ಲಿ ಹೆಸರಿಸಬಹುದು. ಇವುಗಳಲ್ಲಿ ಪ್ರಮುಖವಾದುವೆಂದರೆ ೧೯೭೮ರ ಅಕ್ಟೋಬರ್ ೨ರಿಂದ ರಾಷ್ಟ್ರವ್ಯಾಪಿಯಾಗಿ ಬೃಹತ್ ಪ್ರಮಾಣದಲ್ಲಿ ಜಾರಿಗೆ ಬಂದ ರಾಷ್ಟ್ರೀಯ ವಯಸ್ಕರ ಶಿಕ್ಷಣ ಕಾರ್ಯಕ್ರಮ. ಈ ಯೋಜನೆಯ ಉದ್ದೇಶವು, ಅಂದು ದೇಶದಲ್ಲಿದ್ದ, ಉತ್ಪಾದಕ ವಯೋಮಾನವಾದ ೧೫–೩೫ರ ವಯಸ್ಸಿನ ಸುಮಾರು ೧೦ ಕೋಟಿ ಅನಕ್ಷರಸ್ಥರನ್ನು ಕ್ರಿಯಾತ್ಮಕ ಸಾಕ್ಷರರನ್ನಾಗಿಸುವುದಾಗಿತ್ತು. ಆದರೆ ಇದು ಸಹ ನಿರೀಕ್ಷಿತ ಫಲಿತಾಂಶವನ್ನು ನೀಡಲಿಲ್ಲವೆನ್ನಬಹುದು. ಹೀಗಾಗಿ ಇಂದಿಗೂ ೧೫–೩೫ರ ವಯೋಮಾನದಲ್ಲಿ ಸುಮಾರು ೧೧ ಕೋಟಿ ಅನಕ್ಷರರಿದ್ದಾರೆ. ಭಾರತ ಸರಕಾರವು ಇವರನ್ನು ಕ್ರಿಯಾತ್ಮಕ ಸಾಕ್ಷರರನ್ನಾಗಿಸಲು, ರಾಷ್ಟ್ರೀಯ ವಯಸ್ಕರ ಶಿಕ್ಷಣ ಯೋಜನೆಯಲ್ಲಿನ ದುರ್ಬಲ ಅಂಶಗಳನ್ನು ಸತ್ವಯುತಗೊಳಿಸಿ, ಹೆಚ್ಚಿನ ತಾಂತ್ರಿಕತೆಯನ್ನು ಅಳವಡಿಸಿ ಶಿಕ್ಷಣದ ಮುಂದುವರಿಕೆಗೆ ಹಾಗೂ ಸಮಾಜದಲ್ಲಿ ಕಲಿಕೆಯ ವಾತಾವರಣ ಕಲ್ಪನೆಗೆ ಜನಶಿಕ್ಷಣ ನಿಲಯಗಳ ಸ್ಥಾಪನೆಯನ್ನು ಸೇರಿಸಿ, ಸಾಕ್ಷರತಾ ಯೋಜನೆಗೆ ಪರಮ ಆದ್ಯತೆಯನ್ನು ನೀಡಿದ 'ನ್ಯಾಷನಲ್ ಲಿಟರೆಸಿ ಮಿಷನ್' ಎಂಬ ಕಾರ್ಯಾಚರಣೆಯು ೧೯೮೮ರ ಮೇ ತಿಂಗಳಿನಲ್ಲಿ ಪ್ರಧಾನ ಮಂತ್ರಿಗಳಿಂದ ಉದ್ಘಾಟನೆ ಆಯಿತು. ಇದರನ್ವಯ ೧೯೯೦ರ ಒಳಗಾಗಿ ೩ ಕೋಟಿಯನ್ನು ೧೯೯೫ರ ಒಳಗಾಗಿ ಮತ್ತೆ ೫ ಕೋಟಿಯನ್ನು ಸೇರಿಸಿ ಒಟ್ಟು ೮ ಕೋಟಿ ಅನಕ್ಷರಸ್ಥರನ್ನು ಕ್ರಿಯಾತ್ಮಕ ಸಾಕ್ಷರರನ್ನಾಗಿಸಬೇಕಾಗಿದೆ. ಈ ಗುರಿಯು ಸಾಧಿತವಾಗಬೇಕಾದರೆ, ಈ ಕಾರ್ಯಾಚರಣೆಯು ಎಲ್ಲರೂ ಭಾಗವಹಿಸುವ ಒಂದು ಸಾಮೂಹಿಕ ಕಾರ್ಯಾಚರಣೆ (Societal Mission) ಆಗಬೇಕೆಂಬುದು ಭಾರತ ಸರಕಾರದ ಆಶಯವಾಗಿದೆ.

ಸಾಮೂಹಿಕ ಕ್ರಿಯಾತ್ಮಕ ಸಾಕ್ಷರತಾ ಆಂದೋಲನ:

ವಯಸ್ಕರ ಶಿಕ್ಷಣ ರಂಗದಲ್ಲಿ ನಡೆಯುತ್ತಿರುವ ಕಾರ್ಯಪ್ರಗತಿಯನ್ನು ಪರಿಶೀಲಿಸಿರುವ ವಿಶ್ವ ಬ್ಯಾಂಕ್ ಸಂಸ್ಥೆಯು 'ಹೆಚ್ಚು ಪರಿಣಾಮಕಾರಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳದೇ ಹೋದಲ್ಲಿ ೨೦೦೦ ದ ಇಸವಿಯ ವೇಳೆಗೆ ವಿಶ್ವದಲ್ಲಿ ಭಾರತ ಒಂದೇ ಹೆಚ್ಚಿನ ಅನಕ್ಷರಸ್ಥರಿರುವ ದೇಶವಾಗುಳಿಯಬಹುದು' ಎಂಬ ಕಟು ಭವಿಷ್ಯವನ್ನು ನುಡಿದಿದೆ. ಆದ್ದರಿಂದ ಸರಕಾರದ ವತಿಯಿಂದ ಹಾಗೂ ಅನುದಾನದ ಮೂಲಕ ನಡೆಯುತ್ತಿರುವ, ಕೇಂದ್ರ ಒಂದಕ್ಕೆ ३೦ ಮಂದಿ ಅನಕ್ಷರಸ್ಥರನ್ನು ದಾಖಲು ಮಾಡಿಕೊಂಡು ಒಂದು ವರ್ಷಕಾಲ (३೫೦+೧೫೦ ಗಂಟೆಗಳಲ್ಲಿ) ನಡೆಯುವ ಕಾರ್ಯಕ್ರಮದ ಮೂಲಕ ತ್ವರಿತವಾಗಿ ಗುರಿ ಮುಟ್ಟುವುದು ಅಸಂಭವವೆನಿಸಿದ ಕಾರಣ, ದೀರ್ಘಾವಧಿಯ ಈ ವಯಸ್ಕರ ಶಿಕ್ಷಣ ಕೇಂದ್ರಗಳಾಧಾರಿತ ಕಾರ್ಯಕ್ರಮದ ಜೊತೆಗೆ ಸಮಾಜದಲ್ಲಿ ಲಭ್ಯವಿರುವ ವಿದ್ಯಾರ್ಥಿ ಮತ್ತು ಯುವಶಕ್ತಿಯನ್ನು ಬಳಸಿಕೊಂಡು ಅವರು ತಲಾ ಒಬ್ಬರಿಂದ ೫ ಮಂದಿಗೆ ಕ್ಷಿಪ್ರ ಅವಧಿಯಲ್ಲಿ (३ ರಿಂದ ೪ ತಿಂಗಳೊಳಗೆ) ಕಲಿಸುವಂತೆ ಒಂದು ಸಾಮೂಹಿಕ ಕ್ರಿಯಾತ್ಮಕ ಸಾಕ್ಷರತಾ ಆಂದೋಲನವು ೧೯೮೬ ಮೇ ತಿಂಗಳಿನಿಂದ ಜಾರಿಗೆ ಬಂದಿದೆ. ಇಲ್ಲಿ ಹೆಚ್ಚಾಗಿ ಕಾಲೇಜುಗಳ ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂ ಸೇವಕರುಗಳನ್ನು ಮತ್ತು ವಿದ್ಯಾರ್ಥಿಗಳನ್ನು ತೊಡಗಿಸುವುದಾಗಿದೆ. ಈ ಆಂದೋಲನದಲ್ಲಿ ಭಾಗವಹಿಸಲಿಚ್ಛಿಸುವ ಸ್ವಯಂಸೇವಕರು ಮತ್ತು ಕಲಿಯುವವರಿಗೆ ಕಲಿಕೆಯ ಸಾಮಗ್ರಿಗಳನ್ನು ಒಳಗೊಂಡ ಸಾಕ್ಷರತಾ ಸಂಚಿಗಳನ್ನು (ಲಿಟರೆಸಿ ಕಿಟ್ಸ್) ರಾಜ್ಯ ಸಂಪನ್ಮೂಲ ಕೇಂದ್ರಗಳು ತಯಾರಿಸಿದ್ದು, ಉಚಿತವಾಗಿ ಒದಗಿಸಲಾಗುತ್ತಿದೆ. ಈ ಕಾರ್ಯಕ್ರಮದಲ್ಲಿಯೂ ಅನೇಕ ಮಂದಿ ವಿದ್ಯಾರ್ಥಿ ಸ್ವಯಂಸೇವಕರು ಹಾಗೂ ಎನ್.ಎಸ್.ಎಸ್. ಸ್ವಯಂಸೇವಕರುಗಳು ಕಾರ್ಯನಿರತರಾಗಿದ್ದಾರೆ.

ವಯಸ್ಕರ ಶಿಕ್ಷಣ ನಕ್ಷೆಯಲ್ಲಿ ಮೈಸೂರು

ವಯಸ್ಕ ಶಿಕ್ಷಣ ಕುರಿತು ವಿವೇಚಿಸುವಾಗ ಮೈಸೂರಿಗೆ ಒಂದು ವಿಶಿಷ್ಟ ಸ್ಥಾನಮಾನವಿದೆ. ಬಹು ಹಿಂದೆಯೇ ಈ ನಿಟ್ಟಿನಲ್ಲಿ ಪ್ರಯತ್ನಗಳನ್ನು ಕೈಗೊಂಡ ಹಿರಿಮೆ ಈ ಮೈಸೂರಿನದು. ೧೯೧೨ ರ ವೇಳೆಯಲ್ಲಿಯೇ, ಅಂದಿನ ಮೈಸೂರು ಸಂಸ್ಥಾನದ ದಿವಾನರಾಗಿದ್ದ ಸರ್ ಎಂ. ವಿಶ್ವೇಶ್ವರಯ್ಯನವರು ವಯಸ್ಕರಿಗೆ ಅಕ್ಷರಜ್ಞಾನದ ಅಗತ್ಯತೆಯನ್ನು ಮನಗಂಡು ಸುಮಾರು ೭೦೦೦ ರಾತ್ರಿ ಶಾಲೆಗಳನ್ನು, 'ವಿಜ್ಞಾನ' ಎಂಬ ವಾರಪತ್ರಿಕೆಯನ್ನು, ಗ್ರಾಮೀಣ ಭಾಗಗಳಿಗೆ ಸಂಚಾರಿ ಪುಸ್ತಕ ಭಂಡಾರ ವ್ಯವಸ್ಥೆಯನ್ನು ಏರ್ಪಡಿಸುವ ಮೂಲಕ ನಾಡಿನ ವಯಸ್ಕರ ಶಿಕ್ಷಣಕ್ಕೆ ನಾಂದಿ ಹಾಡಿದರು. ಹಾಗೆಯೇ ೧೯३೮–३೯ ರಲ್ಲಿ ಮಹಾರಾಜಾ ಕಾಲೇಜಿನ ಕೆಲವೇ ವಿದ್ಯಾರ್ಥಿಗಳು ಸಮಾಜ ಕಾರ್ಯದಲ್ಲಿ ಆಸಕ್ತಿವಹಿಸಿ ಮೈಸೂರು ನಗರದಲ್ಲಿ ಮತ್ತು ಹೊರವಲಯದ ಹಳ್ಳಿಗಳಲ್ಲಿ ಆರಂಭಿಸಿದ ಅಕ್ಷರ ಪ್ರಚಾರ ಕಾರ್ಯಕ್ರಮವು ಮುಂದೆ ಹೆಮ್ಮರವಾಗಿ ಬೆಳೆದು ಇಂದು ಕರ್ನಾಟಕ ರಾಜ್ಯವನ್ನೇ ಆವರಿಸಿ ನಿಂತ ವಯಸ್ಕರ ಶಿಕ್ಷಣ ರಂಗದ ಪ್ರತಿಷ್ಠಿತ ಪುರಸ್ಕಾರಗಳಾದ

ಮಹ್ಮದ್ ರಜ್ಹಾ ಪೆಹಲ್ವಿ ಅವಾರ್ಡ್ ಮತ್ತು ನೆಹರು ಲಿಟರೆಸಿ ಅವಾರ್ಡುಗಳನ್ನು ಪಡೆದ, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಸಂಸ್ಥೆಗಳಿಂದ ಮಾನ್ಯತೆ ಪಡೆದ ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯಾಗಿ ರೂಪುಗೊಂಡಿತು. ಈ ಚಳುವಳಿಯ ಹಾಗೂ ಸಮಿತಿಯ ಕೇಂದ್ರಸ್ಥಾನ ಮೈಸೂರು. ಇಷ್ಟಾದರೂ 'ದೀಪದಡಿಯಲ್ಲಿಯೇ ಕತ್ತಲು' ಎಂಬಂತೆ ಮೈಸೂರು ಜಿಲ್ಲೆಯ ಸಾಕ್ಷರತಾ ಪ್ರಮಾಣವು ರಾಜ್ಯದ ಸರಾಸರಿ ಸಾಕ್ಷರತೆ ಶೇ. ೩೮.೪೧ಕ್ಕಿಂತ ಕಡಿಮೆ ಅಂದರೆ ಶೇ. ೩೧.೩೪ ಮಾತ್ರ ಇರುವುದು (೧೯೮೧ರ ಜನಗಣತಿಯಂತೆ) ಕಂಡುಬರುತ್ತದೆ ಅದರಲ್ಲಿ ಪುರುಷ ವರ್ಗದ ಸಾಕ್ಷರತೆ ಶೇ. ೩೯.೩೦ ಆದರೆ ಮಹಿಳೆಯರಲ್ಲಿ ಶೇ. ೨೨.೯೭ ಮಾತ್ರ. ರಾಜ್ಯದ ಜಿಲ್ಲೆಗಳನ್ನು ಅವುಗಳ ಶೇ. ಸಾಕ್ಷರತಾ ಪ್ರಮಾಣವನ್ನಾಧರಿಸಿ ಶ್ರೇಣೀಕರಿಸಿದಾಗ ೧೯ ಜಿಲ್ಲೆಗಳಲ್ಲಿ ಮೈಸೂರು ಜಿಲ್ಲೆಯ ಸ್ಥಾನ ಹದಿನಾಲ್ಕನೇಯದಾಗುತ್ತದೆ. ಹಾಗೆಯೇ ಮಾದರಿ ಮೈಸೂರು ಎಂಬ ಹೆಸರು ಬರಲು ಕಾರಣವಾದ ಅನೇಕ ಪ್ರಗತಿಪರ ಕಾರ್ಯಕ್ರಮಗಳ ಅಂಕುರ ಮಾಡಿದ ರಾಜಮನೆತನದ ತೌರೂರಾದ ಮೈಸೂರು ನಗರದ ಸಾಕ್ಷರತೆ ಇಂದಿಗೂ ಶೇ. ೬೧.೪೫ ಮಾತ್ರ

ಮೈಸೂರು ಸಾಕ್ಷರತಾ ಪ್ರಯೋಗ–೧೯೮೯

ಈಗ ಚಾಲ್ತಿಯಲ್ಲಿರುವ ವಯಸ್ಕರ ಶಿಕ್ಷಣ ಕಾರ್ಯಕ್ರಮಗಳನ್ನು, ಅವು ಕಾರ್ಯಗತಗೊಳ್ಳುತ್ತಿರುವ ಸ್ಥಿತಿ–ಗತಿಗಳನ್ನು ನೋಡಿದಾಗ ಒಂದು ನಿಶ್ಚಿತ ಅವಧಿಯಲ್ಲಿ ಸಫಲತೆ ಪಡೆಯಬಹುದು ಎಂದು ಹೇಳಲಾಗದ ಸ್ಥಿತಿ ಕಂಡುಬರುತ್ತದೆ. ಅನೇಕ ದೀರ್ಘಾವಧಿಯ (ಒಂದು ವರುಷ) ವಯಸ್ಕರ ಶಿಕ್ಷಣ ಕಾರ್ಯಕ್ರಮಗಳಲ್ಲಿ ಕಲಿಯುವವರ ಆಸಕ್ತಿ—ಪ್ರೇರಣೆಯನ್ನು ಕಾದಿಟ್ಟುಕೊಂಡು ಅವರು ಅವಧಿ ಪೂರ್ತ ವಯಸ್ಕರ ಶಿಕ್ಷಣ ಕೇಂದ್ರಕ್ಕೆ ಬರುವಂತೆ ಮಾಡುವುದು ಕಷ್ಟಕರವಾಗಿರುತ್ತದೆ. ಹೀಗಾಗಿ ಬಹಳಷ್ಟು ಮಂದಿ ಕಲಿಯುವವರು ಮಧ್ಯದಲ್ಲಿಯೇ ಈ ಕಾರ್ಯಕ್ರಮದಿಂದ ಕಳಚಿಕೊಳ್ಳುತ್ತಿದ್ದಾರೆ. ಹಾಗೂ ಈ ಕಾರ್ಯಕ್ರಮಗಳಿಗೆ ಖರ್ಚು ಮಾಡುತ್ತಿರುವ ಹಣವು ಸಾಕಷ್ಟು ಹೆಚ್ಚಿನ ಪ್ರಮಾಣದ್ದಾಗಿದೆ (ವಯಸ್ಕರ ಶಿಕ್ಷಣ ಕ್ಷೇತ್ರದ ಇತರ ಯೋಜನೆಗಳಿಗೆ ಹೋಲಿಸಿದಾಗ). ಜೊತೆಗೆ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದಲ್ಲಾಗುತ್ತಿರುವ ವೈಫಲ್ಯಗಳಿಂದಾಗಿ ವರ್ಷೇ ವರ್ಷೇ ಅನಕ್ಷರಸ್ಥ ವಯಸ್ಕರ ಸಂಖ್ಯೆ ಏರುತ್ತಿದೆ. ಈ ನಿರಕ್ಷರತಾ ಸಮಸ್ಯೆ ಒಂದು ಬೃಹತ್ ಪ್ರಮಾಣದ ಭೀಕರ ಸಮಸ್ಯೆಯಾಗಿ ಪರಿಣಮಿಸಿದೆ. ಇದೆಲ್ಲಾ ಹಿನ್ನೆಲೆಯಲ್ಲಿ ಈಗ ನಿರಕ್ಷರತಾ ನಿವಾರಣಾ ಕಾರ್ಯವು ಒಂದು ಇಲಾಖೆ, ಅಥವ ಒಂದು ಗುಂಪಿನ ಕಾರ್ಯಕರ್ತರ ಜವಾಬ್ದಾರಿ ಎನಿಸದೆ ಇಡೀ ಸಮಾಜ ಸಮುದಾಯದ ಜವಾಬ್ದಾರಿ ಎನಿಸಬೇಕು. ಎಲ್ಲಾ ವಿದ್ಯಾವಂತರು, ಜಾಗೃತ ನಾಗರೀಕರು ಈ ಸಮಸ್ಯೆಯ ನಿವಾರಣೆಗೆ ಕೈಕೂಡಿಸಬೇಕಾದ ಕಾಲ ಸನ್ನಿಹಿತವಾಗಿದೆ. ಇದೊಂದು ಜನಾಂದೋಲನದ ರೀತಿಯಲ್ಲಿ ನಡೆಯಬೇಕೆಂಬುದೂ ನ್ಯಾಷನಲ್ ಲಿಟರೆಸಿ ಮಿಷನ್ನಿನ್ನ ಆಶಯವಾಗಿದೆ.

ಈಗಾಗಲೇ ಕಾಲೇಜುಗಳ ಎನ್. ಎಸ್. ಎಸ್. ವಿದ್ಯಾರ್ಥಿಗಳು ಹಾಗೂ ಇತರ ವಿದ್ಯಾರ್ಥಿ ಸ್ವಯಂ ಸೇವಕರು ಸ್ವಯಂಪ್ರೇರಣೆಯಿಂದ ಈ ನಿರಕ್ಷರತಾ ನಿವಾರಣೆಯಲ್ಲಿ

ಸಾಮೂಹಿಕ ಕ್ರಿಯಾತ್ಮಕ ಸಾಕ್ಷರತಾ ಕಾರ್ಯಕ್ರಮದ ಮೂಲಕ ತೊಡಗಿರುತ್ತಾರೆ. ಹಾಗೆಯೇ ಈ ರೀತಿಯ ಸಮಾಜಕಾರ್ಯಗಳಲ್ಲಿ ಆಸಕ್ತಿ ಉತ್ಸಾಹ ಕಂಡುಬರುವ ಮತ್ತೊಂದು ಸ್ತರದ ವಿದ್ಯಾರ್ಥಿಗಳು ಇದ್ದು ಅವರನ್ನೂ ಈ ಕಾರ್ಯಕ್ರಮದಲ್ಲಿ ತೊಡಗಿಸುವುದು ಸೂಕ್ತವೆನಿಸುತ್ತದೆ. ಅವರೇ ಪೌಢಶಾಲಾ ಹಂತದ, ತಾರುಣ್ಯದ ಹೊಸ್ತಿಲಲ್ಲಿ ಕಾಲಿಟ್ಟಿರುವ ವಿದ್ಯಾರ್ಥಿ ವೃಂದ ಜಾಂಬಿಯ, ಟಾಂಜೆನಿಯ ಇಂಡೋ–ನೇಷ್ಯಾ, ರಷ್ಯಾ, ಇತ್ಯಾದಿ ಕಡೆಗಳಲ್ಲಿ ನಡೆದು ಯಶಸ್ವಿಯಾಗಿರುವ ವಯಸ್ಕರ ಶಿಕ್ಷಣ ಚಳುವಳಿಗಳಲ್ಲಿ ಈ ಹಂತದ ವಿದ್ಯಾರ್ಥಿಗಳ ಪಾತ್ರ ಮಹತ್ತರವಾಗಿದ್ದುದು ಕಂಡು ಬರುತ್ತದೆ. ಹೀಗಾಗಿ ಮೈಸೂರು ಜಿಲ್ಲೆಯಲ್ಲಿ ಸಾಕ್ಷರತಾ ಕಾರ್ಯಕ್ರಮವನ್ನು ಒಂದು ಸ್ವಯಂ ಪ್ರೇರಿತ ಚಳವಳಿಯಾಗಿಸಿ, ಪೌಢಶಾಲಾ ಹಂತದ ವಿದ್ಯಾರ್ಥಿಗಳನ್ನು, ಯುವಕ ಯುವತಿ ಸಂಘಗಳ ವಿದ್ಯಾವಂತ ತರುಣ ತರುಣಿಯರನ್ನು ಈ ಕಾರ್ಯಕ್ರಮದಲ್ಲಿ ನಿರತರಾಗಿಸಿ, ಸಾಧ್ಯವಾದಷ್ಟು ಕ್ಷಿಪ್ರ ಅವಧಿಯಲ್ಲಿ ಸಾಕ್ಷರತೆಯನ್ನು ಸಾಧಿಸಬೇಕೆನ್ನುವ ಹಂಬಲದಿಂದ ಮೈಸೂರು ನಗರದಲ್ಲಿ ಕೇಂದ್ರಸ್ಥಾನವುಳ್ಳ ಅನೇಕ ಸಂಘ ಸಂಸ್ಥೆಗಳು ಸಂಯುಕ್ತವಾಗಿ ಒಂದು ಪ್ರಾಯೋಗಿಕ ಕಾರ್ಯಾಚರಣೆಯನ್ನು ಡಿಸೆಂಬರ್ ೮೮ ರಿಂದ ಆರಂಭಮಾಡಿವೆ. ಅದನ್ನೆ ಮೈಲೆಕ್ಸ್–೮೯ ಅಂದರೆ ಮೈಸೂರು ಲಿಟರೆಸಿ ಎಕ್ಸ್‌ಪೆರಿಮೆಂಟ್–89 (ಮೈಸೂರು ಸಾಕ್ಷರತಾ ಪ್ರಯೋಗ–೮೯) ಎಂದು ಕರೆಯಲಾಗಿದೆ. ಈ ಪ್ರಯೋಗವು ಭಾರತ ಸರಕಾರದ, ವಯಸ್ಕರ ಶಿಕ್ಷಣ ನಿರ್ದೇಶನಾಲಯದ ಅಪರ ನಿರ್ದೇಶಕರಾದ ಡಾ॥ ವಿ. ವೆಂಕಟಶೇಷಯ್ಯನವರ ನೇತೃತ್ವದಲ್ಲಿ ಮುಂದೆ ಸೂಚಿಸಿರುವ ಕೆಲವು ಸ್ವಯಂ ಪ್ರೇರೇಪಿತ ಸಂಘಟನೆಗಳಿಂದ ಆರಂಭವಾಗಿರುತ್ತದೆ.

ಪ್ರಯೋಗದ ಉದ್ದೇಶಗಳು :

೧) ಜಿಲ್ಲೆಯಲ್ಲಿ ೧೫ ರಿಂದ ೩೫ ರ ವಯೋಮಾನದ ಅನಕ್ಷರಸ್ಥರನ್ನು ೧೯೯೧ ರ ಒಳಗಾಗಿ ಸಾಮೂಹಿಕ ಪ್ರಯತ್ನದಿಂದ ಸಾಕ್ಷರರನ್ನಾಗಿಸುವುದು.

೨) ಪ್ರೌಢಶಾಲಾ ಹಂತದ ಅನೇಕ ಶಿಕ್ಷಣ ಸಂಸ್ಥೆಗಳನ್ನು ಮತ್ತು ಯುವಕ ಯುವತಿ ಮಂಡಲಿಗಳನ್ನು ಈ ಸಾಕ್ಷರತಾ ಚಳುವಳಿಯಲ್ಲಿ ಭಾಗವಹಿಸುವಂತೆ ಪ್ರೇರೇಪಿಸಿ ಜಿಲ್ಲೆಯಾದ್ಯಂತ ಹಬ್ಬುವಂತೆ ಮಾಡುವುದು.

೩) ಸಾಕ್ಷರತಾ ಸಾಧನೆಗೆ ಆಯಾಯ ಗ್ರಾಮ ಮಟ್ಟದಲ್ಲಿಯೇ ವಿದ್ಯಾವಂತ ಪಡೆಗಳ ಮೂಲಕ ಸ್ವಾವಲಂಬಿ ವಿಧಾನವನ್ನು ಬೆಳೆಸುವುದು.

೪) ಸ್ಥಳೀಯ ವಿದ್ಯಾವಂತರ ಸಹಾಯದಿಂದ, ಸ್ವಯಂಪ್ರೇರಿತ ಪ್ರಯತ್ನಗಳ ಮೂಲಕ ನಿರಕ್ಷರತೆಯಿಂದ ಮುಕ್ತಿ ಹೊಂದುವುದು.

ಕಾರ್ಯಾಚರಣೆಯ ವಿವರಗಳು :

ಮೈಲೆಕ್ಸ್–೮೯ ಪ್ರಯೋಗವನ್ನಾರಂಭಿಸಿರುವ ಸಂಸ್ಥೆಗಳ ಪ್ರತಿನಿಧಿಗಳನ್ನೊಳಗೊಂಡ ಕಾರ್ಯತಂಡವು ತಮ್ಮ ಕಛೇರಿ ವ್ಯವಹಾರಗಳಿಗೆ ಧಕ್ಕೆ ಬರದಂತೆ, ಬಿಡುವಿನ

ವೇಳೆಯಲ್ಲಿಯೂ ವಿವಿಧ ಕಛೇರಿಗಳನ್ನು, ಪ್ರೌಢಶಾಲೆಗಳನ್ನು, ಯುವಕ/ಯುವತಿ ಮಂಡಲಿಗಳನ್ನು ಗ್ರಾಮಗಳಲ್ಲಿ ಗ್ರಾಮಸ್ಥರ ಮತ್ತು ವಿದ್ಯಾವಂತರ ಸಮೂಹಗಳನ್ನು ಸಂಪರ್ಕಿಸಿ ಅವರೊಡನೆ ಅನಕ್ಷರತೆಯ ಭೀಕರತೆಯನ್ನು ಹಾಗೂ ಅದರ ದುಷ್ಪರಿಣಾಮಗಳನ್ನು ಕುರಿತು ಚರ್ಚಿಸಿ, ಅವರುಗಳು ಇದರ ನಿವಾರಣೆಯಲ್ಲಿ ಹೇಗೆ ಭಾಗವಹಿಸಬಹುದೆಂಬುದನ್ನು ಅವರಿಗೆ ತಿಳಿಯಪಡಿಸಿ ಸಂಪನ್ಮೂಲ ಕೇಂದ್ರ ಸಿದ್ಧಪಡಿಸಿರುವ ಸಾಕ್ಷರತಾ ಸಂಚಿಯ ಕಲಿಸುವ ಸಾಮಗ್ರಿಗಳನ್ನು ಬಳಸುವ ಬಗ್ಗೆ ತರಬೇತಿ ನೀಡುತ್ತದೆ. ಅಂದು ಭಾಗವಹಿಸದ ಇತರೆ ಮಹನೀಯರುಗಳಿಗೂ ಈ ವಿಷಯ ಸ್ಪಷ್ಟಪಡಿಸಿ ಅವರೇ ತರಬೇತಿ ನೀಡುವಂತೆ ಕೋರಿಕೊಳ್ಳಲಾಗುತ್ತದೆ. ನಂತರ ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿಚ್ಛಿಸಿ ಬಂದ ಸಾಕ್ಷರತಾ ಸ್ವಯಂ ಸೇವಕರುಗಳಿಗೆ ತಲಾ ೫ ಜನ ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿಸುವಂತೆ, ಒಂದೊಂದು ಲಿಟರೆಸಿ ಕಿಟ್‌ಗಳನ್ನು ವಿತರಿಸಲಾಗುತ್ತದೆ. ಪ್ರೇರೇಪಿಸುವ ಕಾರ್ಯ ವಿಧಾನದಲ್ಲಿ ಸಂಪನ್ಮೂಲ ಕೇಂದ್ರದ ಭಿತ್ತಿಪತ್ರಿಗಳನ್ನು ಗ್ರಾಮಸ್ಥರ ಅನುಭಾವಗಳನ್ನು ಬಳಸಿಕೊಳ್ಳಲಾಗುತ್ತದೆ.

ಈ ದಿಸೆಯಲ್ಲಿ ೮೮ರ ಡಿಸೆಂಬರ್ ತಿಂಗಳಿನಲ್ಲಿಯೇ ಸಂಬಂಧಿಸಿದ ವಿವಿಧ ಸರಕಾರಿ ಹಾಗೂ ಸರಕಾರೇತರ ಸಂಸ್ಥೆಗಳಿಗೆ ಮೈಲೆಕ್ಸ್-೮೯ ಕಾರ್ಯತಂಡವು ಭೇಟಿನೀಡಿ ಅವರುಗಳಿಂದ ಸೂಕ್ತ ಸಹಕಾರದ ಭರವಸೆಯನ್ನು ಪಡೆಯಲಾಯಿತು. ನಂತರದಲ್ಲಿ ವಿವಿಧ ಶಾಲೆಗಳನ್ನು, ಸಂಘ ಸಂಸ್ಥೆಗಳನ್ನು ಸಂಪರ್ಕಿಸಿ ಮೈಲೆಕ್ಸ್-೮೯ ಪ್ರಯೋಗವನ್ನು ಹರಡಲಾಗುತ್ತಿದೆ. ಈ ಉತ್ತಮ ಧ್ಯೇಯದ ಕಾರ್ಯಕ್ರಮದಲ್ಲಿ ಭಾಗವಹಿಸಲು ಅನೇಕ ಸೇವಾ ಸಂಸ್ಥೆಗಳು, ಜನಪರ ಸಂಘಟನೆಗಳು ಮುಂದೆ ಬಂದಿದ್ದು ಸಹಕಾರ ಹಸ್ತವನ್ನು ಚಾಚಿವೆ.

ಕಾರ್ಯಪ್ರಗತಿಯನ್ನು ಪರಿಶೀಲಿಸಲು ಸ್ಥಳೀಯವಾಗಿ ಆಯಾ ಶಾಲೆಯ ಉಪಾಧ್ಯಾಯವರ್ಗ ಅಥವಾ ಯುವಕ/ಯುವತಿ ಮಂಡಲಿಯ ಪದಾಧಿಕಾರಿಗಳನ್ನು ಕೋರಿಕೊಳ್ಳಲಾಗುತ್ತಿದೆ. ಹೀಗೆ ಇದೊಂದು ಜನಾಂದೋಲನವಾಗಿ ಅವರಿಂದಲೇ ನಡೆಯುವಂತಾಗುವ ಕಾರ್ಯಕ್ರಮವಾಗಬೇಕೆಂಬ ಮಹತ್ವಾಕಾಂಕ್ಷೆ ಮೈಲೆಕ್ಸ್-೮೯ ತಂಡದ್ದಾಗಿದೆ.

ಕಾರ್ಯಾಚರಣೆಯಲ್ಲಿನ ಪ್ರಮುಖ ಸಂಸ್ಥೆಗಳು :

ಜೆ. ಎಸ್. ಎಸ್. ಮಹಾವಿದ್ಯಾಪೀಠ :

ಮೈಸೂರು ಭಾಗದಲ್ಲಿಯೇ ಶಿಕ್ಷಣ ರಂಗದಲ್ಲಿ ಬೃಹತ್ ವ್ಯವಸ್ಥೆಯಾಗಿ ಬೆಳೆದು ಅನೇಕ ಸ್ತರದ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದ್ದು, ಖ್ಯಾತಿ ಪಡೆದಿರುವ ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾವಿದ್ಯಾಪೀಠವು ಈ ಪ್ರಯೋಗದ ಒಂದು ಪ್ರಮುಖ ಸಂಸ್ಥೆಯಾಗಿದೆ. ತನ್ನ ವ್ಯಾಪ್ತಿಯಲ್ಲಿರುವ, ಜಿಲ್ಲೆಯ ಎಲ್ಲಾ ಪ್ರೌಢಶಾಲೆಗಳನ್ನು ಅವುಗಳ ವಿದ್ಯಾರ್ಥಿ ಮುಖೇನ ಈ ಪ್ರಯೋಗದಲ್ಲಿ ತೊಡಗಿಸಲು ನಿರ್ಧರಿಸಿ ಕಾರ್ಯ ನಡೆಸುತ್ತಿದೆ. ಅಲ್ಲದೆ ಇದರದೇ ಪೋಷಿತ ಸಂಸ್ಥೆಯಾದ ಜಶಿರಾ ಶಿಕ್ಷಣ ಸಂಶೋಧನೆ ಮತ್ತು ತರಬೇತಿ

ಮಂಡಲಿಯು ಈ ಕಾರ್ಯದಲ್ಲಿ ನಿರತರಾಗಿ ಯಶಸ್ಸು ಗಳಿಸಿದ ವಿದ್ಯಾರ್ಥಿ ಹಾಗೂ ಯುವಜನ ಸ್ವಯಂ ಸೇವಕರಿಗೆ ಸೂಕ್ತ ಅರ್ಹತಾ ಪತ್ರಗಳನ್ನು ನೀಡುವ ಭರವಸೆ ನೀಡಿರುತ್ತದೆ. ಸಂಸ್ಥೆಯ ಮುಖ್ಯಸ್ಥರುಗಳೆಲ್ಲರೂ ಈ ಪ್ರಯೋಗಕ್ಕೆ ತಮ್ಮ ನೈತಿಕ ಬೆಂಬಲವನ್ನು ಸಾರಿದ್ದಾರೆ. ತಮ್ಮ ಶಾಲೆಗಳ ಮೂಲಕ ಆಗುತ್ತಿರುವ ಕಾರ್ಯ ಪ್ರಗತಿಯನ್ನು ಪರಿಶೀಲಿಸಿ ಸೂಕ್ತ ಮಾರ್ಗದರ್ಶನ ನೀಡಲು ಪ್ರತಿ ಶಾಲೆಯಲ್ಲಿಯೂ ಒಬ್ಬೊಬ್ಬ (ಕೆಲವೆಡೆ ಹಲವು ಮಂದಿ) ಮೈಲೆಕ್ಸ್ ಟೀಚರ್–ಗೈಡ್‌ಗಳು ಕೆಲಸ ಮಾಡುತ್ತಿದ್ದಾರೆ. ಈವರೆಗಿನ ವರದಿಯೊಂದು ತಿಳಿಸುವಂತೆ, ೭೪೮ ವಿದ್ಯಾರ್ಥಿ ಸ್ವಯಂ ಸೇವಕರು, ೨೬೨೩ ಮಂದಿ ಅನಕ್ಷರಸ್ಥರಿಗೆ ಅಕ್ಷರ ಕಲಿಸುತ್ತಿದ್ದಾರೆ (ಕೆಲವು ಸಂಸ್ಥೆಗಳಿಂದ ಇನ್ನೂ ವರದಿಗಳು ಬರಬೇಕಿದೆ). ಅಲ್ಲದೆ ಕೆಲವು ಶಾಲೆಗಳು ಒಂದೊಂದು ಗ್ರಾಮವನ್ನು (ಕೆಲವೆಡೆ ಕಾಲೊನಿಯನ್ನು) ನಿರ್ದಿಷ್ಟ ಅವಧಿಯಲ್ಲಿ ಪೂರ್ಣ ಸಾಕ್ಷರತಾ ಪ್ರದೇಶ ಎಂದು ಘೋಷಿಸಲು ಬೇಕಾದ ತೀವ್ರರೀತಿಯ ಕಾರ್ಯಕ್ರಮ ಹಾಕಿಕೊಂಡಿರುತ್ತವೆ. ಕಾರ್ಯ ಪ್ರಗತಿಯನ್ನು ಆಗಾಗ್ಗೆ ಪರಿಶೀಲಿಸಿ ಚರ್ಚಿಸಲು ನಿಯತವಾಗಿ ಮುಖ್ಯೋಪಾಧ್ಯಾಯರುಗಳ ಸಭೆಯೂ ನಡೆಯುತ್ತಿದೆ.

ನೆಹರು ಯುವ ಕೇಂದ್ರ :

ಇದು ಭಾರತ ಸರಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ಯುವಜನ ಕ್ರೀಡಾ ವಿಭಾಗದಿಂದ ಸ್ಥಾಪಿತವಾಗಿರುವ, ಮೈಸೂರು ಜಿಲ್ಲೆಯನ್ನು ತನ್ನ ಕಾರ್ಯಕ್ಷೇತ್ರವಾಗುಳ್ಳ ಸಂಸ್ಥೆ. ಈ ಸಂಸ್ಥೆಯು ಜಿಲ್ಲೆಯಲ್ಲಿರುವ, ತನ್ನ ಕಾರ್ಯ ವ್ಯಾಪ್ತಿಗೆ ಒಳಪಟ್ಟು ಬರುವ ಎಲ್ಲಾ ಯುವಕ/ಯುವತಿ ಮಂಡಲಿಗಳನ್ನು ಪ್ರೇರೇಪಿಸಿ ಅದರಲ್ಲಿನ ವಿದ್ಯಾವಂತ ಹಾಗೂ ಅನಕ್ಷರಸ್ಥ ಸದಸ್ಯರುಗಳೆಲ್ಲರೂ ಈ ಪ್ರಯೋಗದಲ್ಲಿ ನಿರತರಾಗುವಂತೆ ಮಾಡುವ ಪಣ ತೊಟ್ಟಿದೆ. ಈವರೆಗೆ ಸುಮಾರು ೬೦ ಯುವ ಸಂಘಟನೆಗಳನ್ನು ಸಂಪರ್ಕಿಸಿ ಅವರು ಸಾಕ್ಷರತಾ ಕಾರ್ಯದಲ್ಲಿ ತೊಡಗಿಕೊಳ್ಳುವಂತೆ ಪ್ರೇರೇಪಿಸಲಾಗಿದೆ. ಈ ನೆಹರು ಯುವ ಕೇಂದ್ರದ ಯುವಜನ ಸಮನ್ವಯಾಧಿಕಾರಿಗಳು ಹಾಗೂ ಸ್ವಯಂಸೇವಕರು ವಿದ್ಯಾರ್ಥಿಗಳನ್ನು ಯುವಜನರನ್ನು ಪ್ರೇರೇಪಿಸುವ ಮೈಲೆಕ್ಸ್–ರ್ಲ ಕಾರ್ಯತಂಡದ ಸಕ್ರಿಯ ಸದಸ್ಯರಾಗಿದ್ದಾರೆ. ಕೆಲವೊಂದು ಗ್ರಾಮಗಳನ್ನು ಒಂದು ನಿರ್ದಿಷ್ಟ ಅವಧಿಯೊಳಗೆ ಪೂರ್ಣ ಸಾಕ್ಷರತಾ ಗ್ರಾಮಗಳೆಂದು (೧೫ ರಿಂದ ೩೫ ರ ವಯಸ್ಸಿನವರನ್ನು) ಘೋಷಿಸಲು ಕಾರ್ಯಸನ್ನದ್ಧವಾಗಿದೆ.

ರಾಜ್ಯ ಸಂಪನ್ಮೂಲ ಕೇಂದ್ರ :

ಇದು ರಾಜ್ಯದಲ್ಲಿ ವಯಸ್ಕರ ಶಿಕ್ಷಣ ಕಾರ್ಯಕ್ರಮಕ್ಕೆ ಅಗತ್ಯ ತಾಂತ್ರಿಕ/ಶೈಕ್ಷಣಿಕ ಸಂಪನ್ಮೂಲಗಳನ್ನು ಒದಗಿಸಲು ಭಾರತ ಸರಕಾರದ, ಮಾನವ ಸಂಪನ್ಮೂಲ ಸಚಿವಾಲಯದ ನೆರವಿನಿಂದ ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ಆಶ್ರಯದಲ್ಲಿ ನಡೆಯುತ್ತಿರುವ ಸಂಸ್ಥೆ. ಇಲ್ಲಿನ ಸಂಶೋಧಕ ಅಧಿಕಾರಿಗಳು ಮೈಲೆಕ್ಸ್–ರ್ಲ ಕಾರ್ಯತಂಡದ ಸಕ್ರಿಯ ಸದಸ್ಯರಾಗಿರುತ್ತಾರೆ. ಅಲ್ಲದೇ ಈ ಪ್ರಯೋಗಕ್ಕೆ ಅಗತ್ಯ

ವಾದ ಸಾಕ್ಷರತಾ ಸಂಚಿಗಳನ್ನು ಭಿತ್ತಿ ಪತ್ರಗಳನ್ನು ರಾಜ್ಯ ಸಂಪನ್ಮೂಲ ಕೇಂದ್ರವೇ ಒದಗಿಸುತ್ತಿದೆ.

ಜೆ.ಎಸ್.ಎಸ್. ಶ್ರಮಿಕ ವಿದ್ಯಾಪೀಠ :

ಇದು ಭಾರತ ಸರಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ವತಿಯಿಂದ ಜೆ.ಎಸ್.ಎಸ್. ಮಹಾವಿದ್ಯಾಪೀಠದ ಆಶ್ರಯದಲ್ಲಿ, ನಗರ ಪ್ರದೇಶದ ಕಾರ್ಮಿಕ ಯುವಜನರಿಗೆ ಕೌಶಲ್ಯಾಧಾರಿತ ತರಬೇತಿಗಳನ್ನು, ಶಿಕ್ಷಣ ಕಾರ್ಯಕ್ರಮಗಳನ್ನು ವ್ಯವಸ್ಥೆ ಮಾಡಿ ಬದುಕು ಸ್ಥಿರಗೊಳ್ಳುವಂತೆ ಮಾಡುವ ಉದ್ದೇಶದಿಂದ ಕಾರ್ಯ ನಿರ್ವಹಿಸುತ್ತಿರುವ ಸಂಸ್ಥೆ. ಈ ಪ್ರಯೋಗದ ಸಂಚಾಲಕತ್ವವನ್ನು ಮತ್ತು ಸಮನ್ವಯತೆಯನ್ನು ರೂಢಿಸುವ ಜವಾಬ್ದಾರಿ ಈ ಸಂಸ್ಥೆಯದಾಗಿದೆ. ಈ ಸಂಸ್ಥೆಯ ಎಲ್ಲಾ ಸಿಬ್ಬಂದಿ ವರ್ಗ ಮೈಲೆಕ್ಸ್-ಲರ್ ಕಾರ್ಯತಂಡದ ಸಕ್ರಿಯ ಸದಸ್ಯರಾಗಿದ್ದಾರೆ.

ಸಮನ್ವಯ ಸಮಿತಿ ಸಭೆಗಳು :

ಕಾರ್ಯಕ್ರಮ ನಡೆಯುತ್ತಿರುವ ಬಗೆಯನ್ನು ಚರ್ಚಿಸಲು ಸೂಕ್ತ ಸತ್ವಕಾರಿ ಕ್ರಮಗಳನ್ನು ಹಮ್ಮಿಕೊಳ್ಳಲು, ಕಾರ್ಯಾಚರಣೆಯಲ್ಲಿ ತೊಡಗಿರುವ ಸಂಸ್ಥೆಗಳು, ಖಾಸಗಿ ಅನುಭವೀ ವ್ಯಕ್ತಿಗಳು, ಶಾಲೆಗಳು, ಇವರುಗಳ ಪ್ರತಿನಿಧಿಗಳನ್ನೊಳಗೊಂಡ ಮೈಲೆಕ್ಸ್ ಸಮನ್ವಯ ಸಮಿತಿಯೊಂದು ರೂಪಿತಗೊಂಡಿದ್ದು ಆಗಾಗ್ಗೆ ಸಭೆ ಸೇರಿ ಚರ್ಚಿಸಿ ನಿರ್ಣಯಗಳನ್ನು ತೆಗೆದುಕೊಳ್ಳುತ್ತದೆ.

ಈ ರೀತಿಯಲ್ಲಿ ಮೈಲೆಕ್ಸ್-ಲರ್ ಪ್ರಯೋಗವು ಕಾರ್ಯಾರಂಭವಾಗಿದ್ದು, ಅನೇಕ ವಿದ್ಯಾರ್ಥಿಗಳು ಯುವಜನರು ಜಿಲ್ಲೆಯನ್ನು ಸಾಕ್ಷರಗೊಳಿಸುವ ದಿಸೆಯಲ್ಲಿ ಕಾರ್ಯ ಪ್ರವೃತ್ತರಾಗಿದ್ದು ಒಂದು ಆಶಾದಾಯಕ ಪ್ರಯೋಗವೆನಿಸಿದೆ.

ಸ್ವರಾಜ್ಯವೆಂದರೆ ಸ್ವೈರ್ಯವಲ್ಲ. ಸ್ವಾತಂತ್ರ್ಯದ ನಿಜವಾದ ಅರ್ಥ ಸ್ವಸಂಯಮ, ಸ್ವನಿಯಮನಗಳಲ್ಲಿ ಅಡಗಿದೆ.

ಗಾಂಧೀಜಿ

ನೀರು ಮಕ್ಕಳು: ನೀರಿನಲ್ಲಿ ಹೆರಿಗೆ ವಾರ್ಡುಗಳು

ವಿಲಿಯಂ ಅಗಬೆಕೋವ್

ಆ ಹೆಣ್ಣು ಮಗು ಮಲಗಿದೆ. ಕೂಸು ಹಾಯಾಗಿ ಮಲಗಿದೆಯೋ ಇಲ್ಲವೋ ಎಂಬುದನ್ನು ನೋಡಲು ಅದರ ತಂದೆ—ತಾಯಿಗಳು ಕೂಸಿನತ್ತ ಆಗಾಗ್ಗೆ ಧಾವಿಸುತ್ತಾರೆ. ನಿಜಕ್ಕೂ ಮಗು ಹಾಯಾಗಿ ಮಲಗಿದೆ. ಆದರೆ, ತೊಟ್ಟಿಲೊಳಗಲ್ಲ; ಸಮುದ್ರದಲ್ಲಿ, ಕಪ್ಪು ಸಮುದ್ರದಲ್ಲಿ. ಮುಡಿಯಿಂದ ಪಾದದವರೆಗೆ ಬಿಸಿತೆರೆಗಳಿಂದ ಮಗು (ಬೆಚ್ಚಗಿನ ರಗ್ಗಿನೋಪಾದಿಯಲ್ಲಿ) ಹೊದಿಸಲ್ಪಟ್ಟಿದೆ. ಮಗು, ಇಯಾಳ ತಂದೆ—ತಾಯಿಯರು ಸಮುದ್ರದಲ್ಲಿ ಅವಳತ್ತ ಈಜುತ್ತ ಹೊರಳುತ್ತ ತೂಗುತ್ತಾರೆ; ಪೈದಡವುತ್ತಾರೆ. ಸಮುದ್ರದಲ್ಲಿ ಮಗುವಿಗೆ ತಾವು ಜನ್ಮ ನೀಡುವ ಬಗ್ಗೆ ಕೆಲಗಂಟೆಗಳ ಮೊದಲು ಅವರಿಗೇ ನಂಬಿಗೆಯಿರಲಿಲ್ಲ. ಬಾಹ್ಯ ಜಗತ್ತಿಗೆ ಬಂದು ಕಣ್ಣು ತೆರೆಯುವ ಮೊದಲೇ ಮಗು ನೀರಲ್ಲಿ ಮರೆಯಾಯಿತು.

ಮಗುವಿಗೆ ಎಚ್ಚರವಾಗುತ್ತಲೇ ಇಡೀ ಬಾಗ್ರೀಸ್ಕೀ ಕುಟುಂಬ—ತಾಯಿ ಕಾತ್ಯಾ, ತಂದೆ ವಾಲ್ಡಿಮಿರ್ ಮತ್ತು ಮಗು ಇಯಾತಾನೇ ಎಲ್ಲ ಸೇರಿ ಒಂದೆಡೆ ಕಪ್ಪು ಸಮುದ್ರದಲ್ಲಿ ಮೊದಲಿಗೆ ಈಜಾಡಿದರು. ಕೆಲವೇ ಬೀಚುಗಳಲ್ಲಿ ನಾವು ಈ ನೋಟವನ್ನು ನೋಡಬಹುದಾದರೂ ಸಮುದ್ರದಲ್ಲಿ ಮಗು ಹುಟ್ಟುವುದು ಕೌತುಕವಾಗಿ ಈಗ ಉಳಿದಿಲ್ಲವೆನಿಸುತ್ತಿದೆ. ರಷ್ಯದಲ್ಲಿ ಮತ್ತು ಫ್ರಾನ್ಸ್, ಅಮೆರಿಕ, ಸ್ಕ್ಯಾಂಡಿನೇವಿಯಾ ದೇಶಗಳಲ್ಲಿ ಈಗ ಹೆಚ್ಚು ಹೆಚ್ಚು ಮಕ್ಕಳು ನೀರಲ್ಲೇ ಜನ್ಮ ತಳೆಯುತ್ತಿದ್ದಾರೆ.

ಸಮುದ್ರದಲ್ಲಿ ಅಥವಾ ಮನೆಯಲ್ಲಿ ಸುಮಾರು ಏಳುನೂರಕ್ಕೂ ಹೆಚ್ಚಿಗೆ ಮಕ್ಕಳು ರಷ್ಯ ದೇಶದೊಳಗೆ ನೀರಲ್ಲಿ ಜನ್ಮ ನೀಡಿದ ಬಗ್ಗೆ ದಾಖಲೆ ಇವೆ; ಇವುಗಳಲ್ಲಿ ಒಂದಾದರೂ ಮಗುವಿಗೆ ಸಾವು ಸಂಭವಿಸಿಲ್ಲ; ಯಾವುದೇ ತೊಂದರೆಯಾಗಿಲ್ಲ.

ಕೃಪೆ: ಸ್ಪುಟ್ನಿಕ್, ಜನವರಿ ೧೯೮೯.

ಇಗೋರ್ ಚರ್ಕೋವ್ಸ್ಕಿ ಪ್ರಸ್ತಾಪಿಸಿದಂತೆ, ನೀರಿನಲ್ಲಿಯ ಹುಟ್ಟು ಮತ್ತು ಬೇಗ ಈಜಾಡುವದಕ್ಕೆ ವಿಶೇಷ ಪುರಾವೆಗಳನ್ನು ಇಂಥ ಮಕ್ಕಳು ನೀಡಿರುತ್ತಾರೆ. ಈ ಬಗೆಯ ಹುಟ್ಟುಗಳು ತಾಯಂದಿರನ್ನು ಅತೀ ನೋವು ಮತ್ತು ಹುಟ್ಟು ಅಘಾತಗಳಿಂದ ಪಾರು ಮಾಡುತ್ತವೆಂಬುದಕ್ಕೆ ಚರ್ಕೋವ್ಸ್ಕಿ ಪ್ರತಿಪಾದಿಸಿದ್ದುದು ನಿಜವೇ ಆಗಿದೆ. ಅಲ್ಲದೇ ಇಂಥ ಮಕ್ಕಳು ಭೂಮಿ ಮೇಲಿನ ಮಕ್ಕಳಿಗಿಂತ ಸಹಜವಾಗಿ ನಿರಾತಂಕವಾಗಿ ನೀರಿನಿಂದ ಜೀವನಕ್ಕೆ ಹೊಂದಿಕೊಳ್ಳುತ್ತಾರೆ. ಪ್ರಪಂಚದಲ್ಲಿ ಮೊದಲಬಾರಿಗೆ ಕಣ್ಣು ತೆರೆದ ಮಗುವಿಗೆ ಏನನಿಸುತ್ತದೆಂಬುದು ಇದುವರೆಗೆ ಯಾವ ವಿಷಯ ತಜ್ಞರಿಗೂ ಗೊತ್ತಿಲ್ಲ ಆದರೆ, ತಾಯಿಯ ಗರ್ಭದಿಂದ ಹೊರದಬ್ಬಿದ ಕೂಡಲೇ ಮಗುವು ತೀವ್ರವಾದ ಗುರುತ್ವಾಕರ್ಷಕ ಪೆಟ್ಟನ್ನು ತಿನ್ನುತ್ತದೆಂಬುದು ಮಾತ್ರ ಅವರಿಗೆ ಗೊತ್ತಿದೆ. ಮೂರ್ನಾಲ್ಕು ಪಟ್ಟು ಹೆಚ್ಚಿಗೆ ಪ್ರಾಣವಾಯು ಮಗುವಿಗೆ ಬೇಕಾಗುತ್ತದೆ. ತಾಯಿಯ ಗರ್ಭದಲ್ಲಿದ್ದಾಗ ಪಡೆದ ಎಲ್ಲ ಶಕ್ತಿಯೂ ಹೊರಗೆ ಬಂದಾಕ್ಷಣ ಗುರುತ್ವಾಕರ್ಷಣೆಯನ್ನು ಸರಿದೂಗಿಸಿ ಬಾಹ್ಯ ಜಗತ್ತಿನ ಪರಿಸರಕ್ಕೆ ಹೊಂದಿಕೊಳ್ಳಲು ವಿನಿಯೋಗವಾಗುತ್ತದೆ. ಯಾವುದೇ ವ್ಯಕ್ತಿ ಅವನು ಹುಟ್ಟಿದ ನಂತರದ ಪ್ರತಿ ಸೆಕೆಂಡು ಸಹ ಮುಂದಿನ ಅವನ ಮಾನಸಿಕ ಬೆಳವಣಿಗೆಗೆ ಸಂಬಂಧ ಹೊಂದಿದೆಂಬುದು ಇದುವರೆಗಿನ ಸಂಶೋಧನೆಗಳಿಂದ ಸಿದ್ಧವಾಗಿದೆ. ಸಂಕ್ಷಿಪ್ತವಾಗಿ ಹೇಳಬೇಕೆಂದರೆ—ಹುಟ್ಟು ಅಘಾತಗಳು ಮಾನಸಿಕ ರೋಗಗಳಿಗೆ ದಾರಿ ಮಾಡಿಕೊಡುತ್ತವೆ.

ನೀರಿನಲ್ಲಿಯ ಮಗುವಿನ ಹುಟ್ಟು, ಮಗುವನ್ನು ತಾಯಿಯ ಸಾಂಪ್ರದಾಯಿಕ ನೀರಿನ ಪರಿಸರದಿಂದ ಏಕರೂಪವಾದ ಪರಿಸರ ಸೇರಲು ಸಾಧ್ಯವಾಗುತ್ತದೆ. ಶೂನ್ಯದಿಂದ ಶೂನ್ಯಕ್ಕೆ ಧಾವಿಸುತ್ತಿರುವ ಶಿಶು ಹೆಚ್ಚಿನ ಅಸಾಧಾರಣ ಭಾರವನ್ನು ಪ್ರತಿರೋಧಿಸದೇ ಮೂರ್ನಾಲ್ಕು ಪಟ್ಟು ಜೀವನದ ಸ್ಥರಗಳನ್ನು ಮಿತವ್ಯಯಗೊಳಿಸ ಬೇಕಾಗುತ್ತದೆ. ಇಪ್ಪತ್ತು ವರ್ಷಗಳ ಹಿಂದೆ ಹೀಗೆ ಚರ್ಕೋವ್ಸ್ಕಿಯ ವಿಚಾರ ಪ್ರಕಟವಾಗಿತ್ತು.

ಭೂಮಿಯ ಗುರುತ್ವಾಕರ್ಷಕ ಶಕ್ತಿಯನ್ನು ಪ್ರತಿರೋಧಿಸಲು ಮಗು ತನ್ನಲ್ಲಿಯ ಶಕ್ತಿಯನ್ನು ಉಪಯೋಗಿಸಬೇಕಾಗಿಲ್ಲವೆಂದು ಈಗ ತಿಳಿದು ಬಂದಿದ್ದು ಅದು ತನ್ನ ಇಡೀ ದೇಹದ ಬೆಳವಣಿಗೆಗೋಸ್ಕರ ಇರುತ್ತದೆ. ಬೆಳೆಯುತ್ತಿರುವ ಶಿಶು ಎಷ್ಟೊಂದು ವ್ಯಾಯಾಮ ಮಾಡುತ್ತದೆಂದು ನೋಡಿದರೇ ಸಾಕು. ಅವು ಮಾಡುತ್ತಿರುವ ಸ್ನಾಯುಗಳ ಕಸರತ್ತು, ಚಪಲತೆ ನಮ್ಮನ್ನು ಚಕಿತಗೊಳಿಸುತ್ತದೆ. ನೀರಲ್ಲಿ ಹುಟ್ಟಿದ ಮಕ್ಕಳು (ನೀರು ಮಕ್ಕಳು) ತಮ್ಮ ಸಮಕಾಲೀನರಿಗಿಂತ ಮೊದಲೇ ಕೂಡಲು, ನಿಲ್ಲಲು ಮತ್ತು ನಡೆಯಲು ಪ್ರಾರಂಭಿಸುತ್ತವೆ. ಮತ್ತು ಈ ಮಕ್ಕಳು ನಿಜವಾಗಿಯೂ ಚುರುಕಾದ ಈಜುಗಾರರು. ಹುಟ್ಟಿದ ನಾಲ್ಕು ಗಂಟೆಯೊಳಗೆ ನೀರಲ್ಲಿ ಯಾರ ಸಹಾಯವಿಲ್ಲದೇ ಈಜುತ್ತಾರೆ; ಅಷ್ಟೇ ಏಕೆ, ಕೆಲವು ತಿಂಗಳು ತುಂಬುತ್ತಲೇ ಹಲವಾರು ಕಿಲೋ ಮೀಟರ್ ಉದ್ದಕ್ಕೂ ಈಜಬಲ್ಲರು.

ನೀರು ಮಕ್ಕಳು ಅವರ ಸಮಕಾಲೀನರಿಗಿಂತ ಸದೃಢಕಾಯರಷ್ಟೇ ಅಲ್ಲ, ಅವರು ಎಂದೂ ಬೇನೆ ಬೀಳುವುದೇ ಇಲ್ಲ ಮತ್ತು ಎಂಥ ಹವಾಮಾನದಲ್ಲೂ ಆರಾಮ ಜೀವಿಸುವ

ಉದಾಹರಣೆಗಳನ್ನು ಚಕೊರ್ೀವ್ಸ್ಕೀ ಸ್ವತಃ ಕಂಡು ಕೊಂಡಿದ್ದಾನೆ. ಎಂದಾದರೂ ಜಡ್ಡಿಗೆ ಬಿದ್ದರೆ ಹೆಚ್ಚಿನ ಆರೈಕೆಯೇನೂ ಆ ಮಕ್ಕಳಿಗೆ ಬೇಕಾಗಿರುವುದಿಲ್ಲ.

ಭ್ರೂಣಾವಸ್ಥೆಯಲ್ಲಿದ್ದಾಗ, ಅನವಶ್ಯಕ ಗಾತ್ರದ ತಲೆಯನ್ನು ಈ ಮಕ್ಕಳು ಹೊಂದಿರುತ್ತಾರೆಂದು ಜೀವಶಾಸ್ತ್ರದನ್ವಯ ವಿಷಯ ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ. ತಲೆ ದೊಡ್ಡದಿದ್ದರೆ ಮುಂದೆ ಅನೇಕ ತೊಂದರೆಗಳು ಉದ್ಭವಿಸಬಹುದು. ಗರ್ಭಿಣಿಯರಿಗೆ ತೀವ್ರ ವ್ಯಾಯಾಮ ನೀಡುವುದರಿಂದ ಸೊಂಟದ ಕೀಲುಗಳು ಹೆಚ್ಚು ಸ್ಥಿತಿ-ಸ್ಥಾಪಕ ಗುಣ ಹೊಂದಿ ದೊಡ್ಡ ತಲೆಯ ಮಗುವಿಗೆ ತಾಯಿ ಜನ್ಮ ನೀಡಬಹುದೆಂದು ಚಕೊರ್ೀವ್ಸ್ಕೀಯ ಅಭಿಪ್ರಾಯ.

ಚಕೊರ್ೀವ್ಸ್ಕೀಯ ಈ ಪದ್ಧತಿ ರೂಢಿಯಲ್ಲಿ ವ್ಯಾಪಕ ಪ್ರಚಾರದಲ್ಲಿದೆ. ಭೂಮಿಯ ಮೇಲೆ ಅದೇ ಆಗ ಹುಟ್ಟಿದುದಕ್ಕಿಂತ ನೀರಲ್ಲಿ ಹುಟ್ಟಿದುದು ಹೆಚ್ಚು ಈಜುತ್ತದೆ. ಅತಿಗಾಮಿ ತರಂಗಗಳ ಮೂಲಕ ಭ್ರೂಣದ ಜನ್ಮಾರಭ್ಯ ಚಲನವಲನೆಯನ್ನು ಕಾಣಲಾಗಿದೆ.

ಇಯಾಳ ತಾಯಿಯ ಹೆರಿಗೆಯಲ್ಲಿ ಜಾಗತಿಕ ಆರೋಗ್ಯ ಸಂಸ್ಥೆಯ ಪ್ರತಿನಿಧಿ ಮಾರ್ಟಿನ್ ವ್ಯಾಗ್ನರ್ ಹಾಜರಿದ್ದು ಆ ಬಗ್ಗೆ ಏನೂ ಅನುಮಾನಿಸಲಾರದ ಒಪ್ಪಿಗೆ ಅವನದು. ಆದರೆ, ರಷ್ಯದ ಹೆಸರಾಂತ ಪ್ರಸೂತಿ ತಜ್ಞರು ಮತ್ತು ಸ್ತ್ರೀರೋಗ ಚಿಕಿತ್ಸಾ ತಜ್ಞರು ನೀರಲ್ಲಿ ಮಗು ಹುಟ್ಟುವ ಬಗ್ಗೆ ಒಳ್ಳೇ ಅಭಿಪ್ರಾಯ ನೀಡುತ್ತಿಲ್ಲ. ಅವರ ವಾದಸರಣಿ ಹೀಗಿದೆ:–

"ಅಪ್ಪಿಮಮ್ ಉಷ್ಣಾಂಶದ ಶೂನ್ಯ ಪರಿಸರದಿಂದ ಮಗು ಕಡಿಮೆ ಉಷ್ಣಾಂಶದ ಅಪೂರ್ಣ ಪರಿಸರಕ್ಕೆ ಧಾವಿಸುತ್ತದೆ. ಹೆರಿಗೆ ಸಮಯದ ರಕ್ತ ಸ್ರಾವದ ಗತಿಯೇನು? ಶಾಸ್ತ್ರಸಮ್ಮತವಲ್ಲದ ಈ ಪರಿಸ್ಥಿತಿ ಎಷ್ಟರಮಟ್ಟಿಗೆ ತಾಯಿಗೆ ಸಹಾಯವಾಗಬಲ್ಲುದು?

ಆದರೆ, ಸಾಮಾನ್ಯ ಹೆರಿಗೆಯಲ್ಲೂ ಸಹ ಶೂನ್ಯವೆಂದು ಹೇಳಲಾಗದ ಪರಿಸರದತ್ತ ಮಗು ಧಾವಿಸುತ್ತದೆ. ಹುಟ್ಟುವ ಎಲ್ಲ ಮಕ್ಕಳೂ ಆಸ್ಪತ್ರೆಯಲ್ಲೇನೂ ಹುಟ್ಟುವದಿಲ್ಲ. ಮತ್ತು, ಗರ್ಭಾಶಯದ ಉಷ್ಣತೆಗೂ ಪರಿಸರದ ಉಷ್ಣತೆಗೂ ಹೆಚ್ಚಿನ ವ್ಯತ್ಯಾಸವಿರುತ್ತದೆ.

ಹೆರಿಗೆ ಸಮಯದಲ್ಲಿನ ರಕ್ತಸ್ರಾವದ ಬಗ್ಗೆ ಹೇಳುವದಾದರೆ, ಚಕೊರ್ೀವ್ಸ್ಕೀ ಹೇಳುವ ಹೆರಿಗೆಗಳಲ್ಲಿ ಯಾವ ಸಮಸ್ಯೆಗಳೂ ಉದ್ಭವಿಸಿಲ್ಲ. ಬಹುಶಃ ನೀರು ಇಲ್ಲಿ ಮುಖ್ಯವಾಗಿರಬಹುದು. ಏನೇ ಆದರೂ, ಚಕೊರ್ೀವ್ಸ್ಕೀ ಪದ್ಧತಿ ಒಳ್ಳೆಯದಲ್ಲವೆಂಬ ಭಾವನೆಯನ್ನು ಯಾವ ವೈದ್ಯರೂ ತಳೆಯದೇ ವಿವರ ಅಭ್ಯಾಸ ಮಾಡುತ್ತಾರೆ. ಪ್ರಯುಕ್ತ, ಶಿಶಿಷ್ಟ ಪ್ರಯೋಗಾಲಯಗಳು ಈಗ ಅವಶ್ಯವಿರುತ್ತವೆ. ಅದೇನೆ ಇದ್ದರೂ, ದುಬಾರಿ ಪ್ರೆಶರಚೇಂಬರಗಳಿಗಿಂತ ನೀರಲ್ಲಿಯ ಹೆರಿಗೆ ಹೆಚ್ಚು ಉಪಯುಕ್ತಕಾರಿಯೆಂದು ನಂಬಲು ನಮ್ಮ ಪ್ರಸವತಜ್ಞರು ಹಾಗೂ ಶಿಶುಶಾಸ್ತ್ರ ತಜ್ಞರಿಗೆ ಬಲವಾದ ಕಾರಣಗಳಿವೆ.

ಅನು : ರಾಜಶೇಖರ ಹಾದಿಮನಿ

ಕಡೆಗಾಲದ ಮುಗುಳರಳಲು ಒಂದವಕಾಶ

ಐಬುಮಾ ಡ್ಯಾನ್

ಜಪಾನಿನ ಬೃಹನ್ನಗರಗಳಲ್ಲೊಂದಾಗಿರುವ ಫುಕುವೊಕಾ ನಗರದ ಪಶ್ಚಿಮ ವಲಯದಲ್ಲೊಂದು ಕಡೆ ಜಲಾಗಾರವೊಂದರ ದಂಡೆಯುದ್ದಕ್ಕೂ ಹಾದುಹೋಗುವ ನಾಲ್ಕು ಮೀಟರಗಲದ ಇಕ್ಕಟ್ಟಿನ ರಸ್ತೆಯಿಂದಾಗಿ ಸಂಚಾರ ವಿನಿಮಯ ಅಸಾಧ್ಯ ಹಂತಕ್ಕೆ ಬಂದು ಆಮೆ ನಡಿಗೆಯಾಗಿತ್ತು. ಇದರಿಂದಾಗಿ ಫುಕುವೊಕಾ ನಗರದ ಈ ರಸ್ತೆಯನ್ನು ೧೨ ಮೀಟರಗಲ ರಸ್ತೆಯಾಗಿ ಹದಗೊಳಿಸಲು ನಿರ್ಣಯಿಸಲಾಯಿತು. ಎಂದರೆ ಈ ಕಾರ್ಯಕ್ಕಾಗಿ ಜಲಾಗಾರದ ದಂಡೆಯುದ್ದಕ್ಕೂ ಸುಂದರವಾಗಿ ಬೆಳೆದು ನಿಂತಿದ್ದ ಚೆರ್ರೀ ಮರಗಳ ಸಾಲನ್ನು ಕತ್ತರಿಸಿಹಾಕಬೇಕಿತ್ತು.

ಮೊಗ್ಗುಗಳಿಂದ ಮೈತುಂಬಿಕೊಂಡಿದ್ದ ಮರವೊಂದು ಈಗಾಗಲೇ ಮರಕಟುಕನ ಕೊಡಲಿಗೆ ಬಲಿಯಾಗಿ ಉರುಳಿದ್ದಾಗಿತ್ತು. ಸಾಲಿನಲ್ಲಿದ್ದ ಸಹಚರಿಗಳಂತೆಯೇ ಸುಮಾರು ಅರ್ಧ ಶತಮಾನಕ್ಕೂ ಮಿಕ್ಕಿ ಜೀವಿಸಿದ್ದ ಈ ಮರವೂ ಸಾಕಷ್ಟು ವಿಶಾಲವಾಗಿಯೇ ಬೆಳೆದಿದ್ದುದಾಗಿತ್ತು. ಮರುದಿನ ಕುಸುಮಿಸಿದ ಚೆರಿಮರಗಳ ಸೌಂದರ್ಯದಿಂದ ಸ್ಫೂರ್ತಿಗೊಂಡು ಬಣ್ಣಿಸಿ ಬರೆಯಲಾದ ಪುರಾತನ ಮಹಾಕಾವ್ಯಗಳ ಮಾದರಿಯಲ್ಲಿ ಬರೆದಿಟ್ಟ ಕವಿತೆಯೊಂದು ಸಾಲಿನಲ್ಲಿ ಮುಂದಿರುವ ಮರದ ಕೊಂಬೆಯಲ್ಲಿ ನೇತಾಡುತ್ತ ಗೋಚರಿಸಿಕೊಂಡಿತು. ಫುಕುವೊಕಾದ ನಗರ ಪಿತನಿಗೆ ಬರೆದ ನಿವೇದನೆಯ ಕಾವ್ಯವಾಗಿತ್ತು ಅದು.

ಚೆರ್ರೀ ಮರಗಳ ಪಾಲಕ ಓ, ವೊ,
ಪೌರಸಭಾಪತಿ ಗೌರವ ಶಿಂದೊ

೧೯೮೫ರ ಅಕ್ಟೋಬರ್ ತಿಂಗಳಿನ 'ರೀಡರ್ಸ್ ಡೈಜೆಸ್ಟ್'ನಲ್ಲಿ ಪ್ರಕಟವಾದ ಐಬುಮಾ ಡ್ಯಾನ್ ಅವರ "ಎ ಫೈನಲ್ ಫ್ಲವರಿಂಗ್" ಲೇಖನದ ಭಾವಾನುವಾದ.

ತೋರ್ರೈ ಕರುಣೆಯ ಕುಸುಮಗಳಲ್ಲೂ
ಕರುಣಿಸು ವಾರಗಳೆರಡರ ಸೊಲ್ಲು
ಕೊನೆಗಾಲದ ಸುವಸಂತದ
ಹೂವರಳಲಿ ಈ ಮರದಲ್ಲೂ.

ಕವಿತೆಯ ಸುದ್ದಿ ಹರಡುತ್ತಿದ್ದಂತೆಯೇ ಸ್ವಲ್ಪವೇ ಸಮಯದಲ್ಲಿ ಮಾರ್ರೋಲೆಯೊಂದು ಮರದ ಕೊಂಬೆಯಲ್ಲಿ ಪಟಪಟಿಸತೊಡಗಿತು. ಆಗತಾನೇ ನುಸುಳಿ ಬರತೊಡಗಿದ್ದ ಕುಳಿರ್ಗಾಳಿಯಲ್ಲಿ ಓಲಾಡುತ್ತಿದ್ದ ಆ ಕರಪತ್ರದಲ್ಲಿದ್ದ ವಾಕ್ಯಗಳೊ!

ಅರಳುವ ಹೂವಿಗೆ ಹಳಹಳಿಸುವ ಎದೆ
ಜಾಪಾನಿಯ ನಿಜ ಗುಣಶೀಲದ ಬೆದೆ
ಜಯಿಸಿರಲೀ ಮೃದು ಭಾವಗಳೆಂದೂ
ಚಿಕುರ್ಝೆನ್* ಚೆರಿಗಳ ರಕ್ಷಕನಿಂದು

—ಕುಜಮಾ

ಕುಜುಮಾ ಎಂಬುದು ಪುರಸಭಾಪತಿ ಶಿಂದೋನ ಕಾವ್ಯನಾಮ. ಮರಕಡಿಯುವಿಕೆ ಮುಂದೂಡಲ್ಪಟ್ಟಿತು. ಕೃತಜ್ಞತೆಯಿಂದ ಮನಮಿಡಿದ ನಾಗರಿಕರು ಮರಗಳ ಕೊಂಬೆ ರೆಂಬೆಗಳೆಲ್ಲ ಮುಚ್ಚುವಂತೆ ನಗರ ಪಿತನ ನಿರ್ಣಯವನ್ನು ಕೊಂಡಾಡುವ ಸಾಲುಗಳಿಂದ ಸಿಂಗರಿಸಿ ಮೆರೆಸಿದರು.

ಮುಂದೆ ಆ ಮರಗಳು ತಮ್ಮ ಕೊನೆಗಾಲದ ಚೈತನ್ಯವನ್ನೆಲ್ಲ ರಾಶಿರಾಶಿಯಾಗಿ ಸೇರಿಸಿದ ಹಾಗೆ, ಫುಕುವೊಕಾದ ಬಾನ ನೀಲಿಮೆಯಲ್ಲಿ ನಸುಗಂದಿನ ನಿರರ್ಗಳವಾದ ಹೂ ಮೋಡಗಳನ್ನರಳಿಸಿ ಮೆರೆದವು.

ನಿಮಗಿದು ಸಾಮಾನ್ಯ ಕತೆಯಾಗಿ ತೋರಬಹುದು. ಆದರೆ ಆಹ್ಲಾದಕರವಾಗಿ ಮರಳಿ ಅರಳಿರುವ ಜನಮನದ ಮಹಾ ಸಂಘಟನೆಯ ಸಂಕೇತ—ಆಧುನಿಕ ಜಪಾನಿನಲ್ಲಿ ಮರೆತೇಹೋಗಿರುವುದೇನೋ ಎನ್ನುವಂಥ ಮಾನವೀಯ ವಿಶ್ವಸ್ಥ ಗುಣದಿಂದ ಹೃದಯ ತುಂಬಿ ಮೆರೆದ ಸ್ಪಂದನ. ಆ ಸುಂದರ ವೃಕ್ಷಗಳಿಗೆ ಕೊನೆಗಾಲದಲ್ಲಿ ಒಂದೇ ಒಂದು ಬಾರಿ ಹೂವರಳಿಸಿ ನಳನಳಿಸುವ ಅವಕಾಶ ದೊರೆಯಲಿ ಎಂದು ಇಚ್ಛಿಸಿದ ಆ ಸಹೃದಯಿ ಯಾರೇ ಆಗಿರಲಿ ಶಿರಸ್ತ್ರಾಣ ಧರಿಸಿದವರ ಮೆರವಣಿಗೆ ಹೊರಡಿಸಲಿಲ್ಲ. ಆತ ಸರಳ ವಾದೊಂದು ಕವನವನ್ನು ಕಟ್ಟಿ ತೂಗಿಸಿದ ಆ ಚೆರೀ ಮರದ ರೆಂಬೆಯೊಂದರಲ್ಲಿ ; ಅಷ್ಟೆ. ಅದೇ ಒಂದು ಎದೆ ತುಂಬಿ ಬರುವಂಥ ಗೈಮೆ.

ಪುರಸಭಾಪತಿಯ ಪ್ರತಿಕ್ರಿಯೆಯಂತೂ ಮತ್ತಷ್ಟು ಮನಮಿಡಿಯುವ ಗೇಯ. ಆ ಮರಗಳ ಭವಿಷ್ಯಕ್ಕಾಗಿ ಮರುಗುವ ಹೃದಯಗಳಿಗೆಲ್ಲ ಮರು ಕವನದ ಮೂಲಕ ದಯಾಮಯನಾಗಿ ಸ್ಪಂದಿಸಿ ಹೂವರಳುವವರೆಗೂ ಹರವು ನೀಡಿದ.

---

*ಫುಕುವೊಕಾದ ಹಿಂದಿದ್ದ ಹೆಸರು.

ಎಲ್ಲಕ್ಕಿಂತ ಮಿಗಿಲಾಗಿದ್ದೆಂದರೆ ಆ ಅಲವತ್ತು ಕೊಂಡವನು ಬೇಡಿದ್ದು ಅನಿವಾರ್ಯ ವೆನಿಸಿರುವ ರಸ್ತೆಯ ವಿಸ್ತರಣೆಯನ್ನು ತಡೆದಿಟ್ಟಾದರೂ ಮರಗಳನ್ನು ಶಾಶ್ವತ ಉಳಿಸಿ ಕೊಡಿ ಎಂದಲ್ಲಿ ಮೊಗ್ಗು ತುಂಬಿಕೊಂಡಿದ್ದ ಅವುಗಳಿಗೆ ಕೊನೆಯ ಒಂದೇ ಒಂದು ಬಾರಿಯ ಹೂವರಳಿಸುವ ಅವಕಾಶ ಒದಗಿಸಿ ಎಂದು ನನಗನಿಸುತ್ತದೆ. ಇದೇ ಪ್ರಭುತ್ವದ ಮೇಲೆ ಪ್ರಭಾವ ಬೀರಬಲ್ಲ ನೈಜ ನಯಗಾರಿಕೆ ಎಂದು.

ಸಂಪಾದಕರ ಮಾತು : ಕವನ ವಿನಿಮಯದ ಆ ಘಟನೆಗೆ ಅಭಿನಂದನೆ. ಫುಕೊ ವೊಕೊ ನಗರಾಧಿಕಾರಿಗಳು ತಮ್ಮ ರಸ್ತೆ ನಿರ್ಮಾಣ ಯೋಜನೆಯನ್ನು ಪುನರಾಲೋಚಿಸಿ ಆ ಮರಗಳ ಸಾಲು ಅಳಿಯದೇ ಉಳಿವಂತೆ ಕೆರೆದಂಡೆಯನ್ನು ಅಗಲವಾಗಿ ರಚಿಸುವ ಮತ್ತೆ ರಸ್ತೆಯನ್ನು ಬೇರೆಯೇ ಮಾಡುವ ನಿರ್ಣಯಕ್ಕೆ ಬಂದರು.

(ಈಗ ಬಹುಶಃ ಆ ಚೆರೀ ಮರಗಳು ಮತ್ತೆ ಮತ್ತೆ ವಸಂತದ ಹೂವರಳಿಸುತ್ತಿರು ವುದಲ್ಲದೆ, ಜಗದಗಲ ಪ್ರಸಿದ್ಧಿ ಪಡೆದು ಲಕ್ಷಾಂತರ ನಿಸರ್ಗ ಪ್ರೇಮಿಗಳ ಹೃದಯ ತುಂಬಿಸುತ್ತಿರಬಹುದು.)

ಅನು : ಶಂಪಾ ದೈತೋಟ

ರಚನಾತ್ಮಕ ಕಾರ್ಯಕ್ರಮದಲ್ಲಿ ಅಸ್ಪೃಶ್ಯತಾ ನಿವಾರಣೆಯ ಸ್ಥಾನವು ಇದು ಸಂಪೂರ್ಣ ಪ್ರೇಮದ ಕಾರ್ಯಕ್ರಮ. ಈ ದೃಷ್ಟಿಯಿಂದಲೇ ನಾವು ರಚನಾತ್ಮಕ ಕಾರ್ಯಕ್ರಮವನ್ನು ಅಧಿಕಾಧಿಕವಾಗಿ ಸಾಧಿಸುವ ಪ್ರಯತ್ನವನ್ನು ಅವಶ್ಯವಾಗಿ ಮಾಡಬೇಕಾಗಿದೆ.

ಗಾಂಧೀಜಿ

ಪುಸ್ತಕ ವಿಮರ್ಶೆ

ಕೇಳು ಕನ್ಯಾಮಣಿ—ಲೇಖಕರು : ನಾಗೇಂದ್ರಪ್ಪ ದಾಗಿನಕಟ್ಟೆ ಪ್ರಕಾಶನ : ಕಾಳಿಂಗ ಪ್ರಕಾಶನ, ದಾಗಿನಕಟ್ಟೆ, ಚನ್ನಗಿರಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ. ಪುಟ : ೬೦, ೧೯೮೯, ಬೆಲೆ : ೬ ರೂಪಾಯಿ.

ಭಾರತೀಯ ಹೆಣ್ಣಿನ ಶೋಷಣೆಯ ವಿವಿಧ ಮುಖಗಳನ್ನು ಕುರಿತು ಈ ಹೊತ್ತಿಗೆ ಕನ್ನಡದಲ್ಲಿ ಹಲವಾರು ಪುಸಕ್ತಗಳು ಬಂದಿವೆ. ಸಾಹಿತ್ಯ ಪ್ರಕಾರದಲ್ಲಿ ಹಾಗೂ ಸಾಹಿತ್ಯೇತರ ಪ್ರಕಾರಗಳಲ್ಲಿ ರೂಪಗೊಂಡು ಬಂದಿರುವ ಕೃತಿಗಳು ಹೆಣ್ಣಿನ ದುರಂತಮಯ ಬದುಕಿನ ಆಳಹರಹುಗಳನ್ನು ತಿಳಿಸುವ ಪ್ರಯತ್ನಗಳನ್ನು ನಡೆಸಿವೆ. ಹಾಗೆ ಹೆಣ್ಣಿನ ಶೋಷಣೆಯನ್ನು ತಮ್ಮ ನೂರೊಂದು ವಚನಗಳ 'ವಸ್ತು'ವನ್ನಾಗಿ ಮಾಡಿಕೊಂಡು ನಾಗೇಂದ್ರಪ್ಪ ದಾಗಿನಕಟ್ಟೆಯವರು 'ಕೇಳು ಕನ್ಯಾಮಣಿ' ಎಂಬ ಆಧುನಿಕ ವಚನ ಸಂಕಲನವನ್ನು ಹೊರತಂದಿದ್ದಾರೆ.

ಹನ್ನೆರಡನೆಯ ಶತಮಾನದ ವಚನ ಸಾಹಿತ್ಯದ ಸೊಗಸು ಸೊಗಡುಗಳಿಗೆ ಮಾರು ಹೋದ ಆಧುನಿಕ ಕನ್ನಡ ಸಾಹಿತಿಗಳಲ್ಲೂ ಕೆಲವರು ಆ ಪ್ರಕಾರದಲ್ಲಿ ಒಂದಿಷ್ಟು ಕೆಲಸ ಮಾಡುವ ಹಂಬಲ ತೋರಿದ್ದಾರೆ. ಎಸ್. ವಿ. ರಂಗಣ್ಣ, ಎಸ್. ವಿ. ಪರಮೇಶ್ವರ ಭಟ್ಟ, ಕೆ. ಅನಂತರಾಮು ಈ ಮುಂತಾದವರು ಆಧುನಿಕ ವಚನ ಸಾಹಿತ್ಯವನ್ನು ರಚಿಸಿ ಪ್ರಕಟಿಸಿದ್ದಾರೆ. ವಚನ ರಚನಾ ಕೆಲಸ ಇನ್ನೂ ಮುಂದುವರಿದಿದೆ. ಆ ಮುಂದುವರಿಕೆಯ ಒಂದು ಭಾಗವಾಗಿ ನಾಗೇಂದ್ರಪ್ಪನವರ ಈ ಕೃತಿ ಪ್ರಕಟವಾಗಿದೆ. ಆದರೆ, ಬಸವಾದಿ ಶರಣರ ವಚನಗಳ ಸಾಮಾಜಿಕ ಕ್ರಾಂತಿಯ ಪರಿಸರ ಹಾಗೂ ಅನುಭವ ಸಂಪನ್ನತೆ ಇಂದಿನ ವಚನಗಳಲ್ಲಿ ಕಂಡು ಬರುವುದಿಲ್ಲವಾದ ಕಾರಣ, ಇಂದಿನ ವಚನಗಳನ್ನು ಬೇರೊಂದು ನಿಲುವಿನಲ್ಲೇ ಪರೀಕ್ಷಿಸಬೇಕಾಗುತ್ತದೆ; ಪರಿಶೀಲಿಸಬೇಕಾಗುತ್ತದೆ.

ಆದರೆ, ಲೇಖಕರು 'ನನ್ನನುಡಿ'ಯಲ್ಲಿ ಹೇಳಿರುವ ಕೆಲವು ಮಾತುಗಳನ್ನು ಇದೇ ಸಂದರ್ಭದಲ್ಲಿ ಗಮನಿಸಬೇಕಾಗುತ್ತದೆ. ಅವರು ಹೇಳುತ್ತಾರೆ 'ಈ ವಚನಗಳನ್ನು ಹನ್ನೆರಡನೆಯ ಶತಮಾನದ ಬಸವಾದಿ ಶರಣರ ವಚನಗಳೊಂದಿಗೆ ಒರೆಹಚ್ಚಿ ನೋಡುವವರೂ ಇದ್ದಾರೆ. ಯಾವುದೋ ಕಾಲದ ಮಾನದಂಡವನ್ನು ಕಂಕುಳಲ್ಲಿರಿಸಿಕೊಂಡು ಸಡಿಲವಾದ ಬಂಧ, ಸರಳಶೈಲಿ, ಗದ್ಯದ ಛಾಯೆ, ಅಪಕ್ವ ಭಾವನೆಗಳು ಎಂದೆಲ್ಲ ಹಿಚುಕಿ ಹಿಚುಕಿ ಮೌಲ್ಯ ನಿರ್ಧರಿಸುವವರೂ ಇದ್ದಾರೆ. ಅಲಂಕಾರ ಒಂದನ್ನೇ ದೃಷ್ಟಿಯಲ್ಲಿಟ್ಟುಕೊಂಡು ಸಹಜ ಸೌಂದರ್ಯವನ್ನು ಅರಿಯದೆ ಇರುವ ಮೂಢಮತಿಗಳೂ ಇದ್ದಾರೆ. ಕಾಲ, ದೇಶ ವಸ್ತುಸ್ಥಿತಿಗಳ ಪ್ರಜ್ಞೆ ಇಲ್ಲದೆ ಜಾತಿವರ್ಗ ಪಕ್ಷ ಪಂಥಗಳನ್ನೇ ಲೆಕ್ಕಹಾಕಿ ಸ್ವೀಕರಿಸುವ ಇಲ್ಲವೇ ಅಲ್ಲಗಳೆಯುವ ಕೂಪಮಂಡೂಕ ಸ್ವಭಾವದವರೂ ಇದ್ದಾರೆ. ಕೇವಲ ಇಂಥವರನ್ನು ದೃಷ್ಟಿಯಲ್ಲಿದ್ದುಕೊಂಡು ನಾನು ಈ ವಚನಗಳನ್ನು ರಚಿಸಿಲ್ಲ' ಮೇಲಿನ ಮಾತುಗಳು ಒಬ್ಬ ಪಕ್ವವಾದ ಲೇಖಕನ ಮನಸ್ಥಿತಿಯನ್ನು ಹೇಳುವುದಿಲ್ಲ.

ಆದರೂ ಹೆಣ್ಣಿನ ಶೋಷಣೆಯನ್ನು ತಮ್ಮ ಕೃತಿಯ ವಸ್ತುವನ್ನಾಗಿ ತೆಗೆದುಕೊಂಡು, ಆ ಮೂಲಕ ಲೇಖಕರು ತಮಗಿರುವ ಸಾಮಾಜಿಕ ಕಳಕಳಿಯನ್ನು ವ್ಯಕ್ತಪಡಿಸಿರುವುದರಿಂದ, ನಾವು ಮೇಲಿನ ಮಾತುಗಳನ್ನೂ ಕೊಂಚ ಪಕ್ಕಕ್ಕೆ ಸರಿಸಿ ಕೃತಿಯ ಅವಲೋಕನ ಮಾಡಬಹುದು.

'ಕೇಳು ಕನ್ಯಾಮಣಿ'ಯ ಪ್ರಥಮ ಭಾಗದ ವಚನಗಳಲ್ಲಿ 'ವರದಕ್ಷಿಣೆ' ಅದರಿಂದ ಆಗುವ ಅನಾಹುತಗಳು, ಅದರ ಬೇರೆ ಬೇರೆ ಮುಖಗಳನ್ನು ತಿಳಿಸಿದರೆ, ಎರಡನೆಯ ಭಾಗದಲ್ಲಿ ಹೆಣ್ಣಿನ ವಿವಿಧ ಬಗೆಯ ಶೋಷಣೆಗಳನ್ನು ಕುರಿತು ವಚನಗಳನ್ನು ರಚಿಸಲಾಗಿದೆ. ವರದಕ್ಷಿಣೆ ಎಂದರೇನು, ಅದರ ಸ್ವರೂಪಗಳು ಯಾವ ಯಾವ ರೀತಿಯಲ್ಲಿ ಇರುತ್ತವೆ ಎಂದು ತಿಳಿಸುತ್ತಾ—

ಹಣ, ಚಿನ್ನ, ಹೊಲ, ಮನೆ, ವಾಹನ,
ಶೈಕ್ಷಣಿಕ ಖರ್ಚು, ಉದ್ಯೋಗ...
ಹೀಗೆ ವಿಧವಿಧ ಮಜಲುಗಳಲ್ಲಿ
ಹೆಣ್ಣ ವರಿಸುವ ವರನಿಗೆ
ಕನ್ಯಾಪಿತೃಗಳು ಅರ್ಪಿಸುವ ಬಳುವಳಿಯೇ
ವರದಕ್ಷಿಣೆ-ಕೇಳು ಕನ್ಯಾಮಣಿ

ಅದೇ ವರದಕ್ಷಿಣೆ ಇಂದು ಇನ್ನೂ ದೇಶದಲ್ಲಿ ಎಷ್ಟೇಲ್ಲ ಹಾನಿ ಮಾಡುತ್ತಿದೆ. ಎಷ್ಟೊಂದು ಅನಾಯಕ ಹೆಣ್ಣುಗಳು ಭಾರತೀಯ ಈ ಕ್ರೂರ ಪದ್ಧತಿಗೆ ಸಿಕ್ಕಿ ನಶಿಸಿ ಹೋಗುತ್ತಿದ್ದಾರೆ ಎಂಬುದನ್ನು ಇನ್ನೊಂದು ವಚನದಲ್ಲಿ ಲೇಖಕರು ಹೀಗೆ ತಿಳಿಸುತ್ತಾರೆ

ವರದಕ್ಷಿಣೆ ಮುಳ್ಳಿನ ಹಾಸಿಗೆ, ಮಡಿಲ ಬೆಂಕಿ,
ಎದೆಗೆ ನೆಟ್ಟ ಶೂಲ, ತಲೆ ಕೊರೆವ ಗರಗಸ,
ಕರುಳಿಗಿಟ್ಟ ಕೊಳ್ಳಿ, ನೆತ್ತಿ ಮೇಲಿನ ಕತ್ತಿ,
ಈ ಬಾಧೆಗಳಿಂದ ಹೆಣ್ಣು ನರನರಳಿ ಚೀರಿದರೂ
ಅದು ಅರಣ್ಯರೋದನವೆಂದು ಕೇಳು ಕನ್ಯಾಮಣಿ

ಎಂದು ಅರಣ್ಯರೋದನವಾಗಿರುವ ಹೆಣ್ಣಿನ ದುಃಖದುಮ್ಮಾನಗಳನ್ನು ತಿಳಿಸುತ್ತಾರೆ.

ವರದಕ್ಷಿಣೆ ಪದ್ಧತಿ ಮುಖ್ಯವಾಗಿ ಭಾರತೀಯ ಸಮಾಜದಲ್ಲಿ ಪ್ರಚಲಿತವಾಗಿದ್ದು, ಅದು ಭಾರತೀಯ ಮನಸ್ಸಿನ ಕ್ರೂರ ಅಥವಾ ಹೀನಾಯ ಸ್ಥಿತಿಯನ್ನು ತಿಳಿಸುತ್ತದೆ. ಲೇಖಕರು ಆ ಪದ್ಧತಿಯನ್ನು 'ಮಹಾಮಾರಿ' ಎಂದು ಹೆಸರಿಸುತ್ತಾ, ಪದ್ಧತಿಗೆ ಪೋಷಕರಾಗಿರುವವರನ್ನು ತರಾಟೆಗೆ ತೆಗೆದುಕೊಳ್ಳುತ್ತಾರೆ. ಹೆಣ್ಣಾದವಳ ದಾರುಣ ಪರಿಸ್ಥಿತಿಯನ್ನು ತಿಳಿಸುತ್ತಾ—

ಕುರಿಯು ಕೊಡುವುದು ಸಾಕಿದೊಡೆಯನ
ಋಣವ ತೀರಿಸಲು ಹಣವ

ಹೆಣ್ಣು ಕೊಡುವಳು ತನ್ನ ಹೆಣವ
ಕುರಿಗಿಂತಲೂ ಕೀಳು ಈ ಹೆಣ್ಣ ಬಾಳು-ಕೇಳು ಕನ್ಯಾಮಣಿ

ಕುರಿಗಿಂತಲೂ ಕೀಳಾದ ಹೆಣ್ಣಿನ ಬಾಳುವೆಯನ್ನು ಪರಿಚಯಿಸಿಕೊಡುವ ಲೇಖಕರು ತಮ್ಮ ಕೆಲವಾರು ವಚನಗಳಲ್ಲಿ ವರದಕ್ಷಿಣೆಯ ಘೋರ ಸ್ವರೂಪಗಳನ್ನು ತಿಳಿಸಿದರೂ, ಸಾಹಿತ್ಯಿಕ ಬಂಧವಿಲ್ಲದೆ, ಪಕ್ವವಾದ ಅನುಭವವಿಲ್ಲದೆ ಬರಿಯ ಮಾತು ಗಳಾಗಿ ನಿಲ್ಲುತ್ತವೆ. ಲೇಖಕರು ತಮ್ಮ ಮುನ್ನುಡಿಯಲ್ಲಿ ಎಷ್ಟೇ ಹೇಳಿಕೊಂಡಿದ್ದರೂ ವರದಕ್ಷಿಣೆಯನ್ನು ಕುರಿತ ವಚನಗಳು ಹೃದ್ಯವಾಗೇನು ಓದುಗರನ್ನು ತಾಕುವುದಿಲ್ಲ.

ಕೃತಿಯ ಎರಡನೆಯ ಭಾಗದಲ್ಲಿ ಹೆಣ್ಣಿನ ಮೇಲೆ ಆಗುತ್ತಿರುವ ದಬ್ಬಾಳಿಕೆ, ಆಕೆಯ ಒಳ್ಳೆಯ ಗುಣಗಳನ್ನು ಲಪಟಾಯಿಸುವುದು, ವೈಧವ್ಯದ ಪ್ರಶ್ನೆ, ಹೆಣ್ಣಿನ ಪರಾವಲಂಬಿತನ ಇತ್ಯಾದಿಗಳನ್ನು ಕುರಿತು ಹತ್ತಾರು ವಚನಗಳನ್ನು ಹೆಣೆಯಲಾಗಿದೆ. ಆ ಎಲ್ಲ ವಚನಗಳಲ್ಲೂ ಹೆಣ್ಣಿನ ನೋವು ಸಂಕಟಗಳನ್ನೇ ಚಿತ್ರಿಸಿದ್ದರೂ ಅವು ಕಾವ್ಯ ವಾಗದೆ ಮುರುಟಿ ಹೋಗಿರುವುದನ್ನು ನಾವು ಸುಲಭವಾಗಿ ಗುರ್ತಿಸಬಹುದು ಒಂದು ವಚನವನ್ನು ನೋಡೋಣ—

ಪತಿಯು ಕ್ರೂರಿಯಾಗಿದ್ದರೂ, ದ್ರೋಹಿಯಾಗಿದ್ದರೂ
ಸರ್ವೋಪಚಾರ, ಔಷಧ, ಚಿಕಿತ್ಸೆಗೆ
ಗುಣವಾಗದ ಮಹಾರೋಗದಿಂದ ಪೀಡಿತನಾಗಿದ್ದರೂ
ದೀರ್ಘಕಾಲದ ಯಾತ್ರೆಯಿಂದ ಹಿಂದಿರುಗದಿದ್ದರೂ
ಕಡೆಗೆ ಷಂಡನಾದರೂ ನಂಬಿ ಬಾಳುವ ಹೆಣ್ಣೆ
ಇದರೊಳೊಂದಾದರೂ ಕೊರತೆ ನಿನಗಿದ್ದಿದ್ದರೆ!
ಪುರುಷ ನಿನ್ನೊಡಗೂಡಿ ಬಾಳುತ್ತಿದ್ದನೇ ಕೇಳು ಕನ್ಯಾಮಣಿ

ವಚನ ವಿಷಯವನ್ನು ಹೇಳುತ್ತಿದ್ದರೂ, ಅದು ಒಂದು ಪಟ್ಟಿಯಾಗುವುದಕ್ಕಿಂತ ಹೆಚ್ಚಿನದೇನನ್ನೂ ಮಾಡುತ್ತಿಲ್ಲ. ಹೀಗಾಗಿ, ವಚನ ಸಂವಹನೆಯಲ್ಲಿ ಸೋಲುತ್ತದೆ. ಇದೇ ಗತಿ ಇಲ್ಲಿನ ಎಲ್ಲ ವಚನಗಳ ಸ್ಥಿತಿಯೂ ಆಗಿದೆ.

ಸಾಹಿತ್ಯದಲ್ಲಿ ಉದ್ವೇಗಗಳು, ಹೇಳಿಕೆಗಳೂ ತಾತ್ಕಾಲಿಕವಾಗಿ ನಿಲ್ಲುತ್ತವೆಯೇ ಹೊರತು, ಶಾಶ್ವತವಾದ ಯಾವ ಕಾಣಿಕೆಯನ್ನೂ ಕೊಡಲಾರವು ಎಂಬುದು ಸಾಹಿತ್ಯಾಭ್ಯಾಸಿಗಳಿಗೆ ತಿಳಿದಿರುವ ಸಂಗತಿಯೇ. ಹಾಗೆಯೇ ಸಾಮಾಜಿಕ ಕಳಕಳಿಯನ್ನು ಲೇಖಕರು ಅಭಿವ್ಯಕ್ತಪಡಿಸಿದ್ದಾರೆ ಎಂಬಷ್ಟೇ ಕಾರಣಕ್ಕೆ ಯಾವೊಂದು ಕೃತಿಯೂ ಮಹತ್ವವಾಗಲಾರದು. ನಾಗೇಂದ್ರಪ್ಪನವರು ಈ ಮಾತನ್ನು ಅರಿತುಕೊಂಡು ತಮ್ಮ ಮುಂದಿನ ಕೃತಿರಚನೆಗೆ ತೊಡಗುವುದು ಶ್ರೇಯಸ್ಕರ.

ಹೊರೆಯಾಲ ದೊರೆಸ್ವಾಮಿ

ಪುಸ್ತಕ ವಿಭಾಗ

ಲಿಯೋ ಟಾಲ್‌ಸ್ಟಾಯ್ ಅವರ ಮಹಾ ಕಾದಂಬರಿ

ಅನ್ನಾ ಕರೆನಿನ

ದ್ವಿತೀಯ ಕಾಂಡ

ಅನುವಾದ
ದೇಜಗೌ

'ಅವಸರವೇಕೆ?' ಎಂದು ಅನ್ನಾ ನುಡಿದಳು. 'ನಿಮಗೆ ಟೀ ಬೇಕೆ?' ಅವಳು ಗಂಟೆ ಬಾರಿಸಿದಳು.

'ಟೀ ತೆಗೆದುಕೊಂಡು ಬಾ. ಅಪ್ಪ ಬಂದಿರುವುದಾಗಿ ಸರ್‌ಜಯ್‌ಗೆ ಹೇಳು. ನೀವು ಹೇಗಿದ್ದೀರಿ? ಮಿಖೇಲ್‌ವಸಿಲಿವಿಚ್. ನೀವಿಲ್ಲಿಗೆ ಬಂದದ್ದು ಇದೇ ಮೊದಲು. ಬನ್ನಿ, ಬನ್ನಿ. ನಮ್ಮ ವರಾಂಡ ಎಷ್ಟು ಸೊಗಸಾಗಿದೆ, ನೋಡಿ' ಎಂದವಳು ಒಮ್ಮೆ ಒಬ್ಬನ ಕಡೆಗೆ, ಮತ್ತೊಮ್ಮೆ ಇನ್ನೊಬ್ಬನ ಕಡೆಗೆ ತಿರುಗಿದಳು.

ಅವಳು ಸರಳವಾಗಿ ಹಾಗೂ ಸಹಜವಾಗಿ ಮಾತಾಡಿದಳು. ಆದರೆ ಮಾತು ತುಸು ಹೆಚ್ಚಾಯಿತು, ಆತುರವಾಯಿತು. ಅವಳಿಗೂ ಅದರ ಅರಿವಿತ್ತು. ಅವಳನ್ನು ಪರೀಕ್ಷಿಸ ಲೆಂಬಂತೆ ಅವಳ ಕಡೆಗೆ ಮಿಖೇಲ್‌ವಸಿಲಿವಿಚ್ ಹುಡುಕುನೋಟ ಬೀರಿದಾಗ ಅವಳ ಪ್ರಜ್ಞೆ ಜಾಗ್ರತಗೊಂಡಿತು.

ಮಿಖೇಲ್‌ವಸಿಲಿವಿಚ್ ಹೊರಗೆ, ವರಾಂಡದ ಕಡೆಗೆ ಸರಿದನು.

ಅವಳು ತನ್ನ ಗಂಡನ ಪಕ್ಕದಲ್ಲಿ ಕುಳಿತುಕೊಂಡಳು.

'ನಿಮ್ಮ ಆರೋಗ್ಯ ಚೆನ್ನಾಗಿದ್ದಂತಿಲ್ಲ, ಎಂದವಳು ಉಸುರಿದಳು.

'ಹೌದು. ವೈದ್ಯರು ಬೆಳಗ್ಗೆ ಬಂದಿದ್ದರು. ನನ್ನ ಪರೀಕ್ಷೆಗಾಗಿ ಒಂದು ಗಂಟೆ ತೆಗೆದುಕೊಂಡರು. ನನ್ನ ಗೆಳೆಯರಲ್ಲೊಬ್ಬ ಅವರನ್ನು ಕಳಿಸಿದಂತೆ ಕಾಣುತ್ತದೆ. ನನ್ನ ಆರೋಗ್ಯ ಅತ್ಯಮೂಲ್ಯವೆಂದು ತೋರಿರಬೇಕು. ನಿನಗೂ....'

'ಅವರೇನು ಹೇಳಿದರು?' ಅವಳವನ ಆರೋಗ್ಯದ ಬಗ್ಗೆ ವಿಚಾರಿಸಿದಳು; ಅವನ ವ್ಯವಹಾರಗಳ ಬಗ್ಗೆ ಪ್ರಶ್ನಿಸಿದಳು; ವಿಶ್ರಾಂತಿ ತೆಗೆದುಕೊಳ್ಳುವಂತೆ ಅವನನ್ನು ಒತ್ತಾಯಿಸಿದಳು; ತನ್ನೊಡನೆ ಹಳ್ಳಿಮನೆಗೆ ಬರುವಂತೆ ಆಹ್ವಾನಿಸಿದಳು.

ಅಷ್ಟೇ ವೇಗವಾಗಿ, ಅಷ್ಟೇ ಲವಲವಿಕೆಯಿಂದ ಇಷ್ಟೆಲ್ಲವನ್ನವಳು ಸೊಲ್ಲಿಸಿದಳು. ಅವಳ ಕಣ್ಣುಗಳಲ್ಲಿ ವಿಚಿತ್ರವಾದ ಪ್ರಕಾಶ ಥಳಥಳಿಸುತ್ತಿತ್ತು; ಆದರೆ ಕರೆನಿನ್ ಅವಳ ಧ್ವನಿಯ ಥಾಟಿಗೆ ಸ್ವಲ್ಪವೂ ಪ್ರಾಮುಖ್ಯ ನೀಡಲಿಲ್ಲ. ಅವಳ ಮಾತುಗಳನ್ನವನು ಸುಮ್ಮನೆ ಕೇಳಿಸಿಕೊಂಡನು; ಆ ಮಾತುಗಳ ಮುಖಬೆಲೆಯನ್ನಷ್ಟೆ ಮಾನ್ಯ ಮಾಡಿದನು. ಅವಳ ಮಾತುಗಳಿಗೆ ಸರಳ ಸುಲಭವಾಗಿ ಉತ್ತರಿಸಿದನು. ಆದರೆ ಆ ಉತ್ತರದಲ್ಲಿ ಕುಚೋದ್ಯವೂ ಬೆರಕೆಗೊಂಡಿತ್ತು. ಅವರ ಸಂಭಾಷಣೆಯಲ್ಲಿ ಏನೇನೂ ವಿಶೇಷವಿರಲಿಲ್ಲ; ಅನಂತರ ಅದನ್ನು ನೆನೆದಾಗಲೆಲ್ಲ ಅವಮಾನದ ಯಾತನೆ ಅವಳ ಹೃದಯವನ್ನು ಹಿಂಡುತ್ತಿತ್ತು.

ಉಪಾಧ್ಯಾಯಿನಿಯೊಡನೆ ಸರ್ಜಯ್ ಬಂದನು. ಮೊದಲು ತನ್ನ ಕಡೆಗೆ, ಅನಂತರ ತಾಯಿಯ ಕಡೆಗೆ ಮಗ ಬೀರಿದ ಬೆಗಡಿನ ಹಾಗೂ ಸಿಗ್ಗಿನ ದೃಷ್ಟಿಯನ್ನು ಕರೆನಿನ್ ಗಮನಿಸಲಿಲ್ಲ. ಯಾವುದನ್ನು ನೋಡುವುದಕ್ಕೂ ಅವನಿಗೆ ಇಷ್ಟವಿರಲಿಲ್ಲ; ಆದ್ದರಿಂದ ಏನನ್ನೂ ನೋಡಲಿಲ್ಲ.

'ಓ, ಹರೆಯದ ಮನುಷ್ಯ! ಚೆನ್ನಾಗಿ ಬೆಳೆದಿದ್ದಾನೆ. ನಿಜಕ್ಕೂ ದೊಡ್ಡವನಾಗಿ ದ್ದಾನೆ. ಹೇಗಿದ್ದೀಯಾ, ಯುವಕನೆ?' ಎಂದು ಕೇಳುತ್ತ ಮೊದಲೇ ಬೆಚ್ಚಿ ಬಿದ್ದ ಬಾಲಕನ ಕಡೆಗೆ ತನ್ನ ಕೈ ಚಾಚಿದನು.

ತನ್ನ ತಂದೆಯ ಸಾನ್ನಿಧ್ಯದಲ್ಲಿ ಸೆರ್ಝ್ ಯಾವಾಗಲೂ ನಾಚಿಕೊಳ್ಳುತ್ತಿದ್ದನು. ತನ್ನನ್ನೀಗ ಯುವಕನೆಂದು ಕರೆನಿನ್ ಕರೆಯಲಾಗಿ, ವ್ರಾಂಸ್ಕಿ ಗೆಳೆಯನೋ ಹಗೆಯೋ ಎಂಬ ಸಮಸ್ಯೆ ತನ್ನ ಮನಸ್ಸನ್ನೆಲ್ಲ ಆವರಿಸಿಕೊಂಡಿರಲಾಗಿ, ಅವನು ತನ್ನ ತಂದೆಯಿಂದ ದೂರವಿರುತ್ತಿದ್ದನು. ನೆರವನ್ನು ಯಾಚಿಸಲೆಂಬಂತೆ ಅವನು ತನ್ನ ತಾಯಿಯ ಕಡೆಗೆ ನೋಡಿದನು. ತಾಯಿಯ ಜತೆಯಲ್ಲಿದ್ದಾಗ ಮಾತ್ರ ಅವನು ನೆಮ್ಮದಿಯಿಂದಿರುತ್ತಿದ್ದನು. ತಾನು ಉಪಾಧ್ಯಾಯಿನಿಯೊಡನೆ ಮಾತಾಡುತ್ತಿದ್ದಾಗ ಕರೆನಿನ್ ತನ್ನ ಮಗನ ಭುಜ ಹಿಡಿದುಕೊಂಡಿದ್ದನು. ಮಗನೆಷ್ಟು ಸಂಕಟಕ್ಕೊಳಗಾಗಿದ್ದನೆಂದರೆ, ಅವನು ಅಳುವುದರಲ್ಲಿದ್ದನು. ಅನ್ನಾಳಿಗೆ ಮಾತ್ರ ಅವನ ದೀನಾವಸ್ಥೆ ಗೋಚರಿಸಿತು.

ಮಗ ಕೋಣೆಯನ್ನು ಪ್ರವೇಶಿಸಿದಾಗ ಅನ್ನಾಳ ಮುಖ ರಂಗುರಂಗಾಗಿ ಹೊಳೆಯುತ್ತಿತ್ತು; ಅವಳೀಗ ಅವನ ಇರಿಸು ಮುರಿಸನ್ನು ಕಂಡು, ಆತುರಾತುರವಾಗಿ ಮೇಲೆದ್ದು, ಅವನ ಭುಜದಿಂದ ಕರೆನಿನ್ ಕೈಯನ್ನು ಸರಿಸಿ, ಅವನನ್ನು ಚುಂಬಿಸಿ, ವರಾಂಡಕ್ಕೆ ಕರೆದೊಯ್ದು ಬಿಟ್ಟು ಒಡನೆಯೇ ಹಿಂದಿರುಗಿದಳು.

'ಹೊರಡುವ ಹೊತ್ತಾಯಿತು.' ಎಂದವಳು ತನ್ನ ಗಡಿಯಾರವನ್ನು ನೋಡಿಕೊಳ್ಳುತ್ತ ನುಡಿದಳು. 'ಬೆತ್ಸಿಗೇನಡ್ಡಿಯಾಯಿತೋ ಕಾಣೆ.'

'ನಿಜ, ನಿಜ' ಎಂದು ಕರೆನಿನ್ ಮೇಲೇಳುತ್ತ, ನೆಟಿಕೆ ತೆಗೆಯುವುದಕ್ಕೋಸ್ಕರ ಕೈಗಳನ್ನು ಮುರಿಯುತ್ತ ನುಡಿದನು. 'ನಿನಗೆ ಹಣ ಕೊಡುವುದೇ ನನ್ನ ಬರುವಿಕೆಗೆ ಮತ್ತೊಂದು ಕಾರಣ. ಇಂಪಾದ ಹಾಡಿನಿಂದಲೇ ಜೇನೆ ಬದುಕುವುದಿಲ್ಲವಷ್ಟೆ.' ಎಂದವನು ತಿಳಿಸಿದನು. 'ಅದು ನಿನ್ನ ಉಪಯೋಗಕ್ಕೆ ಬರುತ್ತದೆಂದು ನಂಬಿದ್ದೇನೆ.'

'ಇಲ್ಲ....ಹೌದು' ಎಂದವಳು ಅವನ ಕಡೆಗೆ ನೋಡದೆಯೆ ನುಡಿದಳು. ಅವಳ ಮುಖ ಕೆಂಪಗಾಯಿತು. 'ಸಂಧ್ಯಾಟಗಳನಂತರ ನೀವಿಲ್ಲಿಗೆ ಬರುತ್ತೀರಲ್ಲವೆ?'

'ಓ, ಆಗಲಿ' ಎಂದು ಕರೆನಿನ್ ಉತ್ತರಿಸಿದನು. 'ಅಹ, ಪೀಟರ್‌ಹಾಫ್ ನಗರದ ಕುಸುಮ, ರಾಜಕುಮಾರಿ ಬೆತ್ಸಿ ತ್ವೆರ್‌ಸ್ಕಯ' ಎಂದವನು ಕಿಟಕಿಯ ಮೂಲಕ ರಬ್ಬರ್ ಚಕ್ರಗಳ ಇಂಗ್ಲಿಷ್‌ವಾಹನವನ್ನೆ ನಿಟ್ಟಿಸುತ್ತ ಉಸುರಿದನು. ಆ ವಾಹನದೊಳಗಿನ ಚಿಕ್ಕ ಚಿಕ್ಕ ಆಸನಗಳನ್ನು ಎತ್ತರದಲ್ಲಿ ಜೋಡಿಸಲಾಗಿತ್ತು. 'ಎಂಥ ಲಾವಣ್ಯ! ಎಷ್ಟು ಮಧುರ! ಸರಿ, ನಾವೂ ಹೊರಡೋಣ.'

ರಾಜಕುಮಾರಿ ಬೆತ್ಸಿ ಗಾಡಿಯಿಂದಿಳಿಯಲಿಲ್ಲ. ದ್ವಾರ ಪ್ರದೇಶವನ್ನು ತಲುಪಿದಾಗ, ಗುಂಡಿ ಬೂಟುಗಳ, ತುಂಡು ಜುಬ್ಬದ, ಕಪ್ಪು ಟೋಪಿಯ ಅವಳ ಸೇವಕ ಕೆಳಗೆ ನೆಗೆದನು.

'ನಾನೂ ಹೊರಟಿದ್ದೇನೆ. ನಮಸ್ಕಾರ' ಎಂದು ಅನ್ನಾ ಉಸುರಿದಳು; ತನ್ನ ಮಗನನ್ನು ಚುಂಬಿಸಿ, ಗಂಡನ ಮುಂದೆ ಕೈ ಚಾಚಿದಳು. 'ನೀವು ಬಂದದ್ದರಿಂದ ನನಗೆ ತುಂಬ ಆನಂದವಾಯಿತು.'

ಕರೆನಿನ್ ಅವಳ ಕೈಗೆ ಮುತ್ತುಕೊಟ್ಟನು.

'ಸರಿ ಹಾಗಾದರೆ, ನಮಸ್ಕಾರ. ಟೀ ತೆಗೆದುಕೊಳ್ಳಲು ನೀವು ಮತ್ತೆ ಬರುತ್ತೀರಷ್ಟೆ? ತುಂಬ ಸಂತೋಷ' ಎಂದವಳು ನುಡಿದು, ಹರ್ಷೋಲ್ಲಾಸ ಚಿತ್ತೆಯಾಗಿ ಹೊರಗೆ

ಹೊರಟಳು. ಆದರೆ ಅವನು ಕಣ್ಮರೆಯಾಗುತ್ತಿದ್ದಂತೆ, ಅವನ ತುಟಿಗಳೊತ್ತಿದ್ದ ಕೈಮೇಲಿನ ಜಾಗವನ್ನವಳು ನೋಡಿಕೊಂಡಾಗ ಅವಳಿಗೆ ಇಸ್ಸಿಯೆನಿಸಿ, ಹೇವರಿಕೆಯಿಂದ ಕಂಪಿಸಿದಳು.

೨೮

ಕರೆನಿನ್ ಕ್ರೀಡಾಕ್ಷೇತ್ರವನ್ನು ತಲುಪುವ ಹೊತ್ತಿಗಾಗಲೇ ಅನ್ನಾ ಕ್ರೀಡಾ ಮಂಟಪದಲ್ಲಿ ಬೆಟ್ಸಿಯ ಮಗ್ಗುಲಲ್ಲಿ ಕುಳಿತಿದ್ದಳು. ಆ ಕ್ರೀಡಾ ಮಂಟಪದಲ್ಲಿ ಸಮಾಜದ ಕೆನೆಯಂತಿದ್ದ ಜನ ಜಮಾಯಿಸಿದ್ದರು. ಅವಳು ದೂರದಿಂದಲೇ ತನ್ನ ಗಂಡನನ್ನು ನೋಡಿದಳು. ಗಂಡಸರಿಬ್ಬರು—ಅವಳ ಗಂಡ ಮತ್ತು ಪ್ರೇಮಿ—ಅವಳ ಬದುಕಿನ ಎರಡು ಕೇಂದ್ರಗಳಾಗಿದ್ದರು. ಅವರ ಸಾನ್ನಿಧ್ಯವನ್ನವಳ ಗಮನಕ್ಕೆ ತಂದುಕೊಡಲು ಬಾಹ್ಯೇಂದ್ರಿಯಗಳ ನೆರವು ಬೇಕಾಗಿರಲಿಲ್ಲ. ಗಂಡನಿನ್ನು ದೂರದಲ್ಲಿದ್ದಾಗಲೇ ಅವನ ಸಾನ್ನಿಧ್ಯಾನುಭವವನ್ನವಳು ಗ್ರಹಿಸಿದಳು. ಅವನು ನೆರವಿಯ ನಡುವೆ ಸಾಗುತ್ತಿದ್ದಂತೆ ಅವಳವನನ್ನು ಅಪ್ರಜ್ಞಾಪೂರ್ವಕವಾಗಿ ಹಿಂಬಾಲಿಸಿದಳು. ಅವನು ಕ್ರೀಡಾಮಂಟಪದ ಬಳಿ ಸಾರುತ್ತಿದ್ದುದನ್ನವಳು ಕಂಡಳು. ವಿಧೇಯತೆಯ ಮಣಿಹಗಳಿಗೊಮ್ಮೆ ಗರ್ವದಿಂದ ಬಾಗುತ್ತ, ಸ್ನೇಹಪೂರ್ವಕವಾಗಿ ಮತ್ತು ಅನ್ಯಮನಸ್ಕನಾಗಿ ಸಮಾನಸ್ಕಂಧರ ಕುಶಲ ಸಮಾಚಾರವನ್ನೊಮ್ಮೆ ವಿಚಾರಿಸಿಕೊಳ್ಳುತ್ತ, ಮತ್ತೊಮ್ಮೆ ತನ್ನ ಕಿವಿಗಳನ್ನು ಹಿಸುಕುತ್ತಿದ್ದ ಎತ್ತರದ ಗುಂಡು ಟೋಪಿಯನ್ನವರ ಮುಂದೆ ಕೆಳಗಿಳಿಸುತ್ತ, ಕುತೂಹಲದಿಂದ ದೊಡ್ಡವರ ಕಟಾಕ್ಷಕ್ಕಾಗಿ ಕಾಯುತ್ತ, ಅವನು ಮುಂದುವರಿಯುತ್ತಿದ್ದನು. ಅವನ ಈ ರೀತಿ ನೀತಿಗಳನ್ನೆಲ್ಲ ಅವಳು ಬಲ್ಲವಳಾಗಿದ್ದಳು. ಅವುಗಳನ್ನು ಕಂಡರೆ ಅವಳಿಗಾಗುತ್ತಿರಲಿಲ್ಲ. 'ಗರ್ವ ಮಹತ್ವಾಕಾಂಕ್ಷೆಗಳಷ್ಟೆ ಅವನ ಅಂತರಾಳವನ್ನೆಲ್ಲ ಆವರಿಸಿಕೊಂಡಿವೆ' ಎಂದವಳು ಬಗೆದಳು. 'ಅವರ ಉದಾತ್ತ ಭಾವನೆಗಳು, ಮತ ಸಂಸ್ಕೃತಿ ಸಂಬಂಧವಾದ ಅವರ ಪ್ರೇಮ—ಇವೆಲ್ಲ ಅವರ ಮಹತ್ವಾಕಾಂಕ್ಷೆಯ ಸಾಧನೆಯ ಮಾರ್ಗಗಳು' ಎಂದವಳು ಆಲೋಚಿಸಿದಳು.

ಮಹಿಳೆಯರಿದ್ದ ಕ್ರೀಡಾಮಂಟಪದ ಕಡೆಗೆ ಅವನು ನಿಟ್ಟಿಸುತ್ತಿದ್ದ ರೀತಿಯಿಂದ, ತನ್ನನ್ನವನು ಹುಡುಕುತ್ತಿರಬೇಕೆಂದವಳು ಭಾವಿಸಿದಳು. (ಅವನ ನೋಟ ನೇರವಾಗಿ ಅವಳಲ್ಲಿಯೆ ಕೇಂದ್ರೀಕೃತವಾಗಿತ್ತು ; ಆದರವನು ಮಸ್ಲಿನ್, ರಿಬ್ಬನ್, ತೋಕೆ, ಕೊಡೆ ಮತ್ತು ಹೂವುಗಳ ಸಾಗರದಲ್ಲಿ ಅವಳನ್ನು ಗುರುತಿಸುವುದು ಕಷ್ಟವಾಯಿತು.) ಅವಳು ಉದ್ದೇಶಪೂರ್ವಕವಾಗಿ ಅವನನ್ನು ಕಡೆಗಣಿಸಿದಳು.

'ಅಲೆಕ್ಸಿ ಅಲೆಕ್ಸಾಂಡ್ರೊವಿಚ್' ಎಂದು ರಾಜಕುಮಾರಿ ಬೆಟ್ಸಿ ಅವನನ್ನು ಕರೆದಳು. 'ನಿಮ್ಮ ಮಡದಿಯನ್ನು ಹುಡುಕುತ್ತಿದ್ದೀರೇನು? ಇಗೋ ಅವಳಿಲ್ಲಿಯೇ ಇದ್ದಾಳೆ.'

ಅವನ ಮಂದಹಾಸದಲ್ಲಿ ಔದಾಸೀನ್ಯವಿತ್ತು.

'ಇಷ್ಟೆಲ್ಲ ವೈಭವ ನನ್ನ ಕಣ್ಣು ಕುಕ್ಕುತ್ತಿದೆ.' ಎಂದವನು ಕ್ರೀಡಾ ಮಂಟಪವನ್ನು ಪ್ರವೇಶಿಸುತ್ತಿದ್ದಂತೆ ನುಡಿದನು. ತುಸು ಸಮಯದ ಹಿಂದೆ ಅಗಲಿದ್ದ ಮಡದಿ

ಯನ್ನು ಭೇಟಿಮಾಡಿದಾಗ ಮುಗುಳುನಗೆ ಬೀರುವ ಗಂಡನಂತೆ ಅವನು ತನ್ನ ಮಡದಿಯನ್ನು ನೋಡಿ ನಕ್ಕನು. ಅವರವರ ಮರ್ಯಾದೆಗನುಗುಣವಾಗಿ ರಾಜಕುಮಾರಿ ಹಾಗೂ ಇತರ ಪರಿಚಿತರ ಕ್ಷೇಮಕುಶಲಗಳನ್ನು ವಿಚಾರಿಸಿದನು; ಮಹಿಳೆಯರೊಡನೆ ಲಾಘವಗಳನ್ನು ಪುರುಷರೊಡನೆ ಅಭಿವಂದನೆಗಳನ್ನು ವಿನಿಮಯ ಮಾಡಿಕೊಂಡನು. ಅವನ ಗೌರವಕ್ಕೆ ಪಾತ್ರನಾಗಿದ್ದ, ಮಹಾ ಬುದ್ಧಿಶಾಲಿಯೆಂದೂ ವಿದ್ಯಾವಂತನೆಂದೂ ಪ್ರಖ್ಯಾತನಾಗಿದ್ದ ಸೈನ್ಯಾಧಿಕಾರಿ ಕೆಳಗಿನ ಸೋಪಾನದ ಮೇಲೆ ನಿಂತಿದ್ದನು. ಕರೆನಿನ್ ಅವನನ್ನು ಮಾತಾಡಿಸಿದನು.

ಪಂದ್ಯಗಳ ನಡುವಣ ವಿರಾಮದ ಸಮಯದಲ್ಲಿ ಅವರ ಮಾತುಕತೆ ನಡೆಯುತ್ತಿದ್ದುದರಿಂದ, ಅವರ ಸಂಭಾಷಣೆಗೆ ಅಡಚಣೆಯಿರಲಿಲ್ಲ. ಸೈನ್ಯಾಧಿಕಾರಿ ಕುದುರೆ ಜೂಜನ್ನು ತೆಗಳಿದನು. ಕರೆನಿನ್ ಆಕ್ಷೇಪವೆತ್ತಿ, ಅದನ್ನು ಸಮರ್ಥಿಸಿಕೊಂಡನು. ಅನ್ನಾ ಲಯಬದ್ಧವಾದ ತಾರಸ್ವರದ ಅವನ ಮಾತನ್ನು ಕೇಳಿಸಿಕೊಂಡಳು. ಯಾವೊಂದು ಪದವೂ ಅವಳಿಂದ ತಪ್ಪಿಸಿಕೊಳ್ಳಲಿಲ್ಲ. ಅವನ ಪ್ರತಿಯೊಂದು ಮಾತೂ ಕೃತ್ರಿಮವಾಗಿ ತೋರಿ, ಅವಳ ಕಿವಿದೆರೆಯನ್ನು ಮೀಟುತ್ತಿತ್ತು.

ಕುದುರೆ ಪಂದ್ಯ ಪ್ರಾರಂಭವಾದಾಗ ಅವಳು ಮುಂದೆ ಬಾಗಿದಳು; ವ್ರಾನ್ಸ್ಕಿ ಕುದುರೆಯ ಸನಿಹವನ್ನು ಸೇರಿ, ಅದನ್ನೇರುತ್ತಿದ್ದಂತೆ, ಅವಳ ಕಣ್ಣು ಅವನಲ್ಲಿಯೇ ನಾಟಿದ್ದುವು; ಅದೇ ಸಮಯದಲ್ಲಿ ಅವಳು ತನ್ನ ಗಂಡನ ಎಡೆಬಿಡದ ಅಸಹ್ಯಧ್ವನಿಯನ್ನು ಕೇಳಿಸಿಕೊಳ್ಳುತ್ತಿದ್ದಳು. ವ್ರಾನ್ಸ್ಕಿಯ ಸಂಬಂಧವಾದ ಭಯ ಅವಳನ್ನು ಕಾಡುತ್ತಿತ್ತು. ಅದಕ್ಕಿಂತ ಮಿಗಿಲಾಗಿ, ತನ್ನ ಗಂಡನ ಸುಪರಿಚಿತ ಸ್ವರ ಭಾರದ ಕೀರಲು ದನಿ ಅವಳಿಗೆ ಹಿಂಸೆಯಾಗಿತ್ತು. ಅದು ಸದ್ಯಕ್ಕೆ ಕೊನೆಗಾಣದೆಂದವಳು ಬಗೆದಳು.

'ನಾನು ಕೆಟ್ಟ ಹೆಂಗಸು; ಪತನ ಹೊಂದಿದ ಹೆಂಗಸು' ಎಂದವಳು ಆಲೋಚಿಸಿದಳು. 'ಆದರೆ ಸುಳ್ಳನ್ನು ಸಹಿಸಲಾರೆ; ಸುಳ್ಳು ಹೇಳಲಾರೆ; ಅವರಿಗೊ (ಅವಳ ಗಂಡನಿಗೊ) ಸುಳ್ಳೇ ಉಸಿರು. ಅವರಿಗೆ ತಿಳಿಯದಿರುವುದೇ ಇಲ್ಲ; ಕಾಣದಿರುವುದೇ ಇಲ್ಲ. ಇಷ್ಟೊಂದು ಪ್ರಶಾಂತವಾಗಿ ಮಾತಾಡುತ್ತಿರಬೇಕಾದರೆ, ಅವರಿಗೆ ಯಾವುದರ ಬಗ್ಗೆಯಾಗಲಿ ಲಕ್ಷ್ಯವಿರುತ್ತದೆಯೆ? ಅವರು ನನ್ನನ್ನಾಗಲಿ, ವ್ರಾನ್ಸ್ಕಿಯನ್ನಾಗಲಿ ಕೊಂದಿದ್ದರೆ, ನಾನವರನ್ನು ಗೌರವಿಸುತ್ತಿದ್ದೆ. ಆದರೆ ಅದಲ್ಲ, ಅವರಿಗೆ ಬೇಕಾದ್ದು ಸುಳ್ಳು ಹಾಗೂ ಮರ್ಯಾದೆ.' ಎಂದವಳು ತನ್ನೊಳಗೆ ತಾನಂದುಕೊಂಡಳು. ತನ್ನ ಗಂಡನಿಂದ ತನಗೇನಾಗಬೇಕಾಗಿದೆ, ಅವನು ವರ್ತಿಸಬೇಕಾದ ಬಗೆಯಾದರೂ ಹೇಗೆ ಎಂದು ಯೋಚಿಸುವ ಸಹನೆ ಸಹ ಅವಳಿಗಿರಲಿಲ್ಲ. ತನ್ನನ್ನು ಕೆರಳಿಸುತ್ತಿದ್ದ ಇತ್ತೀಚಿನ ಅವನ ಅತಿಯಾದ ಹರಟೆ ಅವನ ಆಂತರಿಕ ಕಾತರತೆಯ ಹಾಗೂ ಕಳವಳದ ಅಭಿವ್ಯಕ್ತಿಯೆಂಬುದು ಅವಳಿಗೆ ಗ್ರಹಿಕೆಯಾಗಲಿಲ್ಲ. ನೋವು ಮಾಡಿಕೊಂಡ ಮಗು ನೋವನ್ನು ಮರವಡಿಸುವ ಸಲುವಾಗಿ ಹಾರಾಡುತ್ತ, ಮಾಂಸಖಂಡಗಳಿಗೆ ಕೆಲಸಕೊಡುವಂತೆ, ಅವಳ ಮತ್ತು ವ್ರಾನ್ಸ್ಕಿಯ ಸಾನ್ನಿಧ್ಯದಿಂದಾಗಿ ಹಾಗೂ ವ್ರಾನ್ಸ್ಕಿ ಹೆಸರಿನ ಮತ್ತೆ ಮತ್ತಿನ ಸೂಚನೆಯಿಂದಾಗಿ ತನ್ನ ಮನಸ್ಸಿನ ಮೇಲೆ ಧಾಳಿ ನಡಸುತ್ತಿದ್ದ ತನ್ನ ಮಡದಿಯ ಸಂಬಂಧವಾದ ಆಲೋಚನೆಗಳನ್ನು ಜಡಗೊಳಿಸುವ ಸಲುವಾಗಿ ಮನಸ್ಸಿಗೆ

ವ್ಯಾಯಾಮ ಅತ್ಯವಶ್ಯವೆಂದು ಕರೆನಿನ್ ದೃಢಪಡಿಸಿಕೊಂಡಿದ್ದನು. ನೆಗೆದಾಟವೆಂತು ಮಗುವಿಗೆ ಸಹಜವೋ ಅಂತೆಯೇ ಮಾತುಕತೆ, ಅದರಲ್ಲಿಯೂ ಸ್ವಾರಸ್ಯಕರವಾದ ಹಾಗೂ ಬುದ್ಧಿವಂತಿಕೆಯ ಮಾತುಕತೆ–ಅವನಿಗೆ ಸಹಜವಾಗಿತ್ತು.

'ಅಧಿಕಾರಿಗಳ, ರಾವುತರ ಪಂದ್ಯಾಟದಲ್ಲಿ ಅಪಾಯ ಅನಿವಾರ್ಯ. ಅಶ್ವಶಕ್ತಿ ಮತ್ತು ಮಾನುಷ ಶಕ್ತಿಗಳೆರಡನ್ನೂ ಚಾರಿತ್ರಕವಾಗಿ ಬೆಳೆಸಿಕೊಂಡಿರುವ ಪ್ರಯುಕ್ತ ಇಂಗ್ಲೆಂಡು ಸೈನಿಕ ಇತಿಹಾಸಕ್ಕೆ ಅತ್ಯುಜ್ವಲ ಅಶ್ವಿಕ ವಿಕ್ರಮವನ್ನೊದಗಿಸಲು ಸಾಧ್ಯವಾಯಿತು. ನನ್ನ ಅಭಿಪ್ರಾಯದಲ್ಲಿ ಕ್ರೀಡೆಗೆ ಅಪಾರ ಬೆಲೆಯಿದೆ. ಇತರ ವಿಷಯಗಳ ವಿಚಾರದಲ್ಲೆಂತೊ ಇಲ್ಲಿಯೂ ಸಹ ಆಳಕ್ಕೆ ಹೋಗದೆ ಅದರ ಹೊರಗಣ ಮುಖವನ್ನು ಮಾತ್ರ ನೋಡುತ್ತೇವೆ.'

'ಹೊರಗಣ ಮುಖವಷ್ಟೆ ಅಲ್ಲ'. ಎಂದು ರಾಜಕುಮಾರಿ ಬೆತ್ಸಿ ನುಡಿದಳು. 'ಅಧಿಕಾರಿಗಳಲ್ಲೊಬ್ಬ ಎರಡು ಪಕ್ಕೆಲುಬುಗಳನ್ನು ಮುರಿದುಕೊಂಡನೆಂದು ಹೇಳುತ್ತಾರೆ.'

ಕರೆನಿನ್ ವಿಚಿತ್ರರೀತಿಯ ಮಂದಹಾಸ ಸೂಸಿದನು; ಅದರಿಂದಾಗಿ ಅವನ ಹಲ್ಲು ಮಾತ್ರ ಕಾಣಿಸಿದುವು.

'ನೀವೇನು ಹೇಳುತ್ತಿದ್ದೀರೋ, ರಾಜಕುಮಾರಿಯವರೆ, ಅದು ಆಂತರಿಕವಾದದ್ದೆ ಹೊರತು, ತೋರ್ಕೆಯದಲ್ಲವೆಂಬುದು ಸ್ಪಷ್ಟ. ಆದರದು ಪ್ರಕೃತವಲ್ಲ' ಎಂದವನು ಸೊಲ್ಲಿಸಿದನು. ಅವನು ಮತ್ತೆ ಸೈನ್ಯಾಧಿಕಾರಿಯ ಕಡೆಗೆ ತಿರುಗಿಕೊಂಡು ತನ್ನ ಗಂಭೀರ ವಾಣಿಯ ಸೂತ್ರವನ್ನು ಮುಂದುವರಿಸಿದನು. ಪಂದ್ಯಾಟದಲ್ಲಿ ಭಾಗವಹಿಸುವವರೆಲ್ಲರೂ ಅಧಿಕಾರಿಗಳೆಂಬುದನ್ನು ಮರೆಯಬಾರದು. ಅವರು ಈ ವೃತ್ತಿಯನ್ನು ತಾವಾಗಿಯೇ ಆರಿಸಿಕೊಂಡಿದ್ದಾರೆ. ಪ್ರತಿಯೊಂದು ವೃತ್ತಿಗೂ ಅಹಿತವಾದ ಮುಖವೊಂದಿದೆಯೆಂಬುದನ್ನು ಒಪ್ಪಿಕೊಳ್ಳಲೇಬೇಕು. ಸೈನ್ಯವನ್ನು ಸೇರುವ ಪ್ರತಿಯೊಬ್ಬ ವ್ಯಕ್ತಿಯ ಆದ್ಯ ಜವಾಬ್ದಾರಿಗಳಲ್ಲಿ ಇದೂ ಒಂದು. ಮುಷ್ಟಾಮುಷ್ಟಿಯ ಅಸಹ್ಯಕ್ರೀಡೆಯಾಗಲಿ, ಸ್ಪೆಯಿನ್‌ನ ಗೂಳಿಕಾಳಗಗಳಾಗಲಿ ಅನಾಗರಿಕತೆಯ ಕುರುಹೆಂಬುದು ನಿಜ. ವಿಶಿಷ್ಟ ಕ್ರೀಡೆಗಳು ಉನ್ನತ ವಿಕಾಸದ ಚಿಹ್ನೆಗಳು.'

'ಇಲ್ಲ, ನಾನು ಮತ್ತೆ ಬರುವುದಿಲ್ಲ. ಇದೆಲ್ಲ ನನಗೆ ಅಸಹ್ಯವಾಗಿ ಕಾಣುತ್ತದೆ' ಎಂದು ರಾಜಕುಮಾರಿ ಬೆತ್ಸಿ ನುಡಿದಳು. 'ನಿನ್ನದೂ ಅದೇ ಅಭಿಪ್ರಾಯವಲ್ಲವೆ, ಅನ್ನಾ?'

'ಇದು ನಿಜಕ್ಕೂ ಮನಸ್ಸನ್ನು ಕಲಕುತ್ತದೆ. ಆದರೆ ನಾಟದ ದೃಷ್ಟಿಯನ್ನು ಬೇರೆಡೆಗೆ ಹೊರಳಿಸಲಾಗದು.' ಎಂದು ಮತ್ತೊಬ್ಬ ಮಹಿಳೆ ಸೊಲ್ಲಿಸಿದಳು. 'ನಾನು ರೋಮನ್ ವ್ಯವಸ್ಥಾಪಕಿಯಾಗಿದ್ದರೆ ಒಂದು ಸರ್ಕಸ್ಸನ್ನೂ ತಪ್ಪಿಸಿಕೊಳ್ಳುತ್ತಿರಲಿಲ್ಲ.'

ಅನ್ನಾ ಮರುಮಾತಾಡಲಿಲ್ಲ. ಒಂದು ಕ್ಷಣವಾದರೂ ಅವಳು ದುರ್ಬೀನನ್ನು ಕೆಳಗಿಡಲಿಲ್ಲ; ಒಂದೇ ಜಾಗದಲ್ಲದನ್ನು ನಾಭಿಗೂಡಿಸಿದ್ದಳು.

ಅದೇ ಸಮಯದಲ್ಲಿ ಎತ್ತರದ ಸೇನಾನಿಯೊಬ್ಬ ಕ್ರೀಡಾಂಗಣದ ಮೂಲಕ ಹಾದು ಹೋದನು. ಕರೆನಿನ್ ತನ್ನ ಮಾತನ್ನು ನಿಲ್ಲಿಸಿ, ಆತುರಾತುರವಾಗಿ, ಆದರೆ ಗಂಭೀರವಾಗಿ ಮೇಲೆದ್ದು, ಮಣಿದನು.

'ನೀವೇಕೆ ಜೂಜಿನಲ್ಲಿ ಭಾಗವಹಿಸಿಲ್ಲ?' ಎಂದು ಸೇನಾನಿ ಅವನನ್ನು ತಮಾಷೆ ಮಾಡಿದನು.

'ನನ್ನ ಜೂಜು ಕಷ್ಟತರವಾದದ್ದು' ಎಂದು ಕರೆನಿನ್ ಗೌರವಪೂರ್ವಕವಾಗಿ ಉತ್ತರಿಸಿದನು.

ಅದು ಅರ್ಥಶೂನ್ಯವಾದ ಉತ್ತರವಾಗಿದ್ದರೂ, ಚತುರನಾದ ವ್ಯಕ್ತಿಯೊಬ್ಬನ ಚತುರೋಕ್ತಿಯೆಂಬಂತೆ ಸೇನಾನಿ ಅರ್ಥಮಾಡಿಕೊಂಡನು.

'ಇಲ್ಲಿ ಎರಡು ಪಕ್ಷಗಳಿವೆಯೆಂಬುದನ್ನು ಮರೆಯಬಾರದು' ಎಂದು ಕರೆನಿನ್ ಮಾತು ಮುಂದುವರಿಸಿದನು. 'ಒಂದು ಭಾಗಿಗಳ ಪಕ್ಷ, ಮತ್ತೊಂದು ಪ್ರೇಕ್ಷಕರದು. ಇಂಥ ದೃಶ್ಯಗಳನ್ನು ನೋಡಿಯೇ ತಣಿಯುವ ಪ್ರೇಕ್ಷಕರ ಸಂಸ್ಕಾರ ಉತ್ತಮಮಟ್ಟದ್ದಲ್ಲ ವೆಂದೇ ಹೇಳಬೇಕು. ಆದರೆ—'

'ನಾನು ಪಣವೊಡ್ಡುತ್ತೇನೆ, ರಾಜಕುಮಾರಿಯವರೆ!' ಎಂಬ ಅಬ್ಲಾನ್ಸ್ಕಿಯ ಧ್ವನಿ ಕೆಳಗಡೆಯಿಂದ ಬೆಟ್ಸಿಯ ಕಡೆಗೆ ಹಾಯ್ದು ಬಂತು. 'ನೀವು ಯಾರ ಪರವಾಗಿ ಪಣವೊಡ್ಡುತ್ತೀರಿ ?'

'ನಾನು ಮತ್ತು ಅನ್ನಾ ರಾಜಕುಮಾರ ಕುಜೊವ್‌ಲೆವ್ ಪರವಾಗಿದ್ದೇವೆ' ಎಂದು ಬೆಟ್ಸಿ ಉತ್ತರಿಸಿದಳು.

'ನಾನು ವ್ರಾನ್ಸ್ಕಿಯ ಪರ. ನನ್ನ ಸವಾಲನ್ನೊಪ್ಪಿಕೊಳ್ಳಿ'

'ಆಗಲಿ!'

'ಮನೋಹರವಾದ ದೃಶ್ಯವಲ್ಲವೆ?'

ಈ ವಿನಿಮಯ ನಡೆಯುತ್ತಿದ್ದಾಗ ಕರೆನಿನ್ ಮೌನವಾಗಿದ್ದನು; ಆದರೆ ಕೂಡಲೆ ಅವನು ಮಾತು ಪ್ರಾರಂಭಿಸಿದನು. 'ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಧೈರ್ಯವನ್ನ ಪೇಕ್ಷಿಸುವ ಆಟಗಳು—' ಅಷ್ಟರಲ್ಲಿ ಸವಾರರು ಹೊರಡಲಾಗಿ ಎಲ್ಲ ಮಾತು ಸ್ಥಗಿತ ಗೊಂಡಿತು. ಅವನು ಸಹ ಮಾತು ನಿಲ್ಲಿಸಬೇಕಾಯಿತು. ಪ್ರತಿಯೊಬ್ಬರೂ ಮೇಲೆದ್ದು ಮೊದಲನೆಯ ಅಡಚಣೆಯಾದ ಪ್ರವಾಹದ ಕಡೆಗೆ ತಿರುಗಿದರು. ಕುದುರೆ ಜೂಜಿನಲ್ಲಿ ಕರೆನಿನ್‌ಗೆ ಆಸಕ್ತಿಯಿರಲಿಲ್ಲ. ಆದ್ದರಿಂದವನು ಸವಾರರ ಕಡೆಗೆ ಲಕ್ಷ್ಯ ಹರಿಸಲಿಲ್ಲ. ಆದರೆ ಅವನು ಅನ್ಯಮನಸ್ಕನಾಗಿ ಬಳಲಿದ ತನ್ನ ಕಣ್ಣುಗಳನ್ನು ಪ್ರೇಕ್ಷಕರ ಮೇಲೆ ಹರಿಯ ಬಿಟ್ಟನು. ಅವು ಅನ್ನಾಳ ಕಡೆಗೂ ಹರಿದುವು.

ಅವನ ಮುಖ ಬೆಳ್ಳಗಿತ್ತು ; ಒಂದೇ ಕಡೆ ನಾಟಿತ್ತು. ಒಬ್ಬ ವ್ಯಕ್ತಿವಿನಾ, ಅವಳು ಬೇರೆ ಯಾರನ್ನು ನೋಡುತ್ತಿರಲಿಲ್ಲ. ಕಂಪಿಸುತ್ತಿದ್ದೊಂದು ಕೈಯಲ್ಲಿ ಅವಳು ಬೀಸಣಿಗೆ ಹಿಡಿದುಕೊಂಡಿದ್ದಳು; ಅವಳ ಉಸಿರು ಕಟ್ಟುತ್ತಿತ್ತು. ಅವನು ಆತುರವಾಗಿ ಬೇರೆಡೆಗೆ ಕಣ್ಣು ಹೊರಳಿಸಿ, ಇತರ ಮುಖಗಳನ್ನು ಹುಡುಕುತ್ತಿದ್ದನು.

'ಹೌದು, ಅಲ್ಲಿರುವ ಆ ಹೆಂಗಸು ಹಾಗೂ ಇತರರು ಪ್ರಕ್ಷುಬ್ಧಗೊಂಡಿದ್ದಾರೆ; ಅದು ಸಹಜವೇ.' ಎಂದು ಕರೆನಿನ್ ತನ್ನಷ್ಟಕ್ಕೆ ತಾನು ಗೊಣಗಿಕೊಂಡನು. ಅವನವಳ ಕಡೆಗೆ ನೋಡುವ ಇಷ್ಟವಿರಲಿಲ್ಲ; ಆದರೆ ತನಗರಿವಿಲ್ಲದಂತೆಯೇ ಅವನ ಕಣ್ಣು ಆಕೆಯ ಕಡೆಗೆ ಹರಿದಿದ್ದುವು. ಮತ್ತೊಮ್ಮೆ ತಾನವಳ ಮುಖವನ್ನು ನಿಟ್ಟಿಸುತ್ತಿದ್ದುದಾಗಿ ಮನ ದಂಡನು; ಆದರೆ ಅವಳ ಮುಖದ ಮೇಲಣ ಸುಸ್ಪಷ್ಟ ಬರಹವನ್ನು ತಾನು ಓದಕೂಡ

ದೆಂದವನು ಪ್ರಯತ್ನಿಸಿದನು. ತಾನೇನು ಓದಬಾರದೆಂದುಕೊಂಡಿದ್ದನೋ ಅದನ್ನೋದಿದಾಗ ಅವನಿಗೆ ದಿಗಿಲಾಯಿತು.

ಕುಜೊವ್‌ಲೆವ್ ಮೊತ್ತಮೊದಲು ಪ್ರವಾಹದಲ್ಲಿ ಬೀಳಲಾಗಿ ಪ್ರತಿಯೊಬ್ಬರೂ ಹೆದರಿದರು. ಅನ್ನಾಳ ಕಣ್ಣು ಹಿಂಬಾಲಿಸುತ್ತಿದ್ದ ವ್ಯಕ್ತಿ ಬಿದ್ದಿರಲಿಲ್ಲವೆಂದು ಅವಳ ಬೆಳ್ಮೊಗದ ಆನಂದೋದ್ವೇಗದಿಂದ ಕರೆನಿನ್ ಅರಿತುಕೊಂಡನು. ಮಖೋತಿನ್ ಮತ್ತು ವ್ರಾಂಸ್ಕಿಯರು ದೊಡ್ಡ ಅಡ್ಡಿಯನ್ನು ದಾಟಿದನಂತರ ಅವರ ಹಿಂದೆ ಬಂದ ಅಧಿಕಾರಿ ತಲೆಕೆಳಗಾಗಿ, ಪ್ರಾಣಹಾರಕ ರೀತಿಯಲ್ಲಿ ಬಿದ್ದನು; ಭಯೋದ್ವೇಗದ ಮರ್ಮರಿಕೆ ಗುಂಪಿನಲ್ಲಿ ಹರಿಯಿತು. ಅನ್ನಾಳ ಲಕ್ಷ್ಯ ಆ ಕಡೆಗೆ ಹರಿದಿರಲಿಲ್ಲವೆಂದು ಕರೆನಿನ್ ಗಮನಿಸಿದನು ; ಜನ ಆಡಿಕೊಳ್ಳುತ್ತಿದ್ದ ಮಾತನ್ನು ಸಹ ಅವನು ಗ್ರಹಿಸಲಿಲ್ಲ. ಮೇಲಿಂದ ಮೇಲೆ ಅಧಿಕಾಧಿಕವಾಗುತ್ತಿದ್ದ ಉರವಣೆಯಿಂದ ಅವನವಳನ್ನೆ ನೋಡುತ್ತಿದ್ದನು. ತನ್ನ ಮನಸ್ಸು ಸಂಪೂರ್ಣವಾಗಿ ವ್ರಾಂಸ್ಕಿಯ ಚಲನವಲನಗಳಲ್ಲಿಯೆ ನಿಮಗ್ನವಾಗಿದ್ದರೂ, ತನ್ನ ಗಂಡನ ಉದಾಸೀನ ದೃಷ್ಟಿ ಮಾತ್ರ ತನ್ನಲ್ಲಿಯೇ ನಾಟದ್ದುದಾಗಿ ಅನ್ನಾ ಭಾವಿಸಿದಳು.

ಅವಳೊಂದು ಕ್ಷಣ ಕಣ್ಣು ಮಿಟುಕಿಸಿದಳು ; ಪ್ರಶ್ನಾರ್ಥಕವಾಗಿ ಅವನ ಕಡೆ ನೋಡಿದಳು ; ತುಸುವೆ ಹುಬ್ಬುಗಂಟಿಕ್ಕಿಕೊಂಡಳು ; 'ಓ, ನಾನಂಜಬೇಕಾಗಿಲ್ಲ. ಅದೆಲ್ಲ ನನಗೆ ತಿಳಿದದ್ದೆ' ಎಂದವಳು ಹಿಂದಕ್ಕೆ ತಿರುಗಿದಳು ; ತದನಂತರ ಅವಳೊಂದು ಸಾರಿಯೂ ಅವನ ಕಡೆಗೆ ನೋಡಲಿಲ್ಲ.

ಪಂದ್ಯಾಟ ದುರದೃಷ್ಟಕರವಾಗಿತ್ತು. ಹದಿನೇಳು ಮಂದಿ ಪಂದ್ಯ ಭಾಗಿಗಳಲ್ಲಿ ಅರ್ಧಕ್ಕಿಂತಲೂ ಹೆಚ್ಚು ಭಾಗ ಕೆಳಗುರುಳಿ ನೋವುಂಡಿದ್ದರು. ಮುಕ್ತಾಯದ ಹೊತ್ತಿಗೆ ಪ್ರತಿಯೊಬ್ಬರೂ ಕ್ಷೋಭೆಗೊಳಗಾಗಿದ್ದರು; ತ್ಸಾರನ ಅಸಂತೃಪ್ತಿಯಿಂದಾಗಿ ಆ ಕ್ಷೋಭೆ ತೀವ್ರವಾಗಿತ್ತು.

೨೯

ಪ್ರತಿಯೊಬ್ಬರೂ ತಂತಮ್ಮ ಅಸಮಾಧಾನವನ್ನು ಗಟ್ಟಿಯಾಗಿಯೇ ವ್ಯಕ್ತಪಡಿಸಿದರು ; 'ಮುಂದಿನ ಸರದಿ ಸಿಂಹ ಮತ್ತು ಖಡ್ಗಮಲ್ಲರದು' ಎಂದು ಯಾರೋ ಹೇಳಿದ ಟೀಕೆಯನ್ನು ಪ್ರತಿಯೊಬ್ಬರೂ ಪುನರುಕ್ತಿಸುತ್ತಿದ್ದರು. ಅದರ ಭಯ ಎಷ್ಟರಮಟ್ಟಿಗೆ ಎಲ್ಲರನ್ನೂ ತಟ್ಟಿತೆಂದರೆ, ವ್ರಾಂಸ್ಕಿ ನೆಲಕಚ್ಚಿ, ಅನ್ನಾ ಗಟ್ಟಿಯಾಗಿ ನರಳಿದಾಗ, ಅದರಲ್ಲಿ ಯಾರಿಗೂ ವಿಶೇಷ ಕಾಣಿಸಲಿಲ್ಲ. ಆದರೆ ಆ ತರುವಾಯ ಅನ್ನಾಳ ಮುಖದ ಮೇಲೆ ಭಾರಿ ಬದಲಾವಣೆಯಾಯಿತು. ಅದು ಸಭ್ಯತೆಗೆ ವಿರುದ್ಧವಾಗಿತ್ತು. ಅವಳು ಸಂಪೂರ್ಣವಾಗಿ ಸಂಯಮ ಕಳೆದುಕೊಂಡಳು. ಸೆರೆಸಿಕ್ಕಿದ ಹಕ್ಕಿಯಂತವಳು ಒದರಾಡತೊಡಗಿದಳು: ಮೇಲೆದ್ದು ಹೊರಟುಹೋಗುವುದೆಂದವಳು ಒಂದು ಕ್ಷಣ ಯೋಚಿಸಿದಳು; ಮರುಕ್ಷಣವೆ ಬೆತ್ಸಿಯ ಕಡೆಗೆ ತಿರುಗಿ, 'ಬಂದು ಬಿಡು, ಬಂದು ಬಿಡು' ಎಂದು ನುಡಿದಳು.

ಆದರೆ ಬೆತ್ಸಿ ಅವಳ ಕರೆಯನ್ನು ಕೇಳಿಸಿಕೊಳ್ಳಲಿಲ್ಲ. ಅವಳು ಬಾಗಿಕೊಂಡು ಕೆಳಗಿದ್ದ ಸೇನಾನಿಯೊಡನೆ ಮಾತಾಡುತ್ತಿದ್ದಳು.

ಕರೆನಿನ್ ಅನ್ನಾಳ ಬಳಿಗೆ ಬಂದು, ಸೌಜನ್ಯದಿಂದ ತನ್ನ ತೋಳು ನೀಡಿದನು.

'ನಿನಗಿಷ್ಟವಾಗುವುದಾದರೆ ಹೋಗೋಣ' ಎಂದವನು ಫ್ರೆಂಚ್ ಭಾಷೆಯಲ್ಲಿ ನುಡಿದನು. ಸೇನಾನಿಯ ಮಾತು ಕೇಳಿಸಿಕೊಳ್ಳುತ್ತಿದ್ದ ಅನ್ನಾಳ ಲಕ್ಷ್ಯ ಗಂಡನ ಕಡೆಗೆ ಹರಿಯಲಿಲ್ಲ.

'ಅವನ ಕಾಲು ಸಹ ಮುರಿದು ಹೋಗಿದೆಯೆಂದು ಹೇಳುತ್ತಾರೆ. ಅಂಥಾದ್ದೆಂದೂ ಸಂಭವಿಸಿರಲಿಲ್ಲ' ಎಂದು ಸೇನಾನಿ ಹೇಳುತ್ತಿದ್ದನು.

ತನ್ನ ಪತಿಗೆ ಉತ್ತರ ನೀಡದೆಯೆ ಅನ್ನಾ ದುರ್ಬೀನನ್ನೆತ್ತಿ ಹಿಡಿದುಕೊಂಡು ವ್ರಾಂಸ್ಕಿ ಕುಸಿದಿದ್ದ ಜಾಗದ ಕಡೆಗೆ ತಿರುಗಿದಳು. ಆದರೆ ಆ ಜಾಗ ದೂರವಿರಲಾಗಿ, ಜನ ಕಿಕ್ಕಿರಿದಿರಲಾಗಿ, ಅವಳೇನನ್ನೂ ನೋಡಲಾಗಲಿಲ್ಲ. ಅವಳು ದುರ್ಬೀನನ್ನು ಕೆಳಗಿಳಿಸಿ, ಮುಂದೆ ಹೆಜ್ಜೆಯಿಡುವಷ್ಟರಲ್ಲಿ ಅಧಿಕಾರಿಯೊಬ್ಬ ತ್ಸಾರನ ಬಳಿಗೆ ಬಂದು ವರದಿಮಾಡುತ್ತಿದ್ದನು. ಆ ವರದಿಯನ್ನು ಕೇಳಿಸಿಕೊಳ್ಳುವ ಸಲುವಾಗಿ ಅನ್ನಾ ಕೊಕ್ಕರೆಯಂತೆ ಕತ್ತು ಚಾಚಿದಳು.

'ಸ್ಟೀವ್, ಸ್ಟೀವ್ !' ಎಂದವಳು ತನ್ನ ಸೋದರನನ್ನು ಕೂಗಿಕೊಂಡಳು.

ಆದರೆ ಆ ಕೂಗು ಅವಳ ಸೋದರನ ಕಿವಿಯ ಮೇಲೆ ಬೀಳಲಿಲ್ಲ. ಪುನಃ ಅಲ್ಲಿಂದ ಚಲಿಸಲು ಪ್ರಯತ್ನಿಸಿದಳು.

'ನೀನು ಹೋಗುವುದಾದರೆ ಇಗೋ ಮತ್ತೆ ನನ್ನ ತೋಳಿನ ಆಸರೆ ನಿನಗಿದೆ' ಎಂದು ಕರೆನಿನ್ ತನ್ನ ಕೈಯನ್ನು ಅವಳ ಭುಜದ ಮೇಲಿಟ್ಟನು.

ಜುಗುಪ್ಸೆಯಿಂದಲೆಂಬಂತೆ ಅವಳು ಹಿಂಜರಿದು, ಅವನ ಕಡೆನೋಡದೆಯೆ 'ಬೇಡಿ, ಬೇಡಿ. ನನ್ನಷ್ಟಕ್ಕೆ ನನ್ನನ್ನು ಬಿಟ್ಟುಬಿಡಿ. ನಾನಿಲ್ಲಿಯೇ ನಿಲ್ಲುತ್ತೇನೆ' ಎಂದು ನುಡಿದಳು.

ವ್ರಾಂಸ್ಕಿಗೆ ಅಪಘಾತ ಸಂಭವಿಸಿದ ಸ್ಥಳದಿಂದ ಪಂದ್ಯಮಾರ್ಗವನ್ನು ದಾಟಿ, ತಮ್ಮ ಕ್ರೀಡಾ ಮಂಟಪದ ಕಡೆಗೆ ಅಧಿಕಾರಿಯೊಬ್ಬ ಓಡೋಡಿ ಬರುತ್ತಿದ್ದುದನ್ನವಳು ಗಮನಿಸಿದಳು. ಬೆಿಸ್ಸಿ ಅವನ ಕಡೆಗೆ ತನ್ನ ಕೈಚೌಕವನ್ನು ಬೀಸಿದಳು. ಸವಾರ ಅಪಾಯದಿಂದ ಪಾರಾಗಿದ್ದ, ಕುದುರೆಯ ಬೆನ್ನು ಮುರಿದು ಹೋಗಿದ್ದ ಸುದ್ದಿಯನ್ನು ಆ ಅಧಿಕಾರಿ ತಂದಿದ್ದನು.

ಆ ಸಮಾಚಾರವನ್ನು ಕೇಳಿದ ಅನ್ನಾ ತನ್ನ ಆಸನದಲ್ಲಿ ಕುಸಿದು, ಬೀಸಣಿಗೆಯಿಂದ ತನ್ನ ಮುಖವನ್ನು ಮುಚ್ಚಿಕೊಂಡಳು. ಅವಳು ರೋದಿಸುತ್ತಿದ್ದುದನ್ನು, ಕಣ್ಣೀರನ್ನಾಗಲಿ, ಅವಳ ಎದೆಯನ್ನು ಕುಲುಕುತ್ತಿದ್ದ ಗದ್ಗದಗಳನ್ನಾಗಲಿ ಅವಳು ಸಾವರಿಸಿಕೊಳ್ಳಲಾಗದ್ದನ್ನವನು ನೋಡಿದನು. ಅವಳು ಚೇತರಿಸಿಕೊಳ್ಳಲೆಂದು ಅವಳಿಗೆ ಮರೆಯಾಗಿ ಅವಳ ಮುಂದವನು ನಿಂತುಕೊಂಡನು.

'ಇಗೋ ನನ್ನ ತೋಳಿನ ನೆರವು ನಿನಗೆ ನೀಡುತ್ತೇನೆ. ಮೂರನೆಯಸಲ ಹೇಳುತ್ತಿದ್ದೇನೆ.' ಎಂದವನು ಕೆಲವು ನಿಮಿಷಗಳನಂತರ ನುಡಿದನು. ಅನ್ನಾ ಅವನ ಕಡೆಗೆ ನೋಡಿದಳು. ಏನು ಹೇಳಬೇಕೆಂಬುದವಳಿಗೆ ಗೊತ್ತಾಗಲಿಲ್ಲ. ರಾಜಕುಮಾರಿ ಬೆಟ್ಸಿ ಅವಳ ನೆರವಿಗೆ ಬಂದಳು.

'ಬೇಡಿ, ಅಲೆಕ್ಸಿ ಅಲೆಕ್ಸಾಂಡ್ರೊವಿಚ್. ಅನ್ನಾಳನ್ನಿಲ್ಲಿಗೆ ಕರೆದುಕೊಂಡು ಬಂದವಳು ನಾನು. ನಾನೇ ಅವಳನ್ನು ಮತ್ತೆ ಮನೆಗೆ ಮುಟ್ಟಿಸುವುದಾಗಿ ಮಾತುಕೊಟ್ಟಿದ್ದೇನೆ.' ಎಂದವಳು ಸೊಲ್ಲಿಸಿದಳು.

'ಕ್ಷಮಿಸಿ, ರಾಜಕುಮಾರಿಯವರೆ,' ಎಂದವನು ಸೌಜನ್ಯದ ಮಂದಹಾಸ ಬೀರುತ್ತ, ಅವಳ ಕಡೆಗೆ ಅಚಲ ದೃಷ್ಟಿಯನ್ನು ಹಾಯಿಸುತ್ತ ನುಡಿದನು. 'ಅನ್ನಾಳಿಗೆ ಸ್ವಾಸ್ಥ್ಯವಿಲ್ಲವೆಂದು ಕಾಣುತ್ತದೆ. ಅವಳು ನನ್ನೊಂದಿಗೆ ಹೋಗುವುದೇ ಲೇಸೆಂದು ನನಗನಿಸುತ್ತಿದೆ.'

ಅನ್ನಾ ಹೆದರಿಕೆಯಿಂದ ಸುತ್ತಲೂ ಕಣ್ಣು ಹಾಯಿಸಿದಳು; ದೈನ್ಯದಿಂದ ಮೇಲೆದ್ದಳು; ತನ್ನ ಪತಿಯ ತೋಳೊಳಗೆ ತನ್ನ ತೋಳು ಸೇರಿಸಿದಳು.

'ಅವನ ವಿಷಯ ತಿಳಿಯಲು ಯಾರನ್ನಾದರೂ ಕಳಿಸುತ್ತೇನೆ. ವಿಷಯ ಗೊತ್ತಾದ ಕೂಡಲೇ ನಿನಗೂ ತಿಳಿಸುತ್ತೇನೆ' ಎಂದು ಬೆಟ್ಸಿ ಅವಳ ಕಿವಿಯಲ್ಲಿ ಪಿಸುಗುಟ್ಟಿದಳು.

ಅವರು ಕ್ರೀಡಾ ಮಂಟಪದಿಂದ ಹೊರಗೆ ಹೋಗುವಾಗ ಕರೆನಿನ್ ಎಂದಿನಂತೆ ತನಗೆದುರಾದವರೊಡನೆ ಮಾತಾಡಿದನು; ಅನ್ನಾ ಸಹ ಅನಿವಾರ್ಯವಾಗಿ ಮಾತಾಡಿಸಿದವರಿಗೆ ಉತ್ತರನೀಡಿ, ವಿಚಾರವಿನಿಮಯ ಮಾಡಿಕೊಳ್ಳಬೇಕಾಯಿತು. ಆದರವಳು ತಾನೇ ತಾನಾಗಿರಲಿಲ್ಲ; ಅನ್ಯಮನಸ್ಕಳಾಗಿದ್ದಳು; ಸ್ವಪ್ನಲೋಕದಲ್ಲಿದ್ದಂತೆ ತನ್ನ ಗಂಡನ ತೋಳೊಳಗೆ ತನ್ನ ತೋಳನ್ನು ತಳುಕು ಹಾಕಿಕೊಂಡು ನಡೆದಳು.

'ಅವರ ಶರೀರಕ್ಕೆ ಅಪಾಯವಾಗಿದೆಯೆ ಇಲ್ಲವೆ? ಅದು ನಿಜವೆ? ಅವರು ಬರುತ್ತಾರೆಯೋ ಇಲ್ಲವೋ? ಅವರನ್ನು ರಾತ್ರಿ ಭೇಟಿಮಾಡಬಹುದೆ?' ಎಂದವಳು ಆಲೋಚಿಸುತ್ತಿದ್ದಳು.

ಮೌನವಾಗಿಯೇ ಅವಳು ಕರೆನಿನ್‌ನ ವಾಹನವನ್ನೇರಿದಳು; ವಾಹನಗಳ ಸಮೂಹದ ಮೂಲಕ ಸಾಗುವಾಗ ಅವರು ಮೌನವಾಗಿಯೇ ಕುಳಿತಿದ್ದರು. ಕರೆನಿನ್ ಹಲವು ಸಂಗತಿಗಳನ್ನು ನೋಡಿದ್ದರೂ, ತನ್ನ ಮಡದಿಯ ಸ್ಥಿತಿಗತಿಗಳ ಬಗ್ಗೆ ಚಿಂತಿಸಲು ಪ್ರಯತ್ನಿಸಲಿಲ್ಲ. ಅವನವುಗಳ ಬಾಹ್ಯಾಭಿವ್ಯಕ್ತಿಯನ್ನು ಮಾತ್ರ ಕಂಡಿದ್ದನು. ಅಸಭ್ಯ ರೀತಿಯಲ್ಲವಳು ವರ್ತಿಸಿದ್ದನ್ನು ಅವನೇ ಕಂಡಿದ್ದನು; ಅದನ್ನವಳಿಗೆ ತಿಳಿಸತಕ್ಕದ್ದು ತನ್ನ ಕರ್ತವ್ಯವೆಂದವನು ಭಾವಿಸಿದನು. ಆದರೆ ಉಳಿದದ್ದನ್ನೆಲ್ಲ ಬಿಟ್ಟು, ಅಷ್ಟನ್ನು ಮಾತ್ರ ಹೇಳಲು ಅವನಿಗೆ ಕಷ್ಟವಾಯಿತು. ಅವಳ ವರ್ತನೆ ಅಸಭ್ಯವಾಗಿತ್ತೆಂದು ಹೇಳುವ ಸಲುವಾಗಿ ಅವನು ಬಾಯಿ ತೆರೆದನು. ಆದರೆ ಅನೈಚ್ಛಿಕವಾಗಿ ತೀರ ವಿರುದ್ಧವಾದದ್ದನ್ನೆ ಹೇಳಿದನು. 'ಆ ಕ್ರೌರ್ಯದೃಶ್ಯವನ್ನು ನೋಡಿ ನಾವೆಲ್ಲ ಆನಂದ ಪಡುತ್ತಿದ್ದೇವಲ್ಲ, ಇದೆಷ್ಟು ವಿಚಿತ್ರವಾಗಿದೆ! ನಾನು ಯೋಚಿಸುತ್ತಿದ್ದೇನೆ—'

'ಏನದು? ನಿಮ್ಮ ಮಾತು ನನಗರ್ಥವಾಗದು' ಎಂದು ಅನ್ನಾ ತಾತ್ಸಾರದಿಂದ ನುಡಿದಳು.

ಅವನ ಮನಸ್ಸಿಗೆ ನೋವಾಯಿತು; ಒಡನೆಯೇ ತಾನು ಹೇಳಬೇಕಾದ್ದನ್ನು ಪ್ರಾರಂಭಿಸಿದನು. 'ನಾನು ನಿನಗೆ ಹೇಳಲೇ ಬೇಕಾದ್ದಿದೆ....' ಎಂದವನು ಮಾತು ತೆಗೆದನು.

'ಕೊನೆಗೂ ಗುಟ್ಟು ಬಯಲಾಗುತ್ತಿದೆ. ಮುಚ್ಚುಮರೆಯಿಲ್ಲದೆ ಹೇಳುವ ಸಮಯವೊದಗಿದೆ' ಎಂದವಳು ಆಲೋಚಿಸಿದಳು. ಅವಳು ಭಯಚಕಿತೆಯಾದಳು.

'ಇಂದು ನಿನ್ನ ವರ್ತನೆ ಅಸಭ್ಯವಾಗಿತ್ತೆಂದು ಹೇಳಲೇಬೇಕು' ಎಂದವನು ಫ್ರೆಂಚ್ ಭಾಷೆಯಲ್ಲಿ ಹೇಳಿದನು.

'ಅಸಭ್ಯವಾಗಿತ್ತೆಂದು ಹೇಗೆ ಹೇಳುವಿರಿ?' ಎಂದವಳು ಥಟ್ಟನೆ ತಲೆ ಹೊರಳಿಸಿ, ಅವನನ್ನೆ ನೇರವಾಗಿ ನೋಡುತ್ತ, ಗಟ್ಟಿಯಾಗಿ ಅಬ್ಬರಿಸಿದಳು. ಹಿಂದೆ ತೆರೆಯಂತೆ ಬಳಸುತ್ತಿದ್ದ ಉಲ್ಲಾಸ ಈ ಸಲ ಅವಳಲ್ಲಿ ಕಾಣಲಿಲ್ಲ; ತನ್ನ ಭಯ ಕಳವಳಗಳನ್ನು ಶ್ರಮಪೂರ್ವಕವಾಗಿ ಮುಚ್ಚುವ ದೃಢನಿರ್ಧಾರ ಅವಳಲ್ಲಿ ಗೋಚರಿಸುತ್ತಿತ್ತು.

ತಮ್ಮ ಮತ್ತು ಗಾಡಿಯಾಳಿನ ನಡುವಿದ್ದ ತೆರೆದ ಕಿಟಕಿಯನ್ನು ತೋರಿಸುತ್ತ 'ಎಚ್ಚರಿಕೆ' ಎಂದವನು ಸೂಚಿಸಿದನು.

ಅವನು ಮುಂದೆ ಬಾಗಿ, ಕಿಟಕಿಯನ್ನು ಮುಚ್ಚಿದನು.

'ನಿಮಗದರಲ್ಲಿ ಕಂಡ ಅಸಭ್ಯತೆಯಾದರೂ ಏನು?' ಎಂದವಳು ಪುನರುಕ್ತಿಸಿದಳು.

'ಸವಾರನೊಬ್ಬ ಕೆಳಗೆ ಬಿದ್ದಾಗ ನೀನು ಸಂಯಮಿಸಿಕೊಳ್ಳಲಾರದೆ ಅನುಭವಿಸಿದ ಸಂಕಟ.'

ಅದನ್ನವಳು ನಿರಾಕರಿಸಬಹುದೆಂದವನು ನಿರೀಕ್ಷಿಸಿದನು. ಆದರವಳು ಮಾರ್ನುಡಿಯಲಿಲ್ಲ; ಎದುರುಗಡೆ ದುರುಗುಟ್ಟಿಕೊಂಡು ನೋಡುತ್ತಿದ್ದಳು.

'ಕೆಟ್ಟ ನಾಲಗೆಗಳು ನಿನ್ನ ವಿರುದ್ಧವಾಗಿ ಅಪಪ್ರಚಾರವೆಸಗದಂತೆ ಸಾರ್ವಜನಿಕ ಕ್ಷೇತ್ರದಲ್ಲಿ ಸಭ್ಯತನದಿಂದ ವರ್ತಿಸತಕ್ಕದ್ದೆಂದು ನಾನು ನಿನ್ನಲ್ಲಿ ವಿನಂತಿಸಿಕೊಂಡಿದ್ದೆ. ನಮ್ಮ ವೈಯಕ್ತಿಕ ಸಂಬಂಧಗಳ ಬಗ್ಗೆ ನಾನು ಮಾತಾಡುತ್ತಿದ್ದ ಕಾಲವೊಂದಿತ್ತು. ಅವುಗಳ ಬಗ್ಗೆ ಮರೆತು ಸಹ ಪ್ರಸ್ತಾಪವೆತ್ತುವುದಿಲ್ಲ. ನಾನೀಗ ನಮ್ಮ ಸಾಮಾಜಿಕ ಸಂಬಂಧಗಳ ಬಗ್ಗೆ ಮಾತ್ರ ಮಾತಾಡುತ್ತಿದ್ದೇನೆ. ನಿನ್ನ ವರ್ತನೆ ಅಸಹ್ಯವಾಗಿತ್ತು. ಅದು ಪುನರಾವೃತ್ತಿಯಾಗಬಾರದಷ್ಟೆ.'

ಅವನು ಹೇಳಿದ್ದರಲ್ಲಿ ಅರ್ಧವನ್ನೂ ಅವಳು ಕೇಳಿಸಿಕೊಳ್ಳಲಿಲ್ಲ. ಅವನಿಂದಾಗಿ ಅವಳು ಭಯ ಭೀತಿಯಾದಳು. 'ಅವರು ಅಪಾಯಮುಕ್ತರಾಗಿದ್ದಾರೆಂಬುದು ನಿಜವೆ? ಕುದುರೆಯ ಬೆನ್ನು ಮುರಿದುಹೋದರೂ, ಸವಾರನಿಗೆ ತುಸುಮಾತ್ರವೂ ನೋವಾಗಲಿಲ್ಲವೆಂಬ ಜನರ ಮಾತು ಅವರಿಗೆ ಸಂಬಂಧಿಸಿದುದಾಗಿರಬಹುದೆ?' ಎಂದವಳು ವ್ರಾಂಸ್ಕಿಯನ್ನು ಕುರಿತು ಆಲೋಚಿಸಿದಳು. ಅವನು ಮಾತು ಮುಗಿಸಿದಾಗ ಅವಳು ತಾತ್ಸಾರದ, ಸೋಗಿನ ಮುಗುಳುನಗೆ ಸೂಸಿದಳೆ ಹೊರತು, ಮರುಮಾತಾಡಲಿಲ್ಲ. ಅವನ ಮಾತನ್ನು ಕೇಳಿಸಿಕೊಳ್ಳದಿದ್ದುದೇ ಅವಳ ಮಾತಿಲಿತನಕ್ಕೆ ಕಾರಣ. ಕರೆನಿನ್ ಧೈರ್ಯದಿಂದ ಮಾತು ಪ್ರಾರಂಭಿಸಿದ್ದನು; ಆದರೆ ತಾನೇನು ಹೇಳುತ್ತಿದ್ದೇನೆಂದವನು ಸಂಪೂರ್ಣವಾಗಿ ಗ್ರಹಿಸಿಕೊಂಡಾಗ, ಅವಳ ಹೃದಯವನ್ನಾವರಿಸಿಕೊಂಡಿದ್ದ ಭಯ ಅವನ ಮನವನ್ನು ಮುಟ್ಟಿತು. ಅವಳ ಮಂದಹಾಸದ ಕಡೆಗೆ ಅವನ ಲಕ್ಷ್ಯ ಹರಿದಾಗ, ವಿಚಿತ್ರವಾದ ತಪ್ಪು ತಿಳುವಳಿಕೆ ಅವನ ಮನವನ್ನಾಕ್ರಮಿಸಿಕೊಂಡಿತು.

'ನನ್ನ ಸಂಶಯಗಳ ಬಗ್ಗೆ ಅವಳು ನಗುತ್ತಿದ್ದಾಳೆ. ಹಿಂದೆ ಏನು ಹೇಳಿದ್ದಳೋ ಅದನ್ನೇ ನನ್ನ ಮುಖಕ್ಕೆ ನೇರವಾಗಿ ಎಸೆಯುತ್ತಾಳೆ. ನನ್ನ ಸಂಶಯಗಳು ನಿರಾಧಾರವಾದುವೆಂದೂ, ಅವೆಲ್ಲ ಅಸಂಬದ್ಧ ಪ್ರಲಾಪವೆಂದೂ ಅವಳು ಹೇಳಿಬಿಡುತ್ತಾಳೆ.'

ಹಳೆಯ ಸಂಗತಿಗಳೆಲ್ಲ ಬಯಲಾಗುವ ಸಮಯದಲ್ಲಿ ತಾತ್ಸಾರದಿಂದೊಡಗೂಡಿದ ಅವಳ ಅಣಕ ನೆನಪಾಯಿತು. ಅದನ್ನೆಲ್ಲ ಅವನು ಬಲ್ಲವನಾದ್ದರಿಂದ ಅವನ ದಿಗಿಲು

ಇಮ್ಮಡಿಯಾಗಿ, ಏನನ್ನಾದರೂ ನಂಬಲು ಅವನು ಸಿದ್ಧನಾಗಿದ್ದನು. ಆದರೆ ಅವಳ ಚಕಿತ ಬಿನ್ನ ಮುಖಭಾವದಿಂದ ವಂಚನೆ ಸಹ ಸಾಧ್ಯವಾಗಲಾರದೆಂದು ಅವನಿಗನ್ನಿಸಿತು.

'ಪ್ರಾಯಶಃ ನನ್ನನ್ನು ತಪ್ಪು ತಿಳಿದುಕೊಂಡಿರುವಂತೆ ತೋರುತ್ತದೆ. ಅದು ನಿಜವಾದರೆ, ನನ್ನನ್ನು ಕ್ಷಮಿಸು' ಎಂದವನು ನುಡಿದನು.

'ಇಲ್ಲ, ನಿಮ್ಮ ಬಗ್ಗೆ ತಪ್ಪು ತಿಳಿವಳಿಕೆಯಿಲ್ಲ.' ಎಂದವಳು ನಿರಾಶೆಯಿಂದ ಅವನ ಔದಾಸೀನ್ಯ ಮುಖದ ಕಡೆಗೆ ನೋಡುತ್ತ ನಿದಾನವಾಗಿ ಸೊಲ್ಲಿಸಿದಳು. 'ನಿಮ್ಮನ್ನು ತಪ್ಪಾಗಿ ಭಾವಿಸಿಕೊಂಡಿಲ್ಲ. ನಾನು ನಿರಾಶೆಗೊಳ್ಳಬೇಕಾದ ಪರಿಸ್ಥಿತಿಯೊದಗಿದೆ. ಬೇರೆ ಮಾರ್ಗವೇ ನನಗೆ ತೋಚದು. ನಾನು ನಿಮ್ಮ ಮಾತನ್ನು ಕೇಳಿಸಿಕೊಳ್ಳುತ್ತಿದ್ದೇನೆ, ಅವರ ಬಗ್ಗೆಯೂ ಚಿಂತಿಸುತ್ತಿದ್ದೇನೆ. ನಾನವರನ್ನು ಪ್ರೀತಿಸುತ್ತೇನೆ. ನಾನವರ ಪ್ರಣಯಿನಿ. ನಾನು ನಿಮ್ಮನ್ನು ಸಹಿಸಿಕೊಂಡಿರಲಾರೆ. ನಿಮ್ಮನ್ನು ಕಂಡರೆ ನನಗೆ ಭಯವಾಗುತ್ತದೆ. ನಾನು ನಿಮ್ಮನ್ನು ದ್ವೇಷಿಸುತ್ತೇನೆ....ನನ್ನ ಬಗ್ಗೆ ನಿಮಗಿಷ್ಟ ಬಂದ ರೀತಿಯಲ್ಲಿ ಕ್ರಮ ಜರುಗಿಸಬಹುದು.'

ಗಾಡಿಯ ಮೂಲೆಯಲ್ಲವಚಿಕೊಂಡು, ಕೈಗಳಿಂದ ಮುಖ ಮುಚ್ಚಿಕೊಂಡು, ಅವಳು ಬಿಕ್ಕಿಬಿಕ್ಕಿ ಅತ್ತಳು. ಕರೆನಿನ್ ಅಲುಗಾಡಲಿಲ್ಲ; ತನ್ನೆದುರಿಗೆ ನೇರವಾಗಿ ನೋಡುತ್ತಿದ್ದನು. ಆದರೆ ಅವನ ಮುಖ ಹಠಾತ್ತನೆ ಹೆಣದ ಗಂಭೀರ ನಿಶ್ಚಲತೆಯನ್ನಾಕರಿಸಿತು. ಹಳ್ಳಿಮನೆ ಸೇರುವ ತನಕ ಈ ಮುಖಭಾವ ಬದಲಾವಣೆ ಹೊಂದಲಿಲ್ಲ. ಅವರು ಗೊತ್ತು ಸೇರಿದಾಗ, ಅದೇ ಮುಖಭಾವದಿಂದ ತನ್ನ ತಲೆಯನ್ನವನು ಅವಳ ಕಡೆಗೆ ತಿರುಗಿಸಿದನು.

'ಸರಿ, ಸರಿ. ಆದರೆ ನನ್ನದೊಂದು ಶರತ್ತಿದೆ. ಆದರೆ ಕೆಲಕಾಲ ಸಭ್ಯ ಸಂಪ್ರದಾಯದ ಬಾಹ್ಯಾಚರಣೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾಗುತ್ತದೆ—ಆ ಕ್ಷಣದಲ್ಲಿ ಅವನ ಧ್ವನಿ ಕಂಪಿಸತೊಡಗಿತು— ನನ್ನ ಗೌರವ ರಕ್ಷಣೆಗಾಗಿ ತಕ್ಕ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ನಿನಗರುಹುವ ತನಕ ನೀನವುಗಳನ್ನು ಪಾಲಿಸಬೇಕಾಗುತ್ತದೆ.

ಅವನು ಮೊದಲು ಗಾಡಿಯಿಂದಿಳಿದು, ಅವಳನ್ನಿಳಿಸಿದನು. ಆಳುಗಳೆದುರಿಗೆ ಅವನು ಮೌನವಾಗಿ ತನ್ನ ಕೈಯನ್ನದುಮಿದನು; ಮತ್ತೆ ವಾಹನವನ್ನೇರಿದನು; ಸೆಂಟ್ ಪೀಟರ್ಸ್ ಬರ್ಗ್ ಕಡೆಗೆ ಹೊರಟನು.

ಅವನು ಆ ಕಡೆ ಹೋಗುತ್ತಿದ್ದಂತೆ, ರಾಜಕುಮಾರಿ ಬೆಟ್ಸಿ ಕಡೆಯ ಸೇವಕನೊಬ್ಬ ಅನ್ನಾಳಿಗೊಂದು ಚೀಟಿ ತಂದನು: 'ವ್ರಾಂಸ್ಕಿಯ ಕ್ಷೇಮ ಸಮಾಚಾರವನ್ನರಿಯುವ ಸಲುವಾಗಿ ನಾನವನ ಬಳಿಗೆ ದೂತನನ್ನಟ್ಟಿದ್ದೆ. ತಾವು ಅಪಾಯದಿಂದ ಪಾರಾಗಿ, ಆರೋಗ್ಯದಿಂದಿರುವುದಾಗಿಯೂ, ಆದರೆ ನಿರಾಶರಾಗಿರುವುದಾಗಿಯೂ ಪತ್ರ ಬರೆದಿದ್ದಾರೆ.'

'ಹಾಗಾದರೆ ಅವರಿಲ್ಲಿಗೆ ಬರುತ್ತಾರೆ!' ಎಂದವಳು ಆಲೋಚಿಸಿದಳು. 'ನಾನವರಿಗೆ ಮುಚ್ಚುಮರೆಯಿಲ್ಲದೆ, ಎಲ್ಲವನ್ನು ಬಿಚ್ಚಿ ಹೇಳಿದ್ದರಿಂದ ನನಗೆ ತುಂಬ ಸಂತೋಷವಾಗಿದೆ.'

ಅವಳು ಗಡಿಯಾರದಕಡೆಗೆ ಕಣ್ಣು ಮಿಟುಕಿಸಿದಳು. ಇನ್ನು ಮೂರು ಗಂಟೆಕಾಲ ಅವಳು ಕಾಯಬೇಕಾಗಿತ್ತು. ಕಳೆದ ಭೇಟಿಯ ನೆನಪುಗಳು ಮರುಕೊಳಿಸಲಾಗಿ, ಕಾವೇರಿದ ರಕ್ತ ಅವಳ ಧಮನಿಧಮನಿಗಳಲ್ಲಿ ಪ್ರವಹಿಸುತ್ತಿತ್ತು.

'ಓ, ದೇವರೆ! ಈಗೆಷ್ಟು ಬೆಳಕಾಗಿದೆ! ಭಯವಾಗುತ್ತಿದೆ, ನಿಜ. ಆದರೆ, ಅಹ, ಅವರ ಮುಖವನ್ನು ಯಾವಾಗಲೂ ನೋಡಬೇಕೆನಿಸುತ್ತದೆ. ವಿಚಿತ್ರವಾದ ಈ ಬೆಳಕನ್ನು ಪ್ರೀತಿಸುತ್ತೇನೆ!....ನನ್ನ ಪತಿ? ಓ, ಹೌದು...ಆದರೆ ದೇವರ ದಯೆಯಿಂದ ಅವರೊಡನೆಯ ಸಂಬಂಧವೆಲ್ಲವೂ ಮುಗಿದಂತಾಗಿದೆ!'

೩೦

ಜರ್ಮನಿಯ ಸಣ್ಣ ಆರೋಗ್ಯಧಾಮಕ್ಕೆ ಶರ್‌ಬತ್‌ಸ್ಕಿಯರು ಬಂದಿದ್ದರು. ಜನ ನೆರೆಯುವ ಎಲ್ಲ ಸ್ಥಳಗಳಂತೆ ಅಲ್ಲಿಯೂ ಸಮಾಜ ನಿರ್ದಿಷ್ಟ ರೂಪವನ್ನು ಪಡೆಯುತ್ತಿತ್ತು. ಹಾಗೆ ಸಮಾಜ ನಿರ್ದಿಷ್ಟ ರೂಪ ಪಡೆಯುವಾಗ ಪ್ರತಿಯೊಬ್ಬ ವ್ಯಕ್ತಿಗೂ ನಿರ್ದಿಷ್ಟವೂ ನಿರ್ವ್ಯತ್ಯಯವೂ ಆದ ಸ್ಥಾನ ಲಭಿಸುತ್ತಿತ್ತು. ಜಲಕಣವೊಂದು ಚಳಿಯಲ್ಲಿ ಸ್ಪಷ್ಟವಾಗಿ ಹಾಗೂ ನಿರ್‌ವ್ಯತ್ಯಯವಾಗಿ ಹಿಮಹರಳಿನ ಆಕಾರವನ್ನು ಪಡೆಯುವಂತೆ ಆರೋಗ್ಯ ಧಾಮಕ್ಕೆ ಬಂದ ಪ್ರತಿಯೊಬ್ಬ ವ್ಯಕ್ತಿಯೂ ಕೂಡಲೇ ತನಗೆ ತಕ್ಕುದಾದ ಸ್ಥಾನವನ್ನು ಪಡೆಯುತ್ತಿದ್ದನು.

ತಾವು ಹಿಡಿದುಕೊಂಡ ಕೋಣೆಗಳಿಂದ, ತಮ್ಮ ಹೆಸರುಗಳಿಂದ ಹಾಗೂ ತಾವು ಗಳಿಸಿದ ಗೆಳೆಯರಿಂದ ಶರ್‌ಬತ್‌ಸ್ಕಿಯರು ಒಡನೆಯೆ ತಮಗೆಂದೇ ಗೊತ್ತಾಗಿದ್ದ ಸ್ಥಾನವನ್ನು ಪಡೆದರು.

ಆ ವರ್ಷ ಜಲಖನಿಯಲ್ಲಿ ನಿಜವಾದ ಜರ್ಮನ್ ರಾಜಕುಮಾರಿ ಇದ್ದದ್ದರಿಂದ ಸಮಾಜ ಬಹುಬೇಗ ಎಂದಿಲ್ಲದ ಉತ್ಸಾಹದಿಂದ ನಿರ್ದಿಷ್ಟರೂಪವನ್ನು ಪಡೆಯಿತು. ಜರ್ಮನ್ ರಾಜಕುಮಾರಿಗೆ ತನ್ನ ಮಗಳನ್ನು ಪರಿಚಯಿಸಿ ಕೊಡಬೇಕೆಂದು ರಷ್ಯನ್ ರಾಜಕುಮಾರಿ ಉತ್ಸುಕಳಾಗಿದ್ದಳು. ಅವರು ಆಗಮಿಸಿದ ಎರಡನೆಯ ದಿನವೇ ಸಂದರ್ಶನ ಸಮಾರಂಭವನ್ನೇರ್ಪಡಿಸಲಾಯಿತು. ಸೌಜನ್ಯದಿಂದ ಸವಿನಯವಾಗಿ ಅವಳ ಮುಂದೆ ಮಣಿದ ಕಿಟ್ಟಿ ಪ್ಯಾರಿಸ್ಸಿನಿಂದ ತರಿಸಿದ್ದ ಮನೋಹರವಾದ ಬೇಸಗೆ ಲಂಗವನ್ನು ಧರಿಸಿದ್ದಳು. 'ಈ ಮುದ್ದುಗೆನ್ನೆಗಳಲ್ಲಿ ಮತ್ತೆ ಗುಲಾಬಿಗಳು ಮೂಡುತ್ತವೆಂಬ ಭರವಸೆ ನನಗಿದೆ' ಎಂದು ಜರ್ಮನ್ ರಾಜಕುಮಾರಿ ನುಡಿದಳು. ಆ ಕ್ಷಣದಿಂದ ಶರ್‌ಬತ್‌ಸ್ಕಿಯರಿಗೊಂದು ದಿನಚರಿ ಸಂಸಿದ್ಧಗೊಂಡಿತು; ಅದರಿಂದವರು ಬೇರೆ ಚಲಿಸುವಂತಿರಲಿಲ್ಲ. ಶರ್‌ಬತ್‌ಸ್ಕಿಯರು ಇಂಗ್ಲಿಷ್ ಶ್ರೀಮಂತೆಯ ಮತ್ತು ಅವಳ ಕುಟುಂಬದ ಪರಿಚಯ ಮಾಡಿಕೊಂಡರು. ಜರ್ಮನ್ ಕೌಂಟೆಸ್ ಮತ್ತು ಕಳೆದ ಯುದ್ಧದಲ್ಲಿ ಗಾಯಗೊಂಡಿದ್ದ ಅವಳ ಮಗ, ಸ್ವೀಡೀಯ ವಿದ್ವಾಂಸ, ಹಾಗೂ ಎಂ. ಕಾನ್ಯೂಟ್ ಮತ್ತು ಅವನ ಸೋದರಿ ಸಹ ಅವರ ಗೆಳೆಯರಾದರು. ಆದರೆ ಮಾಸ್ಕೊ ಮಹಿಳೆ ಮೇರಿಯ ಎವ್ಜೀನೀವ್ನ ರಿತಿಶ್ಚೇವ ಮತ್ತು ಅವಳ ಮಗಳು ಅವರ ಮುಖ್ಯ ಗೆಳತಿಯರಾಗಿದ್ದರು. ತನ್ನಂತೆಯೇ ಪ್ರಣಯಭಂಗದಿಂದಾಗಿ ರೋಗಗ್ರಸ್ತೆಯಾಗಿದ್ದ ಆ ಹುಡುಗಿಯ ಬಗ್ಗೆ ಕಿಟ್ಟಿಗೆ ಒಲವಿರಲಿಲ್ಲ. ಕಿಟ್ಟಿ ಮಗುವಾಗಿದ್ದಾಗ ಸಂಧಿಸಿದ್ದ, ಯಾವಾಗಲೂ ಭುಜಕೀರ್ತಿಯಿದ್ದ ಸಮವಸ್ತ್ರದಲ್ಲಿಯೇ ನೋಡಿದ್ದ ಮಾಸ್ಕೊ ಕರ್ನಲ್ ಒಬ್ಬ ಇದೀಗ ತನ್ನ ಕಿರುಗಣ್ಣುಗಳಿಂದ, ಪುಷ್ಪಾಲಂಕೃತ ಕಂಠವಸ್ತ್ರ ಸುತ್ತಿದ್ದ ತೆರೆದ ಕೊರಳಿಂದ ವಿಚಿತ್ರವಾಗಿ ಕಾಣುತ್ತಿದ್ದನು; ಅಸ್ಪಷ್ಟವಾಗಿ ಮಾತಾಡುತ್ತಿದ್ದ ಅವನನ್ನು ಕಂಡರೆ ಕಿಟ್ಟಿಗಾಗುತ್ತಿರ

ಲಿಲ್ಲ. ಇಷ್ಟೆಲ್ಲ ದೃಢವಾಗಿ ನೆಲೆಯೂರಿದ ನಂತರ ಅವಳಿಗೆ ತುಂಬ ಬೇಸರವಾಗುತ್ತಿತ್ತು. ತಂದೆ ಕಾರ್ಲ್ಸ್ ಬಾದ್‌ಗೆ ತೆರಳಿ, ತಾಯಿಯೊಡನೆ ಒಂಟಿಯಾದಮೇಲಂತು ಅವಳ ಬಾಳು ಬೋಳಾದಂತಾಯಿತು. ತನಗೆ ಮೊದಲೇ ಪರಿಚಯವಾಗಿದ್ದ ವ್ಯಕ್ತಿಗಳಿಂದ ನಿರ್ವೋತ್ಸಾಹ ಲಭಿಸದಿದ್ದಾಗ ಅವಳು ಅವರ ಬಗ್ಗೆ ಆಸಕ್ತಿ ವಹಿಸಲಿಲ್ಲ. ಅಪರಿಚಯಸ್ಥ ರನ್ನು ವೀಕ್ಷಿಸುತ್ತ ಅವರ ಬಗ್ಗೆ ನಾನಾ ಊಹೆಗಳನ್ನು ಕಲ್ಪಿಸಿಕೊಳ್ಳುವುದೊಂದೇ ಆ ಜಲಧಾಮದಲ್ಲವಳ ಪ್ರಮುಖ ಉದ್ಯೋಗವಾಗಿತ್ತು. ತನಗೆ ಗೊತ್ತಿಲ್ಲದ ಜನರಲ್ಲಿ ಅತ್ಯುತ್ತಮ ಗುಣಗಳನ್ನು ಕಾಣುವುದೇ ಕಿಟ್ಟಿಯ ವಿಶಿಷ್ಟ ಸ್ವಭಾವವಾಗಿತ್ತು. ಯಾರು ಯಾರಾಗಿರಬಹುದೆಂದು, ಅವರ ಪರಸ್ಪರ ಸಂಬಂಧಗಳೇನಿರಬಹುದೆಂದು, ಅವರು ಹೇಗಿದ್ದಿರಬಹುದೆಂದು ಯೋಚಿಸಿದಾಗ, ಅವರ ನಡುವೆ ಅದ್ಭುತರೂ ಮಹಿಮಾತಿ ಶಯರೂ ಆದ ವ್ಯಕ್ತಿಗಳಿರುವುದಾಗಿ ಅವಳು ಊಹಿಸಿಕೊಂಡಳು. ಅವಳ ಸಮೀಕ್ಷೆಯೇ ಅವಳ ಊಹೆಗಳನ್ನು ಸ್ಥಿರೀಕರಿಸಿತ್ತು.

ವಿಶೇಷವಾಗಿ ಅವಳ ಗಮನವನ್ನು ಸೆಳೆದ ವ್ಯಕ್ತಿಯೆಂದರೆ ರಷ್ಯನ್ ಹುಡುಗಿ. ಮದಾಂ ಸ್ಟಾಲ್ ಎಂದು ಎಲ್ಲರೂ ಕರೆಯುತ್ತಿದ್ದ, ರೋಗಗ್ರಸ್ತೆ ರಷ್ಯನ್ ಮಹಿಳೆ ಯೊಬ್ಬಳೊಡನೆ ಅವಳು ಆರೋಗ್ಯಧಾಮಕ್ಕೆ ಬಂದಿದ್ದಳು. ಮದಾಂ ಸ್ಟಾಲ್ ಉತ್ತಮ ವರ್ಗದ ಸಭ್ಯ ಸಮಾಜಕ್ಕೆ ಸೇರಿದ್ದವಳು. ಆದರೆ ರೋಗದ ತೀಕ್ಷ್ಣತೆಯಿಂದಾಗಿ ಅವಳು ನಡೆದಾಡುತ್ತಿರಲಿಲ್ಲ. ಅಪರೂಪವಾಗಿ ಹವೆ ಚೆನ್ನಾಗಿದ್ದಾಗ ಮಾತ್ರ ಅವಳು ಸ್ನಾನದ ಕುರ್ಚಿಯಲ್ಲಿ ಸಾರ್ವಜನಿಕವಾಗಿ ಕಾಣಿಸಿಕೊಳ್ಳುತ್ತಿದ್ದಳು. ಆದರೆ ರಷ್ಯನ್ನರ ಸಮುದಾಯ ದಲ್ಲಿ ಸ್ಟಾಲ್ ಗೆಳೆಯರನ್ನು ಗಳಿಸದಿದ್ದುದಕ್ಕೆ ಮುಖ್ಯ ಕಾರಣ ಅವಳ ದುರಹಂಕಾರವೇ ಹೊರತು, ಖಾಯಿಲೆಯಲ್ಲ. ಇದು ರಾಜಕುಮಾರಿಯ ಅಭಿಪ್ರಾಯ. ರಷ್ಯನ್ ಹುಡುಗಿ ಮದಾಂ ಸ್ಟಾಲ್‌ಳನ್ನು ಎಚ್ಚರಿಕೆಯಿಂದ ನೋಡಿಕೊಳ್ಳುತ್ತಿದ್ದಳು; ಕಿಟ್ಟಿಗೆ ತಿಳಿದಂತೆ ಅವಳ ಲಕ್ಷ್ಯ ಸ್ಟಾಲ್‌ಗೆ ಮಾತ್ರ ಸೀಮಿತಗೊಂಡಿರಲಿಲ್ಲ; ಗುರುತರವಾದ ಸಂಕಟಕ್ಕೊಳ ಗಾದವರೊಡನೆ ಅವಳು ಸ್ನೇಹ ಬೆಳೆಸುತ್ತಿದ್ದಳು. ಆ ಜಲಧಾಮದಲ್ಲಿ ಅಂಥವರು ಅಪಾರ ಸಂಖ್ಯೆಯಲ್ಲಿದ್ದರು; ಪ್ರದರ್ಶನಾಪೇಕ್ಷೆಯಿಲ್ಲದೆ, ಅತ್ಯಂತ ಸರಳ ರೀತಿಯಲ್ಲಿ ಅವಳು ಅವರ ಬಗ್ಗೆ ಎಚ್ಚರಿಕೆ ವಹಿಸುತ್ತಿದ್ದಳು. ಕಿಟ್ಟಿಯ ಅಭಿಪ್ರಾಯದ ಪ್ರಕಾರ ರಷ್ಯನ್ ಹುಡುಗಿ ಮದಾಂಸ್ಟಾಲ್‌ಳ ಬಂಧುವಲ್ಲ; ಜತೆಗವಳು ಸಂಬಳದ ಆಳಾಗಿರಲಿಲ್ಲ. ಮದಾಂಸ್ಟಾಲ್ ಅವಳನ್ನು ವರೆಂಕ ಎಂದು ಕರೆದರೆ, ಇತರರು ಶ್ರೀಮತಿ ವರೆಂಕ ಎಂದು ಸಂಬೋಧಿಸುತ್ತಿದ್ದರು. ರಷ್ಯನ್ ಹುಡುಗಿ ಹಾಗೂ ಸ್ಟಾಲ್ ಮತ್ತು ಇತರರ ನಡುವಣ ಸಂಬಂಧಗಳನ್ನು ವೀಕ್ಷಿಸುವಲ್ಲಿ ಕಿಟ್ಟಿ ಆಸಕ್ತಿ ವಹಿಸುತ್ತಿದ್ದಳು; ಅದಕ್ಕಿಂತ ಮಿಗಿಲಾಗಿ ಅವಳು ಸಾಮಾನ್ಯ ರೂಢಿಯಂತೆ ಅನಿರ್ವಚನೀಯವೆನ್ನುವಷ್ಟರಮಟ್ಟಿಗೆ ಶ್ರೀಮತಿ ವರೆಂಕಳ ಆಕರ್ಷಣೆಗೊಳಗಾಗಿದ್ದಳು; ತನ್ನನ್ನು ವರೆಂಕ ಪ್ರೀತಿಸುತ್ತಿದ್ದಳೆಂಬುದು ಸಹ ತಮ್ಮಿಬ್ಬರ ಕಣ್ಣು ಸಂಧಿಸಿದಾಗ ಅವಳಿಗರಿವಾಗುತ್ತಿತ್ತು.

ಶ್ರೀಮತಿ ವರೆಂಕಳ ಪ್ರಥಮ ಯೌವನ ಮುಗಿದ ಕಥೆಯೆಂದು ಯಾರೂ ಹೇಳುವಂತಿರಲಿಲ್ಲ; ಆದರವಳು ಯೌವನ ಮುಕ್ತ ವ್ಯಕ್ತಿಯಾಗಿದ್ದಳು. ಅವಳು ಹತ್ತೊಂಬತ್ತು ವರ್ಷದವಳೆಂದು ಹೇಳುವವರಿದ್ದಂತೆಯೇ, ಮೂವತ್ತು ವರ್ಷದವಳೆಂದು

ಹೇಳುವವರೂ ಇದ್ದರು. ಯಾರಾದರೂ ಅವಳ ಲಕ್ಷಣಗಳನ್ನು ಪರಿಕಿಸಿದ್ದೇ ಆದರೆ, ಅನಾರೋಗ್ಯ ಸೂಚಕವಾದ ಬಣ್ಣವಿದ್ದರೂ ಅವಳು ಕುರೂಪಿಯೆನ್ನುವುದಕ್ಕಿಂತ ಚೆಲುವೆಯೆಂದೇ ಹೇಳಬಹುದಿತ್ತು. ಅವಳು ತುಂಬ ತೆಳ್ಳಗಿರದೆ, ಎತ್ತರ ಮಧ್ಯಸ್ಥವಾಗಿರದೆ, ತಲೆ ದಪ್ಪವಾಗಿರದೆ, ಎತ್ತರ ಮತ್ತು ತಲೆಗಳ ನಡುವೆ ಅಸಮ ಪ್ರಮಾಣವಿರದಿದ್ದರೆ ಅವಳ ರೂಪು ಸುಂದರವಾಗಿರುತ್ತಿತ್ತೆಂದೇ ಹೇಳಬಹುದು. ಆದರವಳು ಗಂಡಸರನ್ನಾಕರ್ಷಿಸುವಂತಿರಲಿಲ್ಲ. ಅವಳು ಪೂರ್ಣವಾಗಿ ಅರಳಿದಂತಿದ್ದೂ ದಳಗಳುದುರದ, ನಿರ್ಗಂಧ ಸುಂದರ ಕುಸುಮದಂತಿದ್ದಳು. ಗಂಡಸರನ್ನವಳು ಆಕರ್ಷಿಸದಿದ್ದುದಕ್ಕೆ ಮತ್ತೊಂದು ಕಾರಣವೂ ಇತ್ತು; ಕಿಟ್ಟಿಯಲ್ಲಿ ಅಪಾರ ಪ್ರಮಾಣದಲ್ಲಿದ್ದ ನಿರೋಧಿತ ಅಪೂರ್ವ ಚೈತನ್ಯಾಗ್ನಿ ಹಾಗೂ ಆಕರ್ಷಣೆಯ ಪ್ರಜ್ಞೆ ಅವಳಲ್ಲಿರಲಿಲ್ಲ.

ಅವಳು ಯಾವಾಗಲೂ ಉಪಯುಕ್ತವಾದ ಕೆಲಸದಲ್ಲಿ ಮಗ್ನಳಾಗಿದ್ದಳೆಂಬ ವಿಷಯದಲ್ಲಿ ಸ್ವಲ್ಪವೂ ಸಂದೇಹವಿರವಿಲ್ಲ; ಆದ್ದರಿಂದ ಬೇರೆ ಸಂಗತಿಗಳ ಕಡೆಗೆ ಗಮನ ಹರಿಸಲು ಅವಳಿಗೆ ಸಮಯವಿರಲಿಲ್ಲ. ತನ್ನ ಪ್ರವೃತ್ತಿಗೆ ವಿರುದ್ಧವಾದ ಈ ಒಂದು ಅಂಶದಿಂದಾಗಿ ಕಿಟ್ಟಿ ಅವಳ ಕಡೆಗೆ ಆಕರ್ಷಿತಳಾಗಿದ್ದಳು. ತಾನು ಹತಾಶೆಯಿಂದ ಹುಡುಕುತ್ತಿದ್ದ ಜೀವನಾದರ್ಶವನ್ನು ಅವಳ ಜೀವನ ವಿಧಾನದಲ್ಲಿ ಕಂಡುಕೊಳ್ಳಬಹುದೆಂದು ಕಿಟ್ಟಿ ಭಾವಿಸಿದಳು: ಆಸ್ಥೆಯಿಂದ ಕೂಡಿದ ಬದುಕು, ಅರ್ಥ ಹಾಗೂ ಘನತೆಯ ಬದುಕು, ಕೊಳ್ಳುವವರನ್ನು ಆಕರ್ಷಿಸುವ ಸಲುವಾಗಿ ವ್ಯವಸ್ಥೆಗೊಳಿಸಿದ ನಾಚಿಕೆಗೇಡಿನ ವಸ್ತು ಪ್ರದರ್ಶನವೆಂಬಂತೆ ಕಿಟ್ಟಿಗೆ ತೋರುತ್ತಿದ್ದ ಅವಿವಾಹಿತ ತರುಣ ತರುಣಿಯರ ಅಸಹ್ಯ ಸಂಬಂಧಗಳಿಂದಾಚೆಗಿನ ಬದುಕು ಅವಳ ಕನಸಾಗಿತ್ತು. ಅಪರಿಚಯದ ಗೆಳತಿಯ ಕಡೆಗೆ ತನ್ನ ಗಮನ ಹರಿದಂತೆಲ್ಲ, ವರೆಂಕ ನಿಜಕ್ಕೂ ತನ್ನ ಕಲ್ಪನೆಯ ಪರಿಪೂರ್ಣ ವ್ಯಕ್ತಿಯೆಂದವಳಿಗೆ ಮನದಟ್ಟಾಗುತ್ತಿತ್ತು; ಅವಳ ಗೆಳೆತನವನ್ನು ಸಂಪಾದಿಸಬೇಕೆಂಬ ಆಸೆ ಕ್ಷಣಕ್ಷಣಕ್ಕೂ ತೀವ್ರವಾಗುತ್ತಿತ್ತು.

ಹುಡುಗಿಯರು ಪ್ರತಿದಿನ ಹಲವು ಸಲ ಭೇಟಿಯಾಗುತ್ತಿದ್ದರು; ಪ್ರತಿಯೊಂದು ಸಲವೂ ಕಿಟ್ಟಿಯ ಕಣ್ಣು ಪ್ರಶ್ನೆಗಳನ್ನು ಸೂಸುತ್ತಿದ್ದುವು: 'ನೀನು ಯಾರು? ನೀನು ಏನಾಗಿದ್ದೀಯೆ? ನಿಜಕ್ಕೂ ನನ್ನ ಕಲ್ಪನೆಯ ಮೋಹಕ ವ್ಯಕ್ತಿ ನೀನೆಯೆ? ಆದರೆ ಮೇಲೆ ಬಿದ್ದು ನಿನ್ನ ಪರಿಚಯ ಮಾಡಿಕೊಳ್ಳುತ್ತೇನೆಂದು ನೀನು ಭಾವಿಸಬೇಡ. ನಾನು ನಿನ್ನನ್ನು ಮೆಚ್ಚಿಕೊಂಡಿದ್ದೇನೆ; ನಾನು ನಿನ್ನನ್ನು ಪ್ರೀತಿಸುತ್ತೇನೆ' ಎಂದುಕೊಳ್ಳುವಾಗ ಅವಳ ಕಣ್ಣು ಮಿಂಚಿನಂತೆ ಮಿರುಗಿದುವು. 'ನಾನು ಸಹ ನಿನ್ನನ್ನು ಪ್ರೀತಿಸುತ್ತೇನೆ. ನೀನೊಬ್ಬಳು ಮನಮೋಹಕ ತರಳೆಯಾಗಿದ್ದೀಯೆ. ನನಗೆ ಸಮಯವಿದ್ದಿದ್ದರೆ ಇನ್ನೂ ಚೆನ್ನಾಗಿ ಪ್ರೀತಿಸುತ್ತಿದ್ದೆ' ಎಂಬುದಾಗಿ ಅಪರಿಚಿತ ತರುಣಿಯ ದೃಷ್ಟಿ ಉತ್ತರಿಸಿತು. ಅವಳು ಯಾವಾಗಲೂ ಪುರಸೊತ್ತಿಲ್ಲದೆ ದುಡಿಯುತ್ತಿದ್ದಳೆಂಬುದು ಕಿಟ್ಟಿಗೆ ಮನವರಿಕೆಯಾಗಿತ್ತು. ಅವಳು ರಷ್ಯನ್ ಕುಟುಂಬದ ಮಕ್ಕಳನ್ನು ಊಟಿಗಳಿಂದಮನೆಗೆ ಕರೆದೊಯ್ಯುತ್ತಿದ್ದಳು; ಇಲ್ಲವೆ ರೋಗಗ್ರಸ್ತ ಮಹಿಳೆಗಾಗಿ ಶಾಲುತಂದು, ಹೊದಿಸುತ್ತಿದ್ದಳು; ಅದೂ ಇಲ್ಲ, ಸಿಡುಕಿನ ಅಶಕ್ತವ್ಯಕ್ತಿಯೊಬ್ಬನನ್ನು ವಿಚಾರಿಸಿಕೊಳ್ಳುತಿದ್ದಳು; ಅಥವಾ ಬೇರೊಬ್ಬರಿಗಾಗಿ ಬಿಸ್ಕತ್ತು ಕೊಂಡು ತಂದು, ಚಹ ಏರ್ಪಡಿಸುತ್ತಿದ್ದಳು.

ಶರ್‌ಬತ್‌ಸ್ಕಿಯರು ಆಗಮಿಸಿದ ತರುಣದಲ್ಲಿಯೇ ಸರ್ವರ ನಿರ್ಲಕ್ಷ್ಯಕ್ಕೆ ಗುರಿಯಾದ ಇಬ್ಬರು ವ್ಯಕ್ತಿಗಳು ಪ್ರತಿದಿನ ಬೆಳಗ್ಗೆ ಊಟೆಗಳಿಗೆ ಬರತೊಡಗಿದರು. ಅವರಲ್ಲೊಬ್ಬ ಬಹು ಉದ್ದನೆಯ ಕೈಗಳುಳ್ಳ, ಬಾಗಿದಂತಿದ್ದ ದೇಹದ, ಎತ್ತರದ ವ್ಯಕ್ತಿ; ಅವನು ಧರಿಸಿದ್ದ ಹರಿದ ಕೋಟು ಅವನ ಆಕೃತಿಗೆ ತುಂಬ ತುಂಡಾಗಿತ್ತು; ಅವನ ಕಪ್ಪು ಕಣ್ಣುಗಳಲ್ಲಿ ನಿಷ್ಕಪಟವೂ ಭಯಂಕರವೂ ಆದ ಭಾವ ಹೊರಹೊಮ್ಮುತ್ತಿತ್ತು; ಒರಟೊರಟಾಗಿ ಅಸಭ್ಯ ರೀತಿಯಲ್ಲಿ ಉಡುಪು ಧರಿಸಿದ್ದ. ಸಿಡುಬು ಕಲೆಯ ಮೊಗದ ತರುಣಿ ಆ ಇಬ್ಬರ ಪೈಕಿ ಮತ್ತೊಬ್ಬಳು. ಅವರು ರಷ್ಯನ್ನರೆಂದು ತಿಳಿದ ಕೂಡಲೇ ಕಿಟ್ಟಿ ಅವರ ಬಗ್ಗೆ ಹೃದಯಸ್ಪರ್ಶಿ ಪ್ರಣಯ ಕಥೆಯನ್ನು ನೇಯತೊಡಗಿದಳು. ಆದರೆ ಅವರು ನಿಕೋಲಾಯ್‌ಲೆವಿನ್ ಮತ್ತು ಮಾಷರೆಂದು ರಾಜಕುಮಾರಿ ಭೇಟಿಕಾರರ ಪಟ್ಟಿಯಿಂದರಿತುಕೊಂಡು, ಲೆವಿನ್‌ನ ಅಣ್ಣ ಎಂಥ ಕೆಟ್ಟವನೆಂದು ಸ್ಪಷ್ಟಪಡಿಸಿ, ಕಿಟ್ಟಿಯ ಪ್ರಣಯ ಸ್ವಪ್ನಗಳನ್ನೆಲ್ಲ ನುಚ್ಚುನುರಿಮಾಡಿದಳು. ತನ್ನ ತಾಯಿ ಹೇಳಿದ್ದಕ್ಕಿಂತ ಮಿಗಿಲಾಗಿ ಅವನು ಲೆವಿನ್‌ನ ಅಣ್ಣನೆಂಬ ಕಾರಣಕ್ಕಾಗಿ ಕಿಟ್ಟಿ ಅವನನ್ನು ಕಟುವಾಗಿ ದ್ವೇಷಿಸತೊಡಗಿದಳು. ನಿಜಕ್ಕೂ ಈ ಲೆವಿನ್ ತನ್ನ ತಲೆ ಸೆಳವಿನ ಅಭ್ಯಾಸದಿಂದಾಗಿ ಅವಳಲ್ಲಿ ಅದಮ್ಯವೂ ಅಸಹ್ಯವೂ ಆದ ಹೇವರಿಕೆಯನ್ನು ಉತ್ತೇಜಿಸಿದ್ದನು.

ತನ್ನನ್ನು ಹಿಂಬಾಲಿಸುತ್ತಿದ್ದ ಅವನ ಭಯಂಕರ ಹೆಗ್ಗಣ್ಣುಗಳು ದ್ವೇಷಪರಿಹಾಸೆಗಳ ಹುತ್ತವಾಗಿದ್ದುವೆಂದವಳು ಊಹಿಸಿಕೊಂಡಳು; ಅವನಿಂದ ದೂರವಿರಲು ಅವಳು ಯಾವಾಗಲೂ ಪ್ರಯತ್ನಿಸುತ್ತಿದ್ದಳು.

೩೧

ಹವೆ ಕೆಟ್ಟಿತ್ತು; ಇಡೀ ಬೆಳಗ್ಗೆ ಮಳೆ ಸುರಿಯುತ್ತಿತ್ತು; ಕೊಡೆಗಳನ್ನು ಹಿಡಿದ ರೋಗಿಗಳು ಮೊಗಸಾಲೆಯಲ್ಲಿ ನೆರೆದರು.

ಕಿಟ್ಟಿ ತನ್ನ ತಾಯಿಯ ಮತ್ತು ಮಾಸ್ಕೊ ಕರ್ನಲ್‌ನ ಜತೆಯಲ್ಲಿ ಅಲ್ಲಿಯೇ ಅಡ್ಡಾಡುತ್ತಿದ್ದಳು. ಫ್ರಾಂಕ್‌ಫರ್ಟ್‌ನಲ್ಲಿ ಕೊಂಡು ತಂದಿದ್ದ ಯೂರೋಪೀಯ ಶೈಲಿಯ ಸಿದ್ಧಕೋಟನ್ನು ಕರ್ನಲ್ ಧರಿಸಿದ್ದನು. ಬೇರೊಂದು ಪಕ್ಕದಲ್ಲಿ ತಿರುಗಾಡುತ್ತಿದ್ದ ನಿಕೊಲಾಯ್ ಲೆವಿನ್‌ನ ಕಣ್ಣಿಗೆ ಬೀಳಬಾರದೆಂದು ಅವರು ಮೊಗಸಾಲೆಯ ಮತ್ತೊಂದು ಪಕ್ಕವನ್ನು ಬಿಟ್ಟಲುಗಲಿಲ್ಲ, ಜೋಲಂಚಿನ ಕಪ್ಪು ಟೋಪಿಯನ್ನೂ ಕಪ್ಪು ಉಡುಪನ್ನೂ ಧರಿಸಿದ್ದ ವರೆಂಕ ಕಾಲುದಾರಿಯಲ್ಲಿ ಅಂಧ ಫ್ರೆಂಚ್ ಮಹಿಳೆಯೊಬ್ಬಳನ್ನು ಕೈಹಿಡಿದು ಕರೆದುಕೊಂಡು ಹೋಗುತ್ತಿದ್ದಳು. ಅವಳು ಮತ್ತು ಕಿಟ್ಟಿ ಸಂಧಿಸಿದಾಗಲೆಲ್ಲ ಸ್ನೇಹ ದೃಷ್ಟಿಗಳನ್ನು ವಿನಿಮಯ ಮಾಡಿಕೊಳ್ಳುತ್ತಿದ್ದರು.

'ಅಮ್ಮಾ, ನಾನವಳೊಡನೆ ಮಾತಾಡಬಹುದೆ?' ಎಂದು ಕಿಟ್ಟಿ ಊಟೆಯ ಕಡೆಗೆ ಹೋಗುತ್ತಿದ್ದ ಅಜ್ಞಾತ ಮಿತ್ರೆಯನ್ನು ನೋಡುತ್ತ, ತಾವಿಬ್ಬರೂ ಅಲ್ಲಿ ಸಂಧಿಸುವ ಅವಕಾಶವಿದ್ದುದ್ದರಿಂದ ತಾಯಿಯನ್ನು ಕೇಳಿದಳು.

'ನಿನಗೆ ತುಂಬ ಇಷ್ಟವಿರುವುದಾದರೆ, ನಾನೇ ಅವಳ ವಿಚಾರ ತಿಳಿಯುತ್ತೇನೆ: ಅನಂತರ ಅವಳ ಬಳಿ ಹೋಗಿಬರುತ್ತೇನೆ' ಎಂದು ತಾಯಿ ಉತ್ತರಿಸಿದಳು. 'ಅದಿರಲಿ,

ಅವಳಲ್ಲಿ ನೀನು ಕಂಡ ವಿಶೇಷವೇನು? ನಿನಗೆ ಬೇಕಾದ್ದು ಒಬ್ಬಳು ಸಂಗಾತಿತಾನೆ. ನಿನಗಿಷ್ಟವಾಗುವುದಾದರೆ ನಾನು ಮದಾಂಸ್ಟಾಲ್‌ಳ ಸ್ನೇಹ ಬೆಳೆಸುತ್ತೇನೆ, ನಾನೊಮ್ಮೆ ಅವಳ ಮಲತಂಗಿಯನ್ನು ನೋಡಿದ್ದೆ' ಎಂದು ರಾಜಕುಮಾರಿ ಹೆಮ್ಮೆಯಿಂದ ತಲೆಯನ್ನು ನೆಟ್ಟಗೆ ಮಾಡಿಕೊಂಡು ನುಡಿದಳು.

ರಾಜಕುಮಾರಿ ಮದಾಂಸ್ಟಾಲ್‌ಳ ಪರಿಚಯಕ್ಕಾಗಿ ಪ್ರಯತ್ನಿಸುತ್ತಿದ್ದಂತೆಲ್ಲ, ಸ್ಟಾಲ್ ದೂರ ಸರಿಯುತ್ತಿದ್ದುದನ್ನು, ಹಾಗೂ ಅದರಿಂದ ರಾಜಕುಮಾರಿ ಅಸಮಾಧಾನಗೊಳ್ಳುತ್ತಿದ್ದುದನ್ನು ಕಿಟ್ಟಿ ಬಲ್ಲವಳಾಗಿದ್ದಳು. ಕಿಟ್ಟಿ ಒತ್ತಾಯಿಸಲಿಲ್ಲ.

'ಅವಳೆಷ್ಟು ಚಿತ್ತಾಕರ್ಷಕಗಳಾಗಿದ್ದಾಳೆ, ಪೂತಾತ್ಮಳಾಗಿದ್ದಾಳೆ!' ಎಂದವಳು ಅಂಥ ಫ್ರೆಂಚ್ ಮಹಿಳೆಗೆ ಗಳಾಸು ನೀರು ಕೊಡುತ್ತಿದ್ದ ವರೆಂಕಳನ್ನೆ ನೋಡುತ್ತ ನುಡಿದಳು. 'ಅವಳೆಂಥ ಪುಣ್ಯವತಿ, ಅವಳೆಂಥ ಸರಳೆ ಎನ್ನುವುದನ್ನು ನೀನೇ ನೋಡು.'

'ನಿನ್ನ ಆವೇಶ ವಿಚಿತ್ರವಾಗಿದೆ' ಎಂದು ರಾಜಕುಮಾರಿ ಸೊಲ್ಲಿಸಿದಳು. 'ಹಿಂದಕ್ಕೆ ಹೋಗೋಣ, ನಡೆ' ಎಂದವಳು ಜರ್ಮನ್ ವೈದ್ಯನೊಬ್ಬನ ಜತೆಯಲ್ಲಿ ತಮ್ಮ ಕಡೆಗೆ ಬರುತ್ತಿದ್ದ ನಿಕೊಲಾಯ್ ಲೆವಿನ್‌ನನ್ನೂ ಅವನ ಸಂಗಾತಿಯನ್ನೂ ಕಂಡು ಉಸುರಿದಳು. ಲೆವಿನ್ ಕುಪಿತ ಧ್ವನಿಯಲ್ಲಿ ವೈದ್ಯನೊಡನೆ ಗಟ್ಟಿಯಾಗಿ ಮಾತಾಡುತ್ತಿದ್ದನು.

ಅವರು ಹಿಂದಕ್ಕೆ ಹೊರಳುತ್ತಿದ್ದಂತೆ ಗಟ್ಟಿಯಾದ ಧ್ವನಿ ಚೀತ್ಕಾರವಾಗಿ ಪರಿಣಮಿಸಿತು. ಲೆವಿನ್ ನಿಂತುಕೊಂಡು, ದನಿಯೇರಿಸಿದ್ದ ವೈದ್ಯನ ಕಡೆಗೆ ಕೂಗಾಡುತ್ತಿದ್ದನು. ಅವರ ಸುತ್ತ ಗುಂಪೊಂದು ದಟ್ಟೈಸಿತು. ರಾಜಕುಮಾರಿ ಮತ್ತು ಕಿಟ್ಟಿಯರು ಬಿರುಬಿರನೆ ಹೆಜ್ಜೆ ಹಾಕಿದರು. ತೊಂದರೆಯೇನೆಂದು ವಿಚಾರಿಸುವ ಸಲುವಾಗಿ ಕರ್ನಲ್ ಗುಂಪಿನೊಳಗೆ ತೂರಿದನು.

ಕೆಲವು ನಿಮಿಷಗಳ ನಂತರ ಅವನು ರಾಜಕುಮಾರಿ ಕಿಟ್ಟಿಯರ ಬಳಿ ಸಾರಿದನು.

'ಏನದು?' ಎಂದು ರಾಜಕುಮಾರಿ ಪ್ರಶ್ನಿಸಿದಳು.

'ನಾಚಿಕೆಗೇಡು! ಅವಮಾನ' ಎಂದು ಕರ್ನಲ್ ಮಾರ್ನುಡಿದನು. 'ರಷ್ಯನ್ನರನ್ನು ವಿದೇಶದಲ್ಲಿ ಸಂಧಿಸುವುದೆಂದರೆ ಭಯ. ತಾನು ಕೇಳಿದಂತೆ ವೈದ್ಯೋಪಚಾರ ಮಾಡದಿದ್ದುದಕ್ಕಾಗಿ ಉದ್ದನೆಯ ಮನುಷ್ಯ ವೈದ್ಯನನ್ನು ಬಯ್ಯುತ್ತಿದ್ದನು; ಎಲ್ಲ ಬಗೆಯ ನಿಂದಾಪಹಾಸ್ಯಗಳನ್ನು ಅವನ ಮೇಲೆ ವರ್ಷಿಸುತ್ತಿದ್ದನು; ಅಷ್ಟೇ ಅಲ್ಲ, ಅವನ ಕಡೆಗೆ ದೊಣ್ಣೆಯನ್ನು ಸಹ ಝಳಪಿಸುತ್ತಿದ್ದನು. ಎಂಥ ಅವಮಾನ!'

'ಓ, ಎಂಥ ಕಹಿ ಪ್ರಸಂಗ. ಅದು ಹೇಗೆ ಮುಕ್ತಾಯಗೊಂಡಿತು?' ಎಂದು ರಾಜಕುಮಾರಿ ಪ್ರಶ್ನಿಸಿದಳು.

'ಅದೃಷ್ಟವಶಾತ್ ಆ....ಅಣಬೆಟೋಪಿಯ ಆ ಹುಡುಗಿ....ರಷ್ಯನ್...ಪ್ರಾಯಶಃ ಅವಳು ಮಧ್ಯೆ ಪ್ರವೇಶಿಸಿದಂತೆ ತೋರುತ್ತದೆ' ಎಂದು ಕರ್ನಲ್ ನುಡಿದನು.

'ಶ್ರೀಮತಿ ವರೆಂಕಳೆ?' ಎಂದು ಕಿಟ್ಟಿ ಸಹರ್ಷದಿಂದ ಕೇಳಿದಳು.

'ಹೌದು. ನೆರವಿಗೆ ಬಂದವರಲ್ಲಿ ಅವಳೇ ಮೊದಲಿಗಳು. ಆ ದೊಡ್ಡ ಮನುಷ್ಯನ ತೋಳು ಹಿಡಿದುಕೊಂಡು ಅವಳವನನ್ನು ದೂರಕ್ಕೆಳೆದೊಯ್ದಳು.'

'ನೋಡಮ್ಮ! ಅವಳನ್ನೇಕೆ ನಾನಷ್ಟು ಶ್ಲಾಘಿಸುತ್ತಿದ್ದೇನೆಂಬುದು ಈಗ ನಿಮಗರ್ಥವಾಯಿತೆ?' ಎಂದು ಕಿಟ್ಟಿ ನುಡಿದಳು.

ಮೂರನೆಯ ದಿನ ತನ್ನ ಅಜ್ಞಾತ ಸಖಿಯ ಚಲನವಲನಗಳನ್ನು ಗಮನಿಸು ತ್ತಿದ್ದಾಗ, ತನ್ನ ಆಶ್ರಿತ ವರ್ಗದಲ್ಲಿ ಲೆವಿನ್‌ನನ್ನೂ ಅವನ ಸಂಗಾತಿಯನ್ನೂ ಸೇರಿಸಿ ಕೊಂಡಿದ್ದುದನ್ನು ಕಿಟ್ಟಿ ನೋಡಿದಳು. ವರೆಂಕ ಅವರ ಬಳಿ ಸರಿದು, ಅವರೊಡನೆ ಮಾತಾಡಿ, ವಿದೇಶೀಯ ಭಾಷೆ ಬರದಿದ್ದ ಹೆಂಗಸಿಗೆ ದುಭಾಷಿಯಾದಳು.

ವರೆಂಕಳನ್ನು ಪರಿಚಯಿಸಿಕೊಳ್ಳಲು ಬೇಗ ಅವಕಾಶ ನೀಡುವಂತೆ ಕಿಟ್ಟಿ ತನ್ನ ತಾಯಿಯನ್ನು ಪ್ರಾರ್ಥಿಸಿಕೊಂಡಳು. ಪ್ರತಿಷ್ಠೆಯನ್ನು ಮೆರೆಯುತ್ತಿದ್ದ ಮದಾಂಸ್ಟಾಲ್‌ಳ ಪರಿಚಯಕ್ಕಾಗಿ ದುಂಬಾಲು ಬೀಳಲಿಷ್ಟವಿಲ್ಲದೆ ರಾಜಕುಮಾರಿ ಅವರಿವರಿಂದ ವರೆಂಕಳ ವೃತ್ತಾಂತವನ್ನರಿತುಕೊಂಡಳು; ಅವಳ ಪರಿಚಯದಿಂದ ಹೆಚ್ಚು ಲಾಭವಾಗದಿದ್ದರೂ ನಷ್ಟವಂತು ಸಂಭವಿಸುವುದಿಲ್ಲವೆಂದು ನಿರ್ಧರಿಸಿಕೊಂಡು, ಅವಳು ತಾನಾಗಿಯೇ ವರೆಂಕಳನ್ನು ಸಮೀಪಿಸಿ, ಅವಳ ಸಮ್ಮುಖದಲ್ಲಿ ನಿಂತುಕೊಂಡಳು.

ಕಿಟ್ಟಿ ಊಟೆಯ ಬಳಿಯಿದ್ದ, ವರೆಂಕ ರೊಟ್ಟಿಯಂಗಡಿಯ ಮುಂದೆ ನಿಂತಿದ್ದ ಸಮಯವನ್ನವಳು ಆ ಭೇಟಿಗಾಗಿ ಆರಿಸಿಕೊಂಡಳು. 'ನಿಮ್ಮ ಪರಿಚಯಕ್ಕಾಗಿ ನಾನು ಬಂದಿದ್ದೇನೆ' ಎಂದವಳು ಗಂಭೀರವಾಗಿ ನಕ್ಕಳು. 'ನೀವು ನನ್ನ ಮಗಳ ಹೃದಯವನ್ನು ಗೆದ್ದುಕೊಂಡಿದ್ದೀರಿ. ಪ್ರಾಯಶಃ ನಾನಾರೆಂಬುದು ನಿಮಗೆ ಗೊತ್ತಿಲ್ಲ, ನಾ—'

'ಆ ಹೃದಯ ಸ್ಪಂದನ ಅನ್ಯೋನ್ಯವಷ್ಟೆ, ರಾಜಕುಮಾರಿಯವರೆ' ಎಂದು ವರೆಂಕ ಕ್ಷಿಪ್ರವಾಗಿ ಉತ್ತರಿಸಿದಳು.

'ನಿನ್ನೆ ನಮ್ಮ ನಾಡಿನ ಅಸ್ವಸ್ಥ ವ್ಯಕ್ತಿಗೆ ಎಂಥ ಉಪಕಾರ ಸಲ್ಲಿಸಿದಿರಿ?' ಎಂದು ರಾಜಕುಮಾರಿ ನುಡಿದಳು.

ವರೆಂಕಳ ಮುಖ ರಂಗೇರಿತು. 'ನಾನೇನು ಮಾಡಿದೆನೊ ಈಗ ನೆನಪಿಲ್ಲ' ಎಂದವಳು ಉತ್ತರಿಸಿದಳು.

'ಏನು? ಲೆವಿನ್‌ನನ್ನು ನೀವು ದುರಂತದಿಂದ ಪಾರುಮಾಡಿದಿರಿ.'

'ಓ ಅದೇ! ಸಂಗಾತಿ ಕೂಗಿದಳು. ನಾನವರನ್ನು ಸಮಾಧಾನ ಪಡಿಸಲು ಯತ್ನಿಸಿದೆ. ಅವರಿಗೆ ತುಂಬ ಖಾಯಿಲೆಯಾಗಿದೆ. ವೈದ್ಯನ ಬಗ್ಗೆ ಅವರಿಗೆ ಅತೃಪ್ತಿ. ಅಂಥ ರೋಗಿಗಳ ಉಪಚಾರ ನನ್ನ ಕರ್ತವ್ಯವೆಂದು ನಾನು ಬಗೆದಿದ್ದೇನೆ.'

'ನೀವು ಮೆಂಟೋನ್‌ನಲ್ಲಿ ಚಿಕ್ಕಮ್ಮನೊಂದಿಗೆ–ಮದಾಂಸ್ಟಾಲ್ ಇರಬಹುದೆಂದು ನನ್ನ ತಿಳಿವಳಿಕೆ–ವಾಸಿಸುತ್ತಿದ್ದೀರೆಂದು ಕೇಳಿದೆ. ನಾನೊಮ್ಮೆ ಅವರ ಮಲತಂಗಿಯನ್ನು ಭೇಟಿಮಾಡಿದ್ದೆ.'

'ಅವರು ನನ್ನ ಚಿಕ್ಕಮ್ಮನಲ್ಲ. ನಾನವರನ್ನು ಅಮ್ಮ ಎಂದು ಕರೆಯುತ್ತೇನೆ, ನಿಜ. ಆದರೆ ಅವರು ನನ್ನ ಬಂಧುವಲ್ಲ. ಅವರೇ ನನ್ನನ್ನು ಬೆಳೆಸಿದವರು' ಎಂದು ಹೇಳುವಾಗ ವರೆಂಕಳ ಮುಖ ಮತ್ತೆ ಕೆಂಪೇರಿತು.

ಅವಳ ಪ್ರತಿಯೊಂದು ಮಾತಿನಲ್ಲಿಯೂ ಸಾರಳ್ಯವಿತ್ತು. ಅವಳ ಮುಖದ ಮೇಲೆ ಅಚ್ಚೊತ್ತಿದಂತಿದ್ದ ನಿಷ್ಕಪಟ ಪ್ರಾಮಾಣಿಕ ಭಾವದ ಮಾಧುರ್ಯದಲ್ಲಿ ರಾಜಕುಮಾರಿ ಕಿಟ್ಟಿಯ ಪ್ರೇಮರಹಸ್ಯವನ್ನರಿತಳು.

'ಲೆವಿನ್ ಈಗ ಏನು ಮಾಡುತ್ತಾನೆ?' ಎಂದು ರಾಜಕುಮಾರಿ ಕೇಳಿದಳು.

'ಅವರು ಹೊರಟು ಹೋಗುತ್ತಾರೆ' ಎಂದು ವರೆಂಕ ಉತ್ತರಿಸಿದಳು.

ತನ್ನ ಅಜ್ಞಾತ ಸಖಿಯೊಡನೆ ಮಾತಾಡುತ್ತಿದ್ದ ತಾಯಿಯನ್ನು ಕಂಡು ಅದೇ ತಾನೆ ಊಟೆಯ ಕಡೆಯಿಂದ ಬಂದ ಕಿಟ್ಟಿಯ ಮುಖ ದೇದೀಪ್ಯಮಾನವಾಯಿತು.

'ಈ ಶ್ರೀಮತಿಯವರ ಭೇಟಿಗಾಗಿ ನೀನು ಹಂಬಲಿಸುತ್ತಿದ್ದೆಯಲ್ಲವೆ, ಕಿಟ್ಟಿ?—'

'ವರೆಂಕ ಎಂದಷ್ಟೆ ನನ್ನ ಹೆಸರು' ಎಂದು ಆ ಹುಡುಗಿ ನಸುನಕ್ಕಳು. 'ಎಲ್ಲರೂ ನನ್ನನ್ನು ಹಾಗೆಂದೇ ಕರೆಯುತ್ತಾರೆ.'

ಕಿಟ್ಟಿಯ ಮುಖ ಆನಂದದಿಂದ ಕೆಂಪೇರಿತು. ತುಸು ಹೊತ್ತು ಮಾತಾಡದೆಯೆ ತನ್ನ ಹೊಸಗೆಳತಿಯ ಕೈಯನ್ನದುಮಿದಳು. ಆದರೆ ಗೆಳತಿಯ ಕೈ ಒತ್ತಡದ ಬಲವಿಲ್ಲದೆ ಕಿಟ್ಟಿಯ ಹಿಡಿತದಲ್ಲಿ ಜಡವಸ್ತುವಿನಂತೆ ಹುದುಗಿತ್ತು. ಹಸ್ತ ಪ್ರತಿಕ್ರಿಯಿಸಲಿಲ್ಲ, ನಿಜ. ಆದರೆ ನಿಶ್ಚಿಂತವೂ ಸುಖಕರವೂ, ಜತೆಗೆ ವಿಷಾದಾತ್ಮಕವೂ ಆದ ಮಂದಹಾಸದಿಂದ ವರೆಂಕಳ ಮುಖ ಪ್ರಕಾಶಮಾನವಾಯಿತು; ಅವಳ ದಪ್ಪನೆಯ ಸುಂದರ ದಂತಗಳು ಗೋಚರವಾದುವು

'ನಾನು ಸಹ ನಿನ್ನನ್ನು ಭೇಟಿಮಾಡಲು ಸುಮಾರು ದಿನಗಳಿಂದ ಯೋಚಿಸುತ್ತಿದ್ದೆ' ಎಂದವಳು ನುಡಿದಳು.

'ನಿನಗೆ ಪುರಸೊತ್ತೇ ಇಲ್ಲ....'

'ಇಲ್ಲ, ಇಲ್ಲ; ನನಗೆ ಪುರಸೊತ್ತಿಲ್ಲದಷ್ಟು ಕೆಲಸವಿಲ್ಲ' ಎಂದು ವರೆಂಕ ಸೊಲ್ಲಿಸಿದಳು. ಅಷ್ಟರಲ್ಲಿ ರಷ್ಯನ್ ರೋಗಿಯೊಬ್ಬಳ ಇಬ್ಬರು ಬಾಲಿಕೆಯರು ಅವಳ ಬಳಿಗೆ ಓಡೋಡಿ ಬಂದು 'ವರೆಂಕ, ಅಮ್ಮ ನಿಮ್ಮನ್ನು ಕರೆಯುತ್ತಿದ್ದಾರೆ' ಎಂದು ಕೂಗಿಕೊಳ್ಳಲಾಗಿ, ವರೆಂಕ ತನ್ನ ಹೊಸ ಪರಿಚಯಸ್ತೆಯರನ್ನು ಬಿಟ್ಟು, ಹುಡುಗಿಯರ ಜತೆಯಲ್ಲಿ ಹೋಗಬೇಕಾಯಿತು.

೩೨

ವರೆಂಕಳ ಬಗ್ಗೆ, ವರೆಂಕ ಮತ್ತು ಮದಾಂಸ್ಟಾಲ್‌ರ ನಡುವಣ ಬಾಂಧವ್ಯದ ಬಗ್ಗೆ, ಜತೆಗೆ ಮದಾಂಸ್ಟಾಲ್‌ಳ ಬಗ್ಗೆ ರಾಜಕುಮಾರಿ ಸಂಗ್ರಹಿಸಿದ ವೃತ್ತಾಂತವಿದು:

ತನ್ನ ಗಂಡನ ಚಿತ್ತಭ್ರಮಣೆಗೆ ಮದಾಂಸ್ಟಾಲ್ ಕಾರಣಳೆಂದು ಕೆಲವರು ಹೇಳಿದರೆ, ಅವಳ ಉನ್ಮಾದಕ್ಕೆ ಗಂಡನ ಅನೈತಿಕ ವರ್ತನೆಯೇ ಕಾರಣವೆಂದು ಮತ್ತೆ ಕೆಲವರು ಹೇಳುತ್ತಿದ್ದರು. ಅವಳು ಯಾವಾಗಲೂ ಭಾವೋದ್ರಿಕ್ತತೆಯಿಂದ ಹಾಗೂ ಅನಾರೋಗ್ಯದಿಂದ ನರಳುತ್ತಿದ್ದಳು. ಗಂಡನಿಂದ ಪ್ರತ್ಯೇಕಗೊಂಡ ಕೂಡಲೇ ಅವಳೊಂದು ಮಗುವನ್ನು ಹೆತ್ತಳು. ಹುಟ್ಟಿದ ಕೂಡಲೇ ಆ ಮಗುವೂ ನಿಗತುಗೊಂಡಿತು. ಅವಳ ಭಾವೋನ್ಮಾದದ ಅರಿವಿದ್ದ, ಮಗುವಿನ ಮರಣವೇ ಅವಳ ಸಾವಿಗೆ ಕಾರಣವಾಗುತ್ತದೆಂದು ಹೆದರಿದ ಅವಳ ಬಂಧುಗಳು ಸೆಂಟ್‌ಪಿಟೀರ್ಸ್‌ಬರ್ಗ್‌ನ ಅದೇ ಮನೆಯಲ್ಲಿ, ಅದೇ ರಾತ್ರಿ ಹುಟ್ಟಿದ ಅರಮನೆಯ ಬಾಣಸಿಗನ ಮಗಳನ್ನು ಸತ್ತ ಮಗುವಿನ ಜಾಗದಲ್ಲಿರಿಸಿದರು. ಅವಳೇ ವರೆಂಕ. ವರೆಂಕ ತನ್ನ ಸ್ವಂತ ಮಗಳಲ್ಲವೆಂದು ಮದಾಂಸ್ಟಾಲ್‌ಳಿಗೆ ತರುವಾಯ ತಿಳಿಯಿತು. ಆದರೂ ಅವಳು ವರೆಂಕಳನ್ನು ಬೆಳೆಸಿದಳು. ವರೆಂಕಳ ಸಂಬಂಧಿಗಳಲ್ಲೊಬ್ಬರೂ ಜೀವಂತವಾಗಿಲ್ಲದಿದ್ದುದರಿಂದ ಸ್ಟಾಲ್‌ಳೇ ಅವಳ ಯೋಗಕ್ಷೇಮದ ಹೊಣೆ ಹೊರಬೇಕಾಯಿತು.

ಹತ್ತು ವರ್ಷಗಳಿಗಿಂತ ಮಿಗಿಲಾಗಿ ಮದಾಂಸ್ಟಾಲ್ ದೇಶದ ಹೊರಗೆ ದಕ್ಷಿಣದಲ್ಲಿ ವಾಸಿಸುತ್ತಿದ್ದಳು; ಇಡೀ ಅವಧಿಯಲ್ಲಿವಳು ಹಾಸುಗೆ ಹಿಡಿದಿದ್ದಳು. ಅವಳು ಉದ್ದೇಶ ಪೂರ್ವಕವಾಗಿ ಧರ್ಮಶ್ರದ್ಧೆಯುಳ್ಳವಳೆಂಬ, ಉದಾರಬುದ್ಧಿಯುವಳೆಂಬ ಹೆಸರು ಮಾಡಿದ್ದಾಳೆಂದು ಕೆಲವರು ಹೇಳುತ್ತಿದ್ದರು; ಅವಳೇನು ಉಚ್ಚನೈತಿಕ ತತ್ತ್ವನಿಷ್ಠೆಯ ಸ್ತ್ರೀಯಾಗಿ ಕಾಣುತ್ತಿದ್ದಳೋ ಅದು ಅವಳಿಗೆ ಸ್ವಾಭಾವಿಕವಾಗಿತ್ತೆಂದೂ, ಸೋದರಮಾನವರಿಗೆ ಒಳಿತನ್ನೆಸಗುವುದೇ ಅವಳ ಜೀವನದ ಏಕೈಕ ಗುರಿಯಾಗಿತ್ತೆಂದೂ ಮತ್ತೆ ಕೆಲವರು ಹೇಳುತ್ತಿದ್ದರು. ಅವಳು ಕ್ಯಾಥಲಿಕ್ಳ, ಪ್ರಾಟೆಸ್ಟಾಂಟಳೆ ಅಥವಾ ರಷ್ಯನ್ ಸಂಪ್ರದಾಯದ ಚರ್ಚಿಗೆ ಸೇರಿದವಳೇ—ಯಾವ ಧರ್ಮಕ್ಕೆ ಸೇರಿದವಳೆಂಬುದು ಯಾರಿಗೂ ಗೊತ್ತಿರಲಿಲ್ಲ. ಒಂದು ಮಾತಂತೂ ನಿಜ: ಎಲ್ಲ ಧರ್ಮಗಳ ಮತ್ತು ಚರ್ಚುಗಳ ಅತ್ಯುನ್ನತ ಅಧಿಕಾರಿಗಳೊಡನೆ ಸ್ನೇಹ ಬಾಂಧವ್ಯಗಳನ್ನುಳಿಸಿಕೊಂಡಿದ್ದಳು.

ಈ ಅವಧಿಯಲ್ಲಿ ವರೆಂಕ ಅವಳೊಡನೆ ಹೊರನಾಡಿನಲ್ಲಿ ವಾಸಿಸುತ್ತಿದ್ದಳು. ಯಾರುಯಾರಿಗೆ ಮದಾಂಸ್ಟಾಲ್ ಗೊತ್ತಿತ್ತೋ ಅವರಿಗೆಲ್ಲ ವರೆಂಕಳೂ ಗೊತ್ತಿತ್ತು; ಗೊತ್ತಿದ್ದುದು ಮಾತ್ರವಲ್ಲ, ಅವಳನ್ನು ಕುಮಾರಿ ವರೆಂಕಳೆಂದು ಕರೆದು ಪ್ರೀತಿಸುತ್ತಿದ್ದರು.

ಇಷ್ಟೆಲ್ಲ ತಿಳಿದುಕೊಂಡನಂತರ, ತನ್ನ ಮಗಳು ವರೆಂಕಳ ಗೆಳತಿಯಾಗುವುದರಲ್ಲಿ ಬಾಧಕವಿಲ್ಲವೆಂದು ರಾಜಕುಮಾರಿ ಬಗೆದಳು. ವಿನಯಸೌಜನ್ಯಗಳೇ ಮೂರ್ತಿವೆತ್ತಂತಿದ್ದ ವರೆಂಕಳಲ್ಲಿ ಅವಳಿಗೆ ಅಪಾರ ವಿಶ್ವಾಸೋದಯವಾಯಿತು. ವರೆಂಕ ಇಂಗ್ಲಿಷ್ ಮತ್ತು ಫ್ರೆಂಚ್ ಭಾಷೆಗಳಲ್ಲಿ ಲೀಲಾಜಾಲವಾಗಿ ಮಾತಾಡುತ್ತಿದ್ದಳು. ಖಾಯಿಲೆಯ ದೆಸೆಯಿಂದಾಗಿ ರಾಜಕುಮಾರಿಯ ಪರಿಚಯ ಸಾಧ್ಯವಾಗಲಿಲ್ಲವೆಂಬ, ಪರಿಚಯದ ಭಾಗ್ಯದಿಂದ ವಂಚಿತಳಾದದ್ದಕ್ಕೆ ತನಗೆ ತುಂಬ ವಿಷಾದವಾಗುತ್ತದೆಂಬ ಮದಾಂಸ್ಟಾಲ್‌ಳ ಸಂದೇಶವನ್ನವಳು ತಂದದ್ದು ಎಲ್ಲಕ್ಕಿಂತ ಮಿಗಿಲಾದ ವಿಷಯವಾಗಿತ್ತು.

ವರೆಂಕ ಪರಿಚಯವಾದನಂತರ ಕಿಟ್ಟಿ ಮೊದಲಿಗಿಂತ ಮಿಗಿಲಾಗಿ ಅವಳನ್ನು ಮೆಚ್ಚುತ್ತಿದ್ದಳು: ಪ್ರತಿನಿತ್ಯ ಅವಳಲ್ಲಿ ನವೋನವ ಗುಣಗಳನ್ನು ಕಾಣುತ್ತಿದ್ದಳು.

ವರೆಂಕಳಿಗೆ ಮಧುರ ಶಾರೀರವಿದೆಯೆಂದು ಕೇಳಿ ತಿಳಿದುಕೊಂಡಿದ್ದ ರಾಜಕುಮಾರಿ ತಮ್ಮಲ್ಲಿಗೆ ಬಂದು ಹಾಡುವಂತೆ ಅವಳನ್ನು ಆಹ್ವಾನಿಸುತ್ತಿದ್ದಳು.

'ಕಿಟ್ಟಿ ನುಡಿಸುತ್ತಾಳೆ; ನಮ್ಮಲ್ಲೊಂದು ಪಿಯಾನೋ ಇದೆ. ಅದೇನೂ ಅಷ್ಟು ಚೆನ್ನಾಗಿಲ್ಲ; ಆದರೆ ನಿನ್ನ ಹಾಡುಗಾರಿಕೆಯಿಂದ ನಮಗೆ ತುಂಬ ಸಂತೋಷವಾಗುತ್ತದೆ.' ಎಂದು ರಾಜಕುಮಾರಿ ಕೃತ್ರಿಮ ಮಂದಹಾಸ ಸೂಸಿದಳು. ವರೆಂಕಳಿಗೆ ಹಾಡಲಿಷ್ಟವಿರಲಿಲ್ಲ; ಅದನ್ನು ಲಕ್ಷಿಸಿದ ಕಿಟ್ಟಿಗೆ ತಾಯಿಯ ಮುಗುಳುನಗೆ ಹಿಡಿಸಲಿಲ್ಲ. ವರೆಂಕ ಹೇಗೂ ಸಂಜೆ ಬಂದೇ ಬಂದಳು; ಬರುವಾಗ ಹಾಡುಗಳ ಸುರುಳಿಯೊಂದನ್ನು ತಂದಳು. ರಾಜಕುಮಾರಿ ಮೇರಿಯಾ ಇವ್‌ಜಿನೀವ್ನಳನ್ನೂ ಅವಳ ಮಗಳನ್ನೂ, ಜತೆಗೆ ಕರ್ನಲ್‌ನನ್ನೂ ಆಹ್ವಾನಿಸಿದಳು.

ತನಗೆ ಗೊತ್ತಿಲ್ಲದ ಜನರ ಹಾಜರಾತಿಯಿಂದ ಪ್ರಕ್ಷುಬ್ಧಳಾಗದೆ ವರೆಂಕ ನೇರವಾಗಿ ಪಿಯಾನೊ ಬಳಿಗೆ ಸರಿದಳು. ಅವಳ ಜತೆಗೆ ಯಾರೂ ಇರಲಿಲ್ಲ; ಕೃತಿಪಟ ನೋಡಿದ್ದೆ

ತಡ ಅವಳು ಹಾಡುತ್ತಿದ್ದಳು. ಪಿಯಾನೋ ನುಡಿಸುವಲ್ಲಿ ಚತುರೆಯಾದ ಕಿಟ್ಟಿ ಅವಳಿಗೆ ಸಾಥಿಯಾದಳು.

ವರೆಂಕ ಮೊದಲನೆಯ ಹಾಡು ಮುಗಿಸಿದ ಕೂಡಲೇ 'ನೀನು ಅಸಾಧಾರಣ ಪ್ರತಿಭಾವಂತೆ' ಎಂದು ರಾಜಕುಮಾರಿ ಪ್ರಶಂಸಿಸಿದಳು.

ಮೇರಿಯಾ ಇವ್‌ಜಿನೀವ್ನಳೂ ಅವಳ ಮಗಳೂ ಅವಳನ್ನು ಶ್ಲಾಘಿಸಿ, ಧನ್ಯವಾದ ಸಲ್ಲಿಸಿದರು.

'ಇಗೋ ನೋಡು!' ಎಂದು ಕಿಟಕಿಯ ಬಳಿ ನಿಂತಿದ್ದ ಕರ್ನಲ್ ನುಡಿದನು. 'ನಿನ್ನ ಹಾಡುಕೇಳಲು ಜನ ನೆರೆದಿದ್ದಾರೆ.' ನಿಜಕ್ಕೂ ಕಿಟಕಿಯಡಿ ದೊಡ್ಡದೊಂದು ಗುಂಪು ಕಿಕ್ಕಿರಿದಿತ್ತು.

'ಸಂಗೀತದಿಂದ ನಿಮಗೆ ಆಹ್ಲಾದವಾಗುವುದಾದರೆ ನನಗದೇ ಸಂತೋಷ' ಎಂದು ವರೆಂಕ ಸರಳವಾಗಿ ಉತ್ತರಿಸಿದಳು.

ಕಿಟ್ಟಿ ತನ್ನ ಗೆಳತಿಯ ಕಡೆಗೆ ಹೆಮ್ಮೆಯಿಂದ ನೋಡಿದಳು. ಅವಳ ಕಲೆಯಿಂದ, ಶಾರೀರದಿಂದ ಹಾಗೂ ಮುಖಭಾವದಿಂದ ಕಿಟ್ಟಿಗೆ ಆನಂದವಾಯಿತು; ಆದರೆ ಎಲ್ಲಕ್ಕಿಂತ ಮಿಗಿಲಾಗಿ ಅವಳ ನಡತೆ ಆಪ್ಯಾಯಮಾನವಾಯಿತು. ಏಕೆಂದರೆ, ತನ್ನ ಸಂಗೀತದ ಬಗ್ಗೆ ವರೆಂಕ ತಲೆಗೇನೂ ಅಂಟಿಸಿಕೊಂಡಂತೆ ಕಾಣಲಿಲ್ಲ; ಪ್ರಶಂಸೆಯ ಬಗೆಗೆ ಅವಳು ಸಂಪೂರ್ಣ ನಿರ್ಲಿಪ್ತಳಾಗಿದ್ದಳು; 'ಇನ್ನಷ್ಟು ಹಾಡು ಕೇಳಬೇಕೆ? ಅಥವಾ ನಿಮಗಷ್ಟೇ ಸಾಕಾಯಿತೆ?' ಎಂದಿಷ್ಟೆ ಕೇಳುವಂತೆ ಅವಳು ಕಂಡು ಬಂದಳು.

'ನಾನವಳ ಜಾಗದಲ್ಲಿದ್ದಿದ್ದರೆ, ನನಗೆಷ್ಟು ಹೆಮ್ಮೆಯಾಗುತ್ತಿತ್ತು!' ಎಂದು ಕಿಟ್ಟಿ ತನ್ನಷ್ಟಕ್ಕೆ ತಾನಂದುಕೊಂಡಳು. 'ಕಿಟಕಿಯಡಿಯ ಗುಂಪನ್ನು ನೋಡಿ ನನಗೆಷ್ಟು ಆನಂದ ವಾಗುತ್ತಿತ್ತು! ಆದರೆ ಅವಳಿಗೆಲ್ಲವು ಒಂದೆಯಾಗಿದೆ. ಇತರರ ಇಷ್ಟಾರ್ಥವನ್ನು ಪೂರೈಸು ವುದೇ ಅವಳ ಹಂಬಲ; ಅಮ್ಮನಿಗೆ ಸಂತಸವುಂಟುಮಾಡುವುದೇ ಅವಳ ಉದ್ದೇಶ. ಅವಳಲ್ಲೇನಿದೆ? ಎಲ್ಲವನ್ನು ದಿವ್ಯ ನಿರ್ಲಕ್ಷ್ಯದಿಂದ ಕಾಣುವ, ಎಂಥ ಸಂದರ್ಭದಲ್ಲಿಯೂ ಗಂಭೀರ ಪ್ರಶಾಂತ ಚಿತ್ತತೆಯಿಂದಿರುವ ಶಕ್ತಿ ಅವಳಿಗೆ ಲಭ್ಯವಾದದ್ದಾದರೂ ಹೇಗೆ? ಅದನ್ನೆಲ್ಲ ಅವಳಿಂದರಿಯಲು ಹಾಗೂ ಕಲಿತುಕೊಳ್ಳಲು ನಾನೆಷ್ಟು ಉತ್ಸುಕಳಾಗಿದ್ದೇನೆ!' ಎಂದು ಕಿಟ್ಟಿ ಅವಳ ಪ್ರಶಾಂತ ವದನದ ಕಡೆಗೆ ನೋಡುತ್ತ ಆಲೋಚಿಸಿದಳು. ಮತ್ತೇನನ್ನಾದರೂ ಹಾಡುವಂತೆ ರಾಜಕುಮಾರಿ ವರೆಂಕಳನ್ನು ಕೇಳಿಕೊಂಡಳು; ವರೆಂಕ ಪಿಯಾನೋ ಬಳಿ ನಿಂತುಕೊಂಡು, ಬಿಸಿಲುಮಚ್ಚೆಯ ತೆಳ್ಳನೆಯ ತನ್ನ ಕೈಯಿಂದ ಲಯವನ್ನು ಗುರುತಿಸುತ್ತ, ಮೊದಲಿನಂತೆ ಸಮರಸವಾಗಿ, ಸುಸ್ಪಷ್ಟವಾಗಿ, ಹಾಗೂ ಸ್ವರ್ಗೀಯ ಸುಂದರವಾಗಿ ಮತ್ತೊಂದು ಹಾಡು ಹಾಡಿದಳು.

ಅವಳ ಪುಸ್ತಕದಲ್ಲಿದ್ದ ಮುಂದಿನದು ಇತಾಲಿಯಾ ಸಂಗೀತ. ಕಿಟ್ಟಿ ಪಲ್ಲವಿಯನ್ನು ನುಡಿಸಿ, ವರೆಂಕಳ ಕಡೆಗೆ ಕಣ್ಣು ಮಿಟುಕಿಸಿದಳು.

'ಇದು ಬೇಡ. ಮುಂದಿನದಕ್ಕೆ ಹೋಗೋಣ' ಎಂದು ನುಡಿಯುವಾಗ ವರೆಂಕಳ ಮುಖ ಕೆಂಪೇರಿತು. ಕಿಟ್ಟಿಯ ಗಾಬರಿಗೊಂಡ ಕಾತರದೃಷ್ಟಿ ತನ್ನ ಗೆಳತಿಯ ಮುಖದಲ್ಲಿ ನಾಟಿತು.

'ಹಾಗಾದರೆ ಮತ್ತೊಂದಾಗಲಿ' ಎಂದವಳು ಬೇಗ ಬೇಗ ಪುಟವನ್ನು ಮಗುಚಿದಳು. ಆ ಹಾಡಿನೊಡನೆ ಯಾವುದೋ ಭಾವ ಸಂಗತಗೊಂಡಿತ್ತೆಂಬುದು ಸ್ಪಷ್ಟವಾಗಿತ್ತು.

'ಇಲ್ಲ, ಇಲ್ಲ' ಎಂದು ವರೆಂಕ ಕೃತಿಯ ಮೇಲೆ ಕೈಯಿಟ್ಟುಕೊಂಡು ನಸುನಕ್ಕಳು. 'ಅದಕ್ಕೇನಂತೆ, ನಾನದನ್ನೆ ಹಾಡುತ್ತೇನೆ.' ಬೇರೆಯ ಪದಗಳಂತೆಯೇ ಅವಳು ಅದನ್ನು ಸಹ ಶಾಂತಚಿತ್ತಳಾಗಿ, ಸಮಾಧಾನದಿಂದ, ಅತ್ಯಂತ ಮನೋಹರವಾಗಿ ಹಾಡಿದಳು.

ಹಾಡು ಮುಗಿದ ನಂತರ ಪ್ರತಿಯೊಬ್ಬರೂ ಅವಳನ್ನು ವಂದಿಸಿ, ಚಹಪಾನಕ್ಕಾಗಿ ಬೇರೆಡೆಗೆ ಸರಿದರು. ವರೆಂಕ ಮತ್ತು ಕಿಟ್ಟಿಯರು ತೋಟದ ಕಡೆಗೆ ಹೊರಟರು.

'ಯಾವುದೋ ನೆನಪು ಆ ಹಾಡಿನೊಡನೆ ಸಂಬಂಧಗೊಂಡಿದೆಯೆಂಬುದು ನಿಜವಲ್ಲವೆ?' ಎಂದು ಕಿಟ್ಟಿ ಪ್ರಶ್ನಿಸಿದಳು. 'ಅದರ ವಿವರ ನನಗೆ ಬೇಡ. ನನ್ನ ಊಹೆ ಸರಿಯೊ ತಪ್ಪೊ ಹೇಳಿದರೆ ಸಾಕು' ಎಂದವಳು ಆತುರಾತುರವಾಗಿ ಉಸುರಿದಳು.

'ಏಕೆ ಬೇಡ? ಹೇಳಿ ಬಿಡುತ್ತೇನೆ, ಕೇಳು' ಎಂದು ವರೆಂಕ ನಿಷ್ಕಪಟವಾಗಿ ನುಡಿದಳು. ಉತ್ತರಕ್ಕೆ ಕಾಯದೆ ಅವಳು ಮಾತು ಮುಂದುವರಿಸಿದಳು. 'ಎಂದೋ ಒಮ್ಮೆ ದುಃಖದಾಯಕವಾಗಿದ್ದ ಸ್ಮೃತಿಯೊಡನೆ ಅದು ಸಂಗತಗೊಂಡಿದೆ. ನಾನೊಬ್ಬ ತರುಣನನ್ನು ಪ್ರೀತಿಸಿದ್ದೆ; ಅವನ ಮುಂದೆ ಆ ಹಾಡನ್ನು ರಾಗಿಸುತ್ತಿದ್ದೆನು.'

ಅದನ್ನು ಕೇಳಿ ಕಿಟ್ಟಿಯ ಹೃದಯ ಕರಗಿತು; ಎವೆಯಿಕ್ಕದೆ ವರೆಂಕಳ ಕಡೆಗೆ ನೋಡಿದಳು.

'ನಾನವನನ್ನು ಪ್ರೀತಿಸಿದೆ; ನನ್ನನ್ನವನು ಪ್ರೀತಿಸಿದ. ಆದರೆ ಅವನ ತಾಯಿಗದು ಹಿಡಿಸಲಿಲ್ಲ. ಅವನು ಬೇರೆ ಯಾರನ್ನೊ ಮದುವೆಯಾದನು. ಅವನೀಗ ಇಲ್ಲೆಲ್ಲೊ ಸನಿಹದಲ್ಲಿಯೇ ವಾಸಿಸುತ್ತಿದ್ದಾನೆ. ಕೆಲವೊಮ್ಮೆ ಅವನು ನನಗೆ ಕಾಣಿಸಿಕೊಳ್ಳುತ್ತಾನೆ. ನಾನೂ ಪ್ರಣಯ ವ್ಯವಹಾರದಲ್ಲಿ ತೊಡಗಬಲ್ಲೆನೆಂದು ನೀನು ಊಹಿಸಿಕೊಂಡಿರಲಿಲ್ಲ, ಅಲ್ಲವೆ?' ಎಂದವಳು ಪ್ರಶ್ನಿಸಿದಳು. ರಾಗೋದ್ರೇಕದ ಪ್ರಕಾಶದಿಂದ ಅವಳ ವದನ ದೀಪ್ತಗೊಂಡಿತು. ಹಿಂದೊಮ್ಮೆ ಅದು ಅವಳ ಇಡೀ ದೇಹವನ್ನೆಲ್ಲ ವ್ಯಾಪಿಸಿಕೊಂಡಿರಬೇಕೆಂದು ಕಿಟ್ಟಿ ಭಾವಿಸಿದಳು.

'ಏಕಾಗಬಾರದು? ನಾನು ಗಂಡಸಾಗಿದ್ದರೆ, ನಿನ್ನನ್ನು ನೋಡಿದ ನಂತರ ಇತರರ ಕಡೆಗೆ ಗಮನ ಹರಿಸುತ್ತಿರಲಿಲ್ಲ. ತನ್ನ ತಾಯಿಯನ್ನು ತೃಪ್ತಿಪಡಿಸುವ ಸಲುವಾಗಿ ನಿನ್ನನ್ನು ಮರೆತು, ನಿನ್ನ ನೆಮ್ಮದಿಯನ್ನು ಹೇಗೆ ಹಾಳುಮಾಡಿದನೆಂಬುದೇ ನನಗೆ ಬಗೆಹರಿಯದ ಸಂಗತಿಯಾಗಿದೆ. ಅವನು ಕಲ್ಲೆದೆಯುವನೆಂದು ತೋರುತ್ತದೆ.'

'ಓ, ಅವನೇ, ಅವನೊಬ್ಬ ಸಜ್ಜನ. ನಾನು ಅಸುಖಿಯಾಗಿಲ್ಲ. ಅದಕ್ಕೆ ಪ್ರತಿಯಾಗಿ ನಾನು ತುಂಬ ನೆಮ್ಮದಿಯಾಗಿದ್ದೇನೆ. ರಾತ್ರಿ ಮತ್ತೇನೂ ಹಾಡಬೇಕಾಗಿಲ್ಲವಷ್ಟೆ' ಎಂದವಳು ಮನೆಯ ಕಡೆಗೆ ಮುಖ ಮಾಡಿಕೊಂಡು ಕೇಳಿದಳು.

'ನೀನೆಂಥ ಸಾತ್ವಿಕವ್ಯಕ್ತಿ! ನೀನೆಷ್ಟು ಒಳ್ಳೆಯವಳು!' ಎಂದು ಕಿಟ್ಟಿ ಅವಳನ್ನು ನಿಲ್ಲಿಸಿಕೊಂಡು, ಮುತ್ತಿಡುತ್ತ ಒರಲಿದಳು. 'ನಾನು ರವೆಯಷ್ಟಾದರೂ ನಿನ್ನಂತಿದ್ದರೆ ಸಾಕಾಗಿತ್ತು!'

'ಬೇರೆಯವರಂತಿರಬೇಕೆ ನೀನು ಅಪೇಕ್ಷಿಸುತ್ತೀಯೆ? ನೀನಿರುವಂತೆಯೇ ಸದ್ಗುಣಿಯಾಗಿದ್ದೀಯೆ' ಎಂದು ವರೆಂಕ ನಿರಾಸಕ್ತಿಯ ಪ್ರಶಾಂತ ಮಂದಹಾಸವನ್ನು ಬೀರಿದಳು.

'ಇಲ್ಲ. ನಾನು ಒಳ್ಳೆಯವಳಲ್ಲ. ಅದಿರಲಿ, ನನ್ನ ಸಂಶಯವನ್ನು ಪರಿಹರಿಸು.... ತುಸು ಹೊತ್ತು ಕುಳಿತುಕೊಳ್ಳೋಣ' ಎಂದು ಕಿಟ್ಟಿ ಅವಳನ್ನೆಳೆದು ಮತ್ತೆ ಬೆಂಚಿನ ಮೇಲೆ ತನ್ನ ಪಕ್ಕದಲ್ಲಿ ಕೂರಿಸಿಕೊಂಡಳು. 'ಗಂಡಸೊಬ್ಬ ನಿನ್ನ ಪ್ರೇಮವನ್ನು ಧಿಃಕರಿಸಿದ್ದಾನೆಂಬುದು, ಅವನಲ್ಲಿ ಅದರ ಗಂಧವಿಲ್ಲವೆನ್ನುವುದು ಅವಮಾನಕಾರಕವಲ್ಲವೆ, ಹೇಳು?'

'ಅವನು ಧಿಃಕರಿಸಲಿಲ್ಲ. ಅವನು ನಿಜಕ್ಕೂ ನನ್ನನ್ನು ಪ್ರೀತಿಸಿದ. ಆದರವನು ವಿಧೇಯ ಪುತ್ರ ಮತ್ತು—'

'ಸರಿ, ಸರಿ. ಮಾತೃ ಸಂಬಂಧವಾದ ವಿಧೇಯತೆಯಾಗಿರದೆ, ಅದು ಅವನ ಕೃತ್ಯವೇ ಆಗಿದ್ದರೆ?....' ಎಂದು ಕಿಟ್ಟಿ ತನ್ನ ರಹಸ್ಯ ರಟ್ಟಾಗುತ್ತಿತ್ತೆಂಬ, ತನ್ನ ಅವಮಾನತಪ್ತ ಮುಖ ತನ್ನೊಳಗನ್ನಾಗಲೇ ಬಯಲುಮಾಡಿತ್ತೆಂಬ ಅರಿವಿನಿಂದ, ನುಡಿದಳು.

'ಅಂಥ ಸಂದರ್ಭದಲ್ಲಿ ಅವನು ತಪ್ಪು ಮಾಡಿದನೆಂದೇ ತಿಳಿಯುತ್ತೇನೆ. ಅಂಥವನಿಗಾಗಿ ನಾನು ಪರಿತಾಪ ಪಡಬೇಕಾಗಿಲ್ಲ' ಎಂದು ವರೆಂಕ ಉತ್ತರಿಸಿದಳು. ತಾವು ಮಾತಾಡುತ್ತಿದ್ದ ವಿಷಯ ತನ್ನನ್ನುಳಿದು ಕಿಟ್ಟಿಯ ಕಡೆಗೆ ತಿರುಗಿತ್ತೆಂಬುದು ಅವಳಿಗರಿವಾಗಿತ್ತು.

'ಆದರೆ ಅವಮಾನವೊ?' ಎಂದು ಕಿಟ್ಟಿ ಸೊಲ್ಲೆತ್ತಿದಳು. 'ಅವಮಾನವನ್ನು ಮರೆಯಲಾಗದು; ಅದು ಖಂಡಿತ ಸಾಧ್ಯವಿಲ್ಲ!' ಎಂದವಳು ನುಡಿಯುವಾಗ, ನೃತ್ಯಗೋಷ್ಠಿಯಲ್ಲಿ ಸಂಗೀತ ಸಮಯದ ವಿರಾಮಾವಧಿಯಲ್ಲಿ ತಾನವನ ಕಡೆಗೆ ಬೀರಿದ ನೋಟ ನೆನಪಾಯಿತು.

'ಅವಮಾನವೇಕಾಗಬೇಕು? ನೀನೇನೂ ಕೆಟ್ಟದ್ದಾಗಿ ವರ್ತಿಸಲಿಲ್ಲ, ಹೌದೆ?'

'ತಪ್ಪಿಗಿಂತ ಕಡೆ–ನಾಚಿಕೆಗೇಡು.'

ವರೆಂಕ ತಲೆ ತೂನೆದು, ಕಿಟ್ಟಿಯ ಕೈಮೇಲೆ ತನ್ನ ಕೈಯಿಟ್ಟಳು. 'ಅದರಲ್ಲಿ ನಾಚಿಕೆಗೇಡಿನ ವಿಷಯವೇನಿದೆ? ನಿನ್ನ ಬಗ್ಗೆ ಅವಜ್ಞೆಯಿಂದಿದ್ದ ವ್ಯಕ್ತಿಯೊಡನೆ ನೀನವನನ್ನು ಪ್ರೀತಿಸುತ್ತಿದ್ದುದಾಗಿ ಸ್ಪಷ್ಟಪಡಿಸಲಿಲ್ಲವಷ್ಟೆ?'

'ಇಲ್ಲ, ನಿಜಕ್ಕೂ ಇಲ್ಲ. ನಾನು ಉಸುರೆತ್ತಲಿಲ್ಲ. ಒಂದು ಮಾತೂ ಆಡಲಿಲ್ಲ. ಆದರವನಿಗೆ ಅದು ಗೊತ್ತಿತ್ತು. ಹೌದ್ಹೌದು, ನೋಟಗಳಂತು ಇದ್ದೇ ಇವೆ; ಬೇರೆ ಮಾರ್ಗಗಳೂ ಉಂಟು. ನೂರು ವರ್ಷ ಬದುಕಿದರೂ ನಾನದನ್ನು ಮರೆಯಲಾರೆ.'

'ನೀನು ಮರೆಯಲಾರದ್ದು ಏನು? ನನಗರ್ಥವಾಗದು. ನೀನಿನ್ನೂ ಅವನನ್ನು ಪ್ರೀತಿಸುತ್ತಿದ್ದೀಯೋ ಇಲ್ಲವೋ ಎನ್ನುವುದೇ ಮುಖ್ಯ' ಎಂದು ವರೆಂಕ ನಿರ್ದಾಕ್ಷಿಣ್ಯವಾಗಿ ನುಡಿದಳು.

'ಅವನನ್ನು ದ್ವೇಷಿಸುತ್ತೇನೆ. ನನ್ನನ್ನು ಸಹ ನಾನು ಕ್ಷಮಿಸಿಕೊಳ್ಳಲಾರೆ.'

'ಏಕೆ?'

'ಅವಮಾನವಾಗಿದೆ, ತೇಜೋವಧೆಯಾಗಿದೆ.'

'ಓ, ಎಲ್ಲರೂ ನಿನ್ನಂತೆ ಸೂಕ್ಷ್ಮಮನಸ್ಸುಳ್ಳವರಾದರೆ ಗತಿ?' ಎಂದು ವರೆಂಕ ನುಡಿದಳು. 'ಅಷ್ಟೆಲ್ಲ ಏಕೆ? ಅಂಥದೇ ಅನುಭವವುಳ್ಳ ಮತ್ತೊಬ್ಬ ಹುಡುಗಿಯನ್ನು ನಾನು ಕಂಡಿಲ್ಲ. ಅದೇನೂ ಅಷ್ಟು ಮುಖ್ಯವಾದದ್ದಲ್ಲ?

'ಹಾಗಾದರೆ ಮುಖ್ಯವಾದದ್ದೇನು?' ಎಂದು ಕಿಟ್ಟಿ ಕುತೂಹಲಾಶ್ಚರ್ಯಗಳಿಂದ ಅವಳನ್ನೆ ನಿಟ್ಟಿಸುತ್ತ ಕೇಳಿದಳು.

'ಓ, ಮುಖ್ಯವಾದ ಸಂಗತಿಗಳು ಹಲವಾರಿವೆ' ಎಂದು ವರೆಂಕ ನಸುನಕ್ಕಳು.

'ಏನವು?'

'ಬಹುಮುಖ್ಯವಾದಂಥವು ಹಲವಾರಿವೆ' ಎಂದು ವರೆಂಕ ಉತ್ತರಿಸಿದಳು. ಏನು ಹೇಳುವುದೋ ಅವಳಿಗೆ ಗೊತ್ತಾಗಲಿಲ್ಲ. ಅಷ್ಟರಲ್ಲಿ ರಾಜಕುಮಾರಿ 'ಕಿಟ್ಟಿ, ಚಳಿ ಹೆಚ್ಚುತ್ತಿದೆ. ಶಾಲನ್ನೊಯ್ಯಿ, ಇಲ್ಲವೆ ಒಳಗೆ ಬಾ' ಎಂದು ಕಿಟಕಿಯ ಮೂಲಕ ಕರೆದಳು.

'ನಿಜಕ್ಕೂ ಹೊತ್ತಾಯ್ತು' ಎಂದು ವರೆಂಕ ಮೇಲೇಳುತ್ತ ನುಡಿದಳು. 'ನಾನಿನ್ನೂ ಕುಮಾರಿ ಬರ್ತ್ಳನ್ನು ಭೇಟಿಮಾಡಬೇಕಾಗಿದೆ; ಅವಳು ನನಗೆ ಹೇಳಿಕಳಿಸಿದ್ದಾಳೆ.'

ಕಿಟ್ಟಿ ಅವಳ ಕೈ ಹಿಡಿದುಕೊಂಡಳು; ಭಯಮಿಶ್ರಿತವಾದ ದೈನ್ಯಕೌತುಕಗಳಿಂದ ಅವಳನ್ನೆ ನೋಡುತ್ತಿದ್ದಳು. 'ಏನದು? ಬಹುಮುಖ್ಯವಾದದ್ದು ಹಾಗೂ ನಿನ್ನ ಪ್ರಶಾಂತ ಚಿತ್ತತೆಗೆ ಕಾರಣವಾದದ್ದು ಏನು? ನಿನಗೆ ಗೊತ್ತಿದೆ; ನನಗೂ ಹೇಳಿಕೊಡು' ಎಂಬುದಾಗಿ ಅವಳ ನೋಟ ಸಾರುವಂತಿತ್ತು. ಆದರೆ ಕಿಟ್ಟಿಯ ಪ್ರಶ್ನೆ ವರೆಂಕಳಿಗೆ ಅರ್ಥವಾಗಲಿಲ್ಲ. ಕುಮಾರಿ ಬರ್ತ್ಳನ್ನು ಭೇಟಿ ಮಾಡುವುದೊಂದು ಮಾತ್ರ ಅವಳಿಗೆ ಗೊತ್ತಿತ್ತು; ಹನ್ನೆರಡು ಗಂಟೆಯೊಳಗಾಗಿ ಮನೆ ಸೇರಿ ಅಮ್ಮನೊಡನೆ ಚಹ ಸೇವಿಸಬೇಕಾಗಿತ್ತು. ಅವಳು ಒಳಗೆ ಹೋಗಿ, ಸುರುಳಿಯನ್ನೆತ್ತಿಕೊಂಡು, ಪ್ರತಿಯೊಬ್ಬರಿಗೂ ನಮಸ್ಕಾರ ಹೇಳಿ, ಬೆನ್ನು ತಿರುಗಿಸಿದಳು.

'ಮನೆತನಕ ನಿನ್ನನ್ನು ಬಿಟ್ಟುಬರಬಹುದೆ?' ಎಂದು ಕರ್ನಲ್ ಕೇಳಿದನು.

'ರಾತ್ರಿ ಈ ಹೊತ್ತಿನಲ್ಲಿ ನೀನೊಬ್ಬಳೇ ಹೇಗೆ ಹೋಗುತ್ತೀಯೆ? ಪರಾಶನನ್ನಾದರೂ ಜತೆಗೆ ಕಳಿಸುತ್ತೇನೆ' ಎಂದು ರಾಜಕುಮಾರಿ ನುಡಿದಳು.

ಅಂಗರಕ್ಷಕನ ಅಗತ್ಯವಿದೆಯೆಂಬ ಮಾತಿನಿಂದ ಉಕ್ಕಿಬಂದ ನಗುವನ್ನು ವರೆಂಕ ಅದುಮಿಕೊಂಡಳು; ಕಿಟ್ಟಿ ಅವಳ ಭಾವವನ್ನು ಗ್ರಹಿಸಿದಳು.

'ಓ, ನಾನು ಯಾವಾಗಲೂ ಒಂಟಿಯಾಗಿಯೇ ತಿರುಗಾಡುತ್ತೇನೆ; ನನಗೇನೂ ತೊಂದರೆಯಾಗಿಲ್ಲ' ಎಂದವಳು ತನ್ನ ಟೋಪಿಯನ್ನು ಕೈಗೆತ್ತಿಕೊಂಡಳು. ಅವಳು ಮತ್ತೆ ಕಿಟ್ಟಿಯನ್ನು ಚುಂಬಿಸಿದಳು. ಮುಖ್ಯವಾದದ್ದೇನೆಂಬುದನ್ನು ಅವಳಿಗೆ ತಿಳಿಸದೆಯೆ, ತೋಳ್ಸಂದಿಯಲ್ಲಿ ತನ್ನ ಸುರುಳಿಯನ್ನಿರುಕಿಸಿಕೊಂಡು, ತನಗೆ ಮಾತ್ಸರ್ಯಕರವಾದ ಶಾಂತಿ ಘನತೆಗಳನ್ನು ಕರುಣಿಸಿದ ಪರಮಸಂಗತಿಯ ರಹಸ್ಯವನ್ನು ತನ್ನಲ್ಲಿಯೇ ಹುದುಗಿಸಿಕೊಂಡು, ವರೆಂಕ ಧೈರ್ಯದಿಂದ ಬೇಸಗೆಯ ಕಗ್ಗತ್ತಲ ರಾತ್ರಿಯಲ್ಲಿ ಹೆಜ್ಜೆ ಹಾಕಿದಳು.

೩೩

ಕಿಟ್ಟಿ ಮದಾಂಸ್ಟಾಲ್‌ಳ ಪರಿಚಯ ಸಹ ಮಾಡಿಕೊಂಡಳು. ವರೆಂಕಳ ಸ್ನೇಹದ ಜತೆಗೆ ಈ ಪರಿಚಯವೂ ಸೇರಿಕೊಂಡು ಅವಳ ಮೇಲೆ ಅಪಾರ ಪ್ರಭಾವವನ್ನು ಬೀರಿದ್ದಲ್ಲದೆ, ಕಷ್ಟಕಾಲದಲ್ಲವಳಿಗೆ ಅಮೃತಸೇಚನೆಯಾಗಿದ್ದುವು. ಹೊಸ ಗೆಳೆಯರ ಸಂಪರ್ಕದಿಂದಾಗಿ ಅವಳು ನೂತನ ಪ್ರಪಂಚವನ್ನೆ ಕಂಡುಕೊಂಡಿದ್ದಳು. ಹಿಂದಿನ ಪ್ರಪಂಚಕ್ಕೂ ಈ ಪ್ರಪಂಚಕ್ಕೂ ನಡುವೆ ಯಾವೊಂದು ಹೋಲಿಕೆಯೂ ಇರಲಿಲ್ಲ. ಈ ನೂತನ ಸುಂದರ ಜಗತ್ತಿನ ಅತ್ಯುನ್ನತ ಶಿಖರಗಳಿಂದ ಅಧಃಪಾತದಲ್ಲಿದ್ದ ಹಿಂದಿನ ಜಗತ್ತನ್ನು ಪ್ರಸನ್ನ ಗಂಭೀರವಾಗಿ ಈಕ್ಷಿಸಬಹುದಿತ್ತು. ಇದರಿಂದಾಗಿ ಅವಳ ಮನಸ್ಸಿಗೆ ನೆಮ್ಮದಿಯುಂಟಾಗಿತ್ತು. ಆ ತನಕ ಸಹಜ ಪ್ರವೃತ್ತಿಗಳೇ ನಿಜವಾದ ಬದುಕೆಂದು ತಿಳಿದು ತನ್ನನ್ನದಕ್ಕೆ ನಿವೇದಿಸಿಕೊಂಡಿದ್ದಳು; ಆದರೀಗ ಅದರ ಜತೆಗೆ ಚೈತನ್ಯದ ಬದುಕೊಂದಿದೆಯೆಂಬುದನ್ನವಳು ಅರಿತಳು.

ಈ ಅಧ್ಯಾತ್ಮಿಕ ಜೀವನ ಧರ್ಮದ ಮೂಲಕ ಅಭಿವ್ಯಕ್ತಗೊಂಡಿತ್ತು. ಆದರೆ ಕಿಟ್ಟಿ ಬಾಲ್ಯದಿಂದರಿತಿದ್ದ, ತನ್ನ ಗೆಳೆಯರನ್ನು ಸಂಧಿಸಲನುಕೂಲವಾಗಿದ್ದ ಸಾಯಂಕಾಲದ ಮತ್ತು ಪ್ರಾತಃಕಾಲದ ಪ್ರಾರ್ಥನೆಗಳಲ್ಲಿ ಹಾಗೂ ಪುರೋಹಿತನ ನೆರವಿನಿಂದ ಗಟ್ಟಿ ಮಾಡುತ್ತಿದ್ದ ಬೈಬಲ್ಲಿನ ಪಾಠಗಳಲ್ಲಿ ಅಭಿವ್ಯಕ್ತಿ ಪಡೆಯುತ್ತಿದ್ದ ಧರ್ಮಕ್ಕೂ ಈ ಧರ್ಮಕ್ಕೂ ಯಾವ ಸಂಬಂಧವೂ ಇರಲಿಲ್ಲ. ಈ ನೂತನ ಧರ್ಮ ಅತ್ಯುಜ್ವಲವಾಗಿತ್ತು, ನಿಗೂಢವಾಗಿತ್ತು; ಒಬ್ಬ ವ್ಯಕ್ತಿಯ ವಿಶ್ವಾಸಕ್ಕೆ ಪಾತ್ರವಾದ ಸುಂದರ ಭಾವಾಲೋಚನೆಗಳೊಡನೆ ಅದು ವಿಲನಗೊಂಡಿತ್ತು. ಆ ವಿಶ್ವಾಸ ಹೇಳಿಸಿಕೊಂಡು ಬಂದದ್ದಲ್ಲ; ಆ ಭಾವಾಲೋಚನೆಗಳ ಮೇಲಣ ಪ್ರೇಮದಿಂದ ಮೂಡಿದ್ದು.

ಕೇವಲ ಮಾತುಗಳ ಮೂಲಕವೇ ಕಿಟ್ಟಿ ಇದನ್ನೆಲ್ಲ ಕಲಿತುಕೊಂಡದ್ದಲ್ಲ. ತನ್ನ ಯೌವನದ ಸುಮಧುರಸ್ಮೃತಿಗಳಿಂದ ಸಮ್ಮೋಹಗೊಂಡ ರಮಣೀಯ ಬಾಲಿಕೆಯನ್ನು ಕಂಡು ಮರುಳಾದವಳಂತೆ ಮದಾಂಸ್ಟಾಲ್ ಕಿಟ್ಟಿಯೊಡನೆ ಮಾತಾಡಿದಳು. ಮಾನವ ಸಂಕಟಗಳಿಗೆ ಪ್ರೇಮಶ್ರದ್ಧೆಗಳು ಮಾತ್ರ ಪರಿಹಾರವೆಂದೂ, ದುಃಖವೆಷ್ಟೇ ಅಲ್ಪವಾದುದಾದರೂ ಕ್ರಿಸ್ತನ ಅನುಗ್ರಹ ಅನುಕಂಪೆಗಳಿಗೆ ಪಾತ್ರವಾಗುತ್ತದೆಂದೂ ಅವಳು ಒಂದೇ ಒಂದು ಸಲ ನಿರೂಪಿಸಿದ್ದಳು; ತರುವಾಯ ಅವಳು ಬಹುಬೇಗನೆ ವಿಷಯವನ್ನು ಬದಲಾಯಿಸಿದಳು. ಅವಳ ಪ್ರತಿಯೊಂದು ನಡೆಯಲ್ಲಿ, ಪ್ರತಿಯೊಂದು ನುಡಿಯಲ್ಲಿ, ಪ್ರತಿಯೊಂದು ನೋಟದಲ್ಲಿ, ಕಿಟ್ಟಿ ದಿವ್ಯತ್ವವನ್ನೆ ಕಂಡಿದ್ದಳು; ವರೆಂಕಳಿಂದ ಕೇಳಿ ತಿಳಿದುಕೊಂಡಿದ್ದ ಅವಳ ಬಾಳ್ಗತೆಯೂ ಅವಳ ಪಾಲಿಗೆ ದಿವ್ಯಾಮೋದವಾಗಿತ್ತು; ತನಗೆ ಬಹುಕಾಲದಿಂದ ದಕ್ಕದಿದ್ದ ಮುಖ್ಯ ಸಂಗತಿಯನ್ನವಳು ಈ ಎಲ್ಲವುಗಳ ಮೂಲಕ ಕಂಡುಕೊಂಡಳು.

ಮದಾಂಸ್ಟಾಲ್‌ಳ ಕತೆ ಹೃದಯಸ್ಪರ್ಶಿಯಾಗಿತ್ತು; ಅವಳ ಶೀಲ ಉದಾತ್ತವಾಗಿತ್ತು; ಅವಳ ಮಾತು ಕೋಮಲವಾಗಿದ್ದುವು. ಆದರೂ ತನಗೆ ಅಸಂಗತವೆಂದು ತೋರಿದ ಅವಳ ನಡತೆಯ ಬಗ್ಗೆ ಕಿಟ್ಟಿ ವ್ಯಾಖ್ಯಾನ ನಡೆಸಿದ್ದಳು. ತನ್ನ ಬಂಧುಗಳ ಬಗ್ಗೆ ವಿಚಾರಿಸಿಕೊಳ್ಳುವಾಗ ಮದಾಂಸ್ಟಾಲ್ ತಿರಸ್ಕಾರದ ಮಂದಹಾಸ ಬೀರಿದ್ದನ್ನು ಕಿಟ್ಟಿ

ಗಮನಿಸಿದ್ದಳು. ಸ್ಟಾಲ್‌ಳ ಆ ನಡತೆ ಕ್ರಿಶ್ಚಿಯನ್ ಭೂತದಯಾಭಾವನೆಗೆ ವಿರುದ್ಧ ವಾಗಿತ್ತು. ಒಮ್ಮೆ ಕ್ಯಾಥಲಿಕ್ ಪುರೋಹಿತನೊಬ್ಬ ತನ್ನೊಡನಿದ್ದಾಗ ಸ್ಟಾಲ್ ದೀಪದ ಮರೆಯ ನೆರಳಿನಲ್ಲಿ ತನ್ನ ಮುಖವನ್ನವಿಸಿಕೊಂಡು, ವಿಚಿತ್ರವಾಗಿ ನಗುತ್ತಿದ್ದುದನ್ನು ಸಹ ಅವಳು ಗಮನಿಸಿದ್ದಳು. ಕ್ಷುಲ್ಲಕವಾದುವಾದರೂ ಈ ಸಂಗತಿಗಳು ಅವಳನ್ನು ತಬ್ಬಿಬ್ಬುಗೊಳಿಸಿದ್ದುವು. ಆದ್ದರಿಂದ ಮದಾಂಸ್ಟಾಲ್‌ಳ ಬಗ್ಗೆ ಅವಳಿಗೆ ಸಂದೇಹವಿದ್ದೇ ಇತ್ತು. ಆದರೆ ವರೆಂಕ, ಬಂಧು ಬಳಗವಿಲ್ಲದ, ಗೆಳೆಯರಿಲ್ಲದ, ಪ್ರಣಯ ವ್ಯವಹಾರದಲ್ಲಿ ಕಟು ನಿರಾಶೆಗೊಂಡಿದ್ದ, ಯಾವುದೂ ಬೇಡವಾಗಿದ್ದ, ಯಾವುದಕ್ಕೂ ವ್ಯಸನ ಪಡದ ಒಬ್ಬೊಂಟಿಗಿತ್ತಿ ವರೆಂಕ ಕಿಟ್ಟಿಯ ದೃಷ್ಟಿಯಲ್ಲಿ ಪರಿಪೂರ್ಣತೆಯ ಆದರ್ಶವಾಗಿದ್ದಳು. ಆ ಆದರ್ಶವನ್ನನುಸರಿಸುವುದೆಂದು ಅವಳು ಸದಾ ಕನಸು ಕಾಣುತ್ತಿದ್ದಳು. ಶಾಂತಿಸುಖ ಲಭಿಸಬೇಕಾದರೆ, ಉದಾತ್ತ ಧ್ಯೇಯವನ್ನು ಸಂಪಾದಿಸಬೇಕಾದರೆ ತನ್ನನ್ನು ತಾನು ಮರೆತು, ಇತರರನ್ನು ಪ್ರೀತಿಸಬೇಕೆಂಬ ವಿಚಾರವನ್ನವಳು ವರೆಂಕಳ ನಿದರ್ಶನದಿಂದ ಅರಿತುಕೊಂಡಿದ್ದಳು. ಅದನ್ನೆಲ್ಲ ಅನುಷ್ಠಾನಕ್ಕೆ ತರಬೇಕೆಂಬುದು ಕಿಟ್ಟಿಯ ಆಸೆ ಯಾಗಿತ್ತು. ಅತ್ಯಂತ ಮುಖ್ಯವಾದದ್ದನ್ನು ಸ್ಪಷ್ಟವಾಗಿ ಕಂಡುಕೊಂಡಿದ್ದುದರಿಂದ ಈಗ ಕಿಟ್ಟಿ ತನ್ನ ಗೆಳತಿಯರ ಪ್ರಶಂಸೆಯಲ್ಲಿಯೇ ತೃಪ್ತಳಾಗದೆ, ಅವಳಿಗೆ ಹೊಸ ಬದುಕನ್ನು ತೋರಿಸಿದ್ದ ಹೊಸ ಮೌಲ್ಯಕ್ಕೆ ತನ್ನನ್ನು ತಾನು ತೆತ್ತುಕೊಳ್ಳಲು ಪ್ರಯತ್ನಿಸುತ್ತಿದ್ದಳು. ವರೆಂಕ ವಿವರಿಸಿದ ಸ್ಟಾಲ್ ಮತ್ತು ಇತರರ ಸಾಧನೆಗಳ ಹಿನ್ನೆಲೆಯಲ್ಲಿ ತನ್ನ ಭವಿಷ್ಯ ಜೀವನದ ಯೋಜನೆಯೊಂದನ್ನು ಅವಳು ತಯಾರಿಸಿಕೊಂಡಳು. ಮದಾಂ ಸ್ಟಾಲ್‌ಳ ಸೋದರ ಸೊಸೆ ಅಲೀನೆಯ ಸಾಧನೆಯ ಬಗ್ಗೆ ವರೆಂಕ ಆಗಾಗ್ಗೆ ವಿವರ ನೀಡುತ್ತಿದ್ದಳು. ಅವಳಂತೆಯೆ ಕಿಟ್ಟಿ ಸಹ ತಾನಿದ್ದಲ್ಲಿ ನತದೃಷ್ಟರನ್ನು ಹುಡುಕಿ, ಕೈಲಾದಷ್ಟು ಸಹಾಯ ಮಾಡುತ್ತಿದ್ದಳು. ಅವಳು ಬೈಬಲ್ಲನ್ನು ಹಂಚುತ್ತಿದ್ದಳು; ರೋಗಿಗಳ, ಪತಿತರ ಮತ್ತು ಮರಣೋನ್ಮುಖರ ಮುಂದೆ ಅದನ್ನು ಓದುತ್ತಿದ್ದಳು. ಅಲೀನೆಯಂತೆ ಅಪರಾಧಿಗಳಿಗೆ ಬೈಬಲ್ಲನ್ನು ಓದಿ ಹೇಳುವ ಹಂಬಲ ಅವಳಲ್ಲಿ ತೀವ್ರ ವಾಗಿತ್ತು. ಆದರೆ ಇವೆಲ್ಲ ಅವಳ ಗುಪ್ತ ಸ್ವಪ್ನಗಳಾಗಿದ್ದುವು; ತನ್ನ ತಾಯಿಗಾಗಲಿ ವರೆಂಕಳಿಗಾಗಲಿ ಅವಳು ತನ್ನ ಗುಟ್ಟನ್ನು ಬಿಟ್ಟುಕೊಡಲಿಲ್ಲ.

ತನ್ನ ಯೋಜನೆಯನ್ನು ಭಾರಿ ಪ್ರಮಾಣದಲ್ಲಿ ಕಾರ್ಯಾನ್ವಯಗೊಳಿಸುವ ಸಮಯ ಮೊದಗುವ ತನಕ, ಆ ಜಲಧಾಮದಲ್ಲಿಯೇ ತನ್ನ ನೂತನ ತತ್ತ್ವಗಳನ್ನು ಕಾರ್ಯಗತ ಗೊಳಿಸುವ ಅವಕಾಶ ಅವಳಿಗೆ ಲಭಿಸಿತು. ಹಲವು ಮಂದಿ ಅಂಗವಿಕಲರು ಮತ್ತು ಅದೃಷ್ಟ ಹೀನರು ಅಲ್ಲಿದ್ದರು; ವರೆಂಕಳ ಮೇಲ್ಪಂಕ್ತಿಯಲ್ಲಿ ಅವಳವರಿಗೆ ಸಹಾಯ ಮಾಡಬಹುದಿತ್ತು.

ಕಿಟ್ಟಿ ಮದಾಂಸ್ಟಾಲ್‌ಳಿಗೆ ಮರುಳಾಗಿ, ಅವಳ ಪ್ರಭಾವಕ್ಕೊಳಗಾಗಿದ್ದುದನ್ನು, ವಿಶೇಷವಾಗಿ ವರೆಂಕಳ ಸಮ್ಮೋಹನ ಶಕ್ತಿಗೆ ಮರುಳಾಗಿದ್ದುದನ್ನು ಮೊದಮೊದಲು ರಾಜಕುಮಾರಿ ಗಮನಿಸಿದಳು. ಅವಳು ವರೆಂಕಳ ಚಟುವಟಿಕೆಗಳನ್ನು ಅನುಸರಿಸುತ್ತಿದ್ದುದು ಮಾತ್ರವಲ್ಲ, ಅವಳ ನಡೆನುಡಿನೋಟಗಳನ್ನು ಸಹ ಅಪ್ರಜ್ಞಾಪೂರ್ವಕವಾಗಿ ಅನುಕರಿಸುತ್ತಿದ್ದಳು. ಅವಳು ಮಂತ್ರಮುಗ್ಧವಾಗಿದ್ದುದು ಮಾತ್ರವಲ್ಲ, ಗಂಭೀರವೂ

ಉತ್ಕಟವೂ ಆದ ಆಧ್ಯಾತ್ಮಿಕ ಪರೀಕ್ಷೆಗೊಳಗಾಗಿದ್ದಳೆನ್ನುವುದನ್ನು ರಾಜಕುಮಾರಿ ಹಿಂದಿನಿಂದ ಕಂಡುಕೊಂಡಳು.

ಮದಾಂಸ್ಟಾಲ್ ಬಹುಮಾನವಾಗಿ ನೀಡಿದ್ದ ಫ್ರೆಂಚ್ ಬೈಬಲ್ಲನ್ನು ಕಿಟ್ಟಿ ಪ್ರತಿ ಸಂಜೆ ಓದುತ್ತಿದ್ದುದನ್ನು ರಾಜಕುಮಾರಿ ಗ್ರಹಿಸಿದಳು. ಹಿಂದೆಂದೂ ಕಿಟ್ಟಿ ಬೈಬಲ್ಲನ್ನು ಓದಿದವಳಲ್ಲ. ಸಮಾಜದ ಗೆಳತಿಯರಿಂದ ದೂರವಾಗಿದ್ದು, ವರಿಂಕಳ ಆಶ್ರಯದಲ್ಲಿದ್ದ ರೋಗಿಗಳೊಡನೆ, ಪೆತ್ರೋವ್ ಹೆಸರಿನ ಚಿತ್ರಕಾರ ಹಾಗೂ ಬಡರೋಗಿಯ ಕುಟುಂಬದೊಡನೆ ಅವಳು ತನ್ನ ವೇಳೆಯನ್ನೆಲ್ಲ ಕಳೆಯುತ್ತಿದ್ದುದನ್ನು ಸಹ ರಾಜಕುಮಾರಿ ಕಂಡಿದ್ದಳು. ಈ ಕುಟುಂಬಕ್ಕೆ ದಾದಿಯಂತೆ ಸೇವೆ ಸಲ್ಲಿಸುವಲ್ಲಿ ಕಿಟ್ಟಿ ಹೆಮ್ಮೆಪಡುತ್ತಿದ್ದಂತೆ ಕಂಡಳು. ಇದು ಸ್ತುತ್ಯರ್ಹವಾದ ಕೆಲಸವಾಗಿತ್ತು. ಪೆತ್ರೋವ್‌ನ ಮಡದಿ ಗೌರವಾನ್ವಿತ ಮಹಿಳೆಯಾಗಿದ್ದುದರಿಂದ, ಹಾಗೂ ಕಿಟ್ಟಿಯ ಚಟುವಟಿಕೆಗಳನ್ನು ಗಮನಿಸುತ್ತಿದ್ದ ಜರ್ಮನ್ ರಾಜಕುಮಾರಿ ಅವಳನ್ನು ರೋಗಿಗಳ ಭಾಗ್ಯದೇವತೆಯೆಂದು ಕೊಂಡಾಡುತ್ತಿದ್ದುದರಿಂದ ರಾಜಕುಮಾರಿ ಆಕ್ಷೇಪವೆತ್ತಲಿಲ್ಲ. ಅತಿಯಾಗದಿದ್ದರೆ ಅದೆಲ್ಲವೂ ಚೆನ್ನೆಂದೆ ಗಣನೆಗೊಳ್ಳುತ್ತಿತ್ತು. ಆದರೆ ತನ್ನ ಮಗಳು ಅತಿರಿಕ್ತವಾಗಿ ವರ್ತಿಸುತ್ತಿದ್ದಾಳೆಂಬುದು ಮನವರಿಕೆಯಾದಾಗ 'ಅತಿ ಸರ್ವತ್ರ ವರ್ಜಯೇತ್' ಎಂದು ರಾಜಕುಮಾರಿ ಮಗಳಿಗೆ ವಿವೇಕ ಹೇಳುತ್ತಿದ್ದಳು.

ಏನೇ ಆದರೂ ಅವಳ ಮಗಳು ಪ್ರತ್ಯುತ್ತರ ನೀಡುತ್ತಿರಲಿಲ್ಲ; ಕ್ರಿಶ್ಚಿಯನ್ ಧರ್ಮವನ್ನನುಸರಿಸುವಲ್ಲಿ ಅತಿಯೆಂಬುದು ಸಾಧ್ಯವೇ ಇಲ್ಲವೆಂದು ಅವಳು ತನ್ನೊಳಗೆ ತಾನು ಗೊಣಗಿಕೊಳ್ಳುತ್ತಿದ್ದಳು. ಒಂದು ಕೆನ್ನೆಗೆ ಹೊಡೆದಾಗ ಮತ್ತೊಂದು ಕೆನ್ನೆಯನ್ನು ತೋರಿಸಬೇಕೆಂಬ, ನಿನ್ನ ಕೋಟನ್ನಪಹರಿಸಿಕೊಂಡದ್ದಾದರೆ ಕೌದಿಯನ್ನು ಕೊಟ್ಟುಬಿಡಬೇಕೆಂಬ ಉಪದೇಶವನ್ನನುಸರಿಸುವಲ್ಲಿ ಅತಿಯೆಂತು ಸಂಭವಿಸುತ್ತದೆ? ಆದರೆ ರಾಜಕುಮಾರಿ ಮಗಳ ಅತಿಕ್ರಮವನ್ನನುಮೋದಿಸಲಿಲ್ಲ; ಅಷ್ಟೇ ಅಲ್ಲ, ಮನಬಿಚ್ಚಿ ಮಾತಾಡದ ಮಗಳ ವರ್ತನೆಯನ್ನು ಸಹ ಅವಳು ಮೆಚ್ಚಲಿಲ್ಲ. ನಿಜಕ್ಕೂ ಕಿಟ್ಟಿ ತನ್ನ ನೂತನಾಭಿಪ್ರಾಯ ಭಾವನೆಗಳನ್ನು ತಾಯಿಗೆ ಗೊತ್ತಾಗದಂತೆ ಮರೆಮಾಚಿದಳು. ಇದರಿಂದ ಅವಳಿಗೆ ತನ್ನ ತಾಯಿಯ ಬಗೆಗಿನ ಪ್ರೀತಿಯಾಗಲಿ ಗೌರವವಾಗಲಿ ಕಡಮೆಯಾಗಲಿಲ್ಲ; ತನ್ನ ತಾಯಿಯಾದ್ದರಿಂದಲೇ ಅವಳು ಹಾಗೆ ವರ್ತಿಸಿದಳು. ತನ್ನ ತಾಯಿಯನ್ನು ಬಿಟ್ಟು ಇತರರಿಗಾದರೆ ಅವಳು ತನ್ನ ಅಂತರ್ಯವನ್ನು ತಿಳಿಸುತ್ತಿದ್ದಳು.

'ಅನ್ನಾಪಾವ್‌ಲೋವ್ನ ನಮ್ಮಲ್ಲಿಗೆ ಬಂದು ಬಹಳ ದಿನಗಳಾದುವು' ಎಂದವಳ ತಾಯಿ ಮದಾಂ ಪೆತ್ರೋವಳನ್ನು ಕುರಿತು ಒಂದು ದಿನ ನುಡಿದಳು. 'ನಾನವಳನ್ನು ಆಹ್ವಾನಿಸಿದೆ. ಅವಳಿಗೆ ಅಸಮಾಧಾನವಾಗಿರುವಂತೆ ಕಂಡಿತು.'

'ನಾನದನ್ನು ಗಮನಿಸಿಲ್ಲ, ಅಮ್ಮ' ಎಂದು ನುಡಿಯುವಾಗ ಕಿಟ್ಟಿಯ ಮುಖ ಕೆಂಪೇರಿತು.

'ಇತ್ತೀಚೆಗೆ ಅವರನ್ನು ನೋಡಲು ನೀನು ಹೋಗಿಲ್ಲವೇನು?'

'ನಾಳೆ ಬೆಟ್ಟಗಳನ್ನೇರುವುದೆಂದು ಯೋಚಿಸಿದ್ದೇವೆ' ಎಂದು ಕಿಟ್ಟಿ ಉತ್ತರಿಸಿಳು.

'ಒಳ್ಳೆಯದು. ಹೋಗು' ಎಂದು ರಾಜಕುಮಾರಿ ಮಗಳ ಪೇಚಾಟವನ್ನು ಕಂಡು, ಅದರ ಕಾರಣವನ್ನೂಹಿಸಲು ಪ್ರಯತ್ನಿಸುತ್ತ, ಉತ್ತರಿಸಿದಳು.

ಅದೇ ದಿನ ಸಂಜೆ ವರೆಂಕ ಊಟಕ್ಕೆ ಬಂದಳು. ಮಾರನೆಯ ದಿನದ ಪರ್ವತಾರೋಹಣದ ಬಗ್ಗೆ ಅನ್ನಾಪಾವ್‌ಲೋವ್ನ ತನ್ನ ಮನಸ್ಸು ಬದಲಾಯಿಸಿದ್ದಳೆಂದು ಅವರಿಗೆ ತಿಳಿಸಿದಳು. ಕಿಟ್ಟಿಯ ಮುಖ ಕೆಂಪೇರಿದ್ದನ್ನು ರಾಜಕುಮಾರಿ ಮತ್ತೆ ಗಮನಿಸಿದಳು.

'ನಿನ್ನ ಮತ್ತು ಪೆತ್ರೋವ್‌ರ ನಡುವೆ ಏನಾದರೂ ಮನಸ್ತಾಪವುಂಟಾಗಿದೆಯೇನೆ? ಕಿಟ್ಟಿ' ಎಂದು ತಾವಿಬ್ಬರೇ ಇದ್ದಾಗ ರಾಜಕುಮಾರಿ ಮಗಳನ್ನು ಕೇಳಿದಳು. 'ಇತ್ತೀಚೆಗೆ ಅವಳೂ ಅವಳ ಮಕ್ಕಳೂ ಇಲ್ಲಿಗೆ ಬರುತ್ತಿಲ್ಲವಲ್ಲ, ಏನು ಕಾರಣ?'

'ಮನಸ್ತಾಪವೇನೂ ಇಲ್ಲ. ನನ್ನ ಬಗ್ಗೆ ಅನ್ನಾಪಾವ್‌ಲೋವ್ನಳಿಗೇಕೆ ಅಸಮಾಧಾನವೋ ನನಗೆ ಗೊತ್ತಿಲ್ಲ' ಎಂದು ಕಿಟ್ಟಿ ಉತ್ತರಿಸಿದಳು. ಕಿಟ್ಟಿ ನಿಜವನ್ನೆ ನುಡಿದಳು. ತನ್ನ ವಿಚಾರದಲ್ಲಿ ಅನ್ನಾಪಾವ್‌ಲೋವ್ನಳ ಮನೋಭಾವ ಪರಿವರ್ತನೆಯಾದದ್ದಕ್ಕೆ ಕಾರಣ ಅವಳಿಗೆ ತಿಳಿದಿರಲಿಲ್ಲ. ಆದರೂ ಅದನ್ನೂಹಿಸಲು ಅವಳು ಪ್ರಯತ್ನಿಸಿದಳು. ತನ್ನ ಊಹೆಯನ್ನು ತಾಯಿಗೆ ತಿಳಿಸಲು ಹಿಂಜರಿದಳು; ಅದನ್ನು ಮಾತಿನಲ್ಲಿ ವ್ಯಕ್ತಪಡಿಸಲಾಗದಷ್ಟು ಘೋರವಾಗಿತ್ತು. ಅದು ಮನುಷ್ಯನಿಗೆ ಗೊತ್ತಿದ್ದೂ, ವಾಚ್ಯವಾಗಿ ಹೇಳಲಾಗದಂಥ ಸಂಗತಿಯಂತೆ ಭಯಾನಕವಾಗಿತ್ತು, ಅವಮಾನಕರವಾಗಿತ್ತು.

ಆ ಕುಟುಂಬದೊಡನೆಯ ತನ್ನ ಸಂಬಂಧಗಳನ್ನವಳು ಮತ್ತೆ ಮತ್ತೆ ಮೆಲುಕು ಹಾಕಿದಳು. ತಾವಿಬ್ಬರೂ ಸಂಧಿಸಿದಾಗ ಅನ್ನಾಪಾವ್‌ಲೋವ್ನಳ ವೃತ್ತಾಕಾರದ ಸಾತ್ವಿಕ ಸ್ವಭಾವದ ಮುಖದ ಮೇಲೆ ಯಾವಾಗಲೂ ತಾಂಡವವಾಡುತ್ತಿದ್ದ ಅಕೃತ್ರಿಮ ಆನಂದವನ್ನವಳು ನೆನೆದಳು; ಖಾಯಿಲೆ ಗಂಡನೊಬ್ಬನನ್ನು ಕುರಿತ ತಮ್ಮ ರಹಸ್ಯ ಸಲ್ಲಾಪಗಳನ್ನು, ಅವನಿಗೆ ನಿಷಿದ್ಧವಾಗಿದ್ದ ಶ್ರಮಜೀವನವನ್ನು ತಪ್ಪಿಸಿ, ಅವನನ್ನು ತಿರುಗಾಟ ಕ್ಕೊಯ್ಯಲು ತಾವು ನಡೆಸಿದ ಸಂಚುಗಳನ್ನು ಅವಳು ನೆನಪಿಗೆ ತಂದುಕೊಂಡಳು; ತನ್ನನ್ನು "ನನ್ನ ಕಿಟ್ಟಿ"ಯೆಂದು ಕರೆಯುತ್ತಿದ್ದ, ತಾನು ಪಕ್ಕದಲ್ಲಿ ಕುಳಿತುಕೊಳ್ಳದಿದ್ದರೆ ಮಲಗುವುದಿಲ್ಲವೆಂದು ಮೊಂಡು ಹಿಡಿಯುತ್ತಿದ್ದ ಸಣ್ಣ ಹುಡುಗನ ನಿಷ್ಠೆಯನ್ನು ಮನದಲ್ಲಿಯೆ ಸವಿದಳು. ಇದೆಲ್ಲ ಎಷ್ಟು ಸೊಗಸಾಗಿತ್ತು! ಅನಂತರ ಉದ್ದಗೊರಳಿನ, ಕಂದು ಬಣ್ಣದ ಕೋಟಿನ, ತೆಳ್ಳನೆಯ ಗುಂಗುರುಗೂದಲಿನ, ನೀಲವರ್ಣದ ಕುತೂಹಲ ನೇತ್ರಗಳ, ಕೃಶಗಾತ್ರದ ಪೆತ್ರೋವ್‌ನನ್ನವಳು ಸ್ಮರಿಸಿದಳು. ಮೊದಮೊದಲು ಅವನನ್ನು ಕಂಡಾಗಲೆಲ್ಲ, ಅವಳೆದುರಿನಲ್ಲಿ ಉಲ್ಲಸಿತ ಚೈತನ್ಯಶಾಲಿಯಂತೆ ಕಾಣಲು ನಡೆಸುತ್ತಿದ್ದ ಅವನ ವಿಕಾರಾತ್ಮಕ ಪ್ರಯತ್ನಗಳನ್ನು ನೋಡಿದಾಗಲೆಲ್ಲ ಕಿಟ್ಟಿಗೆ ಭಯವಾಗುತ್ತಿತ್ತು. ಅವನ ಬಗೆಗಿನ, ಅವನಂಥ ಎಲ್ಲ ಕ್ಷಯ ರೋಗಿಗಳ ಬಗೆಗಿನ ಜುಗುಪ್ಸೆಯನ್ನು ಗೆಲ್ಲುವ ಸಲುವಾಗಿ ತಾನೆಷ್ಟು ಶ್ರಮ ಪಡಬೇಕಾಯಿತೆಂಬುದನ್ನು, ಅವನೊಡನೆ ಮಾತಾಡಬೇಕಾದ ವಿಷಯಗಳನ್ನು ಕುರಿತು ಚಿಂತಿಸಬೇಕಾದ ಪ್ರಮೇಯವೊದಗಿದಾಗ ತಾನೆಷ್ಟು ಕಷ್ಟಪಡಬೇಕಾಯಿತೆಂಬುದನ್ನು ನೆನೆದಳು. ಅವನ ಬಗ್ಗೆ ತನಗೆ ಕನಿಕರ ಮೂಡುವಂತೆ, ತಾನು ಕಳವಳಗೊಳ್ಳುವಂತೆ, ತನ್ನ ಉಪಕಾರ ಬುದ್ಧಿಯ ಬಗ್ಗೆ ತನಗೆ ಅರಿವುಂಟಾಗುವಂತೆ, ತನ್ನನ್ನು ದೈನ್ಯದಿಂದ ನೋಡುತ್ತಿದ್ದ ಅವನ ಕರುಣಾಜನಕ ದೃಶ್ಯವನ್ನು

ಸ್ಮರಿಸಿಕೊಂಡಳು. ಇದೆಲ್ಲ ಎಷ್ಟು ಸೊಗಸಾಗಿತ್ತು! ಆದರೆ ಪ್ರಾರಂಭದಲ್ಲಿ ಮಾತ್ರ ಹಾಗಿತ್ತು. ಎಲ್ಲವೂ ಕೆಲವು ದಿನಗಳ ಹಿಂದೆ ಇದ್ದಕ್ಕಿದ್ದಂತೆ ವ್ಯತ್ಯಸ್ತವಾಯಿತು. ಈಚೆಗೆ ಅನ್ನಾಪಾವ್‌ಲೋವ್ನ ಸೋಗಿನ ಸೌಹಾರ್ದದಿಂದ ಅವಳನ್ನು ಸಂಧಿಸುತ್ತಿದ್ದುದಲ್ಲದೆ, ಅವಳ ಮತ್ತು ತನ್ನ ಗಂಡನ ಚಲನವಲನಗಳ ಬಗ್ಗೆ ಎಚ್ಚರ ವಹಿಸುತ್ತಿದ್ದಳು.

ಕಿಟ್ಟಿ ಬಳಿ ಸಾರಿದಾಗ ಅವನು ತೋರಿಸುತ್ತಿದ್ದ ಹರ್ಷ ಅನ್ನಾಳ ಔದಾಸೀನ್ಯಕ್ಕೆ ಕಾರಣವಾಗಿದ್ದಿರಬಹುದೆ?

'ಹೌದು, ಅನ್ನಾಪಾವ್‌ಲೋವ್ನಳ ನಡತೆಯಲ್ಲಿ ಏನೋ ಅಸ್ವಾಭಾವಿಕತೆ ಇದ್ದಂತಿತ್ತು: ಎಂದಿನ ಸತ್ಸ್ವಭಾವ ಅವಳಲ್ಲಿ ಕಾಣುತ್ತಿಲ್ಲ ಎಂದವಳು ಎಣಿಸಿದಳು. "ಓ, ಅವರು ನಿಜಕ್ಕೂ ನಿನಗಾಗಿ ಕಾಯುತ್ತಿದ್ದರು; ಅವರು ತುಂಬ ಅಶಕ್ತರಾಗಿದ್ದರೂ ನಿನ್ನನ್ನು ಬಿಟ್ಟು ಕಾಫಿ ತೆಗೆದುಕೊಳ್ಳಲು ಅವರಿಗಿಷ್ಟವಿರಲಿಲ್ಲ" ಎಂದವಳು ಎರಡು ದಿನಗಳ ಹಿಂದೆ ಕುಪಿತ ಧ್ವನಿಯಲ್ಲಿ ಹೇಳಿದ್ದನ್ನು ಸ್ಮರಣೆಗೆ ತಂದುಕೊಂಡಳು. ಅವನ ಕಂಬಳಿಯನ್ನವನಿಗೆ ತಂದುಕೊಟ್ಟಾಗ ಪ್ರಾಯಶಃ ಅವಳಿಗೆ ಅಸಮಾಧಾನವಾಗಿರಬೇಕು. ಅದೇನೂ ದೊಡ್ಡ ವಿಷಯವಲ್ಲ. ಆದರೂ ಅವನ ಮನಸ್ಸಿಗೆ ತುಂಬ ಸಂಕೋಚವಾಗಿರಬೇಕು. ನನಗೆ ಕಿರಿಕಿರಿಯಾಗುವಷ್ಟರ ಮಟ್ಟಿಗೆ ಬಹು ಹೊತ್ತು ಅವನು ನನಗೆ ಧನ್ಯವಾದ ಹೇಳಿದನು. ಅನಂತರ ನನ್ನ ಭಾವಚಿತ್ರವನ್ನವನು ಸುಂದರವಾಗಿ ಕೈಗೆಯ್ದನು. ಎಲ್ಲಕ್ಕಿಂತ ಮಿಗಿಲಾಗಿ, ಓ ಅವನ ನೋಟ, ಅದೆಷ್ಟು ಕೋಮಲ! ಅದೆಷ್ಟು ಲಜ್ಜಾನ್ವಿತವಾಗಿತ್ತು! ಹೌದ್ಹೌದು. ಅದು ನಿಜ' ಎಂದು ಕಿಟ್ಟಿ ಭಯದಿಂದ ಅದನ್ನೆಲ್ಲ ಮನಸ್ಸಿನಲ್ಲಿ ಮಣಕಿಸಿದಳು. 'ಇಲ್ಲ, ಇಲ್ಲ ಅದು ಹಾಗಲ್ಲ; ಹಾಗಿರಲಾರದು. ಕನಿಕರಕ್ಕರ್ಹನಾದ ವ್ಯಕ್ತಿಯವನು!' ಎಂದವಳು ಬೇಗ ಬೇಗ ಮನಸ್ಸಿನಲ್ಲಂದುಕೊಂಡಳು.

ಈ ಶಂಕೆ ಅವಳ ಹೊಸಬಾಳಿನ ಸಂತೋಷವನ್ನು ನಂಜುಗೊಳಿಸಿತು.

೩೪

ಜಲಧಾಮದ ಚಿಕಿತ್ಸೆ ಮುಗಿಯುವುದಕ್ಕೆ ಮುಂಚೆಯೇ ರಷ್ಯನ್ ಗೆಳೆಯರ ಭೇಟಿಗಾಗಿ—ಅವನ ಪ್ರಕಾರ ರಷ್ಯನ್ ಸೊಗಡನ್ನು ಸೇವಿಸುವ ಸಲುವಾಗಿ—ಕಾಲ್ಸ್‌ಬಾದ್‌ನಿಂದ ಬೇಡನ್ ಮತ್ತು ಕಿಸಿಂಜೆನ್‌ಗಳಿಗೆ ಹೋಗಿದ್ದ ರಾಜಕುಮಾರ ಶರ್‌ಬತ್‌ಸ್ಕಿ ಸತಿಸುತೆಯರ ಬಳಿಗೆ ಮರಳಿದನು.

ವಿದೇಶ ವಾಸ್ತವ್ಯದ ಜೀವನದ ಬಗೆಗಿನ ರಾಜಕುಮಾರ ಮತ್ತು ರಾಜಕುಮಾರಿಯರ ದೃಷ್ಟಿಕೋನಗಳು ಧ್ರುವಾಂತರದಷ್ಟು ದೂರವಾಗಿದ್ದುವು. ರಾಜಕುಮಾರಿಯ ದೃಷ್ಟಿಯಲ್ಲಿ ಎಲ್ಲವೂ ವೈಭವಪೂರ್ಣವಾಗಿತ್ತು. ರಷ್ಯನ್ ಸಮಾಜದಲ್ಲಿ ಅವಳಿಗೊಂದು ಭದ್ರವಾದ ಸ್ಥಾನವಿದ್ದರೂ, ಯುರೋಪೀಯ ಮಹಿಳೆಯಂತೆ ಕಾಣಿಸಿಕೊಳ್ಳಲು ಪ್ರಯತ್ನಿಸಿದಳು; ಆದರೆ (ಅವಳು ರಷ್ಯನ್ ಮಾದರಿಯ ಮಹಿಳೆಯಾದದ್ದರಿಂದ) ಅವಳ ಪ್ರಯತ್ನ ಫಲಿಸಲಿಲ್ಲ. ಆದರೂ ಅವಳು ವಿಧಿಯಿಲ್ಲದೆ ಸೋಗು ಹಾಕಬೇಕಾಯಿತು; ಆ ಸೋಗು ಅವಳಿಗೊಗ್ಗುವಂತಿರಲಿಲ್ಲ. ಅದಕ್ಕೆ ಪ್ರತಿಯಾಗಿ, ವಿದೇಶದ

ಯಾವೊಂದು ಸಂಗತಿಯೂ ರಾಜಕುಮಾರನಿಗೆ ಹಿಡಿಸಲಿಲ್ಲ. ಯೂರೋಪೀಯ ಜೀವನ ಅವನನ್ನು ನಿರುತ್ಸಾಹಗೊಳಿಸಿತು; ರಷ್ಯನ್ ವಾಡಿಕೆಗಳಿಗಂಟಿಕೊಂಡಿದ್ದನು. ವಾಸ್ತವವಾಗಿ ತಾನೇನಾಗಿದ್ದರೂ ಸಹ, ಅ–ಯೂರೋಪೀಯನಾಗಿ ಕಾಣಲು ಉದ್ದೇಶ ಪೂರ್ವಕಕವಾಗಿ ಪ್ರಯತ್ನಿಸಿದನು.

ರಾಜಕುಮಾರ ಹಿಂದಿರುಗಿದಾಗ ತುಂಬ ತೆಳ್ಳಗಾಗಿದ್ದನು; ಕೆನ್ನೆಯ ಚರ್ಮ ಜೋಲಾಡುತ್ತಿದ್ದರೂ, ಅವನು ಉಲ್ಲಾಸ ಚಿತ್ತನಾಗಿದ್ದನು. ಕಿಟ್ಟಿ ಸಂಪೂರ್ಣ ಆರೋಗ್ಯವಂತಳಾದದ್ದನ್ನು ಕಂಡಾಗ ಅವನ ಚೈತನ್ಯೋಲ್ಲಾಸ ಮತ್ತಷ್ಟು ಸೊಕ್ಕೇರಿದುವು. ಮದಾಂಸ್ಟಾಲ್ ಮತ್ತು ವರೆಂಕರೊಡನೆಯ ಕಿಟ್ಟಿಯ ಗೆಳೆತನದ ವಾರ್ತೆ ಹಾಗೂ ರಾಜಕುಮಾರಿಯ ವಿವರಣೆಯಂತೆ ಕಿಟ್ಟಿಯ ಚರ್ಯೆಯಲ್ಲಾಗಿದ್ದ ಬದಲಾವಣೆ ರಾಜಕುಮಾರನ ಮನಸ್ಸನ್ನು ಕಲಕಿದ್ದುವು; ಕಿಟ್ಟಿಯನ್ನು ತನ್ನಿಂದ ಬೇರ್ಪಡಿಸಬಹುದಾದ ಯಾವುದೇ ವ್ಯಕ್ತಿಯಾಗಲೀ ಯಾವುದೇ ಸಂಗತಿಯಾಗಲೀ ಅವನ ಮಾತ್ಸರ್ಯವನ್ನು ಕೆರಳಿಸುತ್ತಿದ್ದಂತೆಯೇ ಈ ಸುದ್ದಿಯೂ ಅವನ ಮನಸ್ಸನ್ನು ವಿಹ್ವಲಗೊಳಿಸಿತು; ಅವಳನ್ನು ಮರುಳುಗೊಳಿಸಿ, ತನ್ನ ಪ್ರಭಾವ ವಲಯದಿಂದ ಜಾರಿಸಿ, ತನಗೆ ದುರ್ಗಮವಾದ ಕ್ಷೇತ್ರದೊಳಗೆ ಪ್ರವೇಶಗೊಳಿಸುತ್ತಾರೆಂದು ಅವನು ಹೆದರಿದನು. ಆದರೆ ಈ ಅಹಿತ ವಾರ್ತೆಗಳು ತಾನು ಸದಾ ಈಜಾಡುತ್ತಿದ್ದ ಉಲ್ಲಾಸದ ಮತ್ತು ಸರಸ ಸ್ವಭಾವದ ಸಮುದ್ರದಲ್ಲಿ ಮುಳುಗಿಹೋದುವು; ಕಾರ್ಲ್ಸ್‌ಬಾದ್ ಜಲಚಿಕಿತ್ಸೆಯ ನಂತರವಂತು ಅವನ ಉತ್ಸಾಹ ಪರಾಕಾಷ್ಠೆಯನ್ನು ಮುಟ್ಟಿತ್ತು.

ಜಲಧಾಮಕ್ಕೆ ಹಿಂದಿರುಗಿದ ದಿನ, ಗಂಜಿ ಹಾಕಿದ ಕಾಲರಿನ ಊರೆಯಿಂದುಬ್ಬಿದ ಕೆನ್ನೆಗಳ ಮತ್ತು ರಷ್ಯನ್ ಸುಕ್ಕುಗಳ ರಾಜಕುಮಾರ ಉದ್ದನೆಯ ಕೋಟು ಧರಿಸಿ, ಉಲ್ಲಾಸಭರಿತನಾಗಿ ಮಗಳೊಡನೆ ಚಿಲುಮೆಯ ಕಡೆಗೆ ಹೊರಟನು.

ಅದೊಂದು ಸುಂದರ ಪ್ರಾತಃಕಾಲ: ಉದ್ಯಾನಿಕೆಗಳನ್ನೊಳಗೊಂಡ ಧವಳ ಶುಭ್ರ ಭವನಗಳು ಮತ್ತು ಸಂತೋಷದಿಂದ ಕಾರ್ಯನಿರತರಾಗಿದ್ದ ಮದಿರಪಾನಾಸಕ್ತ ಅರುಣ ಕಾಂತಿಯ ಮುಖಬಾಹುಗಳ ಜರ್ಮನ್ ಪರಿಚಾರಿಕೆಯರ ದೃಶ್ಯಗಳು ಹೃದಯಕ್ಕೆ ಆಪ್ಯಾಯನವನ್ನುಂಟು ಮಾಡಿದ್ದುವು; ಆದರೆ ತಂದೆ ಮಕ್ಕಳು ಚಿಲುಮೆಯನ್ನು ಸಮೀಪಿಸಿದಂತೆಲ್ಲ ಮೇಲಿಂದ ಮೇಲೆ ರೋಗಿಗಳನ್ನೆದುರುಗೊಳ್ಳುತ್ತಿದ್ದರು; ಜರ್ಮನಿಯ ಶ್ರೀಮಂತ ಜೀವನದ ನಡುವೆ ಅವರ ದೃಶ್ಯ ಹೃದಯ ವಿದ್ರಾವಕವಾಗಿ ಗೋಚರಿಸುತ್ತಿತ್ತು. ಈ ವ್ಯತ್ಯಾಸ ಕಿಟ್ಟಿಯ ಮೇಲೆ ಪರಿಣಾಮ ಬೀರಲಿಲ್ಲ. ಪ್ರಕಾಶಮಾನವಾದ ಸೂರ್ಯ, ಎಲೆ ಗುಂಪುಗಳ ಹಸುರುಕಾಂತಿ ಮತ್ತು ಸುಶ್ರಾವ್ಯ ಸಂಗೀತದ ರಾಗ ಮೇಳ ಅವಳ ದೃಷ್ಟಿಯಲ್ಲಿ ಈ ಪರಿಚಿತ ಮುಖಗಳಿಗೆ ಹಾಗೂ ಅವಳು ಸದಾ ಕಣ್ಣಿಟ್ಟಿರುತ್ತಿದ್ದ ರೋಗದ ಏರಿಳಿತಗಳಿಗೆ ಸಹಜ ಚೌಕಟ್ಟಿನಂತೆ ತೋರುತ್ತಿತ್ತು. ಆದರೆ ರಾಜಕುಮಾರನಿಗಾದರೊ ಜೂನ್ ಮಾಸದ ಉಲ್ಲಾಸೋತ್ಸಾಹಗಳು, ಆ ಕಾಲದಲ್ಲಿ ಜನಪ್ರಿಯವಾಗಿದ್ದ ಭ್ರಮಣ ನೃತ್ಯ ಸಂಗೀತವನ್ನು ನುಡಿಸುತ್ತಿದ್ದ ವಾದ್ಯಗೋಷ್ಠಿಯ ನಿನಾದ, ಎಲ್ಲಕ್ಕಿಂತ ಮಿಗಿಲಾಗಿ ಆರೋಗ ದೃಢಕಾಯರಾದ ನಗುಮೊಗದ ಪರಿಚಾರಿಕೆಯರ ಸುಳಿದಾಟ–ಇವೇ ಮೊದಲಾದುವು ಯೂರೋಪಿನ ಎಲ್ಲ ಮೂಲೆಗಳಿಂದ ಬಂದು ಹಿಂಡು

ಗೂಡಿದ್ದ ನಿದಾನವಾಗಿ ಕಾಲೆಳೆಯುತ್ತಿದ್ದ ಜೀವಚ್ಛವಗಳ ವಿಷಾದಕರ ದೃಶ್ಯದ ಬದಿಯಲ್ಲಿ ಅಸಹ್ಯವಾಗಿಯೂ ಭಯಂಕರವಾಗಿಯೂ ಕಾಣುತ್ತಿದ್ದುವು. ತನ್ನ ಅಚ್ಚುಮೆಚ್ಚಿನ ಮಗಳಿಗೆ ತನ್ನ ಬಾಹುಗಳನ್ನು ಊರೆ ಕೊಟ್ಟು ನಡೆಯುವಾಗ ಯೌವನ ಮರುಕಳಿಸಿದಂತಾಗಿ ಹೆಮ್ಮೆಯಿಂದ ಬೀಗುತ್ತಿದ್ದರೂ, ತನ್ನ ಕಸುವುಳ್ಳ ಗಟ್ಟಿಮುಟ್ಟಾದ ಅಂಗಾಂಗಗಳ ಹಾಗೂ ಹುರುಪಿನ ನಡಗೆಯ ಬಗ್ಗೆ ಅವನಿಗೆ ವಿಷಾದ ಮಾತ್ರವಲ್ಲ, ನಾಚಿಕೆ ಸಹ ಉಂಟಾಯಿತು. ಸಾರ್ವಜನಿಕ ಸ್ಥಳದಲ್ಲಿ ಬೆತ್ತಲೆಯಾಗಿ ನಡೆಯುತ್ತಿದ್ದಂತೆ ಅವನಿಗನುಭವವಾಯಿತು.

'ನಿನ್ನ ಹೊಸಗೆಳೆಯರಿಗೆ ನನ್ನನ್ನು ಪರಿಚಯಿಸಿಕೊಡು' ಎಂದವನು ತನ್ನ ಮೊಳಕೈಯಿಂದ ಅವಳ ತೋಳನ್ನು ತಿವಿದನು. 'ನಿನಗೆ ಮತ್ತೆ ಆರೋಗ್ಯವನ್ನು ತಂದುಕೊಟ್ಟ ನಿನ್ನ ಅಸಹ್ಯ ಸೋಡೆನ್ ಅನ್ನು ಸಹ ಪ್ರೀತಿಸಲು ಪ್ರಯತ್ನಿಸುತ್ತಿದ್ದೇನೆ. ಆದರೆ ಇದೆಲ್ಲ ವಿಷಾದನೀಯವಾಗಿದೆ. ಯಾರವರು?'

ತನ್ನನ್ನು ಸಂಧಿಸಿದ ಮಿತ್ರರ ಮತ್ತು ಪರಿಚಯಸ್ಥರ ವಿವರಗಳನ್ನು ಕಿಟ್ಟಿ ಅವನಿಗೆ ತಿಳಿಸಿದಳು. ಉದ್ಯಾನದ ಪ್ರವೇಶದ್ವಾರದಲ್ಲಿ ಕುರುಡಿಕುಮಾರಿ ಬರ್ಥ್ ಮತ್ತು ಅವಳ ಸಂಗಾತಿ ಅವರಿಗೆದುರಾದರು. ಕಿಟ್ಟಿಯ ಧ್ವನಿ ಮುಪ್ಪಿನ ಫ್ರೆಂಚ್ ಮಹಿಳೆಯ ಕಿವಿಯ ಮೇಲೆ ಬಿದ್ದೊಡನೆ ಅವಳ ಮುಖದ ಮೇಲೆ ಚಿಮ್ಮಿದ ಆನಂದದ ಲಹರಿಯನ್ನು ಕಂಡು . ರಾಜಕುಮಾರ ಸುಪ್ರೀತನಾದನು. ಫ್ರೆಂಚ್ ಸಮಾಜಕ್ಕೆ ಸಹಜವಾದ ಅತಿಶಯದ ಮರ್ಯಾದೆಯಿಂದ ಅವಳು ಅವನೊಡನೆ ಸಲ್ಲಪಿಸಿದಳು; ಕಿಟ್ಟಿಯಂಥ ದೈವಿಕ ಶಕ್ತಿಯ ಮಗಳನ್ನು ಪಡೆದದ್ದಕ್ಕಾಗಿ, ಅವನನ್ನು ಅಭಿನಂದಿಸಿದಳು: ಕಿಟ್ಟಿಯನ್ನು ಹೊಗಳಿ ಹೊಗಳಿ ಆಗಸಕ್ಕೇರಿಸಿದಳು; ಅವಳನ್ನು ಆಣಿಮುತ್ತೆಂದು, ತವನಿಧಿಯೆಂದು, ದೇವಮಾನ್ಯೆಯೆಂದು ಕರೆದಳು.

'ಅಹ, ಹಾಗಾದರೆ ಅವಳು ಎರಡನೆಯ ದೇವದೂತಿಯೇ ಸರಿ' ಎಂದು ರಾಜಕುಮಾರ ನಕ್ಕನು. 'ಕುಮಾರಿ ವರೆಂಕಳನ್ನವಳು ಪ್ರಥಮ ದೇವದೂತಿ ಎಂದು ಕರೆಯುತ್ತಾಳೆ.'

'ಓ ಕುಮಾರಿ ವರೆಂಕಳೆ? ಅವಳು ನಿಜವಾದ ದೇವಕನ್ಯೆ' ಎಂದು ಕುಮಾರಿ ಬರ್ಥ್ ಒಡನೆಯೇ ಮಾರ್ನುಡಿದಳು.

ಉಪ್ಪರಿಗೆಯ ಮೊಗಸಾಲೆಯಲ್ಲಿ ಅವರು ವರೆಂಕಳನ್ನು ಸಂಧಿಸಿದರು. ಅಂದವಾದ ಕೆಂಪು ಚೀಲವನ್ನು ಹಿಡಿದುಕೊಂಡು ಅವಳು ಶೀಘ್ರವಾಗಿ ಅವರ ಕಡೆಗೆ ನಡೆದು ಬರುತ್ತಿದ್ದಳು.

'ಅಪ್ಪ ಬಂದಿದ್ದಾರೆ, ನೋಡು' ಎಂದು ಕಿಟ್ಟಿ ನುಡಿದಳು.

ಯಾವುದನ್ನೇ ಆಗಲಿ ವರೆಂಕ ಅತ್ಯಂತ ಸಹಜವಾಗಿ ಸರಳವಾಗಿ ಎಸಗುತ್ತಿದ್ದಳಷ್ಟೆ. ಅಂತೆಯೇ ತಲೆಯೊಲೆತ ಮತ್ತು ಸೌಜನ್ಯಗಳ ನಡುವಣ ಪರಿಪಾಠವಲ್ಲವಳು ಮರ್ಯಾದೆಯನ್ನು ಸಲ್ಲಿಸಿ, ಬೇರೆಮವರೊಡನೆ ಮಾತಾಡುತ್ತಿದ್ದಂತೆಯೇ ಸರಳ ಸುಲಭವಾಗಿ ಕೂಡಲೇ ರಾಜಕುಮಾರನೊಡನೆ ಮಾತಾಡಿದಳು.

'ವಾಸ್ತವವಾಗಿ ನಿನ್ನನ್ನು ನಾನು ಬಲ್ಲೆ. ನಿನ್ನ ವಿಚಾರ ನಾನು ಚೆನ್ನಾಗಿ ತಿಳಿದುಕೊಂಡಿದ್ದೇನೆ' ಎಂದು ರಾಜಕುಮಾರ ಮುಗುಳುನಗೆ ಸೂಸಿದಾಗ, ತನ್ನ ತಂದೆಗೆ ವರೆಂಕ

ತುಂಬ ಮೆಚ್ಚುಗೆಯಾಗಿರಬೇಕೆಂದು ಬಗೆದಳು. 'ಇಷ್ಟು ತ್ವರಿತವಾಗಿ ನೀನೆಲ್ಲಿಗೆ ಹೊರಟಿದ್ದೀಯೆ?,

'ಅಮ್ಮ ಇಲ್ಲಿದ್ದಾರೆ.' ಎಂದವಳು ಕಿಟ್ಟಿಯು ಕಡೆಗೆ ತಿರುಗಿಕೊಂಡು ನುಡಿದಳು. 'ಅವರು ಇಡೀ ರಾತ್ರಿ ಮಲಗಲಿಲ್ಲ. ಹೊರಗೆ ಅಡ್ಡಾಡಿಸಬೇಕೆಂದು ವೈದ್ಯ ಸೂಚಿಸಿದರು. ಈಗವರ ಕೆಲಸದ ಸಾಮಾನುಗಳನ್ನು ಕೊಂಡೊಯ್ಯುತ್ತಿದ್ದೇನೆ.'

'ಓ, ಅವಳೇ ಪ್ರಥಮ ದೇವಕನ್ಯೆ' ಎಂದು ವರೆಂಕ ಸರಿದನಂತರ ರಾಜಕುಮಾರ ನುಡಿದನು.

ತನ್ನ ತಂದೆ ವರೆಂಕಳ ಬಗ್ಗೆ ಅಣಕವಾಡುತ್ತಿರಬಹುದೆಂದು ಕಿಟ್ಟಿ ಊಹಿಸಿ ಕೊಂಡಳು. ಆದರೆ ವರೆಂಕ ಅವನ ಮೆಚ್ಚುಗೆಗೆ ಪಾತ್ರಳಾಗಿದ್ದುದರಿಂದ ತನ್ನ ಊಹೆ ತಪ್ಪೆಂದವಳು ಬಗೆದಳು.

'ನಿನ್ನ ಗೆಳೆಯರನ್ನೆಲ್ಲ ಬೇಗ ಬೇಗ ನೋಡಿ ಮುಗಿಸೋಣ' ಎಂದವನು ಸೊಲ್ಲಿಸಿದನು. 'ನನ್ನ ಗುರುತುಹಿಡಿಯುವಷ್ಟು ಅನುಗ್ರಹವುಳ್ಳವಳಾದರೆ ಮದಾಂ ಸ್ಟಾಲ್‌ಗಳನ್ನು ನೋಡಬಹುದು.'

ಮದಾಂಸ್ಟಾಲ್‌ಳ ಹೆಸರೆತ್ತಿದಾಗ ತನ್ನ ತಂದೆಯ ಕಣ್ಣಲ್ಲಿ ಚಿಮ್ಮಿದ ಅಣಕದ ಕಿಡಿಯಿಂದ ಚಕಿತಗೊಂಡ ಕಿಟ್ಟಿ 'ಅವರು ನಿಮಗೆ ಗೊತ್ತೆ, ಅಪ್ಪ?' ಎಂದು ಪ್ರಶ್ನಿಸಿದಳು.

'ಅವಳ ಗಂಡ ನನಗೆ ಗೊತ್ತಿತ್ತು. ಅವಳ ವಿಷಯವೂ ಅಲ್ಪ ಸ್ವಲ್ಪ ಗೊತ್ತಿತ್ತು; ಅದೂ ಅವಳು ಭಕ್ತಿ ಪಂಥಾನುಯಾಯಿಗಳನ್ನು ಸೇರುವ ಮೊದಲು.'

'ಭಕ್ತಿ ಪಂಥಾನುಯಾಯಿಗಳು ಯಾರು, ಅಪ್ಪ?' ಎಂದು ಕಿಟ್ಟಿ ಕೇಳಿದಳು. ಸ್ಟಾಲ್‌ಳ ಜೀವನದಲ್ಲಿ ಅತ್ಯಂತ ಶ್ರೇಷ್ಠವಾದುವೆಂದು ತಾನು ಗಣಿಸಿದ್ದ ಸಂಗತಿಗಳನ್ನು ಒಂದು ಹೆಸರಿನ ಕೆಳಗೆ ವರ್ಗೀಕರಣಮಾಡಿದ್ದರಿಂದ ಅವಳು ಕಳವಳಕ್ಕೀಡಾಗಿದ್ದಳು.

'ನಿಜಕ್ಕೂ ನನಗೆ ಗೊತ್ತಿಲ್ಲ. ಸಲಸಲಕ್ಕೂ ಅವಳು ದೇವರಿಗೆ ಧನ್ಯವಾದ ಸಮರ್ಪಿಸುವುದನ್ನು ಮಾತ್ರ ನಾನು ಬಲ್ಲೆ. ಪ್ರತಿಯೊಂದು ವಿಪತ್ತೊದಗಿದಾಗಲೂ ಅವಳು ದೇವರನ್ನು ವಂದಿಸುತ್ತಾಳೆ. ಗಂಡ ಸತ್ತಾಗಲೂ ಅವಳು ದೇವರಿಗೆ ಧನ್ಯವಾದ ಸಲ್ಲಿಸುವುದೆ? ಅದೆಲ್ಲ ವಿಚಿತ್ರವಾಗಿದೆ. ಅವರ ಬದುಕಿನಲ್ಲಿ ನೆಮ್ಮದಿಯಿರಲಿಲ್ಲ. ಏನದು? ಯಾರವನು? ಎಂಥ ಕರುಣಾಜನಕ ಮುಖ' ಎಂದವನು ಬೆಂಚಿನ ಮೇಲೆ ಕುಳಿತಿದ್ದ, ಮಧ್ಯಸ್ಥವಾದ ಆಕೃತಿಯ ವ್ಯಕ್ತಿಯ ಮೇಲೆ ಕಣ್ಣು ಹಾಯಿಸುತ್ತ ನುಡಿದನು; ಆ ವ್ಯಕ್ತಿ ಕಂದುಬಣ್ಣದ ಕೋಟನ್ನು ಬಿಳಿಯ ಷರಾಯಿಯನ್ನು ಧರಿಸಿದ್ದನು; ಮಾಂಸ ರಹಿತವಾದ ಒಣಗಿದ ಕಾಲಿನ ಮೂಳೆಗಳ ಸುತ್ತ ಆ ಷರಾಯಿ ಮಡಿಕೆ ಮಡಿಕೆಯಾಗಿ ಅಳ್ಳಕನಾಗಿ ನೇತಾಡುತ್ತಿತ್ತು. ಅವನು ಹುಲ್ಲಿನ ಟೊಪ್ಪಿಗೆಯನ್ನು ಎತ್ತಿದ ಕೂಡಲೇ ತೆಳ್ಳನೆಯ ಗುಂಗುರುಗೂದಲು ಎದ್ದು ಕಾಣುತ್ತಿತ್ತು; ಟೊಪ್ಪಿಗೆಯ ಒತ್ತಡದಿಂದ ಅವನ ಉಬ್ಬಿದ ಹಣೆ ಕೆಂಪಗೆ ಉರಿಯುತ್ತಿತ್ತು.

'ಅವರೇ ಚಿತ್ರಕಾರ ಪೆತ್ರೋವ್' ಎಂದು ಕಿಟ್ಟಿ ರಂಗಾಗಿ ಉತ್ತರಿಸಿದಳು. ಆ ಆಕೆಯೇ ಅವನ ಮಡದಿ' ಎಂದವಳು ಅನ್ನಾ ಪಾವ್‌ಲೊವ್ನಳ ಕಡೆಗೆ ಸನ್ನೆ ಮಾಡಿದಳು. ಅವರು ಮೇಡು ಏರುತ್ತಿದ್ದಂತೆ ಇಳಿಜಾರಿನ ದಾರಿಯಲ್ಲಿ ಓಡಿಹೋಗುತ್ತಿದ್ದ ತನ್ನ

ಮಗುವನ್ನು ಕರೆತರಲು ಅನ್ನಾ ಉದ್ವೇಗಪೂರ್ವಕವಾಗಿ ಆಕಡೆಗೆ ಹರಿಯುತ್ತಿದ್ದಂತೆ ಕಂಡಳು.

'ಎಂಥ ಸುಂದರವಾದ ಮುಖ ಅವನದು; ಆದರೆ ಕನಿಕರನೀಯ ಸ್ಥಿತಿಯಲ್ಲಿದ್ದಾನೆ.' ಎಂದು ರಾಜಕುಮಾರ ನುಡಿದನು. 'ನೀನವನ ಬಳಿ ಹೋಗಿ ಮಾತಾಡಿಸಬಾರದೇಕೆ? ನಿನಗೇನೋ ಹೇಳಬೇಕೆಂದವನು ತವಕಿಸುತ್ತಿದ್ದಾನಲ್ಲವೆ?'

'ಬನ್ನಿ, ಹೋಗೋಣ' ಎಂದು ಕಿಟ್ಟಿ ದೃಢ ಮನೋಭಾವದಿಂದ ಅವನ ಕಡೆಗೆ ಹೊರಳಿದಳು; 'ಈ ದಿನ ನಿಮ್ಮ ದೇಹ ಸ್ಥಿತಿ ಹೇಗಿದೆ?' ಎಂದವನನ್ನು ಕೇಳಿದಳು.

ಪೆತ್ರೋವ್ ಕೋಲಿನ ಸಹಾಯದಿಂದ ಮೇಲೆದ್ದು, ರಾಜಕುಮಾರನನ್ನು ನೋಡಿದನು.

'ಇವಳು ನನ್ನ ಮಗಳು, ನನ್ನ ವಿಷಯವನ್ನು ನಿಮಗೆ ತಿಳಿಸಬಹುದಲ್ಲವೆ?' ಎಂದು ರಾಜಕುಮಾರ ನುಡಿದನು.

ಚಿತ್ರಕಾರ ಮಣಿದು, ನಕ್ಕನು; ವಿಚಿತ್ರವಾಗಿ ಮಿನುಗುತ್ತಿದ್ದ ಬಿಳಿಯ ಹಲ್ಲುಗಳನ್ನು ಪ್ರದರ್ಶಿಸಿದನು.

'ನಿನ್ನೆಯೆಲ್ಲ ನಿನ್ನ ನಿರೀಕ್ಷೆಯಲ್ಲಿದ್ದೆವು, ರಾಜಕುಮಾರಿ' ಎಂದವನು ಕಿಟ್ಟಿಯನ್ನು ಸಂಬೋಧಿಸಿದನು.

ಈ ಮಾತು ಹೇಳುವಾಗ ಅವನು ತತ್ತರಿಸಿದನು; ಆ ತತ್ತರಿಕೆ ಉದ್ದೇಶಪೂರ್ವಕವಾದದ್ದೆನ್ನುವಂತೆ ಅವನದನ್ನು ಪುನರಾವರ್ತಿಸಿದನು.

'ನಾನು ಬರಬೇಕೆಂದಿದ್ದೆ. ಆದರೆ ನೀವು ಬರುವುದಿಲ್ಲವೆಂಬುದಾಗಿ ಅನ್ನಾಪಾವ್ಲೋವ್ನ ವರೆಂಕಳಿಗೆ ಹೇಳಿ ಕಳಿಸಿದ್ದಳಂತೆ. ಆ ವಿಷಯವನ್ನು ವರೆಂಕ ನನಗೆ ಮುಟ್ಟಿಸಿದಳು.

'ಹೋಗುವುದಿಲ್ಲವೆ?' ಎಂದು ಪೆತ್ರೋವ್ ರಂಗೇರಿ, ಕೆಮ್ಮುತ್ತ, ತನ್ನ ಹೆಂಡತಿಯನ್ನು ಕಾಣುವ ಸಲುವಾಗಿ ಸುತ್ತಲೂ ಕಣ್ಣು ಹಾಯಿಸಿದನು. 'ಅನ್ನಾ ಅನ್ನಾ!' ಎಂದವನು ಗಟ್ಟಿಯಾಗಿ ಕೂಗಿದನು. ಅವನ ತೆಳ್ಳನೆಯ ಬಿಳಿಯ ಕುತ್ತಿಗೆಯ ರಕ್ತನಾಳಗಳು ಚಾವಟಿ ಹುರಿಗಳಂತೆ ಮೇಲೆದ್ದು ಕಾಣಿಸಿದುವು.

ಅನ್ನಾಪಾವ್ಲೋವ್ನ ಸಮೀಪಕ್ಕೆ ಬಂದಳು.

'ನಾವು ಹೋಗುವುದಿಲ್ಲವೆಂದು ರಾಜಕುಮಾರಿಗೆ ಹೇಳಿಕಳಿಸಿದೆಯಾ?' ಎಂದವನು ಗೊಗ್ಗರುದನಿಯಲ್ಲಿ ಕ್ರುದ್ಧನಾಗಿ ತನ್ನ ಮಡದಿಯ ಕಿವಿಯಲ್ಲಿ ಪಿಸುಗುಟ್ಟಿದನು.

'ಚೆನ್ನಾಗಿದ್ದೀಯಾ, ರಾಜಕುಮಾರಿ' ಎಂದು ಅನ್ನಾಪಾವ್ಲೋವ್ನ ಕೃತ್ರಿಮ ಮಂದಹಾಸದಿಂದ ನುಡಿದಳು. ಆ ಮಂದಹಾಸ ಹಿಂದಿನ ಮಾಳ್ಕೆಯಲ್ಲಿರಲಿಲ್ಲ. 'ದೀರ್ಘ ಕಾಲದಿಂದ ನಿಮ್ಮ ನಿರೀಕ್ಷೆಯಲ್ಲಿದ್ದೇವೆ, ರಾಜಕುಮಾರರೆ.'

'ನಾವು ಹೋಗುವುದಿಲ್ಲವೆಂದು ರಾಜಕುಮಾರಿಗೆ ನೀನು ಹೇಳಿಕಳಿಸಿದ್ದೇಕೆ?' ಎಂದು ಚಿತ್ರಕಾರ ಮತ್ತೊಮ್ಮೆ ಗೊಗ್ಗರುದನಿಯಲ್ಲಿ, ಕೋಪಾವೇಶದಿಂದ ಪಿಸುಗುಟ್ಟಿದನು. ಭಾವೋದ್ರೇಕದಿಂದಾಗಿ ಅವನ ಧ್ವನಿ ಹೊರಡಲಿಲ್ಲ; ಅವನು ಅಪೇಕ್ಷಿಸಿದ ಅಭಿವ್ಯಕ್ತಿ ಶಕ್ತಿ ಅವನ ಮಾತುಗಳಿಗಿರಲಿಲ್ಲ.

(ಮುಂದುವರಿಯುವುದು)

ಲೇಖಕರು ಮತ್ತು ಲೇಖನಗಳು

ವಯಸ್ಕರ ಶಿಕ್ಷಣ ಸಮಿತಿ ಪ್ರಕಟಣೆಗಳು

ನೀವು ಓದಲೇಬೇಕಾದ ಪುಸ್ತಕಗಳು....

ಜನಪ್ರಿಯ ವಾಲ್ಮೀಕಿ ರಾಮಾಯಣ

ನಾಗರಿಕತೆಯ ಇತಿಹಾಸ

ಕಥಾಸಂಕಲನ

ಕನ್ನಡ ಪ್ರತಿಭೆ

ಕನ್ನಡ ಪರಂಪರೆ

ನನ್ನೂರು

ನಳಚರಿತ್ರೆ ಸಂಗ್ರಹ

ವಿದ್ಯಾಪೀಠಗಳು

ನಕ್ಷತ್ರ ವೀಕ್ಷಣೆ

ಕರ್ನಾಟಕ ಹವಾಸೂಚಿ

ಇನ್ನೂ ಅನೇಕ ಉಪಯುಕ್ತ ಪುಸ್ತಕಗಳನ್ನು
ತರಿಸಿ ಓದಿರಿ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮುದ್ರಣಾಲಯ, ಮೈಸೂರು.